
ಗುರುದಕ್ಷಿಣೆ
ಪದ್ಮಶ್ರೀಧರ

ಗುರುದಕ್ಷಿಣೆ

ಶ್ರೀಮತಿ ಪದ್ಮಾ ಶ್ರೀಧರ್

ಮಂಜುಶ್ರೀ ಪ್ರಕಾಶನ
೧೬ನೇ ಮೆಯಿನ್, ಕುವೆಂಪು ಹೈಸ್ಕೂಲ್ ಹಿಂಭಾಗ,
ಸರಸ್ವತಿಪುರಂ,
ಮೈಸೂರು ೫೭೦೦೦೯

GURUDAKSHINE- a collection of short stories by Smt. PADMA SHREEDHAR, M.A., Mysore, and Published by M\S MANJUSHREE PRAKASHANA, 16 th Main, Behind Kuvempu High School, Saraswathipuram, MYSORE 570009. 128 pages.

Year of first publication: 2000
ISBN 81-86675-14-0

Price: **48/-**

DTP: Kum. LATHA,
Kanive Computers, Saraswathipuram,
MYSORE 570009

Impression at: PARIJATHA OFFSET PRINTERS,
Mysore-4

ಲೇಖಕಿಯ ಮಾತು

‘ **ಗುರುದಕ್ಷಿಣೆ** ’ ಒಟ್ಟು ಹದಿನೇಳು ಕತೆಗಳನ್ನೊಳಗೊಂಡ ಒಂದು ಕಥಾ ಸಂಕಲನ. ಇದುವರೆಗೆ ನನ್ನ ನಾಲ್ಕಾರು ಕಾದಂಬರಿಗಳು ಪ್ರಕಟವಾಗಿದ್ದು ಓದುಗರನ್ನು ಮೆಚ್ಚಿಸಿವೆ. ಹಾಗೇ ನನ್ನ ಈ ಮೊದಲ ಕಥಾ ಸಂಕಲನವೂ ಈಗ ಓದುಗರ ಕೈ ಸೇರಲಿದೆ. ಅನುಭವವೋ, ಘಟನೆಯೋ, ಕತೆಯೋ ಎಂದು ನಿರ್ದಿಷ್ಟವಾಗಿ ಹೇಳಬರುವಂತಿಲ್ಲವಾದರೂ, ಬರಹಗಳು ಓದುಗರನ್ನು ಮೆಚ್ಚಿಸುತ್ತವೆ ಎಂದು ಭಾವಿಸಿದ್ದೇನೆ. ಯಾರಿಗೂ ಬೇಸರವನ್ನಾಗಲೀ, ನೋವನ್ನಾಗಲೀ ಉಂಟುಮಾಡುವ ಉದ್ದೇಶ ನನಗಿಲ್ಲ. ಆದರೂ ಯಾರಿಗಾದರೂ ವಿಹಿತವೆನಿಸಿದರೆ, ದಯವಿಟ್ಟು ಕ್ಷಮೆ ಇರಲಿ.

ಅಂದವಾಗಿ ಪ್ರಕಟಿಸಿ, ಕಥಾ ಸಂಕಲನದ ಬಿಡುಗಡೆಗಾಗಿ ಶ್ರಮಿಸಿರುವ ಪ್ರಕಾಶಕರಾದ ಕು. ಎ. ಹೆಚ್. ಮಂಜುಶ್ರೀ ಯವರಿಗೂ ಹಾಗೂ ಪ್ರಕಾಶಕರ ಇತರ ಬಳಗಕ್ಕೆ ನಾನು ಕೃತಜ್ಞಳು.

ವಂದನೆಗಳು.

೪-೮-೨೦೦೦ **ಪದ್ಮಾ ಶ್ರೀಧರ್**

ಮೈಸೂರು.

ಮುನ್ನುಡಿ

ಹದಿನೇಳು ಸಣ್ಣ ಕತೆಗಳನ್ನೊಳಗೊಂಡ " **ಗುರುದಕ್ಷಿಣೆ** " ಒಂದು ಕಥಾ ಸಂಕಲನ. ಕತೆಗಳು ಎನ್ನುವುದಕ್ಕಿಂತ ಘಟನೆಗಳು ಎನ್ನುವುದು ಸಮಂಜಸವೆನಿಸುತ್ತದೆ. ಒಂದೊಂದು ಕತೆಯ ಹಿಂದೆಯೂ ಒಂದೊಂದು ಘಟನೆಗಳು ಅಡಗಿರುವಂತೆ ಅನ್ನಿಸುತ್ತದೆ.

ಜೀವನ ಎಂಬ ಸಾಗರದ ಪರಿಧಿ ಅಪಾರ. ಅನುಭವದ ಆಳದಲ್ಲಿ ಇಣುಕಿ ನೋಡಿದಾಗ, ಹಲವಾರು ಘಟನೆಗಳು ಕಂಡು ಬರುತ್ತವೆ. ಕೇಳಿಬರುತ್ತವೆ. ಮರೆತುಹೋಗಿರುವ, ಮರೆಯಲಾಗದ ಹೀಗೆ ಅನೇಕ ಘಟನೆಗಳು ಅಡಗಿರುತ್ತವೆ. ಅಂತಹ ಘಟನೆಗಳನ್ನು ಲೇಖಕಿಯು ಹೊರತೆಗೆದು ಕಥಾರೂಪದಲ್ಲಿ ಹೆಣೆದು ಬರೆದಿದ್ದಾರೆ. ಓದುಗರು ಓದುವಾಗ, ಅನೇಕರಿಗೆ ಇಂತಹ ಅನೇಕ ಘಟನೆಗಳು ನೆನಪಿಗೆ ಬರಬಹುದು, ಮುದವೆನಿಸಬಹುದು, ಬೇಸರವಾಗಬಹುದು. ಆದರೆ ಓದಿ ಸಹಿಸಬಹುದಾದ ಕತೆಗಳು ಎಂದು ಧಾರಾಳವಾಗಿ ಹೇಳಬಹುದು.

ವಿಭಿನ್ನ ವಸ್ತುಗಳನ್ನು ಆಯ್ದುಕೊಂಡು ಬರೆದ ಕತೆಗಳಾದರೂ ಓದುವಾಗ ಏನೋ ಕೊಂಡಿ ಇರುವಂತೆ ಅನ್ನಿಸುತ್ತದೆ. ಉದಾಹರಣೆಗೆ, **'ಕ್ಷಮೆ'** ಕತೆಯಲ್ಲಿ ಅಂಬುಜಾ, ಕಳೆದುಹೋದ ಮುತ್ತಿನ ಓಲೆಗಳನ್ನು ಮತ್ತೆ ಪಡೆದುದೇ ಅಲ್ಲದೇ, ಮುತ್ತಿನಂಥ ಪತಿಯನ್ನೂ ಪಡೆಯುತ್ತಾಳೆ. ಅದೇ ' **ವಜ್ರದ ಓಲೆ** ' ಯಲ್ಲಿ ಗೀತಳು ವಜ್ರದ ಓಲೆಯ ಆಸೆಯಲ್ಲಿ ಸುಖ ನೆಮ್ಮದಿಯನ್ನು ಕಳೆದುಕೊಂಡು ಬಳಲುವುದರೊಂದಿಗೆ, ಓಲೆಯ ಭಾಗ್ಯವನ್ನೇ ಕಳೆದುಕೊಳ್ಳುತ್ತಾಳೆ. ಎಂಥಾ ವಿಪರ್ಯಾಸ.

' **ಪೆಡಂಭೂತ** ' ದಲ್ಲಿ ನಟೇಶನನ್ನು ನಂದಿನಿ ನಾಯಿಯನ್ನು ಅಟ್ಟಿದಂತೆ, '**ಮದುವೆ** ' ಎಂಬ ಪದ ಮರ್ಯಾದೆಯನ್ನೇ ಕೊಡದ ಮಧುಕರನನ್ನು ಗೀತಾ ಹಾಗೂ ಶುಭಾ ಇಬ್ಬರೂ ಅಟ್ಟುತ್ತಾರೆ, **'ಹಾಗೂ ಕೆಟ್ಟ; ಹೀಗೂ ಕೆಟ್ಟ'** ಎಂಬ ಕಿರುಗತೆಯಲ್ಲಿ. ಇನ್ನು ಮುಂದಿನ ಹಂತದಲ್ಲಿ, ಗೌರಿ ತನಗೆ ತನ್ನ ತಂಗಿಗೆ ದೌರ್ಭಾಗ್ಯರೂಪನಾದ ಗಂಡನನ್ನು ಹೊಡೆದು ಕೊಲ್ಲುತ್ತಾಳೆ, ' **ಗೌರಿ ರುದ್ರಿಯಾದಾಗ** ' ದಲ್ಲಿ.

ಗುರು ಶಿಷ್ಯರ ಸಂಬಂಧ ಕುರಿತ ಎರಡು ಕತೆಗಳು ಎರಡು ತರಹ. ಗುರುವನ್ನು ಮೀರಿಸುವ ಶಿಷ್ಯರು ಇರಬೇಕು.. ಇಲ್ಲಿ ಗುರುಗಳು ಆದರ್ಶಪ್ರಾಯರಾಗಿರಬೇಕು. ಶಿಷ್ಯರಿಗೆ ಮುಂದೆ ಬರುವ ಅವಕಾಶಗಳಿರಬೇಕು. ಪಕ್ಷಪಾತಿಯಾದ ಗುರುವಿದ್ದರೆ ಶಿಷ್ಯರಿಗೆ ಕಷ್ಟನಷ್ಟಗಳು ಹೆಚ್ಚು, ಅಂತ ಒಂದು ಕತೆಯಲ್ಲಿ ವಿದಿತವಾದರೆ, ' **ಗುರುದಕ್ಷಿಣೆ** ' ಯಲ್ಲಿ ಗುರುವನ್ನು ಗುರುವಿನ ಸ್ಥಾನದಿಂದ ಕದಲಿಸದೇ ತಲ್ಲದೇ ತಪ್ಪು ಎಂಬ ಭಾವನೆಯಿಂದ ಕ್ಷಮೆ ಬೇಡಿ, ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾಳೆ ಉಷಾ.

ಹೀಗೇ ಎಲ್ಲಾ ಕತೆಗಳೂ, ತಮ್ಮದೇ ಆದ ಒಂದು ಘಟನೆಯ ಸುತ್ತ ಸುತ್ತಿಕೊಂಡು ವಿಶಿಷ್ಟ ನವೀನ ಅನುಭವದ ಬೆಳಕನ್ನು ಚೆಲ್ಲುತ್ತವೆ.

ಈ ದೃಷ್ಟಿಯಲ್ಲಿ ಇದು ಒಂದು ವಿಶಿಷ್ಟ ಕಥಾಸಂಕಲನವಾಗುತ್ತದೆ, ಲೇಖಕಿಯು ಅಭಿನಂದನೆಗೆ ಪಾತ್ರರಾಗುತ್ತಾರೆ.

೪-೮-೨೦೦೦ *ಡಾ|| ಎ.ಹೆಚ್. ಶಿವಾನಂದ*

ಮೈಸೂರು

ಅರ್ಪಣೆ

ನನ್ನ ಸಾಹಿತ್ಯವನ್ನು ಮೆಚ್ಚಿ,
ಪ್ರಶಂಸೆಮಾಡಿ, ಪ್ರೋತ್ಸಾಹವನ್ನು ನೀಡಿ,
ಉತ್ಸಾಹವನ್ನು ಹೆಚ್ಚಿಸಿದ
ನಮ್ಮ ದೊಡ್ಡಪ್ಪ
ತಿ॥ **ಶ್ರೀ ವೆಂಕಟರಾಮಯ್ಯ** ನವರಿಗೆ
ಈ ಕಥಾ ಸಂಕಲನವನ್ನು
ಸಮರ್ಪಿಸಿ, ನಮಸ್ಕರಿಸುತ್ತೇನೆ.

– **ಪದ್ಮಾ ಶ್ರೀಧರ್**

೪–೮–೨೦೦೦

ಪರಿವಿಡಿ

೧. ವಜ್ರದ ಓಲೆ–೭

೨. **ಗುರುದಕ್ಷಿಣೆ** * –೧೮

೩. ಪೆಡಂಭೂತ–೨೭

೪. **ಕ್ಷಮೆ** * –೩೪

೫. ಅಂತಸ್ತು–೪೨

೬. ಉಪಾಯವೋ...ಅಪಾಯವೋ–೪೮

೭. ಹಂಬಲ–೫೪

೮. **ಹಾಗೂ ಕೆಟ್ಟ; ಹೀಗೂ ಕೆಟ್ಟ** * –೬೦

೯. ಗೌರಿ ರುದ್ರಿಯಾದಾಗ–೬೪

೧೦. ಸನ್ಮಾನ–೭೦

೧೧. ಆಯ್ಕೆ–೭೭

೧೨. ಅನ್ಯಾಯ–ಹೀನಾಯ–೮೬

೧೩. ದೇವರಂತಹವನು–೯೪

೧೪. ಗೆಲುವು–೯೯

೧೫. ಕುಟೀರ–೧೦೭

೧೬. ಪಾಡು!–೧೧೪

೧೭. ಅಂತರ–೧೨೨–೧೨೮.

* **ಬಹುಮಾನಿತ ಕಥೆಗಳು.**

೧. ವಜ್ರದ ಓಲೆ

ಹಸೆಯ ಮಣೆಯ ಮೇಲೆ ಕೂತಿದ್ದ ಗೀತ ಮಂಕಾಗಿದ್ದಳು. ತನ್ನ ಗಂಡನ ಅತ್ತಿಗೆ, ತಂಗಿಯರು, ತನ್ನ ಅತ್ತೆ ಎಲ್ಲರ ಕಿವಿಯಲ್ಲೂ ಫಳಫಳನೆ ಹೊಳೆಯುವ ವಜ್ರದ ಓಲೆಗಳು! ಮೂಗು ಚುಚ್ಚಿಸಿಕೊಂಡಿರುವವರ ಮೂಗಿನಲ್ಲಿ ವಜ್ರದ ಮೂಗುಬೊಟ್ಟುಗಳು! ಮುಖ ಅತ್ತಿತ್ತ ತಿರುಗಿಸಿದರೆ ಸಾಕು... ಕಣ್ಣು ಕೋರೈಸುವ ಕಾಂತಿಯನ್ನು ಬೀರುವ ವಜ್ರಗಳು.!

ಅವಳ ಅತ್ತೆಯ ಮನೆಯವರು ಶ್ರೀಮಂತರು ಎಂದು ಅವಳಿಗೆ ಗೊತ್ತಿತ್ತು. ಅವರದು ದೊಡ್ಡ ಸಂಸಾರ. ನಾಲ್ಕು ಜನ ಹೆಣ್ಣು ಮಕ್ಕಳು, ನಾಲ್ಕು ಜನ ಗಂಡು ಮಕ್ಕಳು. ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ದರು. ಎಲ್ಲರಿಗೂ ಒಂದು ಜೊತೆ ವಜ್ರದ ಓಲೆಯನ್ನು ಕೊಟ್ಟಿದ್ದರು. ಹಿರಿಯ ಮಗ ರಾಧಾಕೃಷ್ಣ ಡಾಕ್ಟರು. ತನ್ನ ಅಂತಸ್ತಿಗೆ ತಕ್ಕಂತೆ ಶ್ರೀಮಂತ ಕನ್ಯೆಯನ್ನೇ ಮದುವೆಯಾಗಿದ್ದ. ಅವರು ಅಳಿಯನಿಗೆ ವಜ್ರದ ಉಂಗುರವನ್ನು ವಜ್ರದ ಪದಕವಿರುವ ಸರವನ್ನು ಕೊಟ್ಟಿದ್ದರು. ಅವನ ಹೆಂಡತಿ ರುಕ್ಮಿಣಿ ವಜ್ರದ ಒಡವೆಗಳ ಮಧ್ಯೆ ಮಿನುಗುತ್ತಿದ್ದಳು.

ಗೀತನ ಗಂಡ ವೇಣುಗೋಪಾಲ ಹೆಚ್ಚು ಓದಲಿಲ್ಲ. ವಿದ್ಯೆ ಅವನ ತಲೆಗೆ ಹತ್ತಲಿಲ್ಲ. ಕಾಲೇಜಿಗೆ ಸೇರಿದವನು ಷೋಕಿಯಿಂದ ಕಾಲ ಕಳೆದು ಫೇಲಾಗಿ ಮನೆಯಲ್ಲಿಯೇ ಉಳಿದ. ಮತ್ತೆ ಪರೀಕ್ಷೆಗೆ ಕಟ್ಟುವ ಚಿಂತೆಯನ್ನೇ ಬಿಟ್ಟ. ನೋಡಲು ದಾಂಡಿಗನಂತೆ ಬೆಳೆದಿದ್ದ ಕೆಲಸ ಕಾರ್ಯವಿಲ್ಲದೇ ಉಂಡಾಡಿಯಂತೆ ಇದ್ದವನಿಗೆ ತಂದೆ ರಾಮಸ್ವಾಮಿ, ಯಾವುದೋ ಶಿಫಾರಸ್ಸಿನ ಮೇಲೆ, ಒಂದು ಕಂಪೆನಿಯಲ್ಲಿ ಸೇಲ್ಸ್ ರೆಪ್ರಸೆಂಟಿಟಿವ್ ಕೆಲಸವನ್ನು ಕೊಡಿಸಿದ್ದರು. ಕೈ ತುಂಬಾ ಸಂಬಳ ಬರದಿದ್ದರೂ, ಊರೂರು ತಿರುಗುವ ಕೆಲಸ, ವೇಣು ಒಪ್ಪಿಕೊಂಡು ಕೆಲಸಕ್ಕೆ ಸೇರಿದ್ದ. ಟಿ.ಎ.ಡಿ.ಎ ಸಿಗುತ್ತಿತ್ತು. ಅವನ ಷೋಕಿಗೆ ತಕ್ಕಂತೆ ಸೊಗಸಾದ ಉಡುಗೆ ತೊಡುಗೆಗಳನ್ನು ತೊಟ್ಟು ಠೀವಿಯಿಂದ ಕೆಲಸಕ್ಕೆ ಹೋಗುತ್ತಿದ್ದ.

ತನ್ನ ಕೈಯಹಣ ಮುಗಿದಾಗ ನಿರ್ದಾಕ್ಷಿಣ್ಯವಾಗಿ ತಾಯಿಯಿಂದ ಹಣವನು

ವಸೂಲು ಮಾಡುತ್ತಿದ್ದ. ಇಲ್ಲ ಎಂದರೆ, ನಾನು ಕೆಲಸ ಬಿಟ್ಟು ಮನೇಲೇ ಇರ್ತೀನಿ. ಆಗ ನನ್ನ ಪಾಕೆಟ್ ಮನಿಯನ್ನು ನೀನೇ ಕೊಡಬೇಕಾಗುತ್ತದೆ ಎಂದು ಹೆದರಿಸುತ್ತಿದ್ದ. ಈ ಮಗನಿಗೆ ತಿಳುವಳಿಕೆ ಸಾಲದು. ಜವಾಬ್ದಾರಿ ಇಲ್ಲ, ಹೆತ್ತ ತಪ್ಪಿಗೆ ನಿಭಾಯಿಸಬೇಕು ಎಂದುಕೊಂಡು, ತನ್ನಲ್ಲಿದ್ದ ಹಣವನ್ನು ಮಗನ ಕೈಗೆ ತುರುಕುತ್ತಿದ್ದಳು.

ರಾಮಸ್ವಾಮಿಗೆ ಗೊತ್ತಾದಾಗ ಹೆಂಡತಿಯನ್ನು ಹೀಯಾಳಿಸಿದ್ದರು.

ಜವಾಬ್ದಾರಿ ಇಲ್ಲದವನು... ಅವನಿಗೆ ದುಡ್ಡುಕೊಟ್ಟು ಹಾಳು ಮಾಡ್ತಿದ್ದೀಯ ನೀನು. ಅವನು ಜವಾಬ್ದಾರಿ ಕಲಿಯುವುದು ಯಾವಾಗ?

ಅವನಿಗೂ ಮದುವೆಯಾಗಿ, ಸಂಸಾರ ಅಂತ ಶುರುಮಾಡಿದ ಮೇಲೆ ಜವಾಬ್ದಾರಿ ತಾನೇ ತಾನಾಗಿ ಬರುತ್ತೆ.

ಹುಂ. ಬರುತ್ತೆ! ಬರುತ್ತೆ ಸಂಸಾರ ಬೆಳೆಯುತ್ತೆ ಅಷ್ಟೆ.! ಅಂಥಾ ಅವಿವೇಕದ ಕೆಲಸ ಮಾತ್ರ ಮಾಡಬೇಡ. ಪಾಪ ಯಾವುದೋ ಹುಡುಗಿಯ ಗ್ರಹಚಾರ ಕೆಟ್ಟಿದ್ದರೆ ಇವನ ಹೆಂಡತಿಯಾಗಿ ಬರಬೇಕು ಅಷ್ಟೆ.

ನಿಮಗೆ ಅವನನ್ನು ಕಂಡರೆ ಹಾಗೇನೇ.. ಅವನೂ ನಮ್ಮ ಮಗನೇ ಅಲ್ಲವೇ? ಏನೋ ರಾಧಾಕೃಷ್ಣನ ಹಣೆಯಲ್ಲಿ ವಿದ್ಯೆ ಬರೆದಿತ್ತು ಮುಂದೆ ಬಂದ. ಈ ಮುಂಡೇದರ ಹಣೇಲಿ ವಿದ್ಯೆ ಬರೆದಿರಲಿಲ್ಲ. ಹಾಗಂತ ಮದುವೆ ಮಕ್ಕಳೂ ಬೇಡವೇ? ಒಂಟಿಯಾಗಿ ಎಷ್ಟು ದಿನ ಇರ್ತಾನೆ?

ಈಗಲೂ ನಿನ್ನ ಕೈನಿಂದ ಹಣ ಕಸೀತಾನೆ... "ಆಮೇಲೆ ನೀನು ಅವನ ಸಂಸಾರವನ್ನು ಸಾಕಬೇಕಾಗುತ್ತೆ. ನೆನಪಿರಲಿ." ರಾಮಸ್ವಾಮಿ ವ್ಯಂಗ್ಯವಾಗಿ ನಕ್ಕಾಗ ಕನಕವಲ್ಲಿಗೆ ವ್ಯಥೆಯಾಯ್ತು. ಎಲ್ಲರಂತೆ ಇವನೂ ಇದ್ದಿದ್ದರೇ ಅಂತನ್ನಿಸಿತು. ಆದರೆ ಅವನ ಮದುವೆ ಮಾಡುವ ಆಸೆ ಕಡಿಮೆಯಾಗಲಿಲ್ಲ. ಯಾರಿಗೂ ತಿಳಿಯದಂತೆ, ತನ್ನ ಗಮನದಲ್ಲಿಟ್ಟುಕೊಂಡು, ವೇಣುಗೆ ಸರಿಹೊಂದುವಂತಹ ಕನ್ಯೆಯನ್ನು ಹುಡುಕುತ್ತಿದ್ದಳು.

ಅಂತೂ ಕಡೆಗೂ ಒಂದು ದಿನ ಈ ಗೀತ ಕಣ್ಣಿಗೆ ಬಿದ್ದಳು. ನೀಲಿಗಣ್ಣಿನ ಸುಂದರ ತರುಣಿ, ಅವಳಿಗೆ ಮೆಚ್ಚುಗೆಯಾದಳು. ಅವಳ ವಿಷಯವನ್ನೆಲ್ಲಾ ತಿಳಿದುಕೊಂಡಳು. ತಾನೇನೋ ಇವಳನ್ನು ಒಪ್ಪಿದ್ದೇನೆ. ವೇಣು ಒಪ್ಪುತ್ತಾನೋ ಇಲ್ಲವೋ ಎಂಬ ಅನುಮಾನ ಸಹ ಮೂಡಿತು. ಏಕೆಂದರೆ ಗೀತಳಿಗೆ ತಂದೆ ಇರಲಿಲ್ಲ. ಹಿರಿಯ ಅಣ್ಣನೇ ಮನೆಯ ಜವಾಬ್ದಾರಿ ಹೊತ್ತಿದ್ದವನು. ಅವನಿಗೂ ಮದುವೆಯಾಗಿ ಮಕ್ಕಳಿದ್ದರು. ಗೀತಳಿಗೆ

ಇಬ್ಬರು ತಂಗಿಯರು, ಅವರಿಗೂ ಮದುವೆಯಾಗಬೇಕು. ತಮ್ಮಂದಿರು ಇಬ್ಬರೂ ಓದುತ್ತಿದ್ದಾರೆ. ಅವರ ಓದು ಮುಗಿದು ಅವರಿಗೆ ಕೆಲಸ ಸಿಗಬೇಕು. ಗೀತ ಹೈಸ್ಕೂಲಿನಲ್ಲಿ ಟೀಚರ್ರು ಆಗಿದ್ದಳು. ಬರುವ ಸಂಬಳ ಮನೆಯ ಖರ್ಚಿಗೆ ಸರಿ ಹೋಗುತ್ತದೆ.

ಯಾಕೋ ಏನೋ ತಮ್ಮ ಅಂತಸ್ತಿಗೆ ತಕ್ಕವಳಲ್ಲ ಅಂತ ಅನ್ನಿಸಿದರೂ, ವೇಣುಗೆ ತಕ್ಕನಾದ ಹುಡುಗಿ ಅಂತನ್ನಿಸಿತ್ತು. ವೇಣುವಿನ ಹತ್ತಿರ ಗೀತಳ ಬಗ್ಗೆ ಹೇಳಿದಾಗ ಅವನು ಮೊದಲಿಗೆ ಒಪ್ಪಲಿಲ್ಲ.

ಯಾಕೆ ನಾನು ಫ್ರೀಯಾಗಿರುವುದು ನಿನಗೆ ಸರಿ ಹೋಗ್ತಿಲ್ವಾ? ಅಂತ ಕೇಳಿದ್ದ.

ಹಾಗಲ್ಲ ಕಣೋ.... ನಿನ್ನ ಮದುವೆಯಾದರೆ, ನಿನ್ನ ತಮ್ಮಂದಿರ ಮದುವೆಗೆ ದಾರಿ ಆಗುತ್ತೆ ಅಂತ.

ಅಯ್ಯೋ ರಾಮಾ..... ನಾನೇನು ಅವರ ಮದುವೆಗೆ ಅಡ್ಡವಾಗಿ ನಿಂತಿದೀನಾ? ದಾರಿ ಮುಚ್ಚಿ ಹೋಗೋಕೆ...

ಥೂ ಹಾಗಲ್ವೋ.ನಿನ್ನ ಮದುವೆಯಾಗದೇ ಅವರು ಹೇಗೆ ಮದುವೆ ಯಾಗ್ತಾರೆ?

ಹೇಗೆ ಅಂತ ನನಗೇನು ಗೊತ್ತು? ನನಗೆ ಮಾತ್ರ ಮದುವೆ ಬೇಡ.

ಹೀಗೇ ಒಂಟಿಯಾಗಿ ಜೀವಮಾನವೆಲ್ಲಾ ಇರೋಕೆ ಆಗುಲ್ಲ. ವಯಸ್ಸಿರುವಾಗ ಮದುವೆಯಾಗದೇ ಮುದುಕನಾದ ಮೇಲೆ ಆಗ್ತೀಯಾ?

ನಾನೆಲ್ಲಿ ಒಂಟಿಯಾಗಿದೀನಿ? ನೀವೆಲ್ಲಾ ಇದೀರಲ್ಲ.

ನಾವೇನು ಶಾಶ್ವತಾನೇ.... ಈಗಲೇ ಎಲ್ಲರೂ ಒಂದೊಂದು ದಿಕ್ಕಿನಲ್ಲಿದ್ದಾರೆ. ನಾವಿಬ್ಬರೂ ಇರೋತನಕ ಚೆನ್ನಾಗಿರುತ್ತೆ. ಆಮೇಲೆ ನಿನಗೆ ಯಾರಿದ್ದಾರೆ ಹೇಳು.

ಯಾರೂ ಬೇಡ. ಒಬ್ಬನೇ ಇರುಕ್ಕೆ ಆಗುಲ್ಲ ಅಂತ ಅಂದುಕೋ ಬೇಡ.

ಹಾಗಲ್ಲಕಣೋ....ಸಮಯ ಎಂದರೆ ಯಾರಾದರೂ ಅಪ್ತರು ಬೇಡವೇನೊ.... ಹೆಂಡತಿ ಬಂದರೆ ನಿನ್ನ ಕಷ್ಟ ಸುಖದಲ್ಲಿ ಸಮಭಾಗಿ ಯಾಗ್ತಾಳೆ.

ಬರೀ ಕಷ್ಟ ಸುಖದಲ್ಲಿ ಸಮಭಾಗಿಯಾಗುಲ್ಲ. ಹಣಕಾಸಿಗೂ ಸಮಭಾಗಿಯಾಗ್ತಾಳೆ ಗೊತ್ತಾ?

ಹೇಗೋ ನಡೆಯುತ್ತೆ. ನಾನೀಗ ಒಂದು ಹುಡುಗಿನ ನೋಡಿದೀನಿ. ಆ ಹುಡುಗೀನೂ ಕೆಲಸದಲ್ಲಿದ್ದಾಳೆ. ನೀನು ಅವಳನ್ನು ನೋಡಿದರೆ ಖಂಡಿತಾ ಬೇಡ ಅನ್ನಲ್ಲ. ಹಾಗಿದ್ದಾಳೆ. ರತೀ ತರಹ.

ರತೀ ತರಹ ಇದ್ದರೆ! ಸದಾ ರತೀ ಜತೆ ಇರೋಕ್ಕೆ ಆಗುಲ್ಲ. ಅವಳನ್ನು

ಸಾಕಬೇಡವೆ? ನನಗೆ ಮದುವೆ ಮಾತ್ರ ಬೇಡ ಎಂದು ರೇಗಿದ್ದ. ಆದರೂ ಕನಕವಲ್ಲಿ ಒಂದು ದಿನ ಆ ಹುಡುಗಿಯನ್ನು ತನ್ನ ಮನೆಗೆ ಕರೆಸಿದ್ದಳು. ಸುಮ್ಮನೇ ವೇಣು ಅವಳನ್ನು ನೋಡಿದ್ದ. ಮಿಂಚು ಹೊಡೆದಂತಾಗಿತ್ತು. 'ವ್ಹಾ' ಎಂದ.

ನಂತರ ತಾಯಿ ಮತ್ತೆ ಪ್ರಸ್ತಾಪ ಮಾಡಿದಾಗ ತಾನು ನೋಡಿದ ಹುಡುಗಿಯೇ ಅವಳು ಎಂದುಕೊಂಡು ಮದುವೆಗೆ ಒಪ್ಪಿದ. ಮದುವೆ ನಿಶ್ಚಯವಾಯಿತು. ಆದರೆ ವೇಣು ಕೆಲವು ಕಂಡೀಷನ್‌ಗಳನ್ನು ಹಾಕಿದ. ಮೊದಲು, ಅವಳು ಕೆಲಸಕ್ಕೆ ರಾಜೀನಾಮೆ ಕೊಡಬೇಕು. ತನ್ನ ಅಪ್ಪಣೆ ಇಲ್ಲದೇ ಅವಳು ಮನೆಯಿಂದ ಹೊರಗೆ ಎಲ್ಲಿಯೂ ಹೋಗಬಾರದು ಅಂತ.

ಅದೇನು ಮಹಾ! ಎಂದು ತಾಯಿ ನುಡಿದಳು. ಗೀತಳ ಮನೆಯವರ ಪರಿಸ್ಥಿತಿಯ ಅರಿವಿದ್ದುದರಿಂದ, ಮದುವೆಯ ಖರ್ಚನ್ನೆಲ್ಲಾ ತಾನೇ ವಹಿಸಿಕೊಂಡು ತಮ್ಮೆಲ್ಲಾ ಉಳಿದ ಮಕ್ಕಳ ಮದುವೆಯಂತೆ ವಿಜೃಂಭಣೆಯಿಂದ ಮದುವೆ ಮಾಡಬೇಕೆಂಬ ಆಸೆ. ಈ ಕಾರಣದಿಂದಾಗಿ ಸೊಸೆಗೆ ವಜ್ರದ ಓಲೆಯನ್ನಾಗಲೀ, ಮೂಗುಬೊಟ್ಟನ್ನಾಗಲೀ ತರಲಿಲ್ಲ. ಎಷ್ಟು ಬೇಕೋ ಅಷ್ಟು ಒಡವೆಗಳನ್ನೂ, ಅವೂ ಆಕೆಯದೇ... ಅದನ್ನು ಸೊಸೆಗೆ ಇಟ್ಟಳು. ಮದುವೆ ಸಾಂಗವಾಗಿ ನೆರವೇರಿತು.

ಆ ರಾತ್ರಿ ವೇಣು ಖುಷಿಯಿಂದ ಹಿಗ್ಗಿಹೋಗಿದ್ದರೆ, ಗೀತ ವಜ್ರದ ಓಲೆಗಳ ಕನಸನ್ನು ಕಾಣುವ ಪ್ರಯತ್ನ ಮಾಡುತ್ತಿದ್ದಳು. ಗೀತ ಕೆಲಸಕ್ಕೆ ರಾಜೀನಾಮೆ ಕೊಟ್ಟಳು. ಕೆಲವೇ ದಿನಗಳಲ್ಲಿ ಗಂಡನ ಬಂಡವಾಳ ಬಯಲಿಗೆ ಬಂದಿತ್ತು.

ನಿಮಗೆ ಬರುವ ಸಂಬಳ ಸಂಸಾರಕ್ಕೆ ಸಾಲದು ಅಂತ ತಿಳಿದೂ ನನ್ನನ್ನು ಕೆಲಸ ಬಿಡುವಂತೆ ಯಾಕೆ ಒತ್ತಾಯ ಮಾಡಿದ್ರಿ? ಅಂತ ಜಗಳವಾಗಿದ್ದಳು.

ನನ್ನ ಹೆಂಡತಿಯಾದವಳು ಬೀದಿ ತಿರುಗಿ ಸಂಪಾದಿಸುವುದು ನಮಗೆ ಬೇಕಿಲ್ಲ. ನಮ್ಮ ಅತ್ತಿಗೆ ಮನೇಲೇ ಇಲ್ವಾ!

ಅವರು ಶ್ರೀಮಂತರು, ಮನೇಲೇ ಇದ್ದಾರೆ. ನಾವು ಹಾಗಲ್ಲವಲ್ಲ.

ಶ್ರೀಮಂತಿಕೆ ಬೇಕೂಂತ ಸೂಳೆಗಾರಿಕೆ ಮಾಡೋಕೆ ಆಗುತ್ತಾ. ಬಾಯಿ ಮುಚ್ಚಿಕೊಂಡು ನಾನು ಹೇಳಿದಹಾಗೆ ಕೇಳಿಕೊಂಡು ಬಿದ್ದಿರುವುದಾದರೆ ಬಿದ್ದಿರು. ಇಲ್ಲದಿದ್ದರೆ ನಿಮ್ಮಪ್ಪನ ಮನೆಗೆ ಹೊರಟು ಹೋಗು.

ಹೀಗೇಲ್ಲಾ ಆಡೋರು ಮದುವೆ ಯಾಕೆ ಆದ್ರಿ?... ಅವಳು ಅಳುತ್ತಾ

ಪ್ರಶ್ನಿಸಿದಾಗ ಅವನು ಸೋತಿದ್ದ... ರಮಿಸುತ್ತಾ ನುಡಿದ ಚಿನ್ನಾ.... ನನಗೆ ಸ್ವಲ್ಪ ಕೋಪ ಜಾಸ್ತಿ. ನೀನು ಎದುರು ಮಾತಾಡಿದರೆ, ಏನೇನೋ ಆಡಿ ಬಿಡ್ತೀನಿ. ಆದರೆ ನಾನು ಕೆಟ್ಟವನಲ್ಲ. ನಾನು ಉಪವಾಸವಿದ್ದರೂ ಸರಿ, ನಿನಗೆ ಎರಡು ಹೊತ್ತಿನ ಊಟಕ್ಕೆ ಕೊರತೆಯಾಗದಂತೆ ನೋಡಿಕೊಳ್ತೀನಿ. ಅವನ ಪ್ರೀತಿಯ ಮಾತುಗಳಿಗೆ ಅವಳು ಮರುಳಾದಳು. ಸಮಯ ನೋಡಿ ಒಂದು ದಿನ ತನ್ನ ಆಸೆಯನ್ನು ವ್ಯಕ್ತಪಡಿಸಿದಳು.

ನಿಮ್ಮ ಮನೇಲಿ ಎಲ್ಲರ ಹತ್ತಿರಾನೂ ವಜ್ರದ ಓಲೆ ಇದೆ. ನನ್ನ ಹತ್ತಿರ ಮಾತ್ರ ಇಲ್ಲ. ನನಗೂ ಆಸೆ ಎಂದಳು ಮೂತಿ ಊದಿಸಿ.

ನಿನಗ್ಯಾಕೆ ಚಿನ್ನಾ ವಜ್ರದ ಓಲೆ. ವಜ್ರಕ್ಕಿಂತ ಮಿಗಿಲಾದ ನಿನ್ನ ಈ ನೀಲಿ ಕಣ್ಣುಗಳೇ ಸಾಕು, ನಿನಗೆ ಎಂದ ಮುಗುಳ್ನಗುತ್ತಾ.

ನೀಲಿ ಕಣ್ಣುಗಳನ್ನು ಕಿತ್ತು ಕಿವಿಗೆ ಇಟ್ಟುಕೊಳ್ಳೋಕೆ ಆಗುಲ್ಲವಲ್ಲ. ಎಂದಳು ಅವಳು ವೈಯ್ಯಾರವಾಗಿ.

ಬೇಡ ಕಣೋ ಬಂಗಾರ, ನೀಲಿ ಕಣ್ಣುಗಳ ಮುಂದೆ ಅವುಗಳು ಪ್ರಕಾಶವಾಗಿ ಕಾಣುವುದೇ ಇಲ್ಲ. ಮಂಕಾಗಿ ಬಿಡುತ್ವೆ. ಸುಮ್ಮನೇ ದುಡ್ಡು ದಂಡ.

ಬೇಡ..... ದುಡ್ಡಿಲ್ಲ... ದುಡ್ಡುದಂಡ ಇದನ್ನೆಲ್ಲ ಸುತ್ತಿ ಬಳಸಿ ಹೇಳಬೇಕಾಗಿಲ್ಲ. ನನ್ನ ಕೈಲಿ ಆಗುಲ್ಲ ಅಂತ ಹೇಳಿ ಸಾಕು.

ನೋಡು, ಮಾತು ಮಾತಿಗೂ ಜಗಳ ಆಡಿದರೆ, ನನ್ನ ಪ್ರೀತಿನೂ ಕಳೆದುಕೊಳ್ತೀಯಾ ಅಷ್ಟೆ..... ಪ್ರೀತಿಗಿಂತ ನಿಜವಾದದ್ದು ಬೇರೆ ಇಲ್ಲ ತಿಳಕೊ....

"ಹೆಂಡತಿ ಕೇಳಿದ್ದನ್ನು ಪ್ರೀತಿಯಿಂದ ತೆಗೆಸಿಕೊಡಲಾಗದ್ದನ್ನು ನಾನು ಪ್ರೀತಿ ಅಂತ ಒಪ್ಪುಲ್ಲ" ಅಂತ ಹೇಳಿ ಸೊರ ಸೊರ ಅಂತ ಅಳುತ್ತಾ ಮಲಗಿದಳು.

"ವಜ್ರದ ಓಲೆ ಮೇಲೆ ಅಷ್ಟು ಆಸೆ ಇದ್ದರೆ, ನನ್ನಂಥ ಬಡವನ್ನ ಏಕೆ ಮದುವೆಯಾದೆ? ಅವನು ನಿನ್ನ ಮೈ ತುಂಬಾ ಒಡವೆ ಹೇರಿ, ತಾನು ಒಬ್ಬ ನಿರಾಭರಣ ಸುಂದರಿಯ ಹಿಂದೆ ಓಡಿ ಹೋಗ್ತಿದ್ದ" ಎಂದು ನುಡಿದ ಅವಳನ್ನು ತನ್ನೆಡೆಗೆ ತಿರುಗಿಸಿಕೊಂಡ.

ಮದುವೆಯಾದ ಮೂರೇ ವರ್ಷದಲ್ಲಿ ಇಬ್ಬರು ಮಕ್ಕಳು ಹುಟ್ಟಿದಾಗ ಅವರ ಮನೆಯ ಖರ್ಚುವೆಚ್ಚಗಳು ಹೆಚ್ಚಿದವು. ಗೀತ ಅವಡುಗಚ್ಚಿ ತನ್ನ ಆಸೆಯನ್ನು ಅದುಮಿಟ್ಟುಕೊಂಡಳು.

ಇದ್ದಕ್ಕಿದ್ದಂತೆ ಒಂದು ದಿನ ರಾಮಸ್ವಾಮಿ ಹೃದಯಾಘಾತದಿಂದ ತೀರಿ ಹೋದಾಗ, ರಾಧಾಕೃಷ್ಣ ತನ್ನ ಹೆಂಡತಿಯೊಡನೆ ಬೇರೆ ಮನೆಗೆ ಹೊರಟು ಹೋದ. ತಮ್ಮಂದಿರು ಬೇರೆ ಊರಿನಲ್ಲಿ ಕೆಲಸದಲ್ಲಿದ್ದವರು ತಮ್ಮೊಡನೆ ತಮ್ಮ ತಾಯಿಯನ್ನು ಕರೆದುಕೊಂಡು ಹೋದರು. ಹೋಗುವ ಮೊದಲು ಕನಕವಲ್ಲಿ, ಗೀತಳ ಕೈಯಲ್ಲಿ ಹತ್ತು ಸಾವಿರ ರೂಗಳನ್ನಿಟ್ಟು, ಇದನ್ನು ನಿನ್ನ ಮಕ್ಕಳ ಹೆಸರಿನಲ್ಲಿ ಫಿಕ್ಸೆಡ್ ಡಿಪಾಸಿಟ್‌ನಲ್ಲಿಡು. ಅವರ ವಿದ್ಯಾಭ್ಯಾಸಕ್ಕೆ ಆಗುತ್ತೆ, ಎಂದಳು.

ಆಗಲಿ ಅತ್ತೆ ಎಂದು ಆಸೆ ಗಣ್ಣುಗಳಿಂದ ಆ ಹಣವನ್ನು ತನ್ನ ಕೈಗೆತ್ತಿಕೊಂಡಳು. ಮನದಲ್ಲಿ ಏನೋ ದೂರದ ಆಸೆ. ಗಂಡನಿಗೆ ತಿಳಿಯದಂತೆ ಆ ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡಿದಳು.

ತಾಯಿಯೂ ದೂರ ಹೊರಟು ಹೋದ ಮೇಲೆ ವೇಣುವಿನ ಸಂಪಾದನೆ ಕಡಿಮೆ ಆಗಿತ್ತು. ಮನೆಯ ಖರ್ಚು ವೆಚ್ಚವನ್ನು ತೂಗಿಸಲೆಂದು ಬೇರೆ ಇನ್ನೊಂದು ಕಡೆ ಏಜೆಂಟ್ ಆಗಿ ಕೆಲಸ ಮಾಡಲಾರಂಭಿಸಿದ.

ತಾನು ವಜ್ರದ ಓಲೆಯನ್ನು ತೆಗೆದುಕೊಳ್ಳುವ ಆಸೆ ಹೂತು ಹೋಗುತ್ತದೆಯೋ, ಏನೋ ಎಂಬ ಅಂಜಿಕೆಯಿಂದ ಗಂಡನನ್ನು ಕೇಳಿಕೊಂಡಳು.

ಮಕ್ಕಳೂ ದೊಡ್ಡವರಾಗ್ತಿದ್ದಾರೆ. ಸ್ಕೂಲಿಗೆ ಸೇರಿಸಬೇಡವೇ.... ಹಣಕ್ಕೆ ಏನು ಮಾಡೋದು? ನಾನು ಎಲ್ಲಾದ್ರೂ ಕೆಲಸಕ್ಕೆ ಸೇರಿಕೊಳ್ತೀನಿ.

ಏನೂ ಬೇಡ, ಇನ್ನೂ ನಿಮ್ಮನ್ನೆಲ್ಲಾ ಸಾಕುವ ತಾಕತ್ತು ನನ್ನಲ್ಲಿದೆ. ಮಕ್ಕಳ ಜತೆ ಮನೇಲಿ ಸುಮ್ಮನೇ ಇರು.

ಹೋಗಲಿ, ಮನೇಲಿ ನಾಲ್ಕು ಹುಡುಗರಿಗೆ ಪಾಠ ಹೇಳಿಕೊಡ್ತಿನಿ. ಈಗ ಅತ್ತೇನೂ ಮನೇಲಿಲ್ಲ. ನನಗೆ ಸಮಯ ಕಳೆಯವುದೇ ಕಷ್ಟವಾಗಿದೆ.

ಅದೆಲ್ಲ ಸುಳ್ಳು ನೆವ. ನಾಲ್ಕು ಜನ ಹುಡುಗರಿಗೆ ಪಾಠ ಹೇಳಿಕೊಟ್ಟರೆ ಸಿಗುವ ಸಂಪಾದನೆ ಅಷ್ಟರಲ್ಲೇ ಇದೆ. ಏನೂ ಬೇಡ ಸುಮ್ಮನಿರು.

ಪ್ಲೀಸ್ ಬೇಡ ಎನ್ನ ಬೇಡಿ. ನಮಗೀಗ ಹಣದ ಆಗತ್ಯ ತುಂಬಾ ಇದೆ. ಎಷ್ಟೇ ಒಪ್ಪ ಮಾಡಿದರೂ, ತಿಂಗಳಿಗೆ ಐದು ರೂಪಾಯಿ ಉಳಿಯುಲ್ಲ.

ಯಾಕೆ ಉಳಿಸಬೇಕು? ನಿನ್ನ ವಜ್ರದ ಓಲೆಯ ಆಸೆ ಇನ್ನು ಹೋಗಿಲ್ವಾ? ಎಂದು ಅವನು ಹಾಸ್ಯವಾಗಿ ಕೇಳಿದಾಗ ಅವಳು ಮುಖ ತಿರುಗಿಸಿದಳು.

ನೋಡಿದ್ಯಾ ನನ್ನಂಥೋನ್ನ ಮದುವೆಯಾದರೆ ಎಂಥಾ ಸ್ಥಿತಿ ಅಂತ. ವಜ್ರದ ಓಲೆ ಇರಲಿ. ಒಲೆ ಹಚ್ಚೋಕೆ ಇಜ್ಜಲು ಸಹ ಇರುಲ್ಲ. ಎಂದು

ಹೇಳಿ ಅವಳನ್ನು ನಗಿಸಲು ಯತ್ನಿಸಿ ಸೋತ. ಕಡೆಗೆ ನುಡಿದ." ಆಗಲಿ ನಿನ್ನ ಮಾತನ್ನೇ ಒಪ್ತೀನಿ." ಪಾಠದಿಂದ ಎಷ್ಟು ಹಣ ಸಂಪಾದಿಸುಕ್ಕೆ ಆಗುತ್ತೆ ಏಂತ ನಾನೂ ನೋಡಿ ಬಿಡ್ತೀನಿ, ಎಂದು ಅವಳ ಗಲ್ಲ ಸವರಿ ಅವಳಿಗೆ ಒಪ್ಪಿಗೆ ಕೊಟ್ಟಿದ್ದ.

ಅವನು ಒಪ್ಪಿಗೆ ಕೊಟ್ಟಿದ್ದು, ಅವಳಿಗೆ ವಜ್ರದ ಓಲೆಯನ್ನು ಕೊಂಡಷ್ಟೇ ಖುಷಿಯಾಗಿತ್ತು. ಮಾರ್ಕೆಟ್ ಕಡೆ ಹೋದಾಗ ಚಿನ್ನ ಬೆಳ್ಳಿಯ ಅಂಗಡಿಯಲ್ಲಿ ಒಂದು ಜತೆ ವಜ್ರದ ಓಲೆಯ ಬೆಲೆಯನ್ನು ಅಂದಾಜಾಗಿ ಕೇಳಿ ತಿಳಿದುಕೊಂಡಿದ್ದಳು. "ಹನ್ನೆರಡರಿಂದ ಹದಿನೈದು ಸಾವಿರದವರೆಗೆ ಆಗುತ್ತೆ" ಅಂತ ಅಂಗಡಿಯವನು ನುಡಿದಾಗ ಮೂಕಿಯಾಗಿದ್ದಳು. ಅಬ್ಬಾ! ಅಷ್ಟೊಂದು. ಈಗ ತನ್ನ ಹತ್ತಿರ ಅತ್ತೆ ಕೊಟ್ಟಿರುವ ಹತ್ತು ಸಾವಿರ ರೂಪಾಯಿಗಳು ಇವೆ. ಇನ್ನೂ ಮೂರು ನಾಲ್ಕು ಸಾವಿರವಾದರೂ ಬೇಕು. ದಿನಕ್ಕೆ ಎಷ್ಟು ರೂಪಾಯಿ ಉಳಿತಾಯ ಮಾಡಿದರೆ, ಎಷ್ಟು ದಿನಗಳಲ್ಲಿ ಮೂರು ಸಾವಿರವನ್ನು ಕೂಡಿ ಹಾಕಬಹುದು? ತನ್ನಲ್ಲೇ ಲೆಕ್ಕ ಹಾಕುತ್ತಾ ನಡೆದಳು. ಕಲ್ಲನ್ನು ಎಡವಿ ಬಿದ್ದಿದ್ದಳು. ಕೈಯಲ್ಲಿದ್ದ ಚೀಲದಿಂದ ತರಕಾರಿಗಳು ಚೆಲ್ಲಾಪಿಲ್ಲಿಯಾದುದಲ್ಲದೇ, ಮೊಣಕೈ ತರಚಿ ರಕ್ತ ಒಸರುತ್ತಿತ್ತು. ಅಲ್ಲೇ ಹತ್ತಿರದಲ್ಲಿದ್ದ ಕ್ಲಿನಿಕ್‌ಗೆ ಹೋಗಿ, ಒಂದು ಇಂಜೆಕ್ಷನ್ ಚುಚ್ಚಿಸಿಕೊಂಡು ಮನೆಗೆ ಬಂದಿದ್ದಳು. ಕೈಯಲ್ಲಿದ್ದ ಹಣದಲ್ಲಿ ಇಪ್ಪತ್ತೈದು ರೂಪಾಯಿಗಳು ಖರ್ಚಾಗಿದ್ದವು. "ತಥ್ ಇನ್ನು ಮೇಲೆ ಡಾಕ್ಟರಿಗೆ ಹಣ ಖರ್ಚು ಮಾಡಬಾರದು ಎಂದುಕೊಂಡಳು."

ಪಾಠಕ್ಕೆ ನಾಲ್ಕು ಜನ ಹುಡುಗರು ಬರಲು ಪ್ರಾರಂಭಿಸಿದರು. ಇವಳು ತಾನಾಗಿಯೇ ಕೇಳಿದರೂ ಮುಂಗಡವಾಗಿ ಆ ಹುಡುಗರು ಹಣ ತಂದು ಕೊಟ್ಟಿರಲಿಲ್ಲ. ಇವಳಿಗೆ ಬೇಸರವೆನಿಸಿತು. ಎರಡು ಮಕ್ಕಳನ್ನು ಇಟ್ಟುಕೊಂಡು, ಬೇರೆ ಮಕ್ಕಳಿಗೆ ಟ್ಯೂಷನ್ ಹೇಳಿಕೊಡುವುದು ಕಷ್ಟ ಅಂತನ್ನಿಸಿದಾಗ ಉತ್ಸಾಹ ಕಡಿಮೆಯಾಯಿತು. ಗಂಟಲು ಒರಲಿಕೊಂಡು ಪಾಠ ಹೇಳಿ ಕೊಟ್ಟಿದ್ದರೂ, ತಿಂಗಳ ಖರ್ಚಿನಲ್ಲಿ ಹತ್ತು ರೂಪಾಯಿ ಉಳಿಸಲಾಗುತ್ತಿರಲಿಲ್ಲ. ಥೂ ಗಂಡನ ಮಾತು ಕೇಳಿ, ಟೀಚರ್ ಕೆಲಸವನ್ನು ಬಿಡಬಾರದಾಗಿತ್ತು ಎಂದು ಹತ್ತು ಹಲವು ಸಾರಿ ಪೇಚಾಡಿಕೊಂಡಳು.

ಗಂಡ ಮನೆಗೆ ಒಂದೊಂದು ದಿನ ಲೇಟಾಗಿ ಬರುತ್ತಿದ್ದ. ಅಂತಹ ದಿನಗಳಲ್ಲಿ ಅವನಿಗೆ ಮಾತ್ರ ಊಟಕ್ಕೆ ಬಡಿಸಿ, ತಾನು ತಣ್ಣೀರು ಕುಡಿದು ಮಲಗುತ್ತಿದ್ದಳು. ಕೇಳಿದರೆ ತನ್ನ ಊಟ ಆಯಿತೆಂದು ಸುಳ್ಳು ಹೇಳುತ್ತಿದ್ದಳು.

ಹೀಗೇ ಗಂಡ ದಿನವೂ ತಡವಾಗಿ ಬಂದರೆ, ತನ್ನ ರಾತ್ರಿಯ ಊಟದ ಖರ್ಚು ಉಳಿಯುತ್ತದೆಂದು ಲೆಖ್ಖ ಹಾಕಿದಳು. ಆದರೆ ಬೆಳಿಗ್ಗೆ ಆಗುವಷ್ಟರಲ್ಲಿ ಹೊಟ್ಟೆ ಹಸಿವು ತಾಳಲಾರದೇ ಹತ್ತಾರು ಸಾರಿ ನೀರು ಕುಡಿಯುತ್ತಿದ್ದಳು.

ಮಕ್ಕಳಿಗೆ ಚಾಕಲೇಟ್ ಬದಲಿಗೆ ಬೆಲ್ಲ ಕೊಟ್ಟು ರಮಿಸುತ್ತಿದ್ದಳು. ಮನೆಗೆ ಬಂದ ನಾದಿನಿಯರು ಮಕ್ಕಳ ಕೈಗೆ ಹಣ ಕೊಟ್ಟರೆ, ಸರ್ರನೆ ತೆಗೆದಿಟ್ಟು ಕೊಳ್ಳುತ್ತಿದ್ದಳು. ವೇಣು ಒಂದು ಸಾರಿ ತಮಾಷೆ ಮಾಡಿದ್ದ.

ಅದೇನು ಎಂದೂ ಹಣ ಕಾಣದವಳ ಹಾಗೆ ಆಡ್ತೀಯಲ್ಲ. ಅವರೆಲ್ಲಾ ಏನಂದುಕೊಳ್ತಾರೆ! ನೀನೂ ಕೆಲಸದಲ್ಲಿದ್ದೆ. ಸಂಪಾದನೆ ಮಾಡ್ತಿದ್ದೆ.

ಈಗ ಸಂಪಾದನೆಯೇ ಇಲ್ಲವಲ್ಲ.

ನಿನಗೆ ಪಾಕೆಟ್ ಮನಿ ಬೇಕಾ ಗೀತಾ! ಕರುಣೆಯಿಂದ ಕೇಳಿದ್ದ.

ಕೊಡ್ತೀರಾ! ಆಸೆಯಿಂದ ಕೇಳಿದಳು.

ಕೊಡ್ತೀನಿ. ಆದರೆ ಅದನ್ನು ನೀನು ಖರ್ಚು ಮಾಡಬೇಕು. ನಿನಗೆ ನಿನ್ನ ಮಕ್ಕಳಿಗೆ ಏನು ಬೇಕೋ ಅದನ್ನು ತಗೋಬೇಕು. ಸಾಸಿವೆ ಡಬ್ಬದಲ್ಲೋ ಬೇಳೆ ಡಬ್ಬದಲ್ಲೋ ಮುಚ್ಚಿಡಬಾರದು.

ಇಲ್ಲ ಕೊಡಿ. ತಿಂಗಳಿನಲ್ಲಿ ಉಳಿದರೆ ಮಾತ್ರ ಒಂದು ಡಬ್ಬಿಗೆ ಹಾಕಿಡ್ತೀನಿ. ಎಂದಿದ್ದಳು. "ಅಂತೂ ನಿನ್ನ ವಜ್ರದ ಓಲೆ ಆಸೆ ಉಳಿಸಿಲ್ಲ ಅನ್ನು" ಎಂದ ಅವಳ ಕೆನ್ನೆ ಸಟ್ಟಿ. ಅವಳ ಕಣ್ಣಲ್ಲಿ ನೀರೂಡಿತು.

ಪಾಕೆಟ್ ಮನಿ ಕೈಗೆ ಸಿಕ್ಕಿದ ದಿನ ಅವಳನ್ನು ಹಿಡಿಯುವವರೇ ಯಾರಿಲ್ಲ. ಆ ಹಣವನ್ನು ನಾಲ್ಕಾರು ಸಾರಿ ಎಣಿಸಿದಳು. ಎಲ್ಲೆಲ್ಲಿ ತೆಗೆದಿಟ್ಟರೂ ತೃಪ್ತಿ ಇಲ್ಲ. ಆದರೆ ತಿಂಗಳ ಕೊನೆಯ ಹೊತ್ತಿಗೆ ಅದೂ ಇದು ಅಂತ ಯಾವುದೋ ಖರ್ಚುಗಳಿಗೆ ಆ ಹಣ ಕರಗಿತ್ತು. ಅವಳಿಗೆ ಅತಿ ದುಃಖವಾಗಿತ್ತು. ಆದರೂ ಹಠದಿಂದ ಆಗ ಈಗ ಹತ್ತಾರು ರೂಪಾಯಿಗಳನ್ನು ತನ್ನ ಕಣ್ಣಿಗೆ ಬೀಳದಂತೆ ಮುಚ್ಚಿಟ್ಟಳು. ಎಣಿಸಿ ಲೆಖ್ಖ ಹಾಕಿದರೆ ಎಲ್ಲಿ ಕಡಿಮೆಯಾಗುತ್ತದೋ ಎಂದುಕೊಂಡು ಆ ಕಡೆ ನೋಡುತ್ತಲೇ ಇರಲಿಲ್ಲ.

ಮಗ ರವಿಯನ್ನು ನರ್ಸರಿ ಸ್ಕೂಲಿಗೆ ಸೇರಿಸಿದಾಗ ಕೂಡಿಟ್ಟ ಹಣವೆಲ್ಲಾ ಖರ್ಚಾಗಿತ್ತು. ವೇಣು ತಾನು ಆಫೀಸಿನಲ್ಲಿ ಅಡ್ವಾನ್ಸ್ ತೆಗೆದುಕೊಂಡಿರುವುದಾಗಿ ಹೇಳಿ, ತಿಂಗಳ ಖರ್ಚಿಗೆ ಕಡಿಮೆ ಹಣ ಕೊಟ್ಟಿದ್ದ. ಫೀಸು, ಯಾನಿಫಾರಂ ಬುಕ್ಸ್, ಆಟೋರಿಕ್ಷಾ ಇತ್ಯಾದಿಗಳ ಖರ್ಚು ಹೆಚ್ಚಾಗ ತೊಡಗಿತು. ಮನೆಯಲ್ಲಿದ್ದ ಹಳೆಯ ಹಿತ್ತಾಳೆ ಪಾತ್ರೆಗಳನ್ನೆಲ್ಲಾ ಒಂದೊಂದಾಗಿ ಮಾರಿ, ಹಣ ಶೇಖರಿಸಿದಳು.

ಆ ದಿನ ಗಂಡ ಹೆಂಡತಿಗೆ ಹಣಾ ಹಣಿ ಜಗಳ.

ಹಿತ್ತಾಳೆ ಪಾತ್ರೆಗಳನ್ನು ಯಾರನ್ನು ಕೇಳಿ ಮಾರಿದೆ? ಅದೆಲ್ಲಾ ನಮ್ಮ ಅಪ್ಪನ ಮನೇದು, ನಿಮ್ಮ ಅಪ್ಪನ ಮನೇದಲ್ಲ, ತಿಳೀತೇ? ರೇಗಿದ್ದ.

“ನಿಮ್ಮ ಅಪ್ಪನ ಮನೇದೇ ನನಗೂ ಗೊತ್ತು. ನಿಮ್ಮ ಅಪ್ಪನ ಮೊಮ್ಮಕ್ಕಳ ಭವಿಷ್ಯಕ್ಕಾಗಿಯೇ ನಾನು ಅದನ್ನು ಮಾರಿದ್ದು ತಿಳೀತೆ? ಎಂದು ಹಂಗಿಸಿದಾಗ ತೆಪ್ಪಗಾದ.” ಆದರೂ,

ಈ ನಡುವೆ ನಿನ್ನ ದರ್ಪಜಾಸ್ತಿ ಆಗಿದೆ. ಮಾತಿಗೆ ಎದುರು ಮಾತು. ನನ್ನ ಅಣ್ಣ ತಮ್ಮಂದಿರು ಕೇಳಿದರೆ ಏನು ಹೇಳಲಿ? ಅವರೆಲ್ಲಾ ಆಡಿಕೊಂಡು ನಗುಲ್ವೆ?

ಆಡಿಕೊಂಡು ನಗೋರು ನಮ್ಮ ಸಹಾಯಕ್ಕೆ ಬಂದಿಲ್ಲ. ನಿಮ್ಮ ಅಣ್ಣ ಶ್ರೀಮಂತ. ನಿನ್ನ ತಮ್ಮಂದಿರು ಇನ್ನೂ ಬ್ರಹ್ಮಚಾರಿಗಳು. ನಿಮ್ಮ ತಾಯಿ, ಅವರಾದರೂ ಯೋಚಿಸಬೇಡವೆ? ನಮ್ಮಗತಿ ಏನೂಂತ.. ಹೋಗಲಿ, ನಿಮ್ಮ ಅಮ್ಮನ್ನ ಕೇಳಬಾರದಾ ನೀವು.....

ಅಮ್ಮನಿಗೆ ಈಗ ಏನೂ ಸಂಪಾದನೆ ಇಲ್ಲ. ಅವಳಿರುವುದೇ ತಮ್ಮಂದಿರ ಮನೆಯಲ್ಲಿ. ನಮಗೆ ಕಷ್ಟವಾಗಬಾರದು ಅಂತ ಈ ಮನೇನ ನಮಗೆ ಬಿಟ್ಟುಕೊಟ್ಟು ಹೋಗಿದ್ದಾಳೆ. ಇದನ್ನೆಲ್ಲ ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ. ಅದನ್ನು ಬಿಟ್ಟು ಒಂದೊಂದನ್ನೇ ಮಾರಿಕೊಂಡು ತಿಂದರೆ ಎಕ್ಕಡ ತಗೊಂಡು ಹೊಡೀತಾರೆ ಅಷ್ಟೆ.

ಎಕ್ಕಡದಲ್ಲಿ ಹೊಡಿಸಿಕೊಳ್ಳುವಂಥ ಕೆಲಸ ನಾನೇನೂ ಮಾಡಿಲ್ಲ ಬಿಡಿ. ನೀವು ಈಗಲೂ ಹೂಂ ಅನ್ನಿ. ನಾನು ಕೆಲಸಕ್ಕೆ ಸೇರಿಕೊಳ್ತೀನಿ ಎಂದು ಬೇಡಿಕೊಂಡಿದ್ದಳು.

ಅದು ಮಾತ್ರ ಸಾಧ್ಯವಿಲ್ಲ ಎಂದು ಗಡುಸಾಗಿ ಹೇಳಿ, ನಾನು ಇವತ್ತು ರಾತ್ರಿಯ ಟ್ರೈನಿನಲ್ಲಿ ಮದ್ರಾಸಿಗೆ ಹೋಗ್ತಿದೀನಿ. ಬರುವುದು ನಾಲ್ಕಾರು ದಿನಗಳಾಗ ಬಹುದು. ನಾನು ಬರೋವಷ್ಟರಲ್ಲಿ ಹಣ ಇಲ್ಲ ಅಂತ ಮಕ್ಕಳನ್ನು ಮಾರಿಬಿಟ್ಟೀಯೇ ಎಂದು ನಗುತ್ತಾ ಅವಳ ತಲೆಯ ಮೇಲೆ ಮೊಟಕಿ, ಅವಳ ಕೈಗೆ ಖರ್ಚಿಗೆ ಬೇಕಾಗುಷ್ಟು ಹಣವನ್ನು ಎಣಿಸಿಕೊಟ್ಟ.

ಎಣಿಸಿ ಕೊಡೋದು ನೋಡು..... ಎಷ್ಟು ಜಿಪುಣ ಎಂದಳು.

ಜಿಪುಣತನ ಮಾಡ್ತಿನಿ. ಆದರೆ ಎಂದಾದ್ರೂ ನಿನ್ನನ್ನು ಲೆಖ್ಖ ಕೇಳಿದೀನಾ ಹೇಳು! ಎಂದು ಸವಾಲು ಹಾಕಿದ.

ನಾನು ಎಲ್ಲಾ ಲೆಖ್ಖ ಬರೆದಿಟ್ಟದ್ದೀನಿ. ಬೇಕಾದ್ರೆ ತೋರಿಸ್ತೀನಿ. ಎಷ್ಟೋಸಲ ನೀವು ಕೊಟ್ಟ ಹಣಕ್ಕಿಂತ ಹೆಚ್ಚು ಖರ್ಚಾಗಿರುತ್ತೆ ಗೊತ್ತಾ?

ಗೊತ್ತು.... ಅದಕ್ಕೇ ನನಗೆ ಮದುವೆ ಬೇಡ ಅಂತ ಬಡ್ಕೊಂಡೆ. ಈ ಅಮ್ಮ ಬಿಡಲಿಲ್ಲ. ನಿನ್ನನ್ನ ತೋರಿಸಿದಳು. ನಿನ್ನ ನೀಲಿಗಣ್ಣಿನ ಕಡಲಲ್ಲಿ ಮುಳುಗಿ ಬಿಟ್ಟೆ. ಏಳಕ್ಕೇ ಆಗದೇ ಒದ್ದಾಡ್ತಾ ಇದೀನಿ, ಎಂದ ಹತ್ತಿರ ಬರುತ್ತಾ.

ನಿಮ್ಮ ರಸಿಕತನ ಮಾತ್ರ ಕಡಿಮೆ ಆಗಿಲ್ಲ ಎಂದಳು, ಅವನನ್ನು ತಳ್ಳುತ್ತಾ.

ನಮ್ಮಂತಹ ಬಡವರ ಮನರಂಜನೆ ಇದೊಂದೇ, ರಸಿಕತನವೇ ನಮ್ಮ ಜೀವನದ ಜೀವಾಳ, ಎಂದ.

ಈ ರಸಿಕ ಶಿಖಾಮಣಿಗಳು, ಬೇರೆ ಊರಿಗೆ ಟೂರ್‌ಗೆ ಹೋದಾಗ ಹೇಗಿರ್ತಾರೋ ಅಥವಾ ರಸಿಕರನ್ನು ಹುಡುಕಿಕೊಂಡು ಹೋಗ್ತಾರೋ.....?

ಥೂ ಎಂಥಾ ಮಾತಾನಾಡ್ತೀ.... ನನ್ನ ಮಕ್ಕಳ ಮೇಲಾಣೆ. ನಾನು ಇದುವರೆಗೂ ಅಂಥಾ ಕೆಲಸ ಮಾತ್ರ ಮಾಡಿಲ್ಲ.

ನಿಮ್ಮ ಹತ್ತಿರವೂ ಸಿಕ್ಕಾಬಟ್ಟೆ ಹಣ ಇದ್ದಿದ್ರೆ ಹೋಗ್ತಿದ್ದರೇನೋ....

ಹುಂ ಹೋಗ್ತಿದ್ದೆ. ಅದಕ್ಕೆ ಮುಂಚೆ ಏನು ಮಾಡ್ತಿದ್ದೆ ಗೊತ್ತಾ? ನಿನಗೆ ವಜ್ರದ ಓಲೆ, ಮೂಗುತಿ ತೆಗೆಸಿಕೊಟ್ಟು, ನಿನಗೆ ತಿಳಿಯದಂತೆ ನಿನ್ನನ್ನು ಬಿಟ್ಟು ಹೋಗ್ತಿದ್ದೆ. ಈಗ ಆಫೀಸಿಗೆ ಹೊತ್ತಾಯ್ತು. ನನ್ನ ಲಗೇಜ್‌ನೆಲ್ಲಾ ರೆಡಿ ಮಾಡು. ಬರ್ತಿದ್ದ ಹಾಗೇ ಹೊರಡಬೇಕು.

ಮಡದಿ ಮಕ್ಕಳನ್ನು ಮುದ್ದಿಸಿ, ಮದ್ರಾಸಿಗೆಂದು ಹೊರಟವನು ಒಂದುವಾರ ಕಳೆದರೂ ವಾಪಸ್ಸು ಬರದಿದ್ದಾಗ, ಗೀತ ಆತಂಕಕ್ಕೆ ಒಳಗಾದಳು. ಅವನ ಆಫೀಸಿಗೆ ಹೋಗಿ ವಿಚಾರಿಸಿದಾಗ ಅವರು, ಯಾಕೆ ಬರಲಿಲ್ಲವೋ ಅಂತ ನಾವೂ ಯೋಚಿಸಿತ್ತಿದ್ದೆವು. ರಜ ಹಾಕಿ ಮನೆಯಲ್ಲಿರಬಹುದು ಅಂತ ಭಾವಿಸಿದ್ದೆವು ಅಂತ ಹೇಳಿದಾಗ ಅವಳು ನಡುಗಿ ಹೋದಳು. ತಕ್ಷಣ ತನ್ನ ಅತ್ತೆಗೆ, ಮೈದುನರಿಗೆ ಬರುವಂತೆ ಟೆಲಿಗ್ರಾಂ ಕೊಟ್ಟಳು. ಅವರುಗಳು ಬಂದರೂ ಗಂಡನ ಸುಳಿವಿಲ್ಲ. ಎಲ್ಲಾ ಕಡೆಗೂ ಸುದ್ದಿ ತಿಳಿಸಿ, ಪೋಲಿಸ್ ಕಂಪ್ಲೆಂಟ್‌ನ್ನು ಕೊಟ್ಟಾಯಿತು.

ಇನ್ನೂ ಎರಡು ದಿನ ಕಳೆದ ನಂತರ, ಹೈದರಾಬಾದಿನಿಂದ ಬಂದ ಸುದ್ದಿ ಎಲ್ಲರನ್ನು ನಡುಗಿಸಿತು. ಹೈದರಾಬಾದಿನ ರೈಲ್ವೇ ಷೆಡ್‌ನಲ್ಲಿ ನಿಲ್ಲಿಸಿದ್ದ

ರೈಲ್ವೇ ಕ್ಯಾರೇಜ್ ಒಂದರಲ್ಲಿ ಅನಾಥವಾಗಿ ಬಿದ್ದಿದ್ದ ಶವವನ್ನು ಕೂಲಿಯವನೊಬ್ಬನು ಕಂಡು, ರೈಲ್ವೆ ಅಧಿಕಾರಿಗಳಿಗೆ ಸುದ್ದಿ ತಿಳಿಸಿದನು. ಶವದ ಜತೆಯಲ್ಲಿದ್ದ ಲಗೇಜ್‌ಗಳ ನೆರವಿನಿಂದ ಅವನೇ ವೇಣುಗೋಪಾಲ್ ಎಂದು ಗುರುತಿಸಿ, ಸಂಬಂಧ ಪಟ್ಟವರಿಗೆ ತಿಳಿಸಿಯಾಗಿತ್ತು. ಹಿಂದಿನ ದಿನವಷ್ಟೇ ಆ ಬೋಗಿಯನ್ನು ಶೆಡ್‌ಗೆ ಕಳಿಸಿದ್ದರಿಂದ, ಹೆಣವನ್ನು ಗುರುತಿಸಲಾಗದಷ್ಟು ವಿಕಾರವಾಗಿರಲಿಲ್ಲವಾದ್ದರಿಂದ, ಹೆಣವನ್ನು ವ್ಯಾನಿನಲ್ಲಿ ಊರಿಗೆ ವಾಪಸ್ಸು ಕಳಿಸುವ ಏರ್ಪಾಡನ್ನು ಕಂಪೆನಿಯವರು ವಹಿಸಿಕೊಂಡರು. ಆದರೂ ದುರ್ಮರಣವಾದುದರಿಂದ, ಕೇಸ್ ರಿಜಿಸ್ಟರ್ ಮಾಡಿ, ಬಾಡಿಯನ್ನು ಪೋಸ್ಟ್ ಮಾರ್ಟಂ ಮಾಡಿ, ಆ ವ್ಯಕ್ತಿ ಹೃದಯಾಘಾತದಿಂದ ಮರಣ ಹೊಂದಿದ್ದಾನೆ ಎಂದು ಸರ್ಟಿಫಿಕೆಟ್‌ನ್ನು ಕೊಟ್ಟು, ಕಳಿಸುವ ಏರ್ಪಾಟನ್ನು ಮಾಡಿದರು.

ಅಷ್ಟರಲ್ಲಿ ವಿಷಯ ತಿಳಿದು, ಸಾಕಷ್ಟು ಜನ ಅವನ ಮನೆ ಮುಂದೆ ಸೇರಿದ್ದರು. ದಿಗ್ಭ್ರಾಂತಳಾದ ಗೀತ ಮಗುವನ್ನೆತ್ತಿಕೊಂಡು ನಿರ್ಜೀವ ಶವದಂತೆ ಕುಳಿತಿದ್ದಳು. ಗಂಡ ಮದ್ರಾಸಿನಿಂದ ಸೀದಾ ಮನೆಗೆ ವಾಪಸ್ಸು ಬರದೇ ಹೈದರಾಬಾದಿಗೆ ಏಕೆ ಹೋಗಿದ್ದನೆಂದು ಚಿಂತಿಸುತ್ತಿದ್ದಳು.

ಪೋಸ್ಟ್ ಮಾರ್ಟಂ ಮಾಡಿದ್ದರಿಂದ ಕಡೇ ಸಲ ಮುಖವನ್ನು ಸಹ ನೋಡುವಂತಿರಲಿಲ್ಲ. ದುರ್ಮರಣವಲ್ಲವಾದರೂ, ಹೆಚ್ಚಿಗೆ ಹೊತ್ತುಮಾಡದೇ ಬೇಗ ಬೇಗ ದಹನಕ್ರಿಯೆಗೆಂದು ತೆಗೆದುಕೊಂಡು ಹೊರಟೇ ಹೋದರು.

ಬಿಕ್ಕಿ ಬಿಕ್ಕಿ ಅಳುತ್ತಿದ್ದ ಅತ್ತೆಗೆ ಸಮಾಧಾನ ಹೇಳಬೇಕೆಂದೆನಿಸಿದರೂ, ನನ್ನ ಹೊಟ್ಟೆ ಉರಿದು ಬೂದಿಯಾಗಿದೆ. ನನಗೀಗ ಸಮಾಧಾನ ಯಾರು ಹೇಳಿದರೂ, ಅದು ತಣ್ಣಗಾಗುವುದಿಲ್ಲ ಎಂದು ಅತ್ತ ಮುಖ ತಿರುಗಿಸಿದಳು. ನಾಲ್ಕು ವರ್ಷದ ಮಗ, ಅಲ್ಲಿದ್ದ ಸೂಟ್‌ಕೇಸ್‌ನೊಳಗೆ, ಕೈಹಾಕಿ, ಒಂದೊಂದೇ ವಸ್ತುಗಳನ್ನು ಆಚೆಗೆ ತೆಗೆದ. ಹೈದಾರಾಬಾದಿನ ಕಲ್ಲಿನ ಬಳೆಗಳು, ಹರಳಿನ ಸರದೊಂದಿಗೆ ನೆಲಕ್ಕೆ ಬಿದ್ದು ಸದ್ದು ಮಾಡಿತು. ಬಳೆ ಸರ ಓಲೆಗಳನ್ನು ತನ್ನ ಮಡಿಲಿಗೆ ಹಾಕಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ನನಗೆ ಯಾವ ಒಡವೆಯೂ ಬೇಡ..... ಓಲೆಯ ಭಾಗ್ಯವೇ ಇಲ್ಲವಾದ ಮೇಲೆ ನನಗ್ಯಾಕೆ ಈ ಒಡವೆಗಳು ಎಂದು ಅಳುತ್ತಾ ಒಂದೊಂದನ್ನೇ ಮಡಿಲಿನಿಂದ ತೆಗೆದು ಆಚೆಗೆ ಎಸೆದಳು. ಅಲ್ಲಿಗೆ ಅವಳ ವಜ್ರದ ಓಲೆಯ ಆಸೆ ಅಳಿದಿತ್ತು.

* * *

೨. ಗುರುದಕ್ಷಿಣೆ

"ಜ್ಞಾನವೊಂದೇ ಸಾಕು ಮುಕ್ತಿಗೆ ।
ಇನ್ನೇನು ಬೇಕು ಹುಚ್ಚು ಮಾನವನೇ ।"

ಎಂಬ ಪುರಂದರದಾಸರ ದೇವರನಾಮವನ್ನು ಯಾರೋ ಕಲಾವಿದೆ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಗಾನಮಾಧುರ್ಯವನ್ನೂ ಪದಲಾಲಿತ್ಯವನ್ನೂ ಆಲಿಸುತ್ತಾ ರೇಡಿಯೋ ಮುಂದೆ ಕೂತಿದ್ದ ಉಷಾ ಕೈಯಲ್ಲಿ ಬಿಸಿ ಬಿಸಿ ಕಾಫಿಯ ಕಪ್‌ನ್ನು ಹಿಡಿದು, ಮುಂದಿದ್ದ ದಿನಪತ್ರಿಕೆಯ ಮೇಲೆ ಕಣ್ಣಾಡಿಸುತ್ತಿದ್ದಳು. ಹಾಡೂ ಮುಗಿದಿತ್ತು. ಕಾಫಿಯೂ ಮುಗಿದಿತ್ತು. ಪತ್ರಿಕೆಯ ಪುಟವನ್ನು ತಿರುವಿದಳು.

ನಿಧನದ ವಾರ್ತೆಯ ಕೆಳಗಿದ್ದ ಭಾವಚಿತ್ರವನ್ನು ನೋಡಿದಳು. ತಕ್ಷಣ ಗುರುತು ಸಿಕ್ಕಿತ್ತು. ಹೌದು, ಅವರೇ..... ಶಕುಂತಲಾ ಮೇಡಂ, ಪಾಪ ಏನಾಗಿತ್ತೋ ಎಂದುಕೊಂಡು ವಿವರಗಳನ್ನು ಓದಿದಳು.

"ಗಾನ ಕಲಾವಿದೆ ಶಕುಂತಲಾ ದೇವಿಯವರು ಇನ್ನಿಲ್ಲ ಎನ್ನುವುದರೊಂದಿಗೆ, ಅವರ ಸಾಧನೆ ಅವರ ಬಿರುದು ಬಾವಲಿಗಳ ವಿವರದೊಂದಿಗೆ ಅವರು ಅನೇಕ ಸಂಗೀತ ಪ್ರೇಮಿಗಳನ್ನು, ಅಗಲಿ ಹೋಗಿದ್ದಾರೆ." ಎನ್ನುವ ವಿಷಯವನ್ನು ಓದಿ, ಸ್ವಲ್ಪ ಉತ್ಪ್ರೇಕ್ಷೆ ಎನಿಸಿತು. ಆದರೂ, ಅವರ ಬಗ್ಗೆ ಮನಸ್ಸು ಮಿಡುಕಿತು.

ಒಂದು ಕಾಲದಲ್ಲಿ ಅವರು ತನಗೆ ಸಂಗೀತದ ಮೇಡಂ ಆಗಿದ್ದವರು.... ಆ ದಿನಗಳನ್ನು ಮನ ನೆನೆಯಿತು.

ಒಂಭತ್ತು ವರ್ಷದ ಹುಡುಗಿ ಉಷಾ, ಅತಿ ಆಸಕ್ತಿಯಿಂದ ಸಂಗೀತ ಪಾಠಗಳನ್ನು ಕಲಿಯುತ್ತಿದ್ದಳು. ಉಳಿದ ಕೆಲವು ಹುಡುಗಿಯರಂತೆ, ತಂದೆ ತಾಯಿಗಳ ಬಲವಂತಕ್ಕೆ ಬಂದು ಕೂರುತಿದ್ದವಳಲ್ಲವಾದ್ದರಿಂದ ನಿಷ್ಠೆಯಿಂದ, ಶ್ರದ್ಧೆಯಿಂದ ಹೇಳಿ ಕೊಟ್ಟುದುದನ್ನು ಅಭ್ಯಾಸ ಮಾಡಿ, ಮೇಡಂಗೆ ಒಪ್ಪಿಸಿ ಶಾಭಾಸ್‌ಗಿರಿಯನ್ನು ಪಡೆಯುತ್ತಿದ್ದಳು. ಇದರಿಂದ ಕೆಲವು ಸಹಪಾಠಿಗಳಿಗೆ ಅವಳನ್ನು ಕಂಡರೆ ಅಸೂಯೆ.

"ನಿನಗೆ ಮಾತ್ರ ಚೆನ್ನಾಗಿ ಹೇಳ್ತೀಯಾಂತ ಜಾಸ್ತಿ ಹೇಳಿಕೊಡ್ತಾರೆ ಅಂತ ಅವರುಗಳು ನುಡಿದಾಗ ಅವಳಿಗೆ ಹೆಮ್ಮೆ ಎನಿಸುತ್ತಿತ್ತು. ಆ ಮೇಡಂಗೆ "ಸಿಡುಕುವ ಮೇಡಂ" ಎಂಬ ಬಿರುದು ಶಿಷ್ಯೆಯರಿಂದ ಸಿಕ್ಕಿತ್ತು. ಎಷ್ಟೋ ಹುಡುಗಿಯರು ಈ ಕಾರಣದಿಂದಾಗಿ ಅವಳೊಡನೆ ಸೇರುತ್ತಿರಲಿಲ್ಲ. ಒಂದೊಂದು ಸಲ ಅವಳಿಗೆ ಬೇಸರವೆನಿಸುತ್ತಿತ್ತು.

ನೋಡೀ.... ನೀವೂ ಇದೀರಾ ದಂಡಕ್ಕೆ.... ಇವಳ ಕಾಲ ಕೆಳಗೆ ನುಸೀರಿ.... ಒಂದಿಷ್ಟು ತಲೆಗೆ ಹತ್ತುತ್ತೆ.... ಸರಿಯಾಗಿ ಮುಖ ತೊಳೆಯೋಕೆ ಬರುಲ್ಲ ಬಂದು ಬಿಡ್ತೀರಿ. 'ಆ' ಅಂತ ಕೂಗೋಕೆ..... ಹೀಗೆ ಬೈಗುಳ ಕೆಲವರಿಗೆ ಪ್ರಾರಂಭವಾದರೇ.... ಇನ್ನು ಕೆಲವರಿಗೆ

"ಆಹಾಹಾ..... ಏನು ಧ್ವನಿಯೋ, ಕತ್ತೆ ಕಿರುಚಿದ ಹಾಗೆ ಕಿರುಚಿದರೆ ಅದನ್ನು ಸಂಗೀತ ಅಂತ ಅನ್ನೊಲ್ಲ..... ನಿಮಗ್ಯಾಕೆ ಈ ಗಂಧರ್ವ ವಿದ್ಯೆ...., ಎಲ್ಲಾದರೂ ಕತ್ತೆ ಕಾಯೋಕೆ ಹೋಗಿ"

ಈ ತರಹದ ಬೈಗುಳವನ್ನು ಕೇಳಲಾಗದೇ ಅನೇಕ ಹುಡುಗಿಯರು ಬಿಟ್ಟು ಬೇರೆ ಕಡೆ ಸೇರಿಕೊಳ್ಳುತ್ತಿದ್ದರು. ಆಗಲೂ ಬೈಗುಳವೇ...

"ಮಾಡೋಕೆ ಕೆಲಸವಿಲ್ಲ.... ಮನೇಲಿ ಗೋಳು ಹುಯ್ದುಕೊಳ್ಳುತ್ತವೆ ಅಂತ ಅಪ್ಪ ಅಮ್ಮ ಇಲ್ಲಿಗೆ ಸಾಗಿಹಾಕ್ತಾರೆ... ಕೂತು ಎದ್ದು ಹೋಗೋಕೆ ಇಲ್ಲಿಗೇಕೆ ಬರ್ತೀರಿ. ಈ ಚೆಂದಕ್ಕೆ ಬೈದರೆ ಸಿಟ್ಟು ಬೇರೆ.... ಆಹಹಾ ಅಲ್ಲಿ ಎಷ್ಟು ದಿನ ಇರ್ತೀರಿ..... ಹೀಗೆ ಹೀಯಾಳಿಸಿ ಅನ್ನುತ್ತಿದ್ದರೂ ಉಂಟು."

ಆದರೂ ಹತ್ತಿರದ ನಿವಾಸಿಗಳ ಮನೆ ಹುಡುಗಿಯರು ಹೊಸ ಹೊಸದಾಗಿ ಬಂದು ಸೇರಿಕೊಳ್ಳುತ್ತಿದ್ದರು. ಫೀಸು ಸರಿಯಾದ ಸಮಯಕ್ಕೆ ತಂದು ಕೊಡಲಾಗದ ಹುಡುಗಿಯರನ್ನು ನಿರ್ದಾಕ್ಷಿಣ್ಯವಾಗಿ ಬೈಯುತ್ತಿದ್ದಳು. "ನಿಮ್ಮ ಮುಂದೆ ಗಂಟೆಗಟ್ಟಲೆ ಗಂಟಲು ಹರಿದು ಕೊಳ್ತೀನಿ ಅಷ್ಟು ತಿಳೀಬೇಡವಾ ನಿಮ್ಮ ಅಪ್ಪ ಅಮ್ಮನಿಗೆ.... ಫೀಸು ಕೊಡೋಕೆ ಹಿಂದು ಮುಂದೆ ನೋಡೋದಾದ್ರೆ ಬರಲೇ ಬೇಡಿ....."

ಆ ಮಕ್ಕಳ ತಂದೆ ತಾಯಿಗಳು ಇವಳ ಹಿಂದೆ ಆಡಿಕೊಳ್ಳುತ್ತಿದ್ದರು. ಅಲ್ಲ ನೋಡ್ರೀ..... ಆರು ತಿಂಗಳಿಂದ ಹೋದರೂ, ಇನ್ನು ಸರಳೆ ವರಸೆಯಿಂದ ಮುಂದೆ ಹೋಗಿಲ್ಲ. ಹೀಗೇ ಹೇಳಿಕೊಡ್ತಾ ಇದ್ದರೆ, ಕೀರ್ತನೆ ಕಲಿಯುವುದು ಯಾವ ಕಾಲಕ್ಕೋ.... ಅದಕ್ಕೇ ಹೋಗುಲ್ಲ ಅಂತ ಅಂದಳು ನನ್ನ ಮಗಳು.... ನಾನೇ ಬಲವಂತ ಮಾಡಿ ಕಳಿಸಿದೆ. ಫೀಸು ಕೊಡುವುದು ಒಂದೆರಡು ದಿನ

ತಡವಾಯಿತು. ಅಬ್ಬಬ್ಬಾ ಅದೆಷ್ಟು ಬೈದಳಂತೆ ಗೊತ್ತಾ?

"ಹೌದು ಸರಳಾ... ಮೇಡಂ ಅತೀ ಸಿಡುಕಿ ಅಂತ ನನ್ನ ಮಗನೂ ಹೇಳಿದ. ನನ್ನ ಮಗನಿಗೆ ಸಂಗೀತ ಕಲಿಯುವ ಆಸೆ.... ಅದಕ್ಕೇ ಬೇಡಾಂದ್ರೂ ಹೋಗ್ತಾನೆ......"

"ಗಂಡು ಹುಡುಗ ಅವನಿಗೇಕೆ ಹಾಡುಗಾರಿಕೆ! ಸುಮ್ಮನೇ ಬಿಡಿಸಿ, ಮುಂದೆ ಇಂಜನಿಯರೋ, ಡಾಕ್ಟರೋ ಆಗುವುದನ್ನು ಬಿಟ್ಟು ಏನು ಸಂಗೀತ ಕಛೇರಿ ಮಾಡ್ತಾನಂತಾ? ಅದೆಲ್ಲಾ ನಮ್ಮಂತಹವರಿಗಲ್ಲ"

"ಹೌದು... ಆದರೆ ಸಂಗೀತದಿಂದ ಮನಸ್ಸು ಉಲ್ಲಾಸವಾಗುತ್ತೆ. ಮಾನಸಿಕ ವಿಕಾಸವಾಗುತ್ತೆ. ಅಂತ ಓದಿದ ನೆನಪು ಆದಕ್ಕೆ ಕಳಿಸ್ತೀನಿ." ಸರಳ ನುಡಿದಾಗ ಪ್ರಭಾವತಿಯೂ ನುಡಿದಳು. ಅಲ್ಲಿಯೇ ಇದ್ದ ಉಷಳ ತಾಯಿ ಪಂಕಜಳೂ ನುಡಿದಳು.

ಮನೆಗೆ ಹತ್ತಿರದಲ್ಲಿದ್ದಾರೆ. ಮಕ್ಕಳಿಗೆ ಎಷ್ಟು ದಿನ ಸಾಧ್ಯವೋ ಅಷ್ಟು ದಿನ ಹೋಗಿ ತಮ್ಮ ಕೈಲಾದರೆ ಕಲಿಯುತ್ತಾರೆ. ಇಲ್ಲದಿದ್ದರೆ ಇಲ್ಲ.... ಈಗ ನೋಡಿ ನಮ್ಮ ಉಷನ್ನ.... ಬೇಡಾಂದ್ರೂ ಬಿಡುಲ್ಲ. ಚಿಕ್ಕ ಮಗುವಾಗಿದ್ದಾಗಿನಿಂದ ಹಾಡಿನ ಮೋಹ..... ಚೆನ್ನಾಗಿ ಹೇಳ್ತಾಳೆ ಅಂತ ಎಲ್ಲಾ ಹೇಳ್ತಾರೆ.... ಮೇಡಂ ಅವಳನ್ನು ಬೈಯುಲ್ಲವಂತೆ. ಅವಳಿಗೆ ಅದೇ ಖುಷಿ.

"ಅದೇನು ನಿಜವೋ ಸುಳ್ಳೋ.... ನೀವು ಬೇಡ ಅಂತೀರೇನೋ ಅಂತ ಸುಳ್ಳು ಹೇಳಿರಬಹುದು.... ಅಥವಾ ನೀವು ಫೀಸು ಜಾಸ್ತಿ ಕೊಡ್ತೀರೇನೋ... ಒಬ್ಬಾಕೆ ನಗುತ್ತಾ ಪ್ರಶ್ನಿಸಿದಾಗ ಪಂಕಜಳ ಮುಖ ಕೆಂಪಾಯಿತು. ತಟ್ಟನೆ ನುಡಿದಳು."

ಮೇಡಂ ಕೇಳಿದಷ್ಟನ್ನು, ತಪ್ಪಿಸದೇ ಪ್ರತಿ ತಿಂಗಳೂ ಕೊಡ್ತೀವಿ. ನೀವೆಲ್ಲಾ ಏನು ಮಾಡ್ತಿರೋ.... ಎನ್ನುತ್ತಾ ಬೆನ್ನು ತಿರುಗಿಸಿ ಆ ಜಾಗದಿಂದ ಸರಿದಾಗ ಅವರುಗಳು ಅವಳನ್ನೇ ಆಡಿಕೊಂಡಿದ್ದರು.

ಏನೋ ಇದೆ ಒಳಗುಟ್ಟು.. ಕೇಳಿದ್ರೆ ನೋಡು ಹೇಗೆ ಮಾತಾಡ್ತಾಳೆ. ತನ್ನ ಮಗಳು ಒಬ್ಬಳೇ ಜಾಣೆ ಅಂತ ಇವಳಿಗೆ ಜಂಭ. ಒಂದು ದಿನ ಇವಳಿಗೂ ತಗಲಿದರೆ ಷಾಕ್.... ಗೊತ್ತಾಗುತ್ತೆ.

ಸಂಗೀತದ ಮೇಡಂ ಮನೆಯಲ್ಲಿ ಹಬ್ಬ ಹುಣ್ಣಿಮೆಗಳು ಜಾಸ್ತಿ. ಹಾಗಾಗಿ, ಶಿಷ್ಯರಿಗೆಲ್ಲ ಆಗಾಗ್ಗೆ ಹಬ್ಬದ ತಿಂಡಿಗಳು ಸಿಗುತ್ತಿದ್ದವು. ಕರಿದ ತಿಂಡಿಗಳನ್ನು, ಅವರಿವರು ಕೊಟ್ಟು ಕೋಸಂಬರಿ ಇತ್ಯಾದಿಗಳನ್ನು. ಮಕ್ಕಳ

ಕೈಗೆ ಚೂರು ಚೂರು ಹಾಕಿ ಎಲ್ಲವನ್ನು ಖರ್ಚು ಮಾಡುತ್ತಿದ್ದಳು. ಮೇಡಂಗೆ ಅಸಹ್ಯ ಜಾಸ್ತಿ. ಬೇರೆಯವರು ಕೊಟ್ಟ ತಿನಿಸನ್ನು ತಾನು ತಿನ್ನುತ್ತಿರಲಿಲ್ಲ. ಇದು ಆ ಮಕ್ಕಳಿಗೆ ತಿಳಿಯುತ್ತಿರಲಿಲ್ಲ. ಸಿಹಿ ತಿಂಡಿ ಕೊಟ್ಟಾಗ ಮೇಡಂ ಅತಿ ಒಳ್ಳೆಯವರಾಗಿ ಕಂಡಿದ್ದರೂ ಅತಿಶಯವಲ್ಲ.

ಶ್ರಾವಣ ಮಾಸದಲ್ಲಿ ಹಬ್ಬ ಸಾಲು ಸಾಲಾಗಿ ಬರುತ್ತದೆ. ಎಲ್ಲರ ಮನೆಯಲ್ಲೂ ಹಬ್ಬ, ವಿಶೇಷ ತಿಂಡಿಗಳು. ಜತೆಗೆ ಮಳೆ ಇದ್ದರಂತೂ, ಮನೆಯಿಂದ ಹೊರಗೆ, ಹೋಗಲೇ ಬೇಜಾರು. ಈ ಸಮಯದಲ್ಲಿ ಕ್ಲಾಸಿಗೆ ಚಕ್ಕರ್ ಹೊಡೆದು ಮನೆಯಲ್ಲೇ ಉಳಿಯುವ ಆಸೆ ಮಕ್ಕಳಿಗೂ ಆದರೆ ಆ ಆಸೆ ಉಷಳಿಗಿಲ್ಲ. ನಾಲ್ಕಾರು ದಿನದಿಂದ, ಹಬ್ಬದ ಕಾರಣದಿಂದ ಕ್ಲಾಸಿಗೆ ಹೋಗಲಾಗಿರಲಿಲ್ಲ. ಮನೆಯಿಂದ ಹೊರಟರೇ ಸಾಕು ಎನ್ನುವ ಉತ್ಸಾಹದಿಂದ ಕ್ಲಾಸಿಗೆ ಹೊರಟಳು ಉಷ. ಎರಡು ವರ್ಷದ ಪರಿಶ್ರಮದಿಂದ ಅವಳೀಗ ಚೆನ್ನಾಗಿ ಹಾಡುತ್ತಿದ್ದಳು. ಸಣ್ಣ ಸಣ್ಣ ಕೀರ್ತನೆಗಳು ಅವಳಿಗೆ ಇಷ್ಟವಾಗಿದ್ದವು. ಮೇಡಂನ ಹೊಗಳಿಕೆ ಅವಳನ್ನು ಉಬ್ಬಿಸಿದ್ದವು.

ನೀನೊಂದು ದಿನ ಶ್ರೇಷ್ಠಗಾಯಕಿಯಾಗುವುದರಲ್ಲಿ ಸಂಶಯವಿಲ್ಲ. ಎಂದು ಮೇಡಂ ಹೊಗಳಿದ್ದನ್ನು ಮನೆಯವರೊಡನೆ ಹೇಳಿಕೊಂಡು ಮೆರೆದಿದ್ದಳು. ಮೇಡಂಗಾಗಿ ಕಾಯುತ್ತಾ ಕೂತಿದ್ದವಳಿಗೆ ಏಕೋ ಏನೋ ಸಣ್ಣಗೆ ತಲೆನೋವು ಪ್ರಾರಂಭವಾಗಿತ್ತು. ಯಾರದೋ ಮನೆಯಲ್ಲಿ ಏನೋ ತಿಂಡಿಯನ್ನು ಕರಿಯುತ್ತಿದ್ದರು. ಅದರ ಕನುಗು ಮನೆಯನ್ನು ಸುತ್ತಿತ್ತು. ಇವಳಿಗೆ ವಾಕರಿಕೆ ಬರುವಂತಾಗಿತ್ತು. ಕುಳಿತಲ್ಲೇ ಚಡಪಡಿಸತೊಡಗಿದಳು. ಸ್ವಲ್ಪ ಹೊತ್ತಿನಲ್ಲೇ ಉಳಿದ ಹುಡುಗಿಯರೂ ಬಂದು ಸೇರಿದರು.

ಮೇಡಂ ಅಡಿಗೆ ಕೆಲಸಮುಗಿಸಿ, ಚೆನ್ನಾಗಿ, ಸಿಂಗರಿಸಿಕೊಂಡು ಬಂದು, ತನಗಾಗಿ ಪ್ರತ್ಯೇಕವಾಗಿ ಇಟ್ಟುಕೊಂಡಿದ್ದ ಮಣೆಯ ಮೇಲೆ ಕುಳಿತಳು. ಉಳಿದ ಹುಡುಗಿಯರು ಚಾಪೆಯ ಮೇಲೆ ತಮ್ಮ ತಮ್ಮ ಪುಸ್ತಕಗಳನ್ನು ತೆಗೆದಿಟ್ಟುಕೊಂಡಿದ್ದರು. ಎಲ್ಲರಿಗಿಂತ ಮುಂದೆ ಕೂತಿದ್ದ ಉಷಾ ತನ್ನ ಕೈಗೆ ತಂಬೂರಿಯನ್ನು ತೆಗೆದುಕೊಂಡು ತಂತಿಯನ್ನು ಮೀಟತೊಡಗಿದಳು. ಶ್ರುತಿಯ ನಾದಕ್ಕೆ ತಮ್ಮ ದನಿಯನ್ನು ಸೇರಿಸಿ ಹುಡುಗಿಯರು.... ಸಾ..... ಪಾ..... ಸಾ.... ಎಂದು ಪ್ರಾರಂಭಿಸಿದರು.... ಅಷ್ಟೇ.... ಉಷಾಳ ತಲೆನೋವು ಜಾಸ್ತಿಯಾಗಿತ್ತು. ಹೊಟ್ಟೆ ತೊಳೆಸಲು ಪ್ರಾರಂಭವಾಗಿತ್ತು... ತಡೆಯಲಾರದೇ ಮೇಡಂನ ಮುಖವನ್ನು ನೋಡುತ್ತಾ ತಂಬೂರಿಯನ್ನು ಕೆಳಗಿಡಬೇಕೆನ್ನುವಷ್ಟರಲ್ಲಿ

ಹೊಟ್ಟೆಯಲ್ಲಿದ್ದುದೆಲ್ಲಾ ಈಚೆಗೆ ಬಂದಿತ್ತು. ಏನಾಯ್ತು ಅಂತ ಅಲ್ಲಿದ್ದವರಿಗೆ ತಿಳಿಯುವಷ್ಟರಲ್ಲಿ ವಾಕ್..... ವಾಕ್ ಎಂದು ಉಷಾ ವಾಂತಿ ಮಾಡಿದ್ದಳು.

ಭಂಗನೆ ಮಣೆಯಿಂದ ಹಾರಿ ನಿಂತ ಮೇಡಂ ಉಷಳ ಕಡೆ ಸಿಡಿಗಣ್ಣಿನಿಂದ ಅಸಹ್ಯದಿಂದ ನೋಡಿದಳು. ಮೂಗಿಗೆ ಸೀರೆಯ ಸೆರಗನ್ನು ಹಿಡಿದಳು. ತಂಬೂರಿಯ ಮೇಲೆ, ಚಾಪೆಯ ಮೇಲೆ, ಮುಂದಿದ್ದ ಪುಸ್ತಕದ ಮೇಲೆ, ಅಲ್ಲೆಲ್ಲಾ ವಾಂತಿ ಸಿಡಿದಿದೆ.

ಹೆದರಿ ಅಳುತ್ತಿದ್ದ ಉಷಳ ಕಡೆ ಅವಳ ಗಮನವಿಲ್ಲ... ಉಳಿದ ಹುಡುಗಿಯರು ಮುಂದೇನೋ ಎನ್ನುವಂತೆ ಗಾಭರಿಯಿಂದ ಎದ್ದು ದೂರ ನಿಂತು ಅವಳನ್ನೇ ನೋಡುತ್ತಿದ್ದರು. ಮೇಡಂ ಕಡೆ ನೋಡುವ ಧೈರ್ಯವಿಲ್ಲ ಅವರಿಗೆ. ಪ್ರಾರಂಭವಾಯಿತು ಬೈಗುಳದ ಸುರಿಮಳೆ.

ನಿನಗೇನೇ ಬಂತು ಹೊತ್ತು ಪ್ರಾರಬ್ಧ ಮುಂಡೇದೇ..... ಹಾಳಾಯ್ತಲ್ಲ ತಂಬೂರಿ. ನಿಮ್ಮಪ್ಪ ತಂದು ಕೊಡ್ತಾನಾ? ಹೊತ್ತಿಲ್ಲ ಗೊತ್ತಿಲ್ಲ. ಸಿಕ್ಕಿ ಸಿಕ್ಕಿದ್ದನ್ನೆಲ್ಲಾ ಮೂಗಿನ ತನಕ ತಿಂದು ಬರೋದು. ಇಲ್ಲಿ ಬಂದು ಇಲ್ಲಿ ಗಲೀಜು ಮಾಡೋದು.... ಈಗ ಯಾರು ಬಳೀತಾರೆ ಇದನ್ನೆಲ್ಲಾ.... ಏಳು ಎದ್ದು ಮನೆಗೆ ಹೋಗಿ ನಿಮ್ಮಮ್ಮನ್ನ ಕರೆದುಕೊಂಡು ಬಾ ತಗೀಲಿ, ಈ ಹಾಳಾದ್ದನ್ನೆಲ್ಲಾ... ನೋಡಲಿ ಮಗಳು ಮಾಡಿರುವ ಘನಂಧಾರಿ ಕೆಲಸಾನಾ.....

ಉಷಾ ಹೆದರುತ್ತಾ ತಂಬೂರಿಯನ್ನು ಕೆಳಗಿಟ್ಟು ಎದ್ದು ನಿಂತಳು. ಒದ್ದೆಯಾಗಿದ್ದ ಲಂಗದ ಮೇಲೆ ಹರಡಿದುದೆಲ್ಲಾ ಇನ್ನಷ್ಟು ತಂಬೂರಿಯ ಮೇಲೆ ಬಿತ್ತು. ತೂರಾಡುತ್ತಾ ಬೀಳಲಿದ್ದ ಉಷಳನ್ನು ಪಕ್ಕದಲ್ಲಿ ನಿಂತಿದ್ದ ಹುಡುಗಿಯೊಬ್ಬಳು ಹಿಡಿದಳು.

"ಹೋಗ್ರೇ ಏನು ಮಿಕಿ ಮಿಕಿ ಅಂತ ನೋಡ್ತಾ ಇದೀರಿ. ಈಗ್ಲೇ ಹೋಗಿ ಅವರಮ್ಮನ್ನ ಕರೆದುಕೊಂಡು ಬನ್ನಿ" ಎನ್ನುತ್ತಾ ತಾನು ಮೂಗು ಮುಚ್ಚಿಕೊಂಡು, ಬಚ್ಚಲು ಮನೆಯ ಕಡೆ ನಡೆದಳು.

ವಿಷಯ ತಿಳಿದ ಉಷಳ ತಾಯಿ ತಕ್ಷಣವೇ ಬಂದಳು. ಅಷ್ಟರಲ್ಲಿ ಮತ್ತೆ ಸ್ನಾನ ಮಾಡಿ, ಮಡಿ ಬಟ್ಟೆ ಧರಿಸಿದ ಮೇಡಂ ಅವಳೆದುರಿಗೆ ಪ್ರತ್ಯಕ್ಷಳಾದಳು. ಹೆದರಿನಿಂತಿದ್ದವಳನ್ನು ಸಮಾಧಾನ ಮಾಡುತ್ತಿದ್ದ ತಾಯಿಯನ್ನು ಕಂಡು ಎತ್ತರದ ಸ್ವರದಲ್ಲಿ ನುಡಿದಳು.

ಏನ್ರೀ.... ಏನು ನೋಡ್ತಾ ಇದೀರಾ? ಇದು ನಿಮ್ಮ ಮಗಳು ಮಾಡಿರುವ ಅವಾಂತರವೇ.... ಅಷ್ಟು ಜ್ಞಾನ ಬೇಡ ನಿಮಗೆ? ಫೀಸು

ಕೊಡ್ತೀವಿ. ಅನ್ನೋ ಸಂಕಟಕ್ಕೆ ಹುಶಾರಿಲ್ಲದವಳನ್ನು ಕ್ಲಾಸಿಗೆ ಕಳಿಸೋದಾ? ಈಗ ನೋಡಿ ಇಲ್ಲಿ, ಥೂ ಎಷ್ಟು ಅಸಹ್ಯ....

ಏನ್ರೀ ಅಸಹ್ಯ.... ಸ್ವಲ್ಪ ಮೆಲ್ಲಗೆ ಮಾತಾಡಿ.... ಏನು ಆಗಬಾರದ್ದು ಆಗಿ ಹೋಗಿದೆ. ಅಸಹ್ಯವಂತೆ ಅಸಹ್ಯ.... ನಿಮಗೆ ಹುಶಾರೇ ತಪ್ಪುಲ್ಲ.... ನಿಮಗೆ ಹೊಟ್ಟೆನೇ ಕೆಡುಲ್ಲ. ನಿಮ್ಮ ಮಾತು ಎಷ್ಟು ಅಸಹ್ಯವಾಗಿ ಕಾಣ್ತದೆ ನನಗೆ. ಎಂದು ಉಪಳ ತಾಯಿಯೂ ಅಸಹನೆಯಿಂದ ನುಡಿದಾಗ ಮೇಡಂ ಮತ್ತಷ್ಟು ಕೆರಳಿದಳು.

ಓಹೊಹೋ..... ಏನ್ರೀ ಜೋರಾಡ್ತೀರಿ? ನನ್ನ ಮನೇಲಿ ನಿಂತುಕೊಂಡು, ನನ್ನನ್ನೇ ಅನ್ನೋವಷ್ಟು ಧೈರ್ಯ....? ಮೊದಲು ಅದನ್ನೆಲ್ಲಾ ಕ್ಲೀನ್ ಮಾಡಿ, ನಿಮ್ಮನ್ನ ಕರೆಸಿದ್ದು ನನ್ನನ್ನು ಅನ್ನೋಕಲ್ಲ. ಇದನ್ನೆಲ್ಲ ಬಳಿಯೋಕೇ......

ಬಂದಿದೀನಲ್ಲ... ಇನ್ನೇನು? ನನಗೂ ಗೊತ್ತು.... ನಿಮ್ಮಂತಹವರಿಗೇಕೆ ಸಂಗೀತ ಸಾಹಿತ್ಯ.... ದೊಡ್ಡ ಹೃದಯವೇ ಇಲ್ಲದವರಿಗೇ.... ಪಾಪ ಹುಡುಗಿ ಹೆದರಿ ಅಳುತ್ತಾ ಇದ್ದಾಳೆ ಅನ್ನೋ ಕರುಣೆ ಬೇಡವಾ ನಿಮಗೇ.....

ವಾಂತಿ ಭೇದಿ ಮಾಡೋರಿಗೆಲ್ಲಾ ಏನು ಕರುಣೆ ತೋರಿಸೋದು? ಅಷ್ಟಿದ್ದರೆ ನಿಮ್ಮ ನಿಮ್ಮ ಮನೇಲಿಟ್ಟುಕೊಂಡು, ಅದೇನು ಮುಚ್ಚಟೆ ಮಾಡ್ತೀರೋ ಮಾಡಿ. ನಮ್ಮಂಥೋರ ಮನೆಗೆ ಕಳಿಸಬೇಡಿ ನಮ್ಮ ಪ್ರಾಣ ತಿನ್ನೋಕೇ.....

ನಿಮ್ಮ ಪ್ರಾಣ ಏಕೆ ಹೋಗುತ್ತೆ? ತಗೊಳ್ಳಲ್ಲವೇ ಫೀಸು? ಏನು ಬಿಟ್ಟಿ ಹೇಳಿಕೊಡೋ ತರಹ ಆಡ್ತೀರಲ್ಲಾ.....

ಫೀಸು ಬಿಸಾಕ್ತೀನಿ ಅಂತ ಜಂಭ ತೋರಿಸಬೇಡಿ. ಇದು ನಿಮ್ಮ ಮನೆಯಲ್ಲಿ ಮೊದಲು ಇದನ್ನೆಲ್ಲಾ ಕ್ಲೀನ್ ಮಾಡಿ..... ಬೇರೆ ತಂಬೂರಿ ತರಿಸಿಕೊಡಿ.... ಮಾತು ಸಾಕು ಮಾಡಿ....

ಆಕೆ ಗೊಣಗುತ್ತಾ ಎಲ್ಲವನ್ನು ಕ್ಲೀನ್ ಮಾಡಿದಳು. ದೂರ ನಿಂತು ನೋಡುತ್ತಿದ್ದ ಮೇಡಂ ಉಳಿದ ಹುಡುಗಿಯರಿಗೂ ಕೆಲಸ ಹಚ್ಚಿದಳು. ಅರ್ಧಗಂಟೆಯಲ್ಲಿ ಎಲ್ಲರೂ ಹೊರಟು ಹೋಗಿದ್ದರು......

ನಂತರ ವಾರ ಕಳೆದರೂ ಯಾವ ಹುಡುಗಿಯರೂ ಕ್ಲಾಸಿಗೆ ಬರದಿದ್ದಾಗ ಮೇಡಂನ ಆತಂಕ ಪ್ರಾರಂಭವಾಗಿತ್ತು. ರೂಮಿನ ತುಂಬಾ ದುರ್ವಾಸನೆ ಅಡಗಿದೆ ಎಂಬ ಭ್ರಮೆಯಿಂದ ಆ ರೂಮಿನ ಕಡೆ ಹೋಗುವುದನ್ನೇ ಬಿಟ್ಟಿದ್ದಳು. ತಂಬೂರಿಯ ಕಡೆ ಕಣ್ಣೆತ್ತಿ ಸಹ ನೋಡಿರಲಿಲ್ಲ. ಈಗ ನಿಧಾನವಾಗಿ ತನ್ನ ತಪ್ಪಿನ ಅರಿವಾಗಿತ್ತು. ಈ ವಿಷಯ ತಿಳಿಯದ ಹೊಸದಾಗಿ ಬಂದು

ಸೇರಿದ ಹುಡುಗಿಯರ ಮುಖಾಂತರ ಹಳೆಯ ವಿದ್ಯಾರ್ಥಿಗಳಿಗೆ ಹೇಳಿ ಕಳಿಸಿದಳು. ಕೆಲವರು ಬಂದರು. ಕೆಲವರು ಬರಲಿಲ್ಲ. ಉಷಾ ಮಾತ್ರ ಮತ್ತೆಂದೂ ಬರಲೇ ಇಲ್ಲ.

ಮೆಚ್ಚಿನ ಪ್ರತಿಭಾವಂತ ಶಿಷ್ಯೆಯನ್ನು ಕಳೆದು ಕೊಂಡದ್ದು ಶಕುಂತಲಾಗೆ ಅತಿ ವ್ಯಥೆಯನ್ನುಂಟು ಮಾಡಿತ್ತು. ಹೇಗಾದರೂ ಆ ಶಿಷ್ಯೆಯನ್ನು ಮತ್ತೆ ಪಡೆದು, ತನ್ನ ಸಂಗೀತ ವಿದ್ಯೆಯನ್ನು ಧಾರೆಯೆರೆಯ ಬೇಕೆಂಬ ಹಂಬಲ ಹೆಚ್ಚಾಯಿತು. ಅವಳು ಹೋಗುತ್ತಿದ್ದ ಸ್ಕೂಲಿಗೇ ಹೋಗಿ, ಅವಳನ್ನು ಮಾತನಾಡಿಸಿ, ಕ್ಲಾಸಿಗೆ ಬಾ ಎಂದು ಹೇಳಿ ಬಂದದ್ದೂ ಆಯಿತು. ಆದರೆ ಉಷ ಬರಲೇ ಇಲ್ಲ.

ಉಷಳ ತಾಯಿಯೂ ಹಠ ಮಾರಿಯೇ. ಉಷ ಮತ್ತೆ ಸಂಗೀತ ಪಾಠಕ್ಕೆ ಹೋಗ್ತೀನಿ ಅಂತ ನುಡಿದಾಗ ಗದರಿದ್ದಳು. "ನೀನೇನು ಗತಿ ಇಲ್ಲದೋಳೇ.... ಫೀಸುತೆತ್ತರೆ, ಅವಳಂತಹ ಹತ್ತಾರು ಜನ ಮೇಡಂ ಸಿಗ್ತಾರೆ......" ಎಂದು ಅವಳನ್ನು ಬೇರೆ ಕಡೆಗೆ ಸೇರಿಸಿದ್ದಳು.

ಇದೆಲ್ಲಾ ನಡೆದು ಹತ್ತಾರು ವರುಷಗಳೇ ಕಳೆದು ಹೋಗಿವೆ. ಉಷಾ ತನ್ನ ಸಾಮರ್ಥ್ಯದಿಂದ, ಸಾಧನೆಯಿಂದ ಸಂಗೀತ - ಶಿಕ್ಷಣದಲ್ಲಿ ಸಾಕಷ್ಟು ಪರಿಣತಿಯನ್ನು ಪಡೆದಿದ್ದಾಳೆ. ಉತ್ತಮ ಹಿನ್ನೆಲೆಗಾಯಕಿಯಾಗಿ ಆಯ್ಕೆಯಾಗಿ ನಾಲ್ಕಾರು ಚಲನ ಚಿತ್ರಗಳಿಗೆ ಹಾಡಿದ್ದಾಳೆ. ಈಗ ಸಾಕಷ್ಟು ಯಶಸ್ಸನ್ನು ಹಣವನ್ನು ಗಳಿಸಿದ್ದಾಳೆ. ಆದರೆ ಹಳೆಯ ದಿನಗಳ ಈ ನೋವನ್ನು ಅವಳು ಮರೆತಿಲ್ಲ.

ಮೇಡಂನಿಂದ ತನಗೆ ಅವಮಾನವಾಯಿತು ಅಂತ. ಅನ್ನಿಸಿರಲಿಲ್ಲ. ಮೇಡಂ ತನ್ನನ್ನು ಬೈದರಲ್ಲ ಎಂದು ದುಃಖವಾಗಿತ್ತು. ತಾಯಿಯ ಮಾತಿಗೆ ಒಪ್ಪಿ ಬೇರೆ ಕಡೆ ಸಂಗೀತ ಪಾಠಕ್ಕೆ ಹೋಗಲಾರಂಭಿಸಿದ್ದಳು. ಆ ಮೇಡಂ ಸಹ ಹೊಗಳುತ್ತಿದ್ದರು. ಸಂಗೀತ ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸಾದಳು. ಆಗೆಲ್ಲಾ ಶಕುಂತಲಾ ಮೇಡಂ ನೆನಪಾಗುತ್ತಿತ್ತು. "ನನ್ನ ಮೊದಲ ಗುರು ಅವರೇ.... ನನ್ನ ಈ ಯಶಸ್ಸಿಗೆ ಅವರೇ ಕಾರಣ.... ಎಂದು ಪದೇ ಪದೇ ಅನ್ನಿಸುತ್ತಿತ್ತು..... ಆದರೆ ತಾಯಿ ತನ್ನ ಮೇಲೆ ಆಣೆ ಇಟ್ಟುಕೊಂಡು ಮೇಡಂ ಮನೆಯ ಕಡೆ ಕಾಲು ಹಾಕದಂತೆ ತಡೆದಿದ್ದಳು" ಒಂದೇ ಒಂದು ಸಲ ಅವರನ್ನು ಮಾತನಾಡಿಸಿ, ಪಾಸಾದ ಸುದ್ದಿಯನ್ನು ತಿಳಿಸಿ ಬರ್ತೀನಿ ಎನ್ನುವ ಆಸೆ, ಆಸೆಯಾಗಿಯೇ ಉಳಿದಿತ್ತು. ತಾಯಿಯ ಮಾತನ್ನು ಮೀರುವ

ಧೈರ್ಯವಿರಲಿಲ್ಲ. ನಂತರ ದಿನಗಳು ತಾನಾಗಿಯೇ ಉರುಳಿ ಹೋದವು.

ಈಗ ತಾಯಿ ಬದುಕಿಲ್ಲ. ತೀರಿ ಹೋಗಿ ವರ್ಷ ಕಳೆದಿದೆ. ಏನೋ ಒಂದು ರೀತಿಯಲ್ಲಿ ಅವಳು ಬದುಕಿನಲ್ಲಿಯೂ ನಾನಾ ರೀತಿಯ ಬದಲಾವಣೆಗಳಾಗಿವೆ. ಈಗ ಬಿಡುವಿಲ್ಲದಷ್ಟು ಅದೂ ಇದೂ ಕಾರ್ಯಕ್ರಮಗಳು. ಆದರೆ ಈ ದಿನ. ಈ ಸುದ್ದಿಯನ್ನು ಓದಿ ಅವಳ ಮನಸ್ಸು ಕಲಕಿ ಹೋಯಿತು. ತಾನೆಂತಹ ಪಾಪಿ! ಗುರುವಿನ ಮನಸ್ಸನ್ನು ನೋಯಿಸಿದ ಮಹಾಪಾಪಿ!! ಎಷ್ಟು ಬಾರಿ ಹೇಳಿ ಕಳಿಸಿದರೂ, ಹೋಗಿ ಮಾತನಾಡಿಸದೇ, ಜಂಭಗಾತಿ ತಾಯಿಯ ಮಾತನ್ನು ಮೀರಲಾಗದೇ ಎಂತಹ ಪಾಪವನ್ನು ಮಾಡಿಬಿಟ್ಟೆನೆಲ್ಲಾ... ಅಪರೋಕ್ಷವಾಗಿ ಗುರುನಿಂದೆಗೆ ಕಾರಣವಾದೆನಲ್ಲಾ ಎಂದು ಪರಿತಪಿಸಿದಳು. ಈಗ ಇನ್ನೆಂದೂ, ಎಂದೆಂದೂ ಬಯಸಿದರೂ, ತಾನು ಅವರನ್ನು ಮಾತನಾಡಿಸುವಂತಿಲ್ಲ. ಕ್ಷಮೆ ಕೇಳುವಂತಿಲ್ಲ. ಈಗ ಕಡೆಯ ಬಾರಿ ಅವರ ಮುಖದರ್ಶನವನ್ನಾದರೂ ಮಾಡಲೇ ಬೇಕು. ಇಲ್ಲದಿದ್ದರೆ ನನಗೆ ನೆಮ್ಮದಿ ಇಲ್ಲ ಎಂದುಕೊಂಡು ಎದ್ದಳು.

ಮೇಡಂ ಮನೆಯ ಮುಂದೆ ನಿಂತ ಬಿಳಿಯ ಬಣ್ಣದ ಕಾರಿನಿಂದ, ಬಿಳಿಯಸೀರೆಯನ್ನುಟ್ಟ ಉಷಾ ಇಳಿದಳು. ಆಗಲೇ ನೆರೆದಿದ್ದ ಜನರು ಅತ್ತ ತಿರುಗಿ, ಅವಳಿಗೆ ಜಾಗ ಮಾಡಿಕೊಟ್ಟರು. ಅದೇ ರೂಮಿನಲ್ಲಿ ಅದೇ ಸಿಡುಕು ಮುಖದ ದೇಹವನ್ನು ಮಲಗಿಸಿದ್ದರು. ಹಾಡುವಾಗ ಕಂಡು ಬರುತ್ತಿದ್ದ ಹಣೆಯ ಮೇಲಿನ ನೆರಿಗೆಗಳು ಇಂದಿಗೂ ಹಾಗೇ ಇವೆ. ಆದರೆ ಮುಖದ ಮೇಲಿನ ಕಳೆಯು ನೋವಿನಿಂದ ಕೂಡಿದ್ದೇ, ನೆಮ್ಮದಿಯಿಂದ ಕೂಡಿದ್ದೋ ಎಂದು ಅವಳಿಂದ ಗುರುತಿಸಲಾಗಲಿಲ್ಲ.

ದೇಹದ ಮುಂದೆ ನಿಂತು ಕೈ ಜೋಡಿಸಿದಳು. ಆ ದಿನ ನೀವು ಕರೆದರೂ ನಾನು ಬರಲಿಲ್ಲ. ಆದರೆ ಈ ದಿನ ನೀವು ಕರೆಯದಿದ್ದ ನಾನಾಗಿ ಬಂದಿದ್ದೇನೆ. ನನ್ನನ್ನು ಕ್ಷಮಿಸಿಬಿಡಿ ಮೇಡಂ, ಎಂದು ಮನದಲ್ಲೇ ಕ್ಷಮೆ ಬೇಡಿದಳು. ನಿಮಗಾಗಿ ನಾನು ಯಾವ ಹೂವನ್ನು ತರಲಿಲ್ಲ. ಆದರೆ ಈ ನನ್ನ ನಮನವೇ ನಿಮಗೆ ತಂದಿರುವ ಗುರುದಕ್ಷಿ, ಎಂದುಕೊಂಡು, ಬಾಗಿ ಮೇಡಂನ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡಳು. ಏನನ್ನೋ ಸಾಧಿಸಿದ ಅನುಭವವಾಯಿತು. ಬಂದಂತೆಯೇ ಹಾಗೇ ಹಿಂತಿರುಗಿ ತನ್ನ ಕಾರನ್ನೇರಿ, ಕೀ ತಿರುವಿದಳು. ಮನವನ್ನಾವರಿಸಿದ್ದ ಮೌನವನ್ನು ಕಳೆಯಲೆಂಬಂತೆ ರೇಡಿಯೋ ತಿರುಗಿಸಿದಳು. ಕಾರು ಚಲಿಸಿತು.

ಗುರುಃಬ್ರಹ್ಮಾ ಗುರುಃವಿಷ್ಣುಃ। ಗುರುಃ ದೇವೋ ಮಹೇಶ್ವರಾಃ।
ಗುರುಃ ಸಾಕ್ಷಾತ್ ಪರಬ್ರಹ್ಮಾ। ತಸ್ಮೈಶ್ರೀ ಗುರವೇ ನಮಃ॥

ಎಂಬ ಶ್ಲೋಕವನ್ನು ರಾಗ ಕಲ್ಯಾಣಿಯಲ್ಲಿ ಯಾರೋ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಶಕುಂತಲಾ ಮೇಡಂ ನಿನ್ನನ್ನು ಕ್ಷಮಿಸಿದ್ದಾರೆ ನಿನ್ನ ಲೋಕ ಕಲ್ಯಾಣವಾಯಿತು. ಎಂದು ಯಾರೋ ನುಡಿದಂತಾಯಿತು. ಮನವನ್ನಾವರಿಸಿದ್ದ ಅಪರಾಧಿ ಭಾವ ಕಡಿಮೆಯಾಯಿತು. ಉಷಾಳ ಮುಖದಲ್ಲಿ ಒಂದು ವಿಲಕ್ಷಣವಾದ ಕಳೆ ಮೂಡಿತು. ಹೊಸ ಚೈತನ್ಯ ಗರಿಗೆದರಿ ಕುಣಿದಿತ್ತು.

* * *

(ಬಹುಮಾನಿತ ಕಥೆ)

೩. ಪೆಡಂಭೂತ

"ಎಸ್ ಕಮಿನ್" ಎಂದು ನುಡಿದು, ಒಳಗೆ ಬಂದ ವ್ಯಕ್ತಿಯನ್ನು ನೋಡಿ, ತನ್ನ ಕೆಲಸದಲ್ಲಿ ಮಗ್ನಳಾದಳು ಪ್ರಿನ್ಸಿಪಾಲ್ ನಂದಿನಿ. ಬಂದವನ ಪರಿಚಯ ಸಿಕ್ಕಿತ್ತು. ಆದರೆ ಅಪರಿಚಿತರನ್ನು ಮಾತನಾಡಿಸುವಂಥ ಸೌಜನ್ಯವನ್ನು ತೋರಲಿಲ್ಲ ಅವಳು. ನಟೇಶ ತಾನಾಗಿಯೇ ಅವಳ ಮುಂದಿದ್ದ ಕುರ್ಚಿಯಲ್ಲಿ ಕೂತ. ಅವಳು ಕತ್ತೆತ್ತಿ ಸಹ ನೋಡದಿದ್ದಾಗ ಪ್ರಶ್ನಿಸಿದ.

"ನನ್ನ ಗುರುತು ಸಿಗಲಿಲ್ವಾ ನಂದಿನಿ.... ನಾನು ನಟೇಶ" ಎಂತಂದ.

"ಓ..... ನಿಮ್ಮನ್ನು ಮರೆಯುಕ್ಕೆ ಆಗುತ್ತಾ" ಎಂದಳು ವ್ಯಂಗ್ಯವಾಗಿ.

"ಅಂದರೇ..... ನನ್ನನ್ನು ಆಗಾಗ್ಗೆ ನೆನಪಿಸಿಕೊಳ್ತಾ ಇರ್ತಿಯಾ ಅಂತಾಯ್ತು" ನಗೆ ಸೂಸುತ್ತಾ ಅವನು ಕೇಳಿದಾಗ ಸಿಡಿದು ನುಡಿದಳು.

"ರೀ ಮಿಸ್ಟರ್..... ಇದು ಕಾಲೇಜು ಅಸಂಬದ್ಧ ಮಾತುಗಳನ್ನಾಡಿದರೆ ಪೋಲಿಸ್‌ರನ್ನು ಕರೆಸಬೇಕಾಗುತ್ತದೆ. ಹುಶಾರ್..... ಯಾ ಕೆನ್ ಗೋ ನೌ." ಎಂದು ನುಡಿದು ಮೇಜಿನ ಮೇಲಿದ್ದ ಕಾಲಿಂಗ್ ಬೆಲ್‌ನ ಒತ್ತಿದಳು. ಜವಾನ ಒಳಗೆ ಬಂದಾಗ, ನಟೇಶ ವಿಧಿ ಇಲ್ಲದೇ ಏಳಬೇಕಾಯ್ತು.

ಸಾಯಂಕಾಲ ಇವಳು ತನ್ನ ಮನೆಗೆ ಬಂದಾಗ, ಬಾಗಿಲ ಬಳಿ ಇವಳಿಗಾಗಿ ಕಾಯುತ್ತಾ ನಿಂತಿದ್ದ ನಟೇಶನನ್ನು ಕಂಡು ಮೈಯಲ್ಲಾ ಉರಿಯಿತು. ಅವನ ಕಡೆ ನೋಡದೇ, ಮನೆಯ ಒಳಗೆ ನಡೆದಳು. ನಾಚಿಕೆ, ಸಂಕೋಚ ವಿಲ್ಲದೇ ಅವನು ಅವಳ ಹಿಂದೆ ನಡೆದ.

"ಸಾರಿ. ನಂದಿನಿ. ನಿನಗೆ ಬೇಜಾರಾಗ್ತಿದೆಯೇನೋ? ಆದರೆ ನಾನೇನು ಮಾಡಲಿ? ನಾನು ನಿನ್ನ ಹತ್ತಿರ ಮಾತನ್ನಾಡಲೇ ಬೇಕು. ಅದಕ್ಕೇ ಮತ್ತೆ ಬಂದೆ." ಅವಳೀಗ ಇಕ್ಕಟ್ಟಿಗೆ ಸಿಕ್ಕಿ ಬಿದ್ದಳು. ಅವನು ಮನೆಯೊಳಗೆ ಬಂದಾಗಿದೆ. ಮತ್ತೆ ಬೈದು ಕಳಿಸಿದರೆ, ಮತ್ತೆ ಖಂಡಿತಾ ಬಂದೇ ಬುರತ್ತಾನೆ. ಪಿಶಾಚಿಯ ತರಹ ಕಾಡ್ತಾನೆ ಎಂದುಕೊಂಡು.

"ಓ...ಕೇ.. ಕೂತಿರಿ... " ಎಂದು ಹೇಳಿ ಒಳಗೆಲ್ಲೋ ಹೊರಟು ಹೋದಳು. ನಟೇಶ ವರಾಂಡದಲ್ಲಿದ್ದ ಮರದ ಕುರ್ಚಿಯ ಮೇಲೆ ಕೂತಿದ್ದ.

ಸುಮಾರು ಆರೇಳು ವರ್ಷಗಳ ಹಿಂದೆ, ನಟೇಶನ ಮದುವೆ

ನಂದಿನಿಯೊಡನೆ ನಿಶ್ಚಯವಾಗಿ, ಅದ್ಧೂರಿಯ ಲಗ್ನಪತ್ರಿಗೆ ಶಾಸ್ತ್ರ ಸಹ ನೆರವೇರಿತ್ತು. ಆನಂತರ ಈ ಮನೆಗೆ ಅವನು ಅದೆಷ್ಟೋ ಸಲ ಬಂದಿದ್ದ. ಕಡೆಯ ಸಲ ಈ ಮನೆಗೆ ಬಂದಿದ್ದಾಗ ನಡೆದದ್ದೆಲ್ಲಾ ಇನ್ನೂ ಹಸಿಯಾಗಿಯೇ ಮನದಲ್ಲಿ ಉಳಿದಿದೆ.

ಅವಳೀಗ ಒಂದು ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದಾಳೆ. ಏಕೋ ಏನೋ ಮದುವೆ ಮಾಡಿಕೊಂಡಿಲ್ಲ ಎನ್ನುವುದನ್ನು ತಿಳಿದುಕೊಂಡಿದ್ದ. ಅವನ ಮನ ಮರ್ಕಟನಂತೆ ನೆಗೆದಿತ್ತು. ಏನೋ ಒಂದು ಆಸೆಯಿಂದ ಅವಳ ಬಳಿಗೆ ಮತ್ತೆ ಬಂದಿದ್ದ!

ಆದರೆ ನಂದಿನಿ ಯಾವ ಆಸಕ್ತಿಯನ್ನು ತೋರುತ್ತಿಲ್ಲ. ಆಗಿನಂತೆ ಮಾತನಾಡಿ ತನ್ನನ್ನು ಅಟ್ಟಿದರೇ.... ಇಲ್ಲ. ಈಗ ಹಾಗೆ ಮಾಡಲಾರಳು. ಗೊತ್ತಾಗಿದ್ದ ಮದುವೆ ನಿಂತುಹೋಗಿದ್ದರಿಂದ ಇವಳನ್ನು ಯಾರೂ ಮದುವೆಯಾಗಿಲ್ಲ. ಅವಳಿಗೂ ಆಸೆ ಇರುವುದಿಲ್ಲವೇ.... ಅವಳು ಒಪ್ಪುವಂತೆ ತಾನು ನಯವಾಗಿ ಮಾತನ್ನಾಡಬೇಕು. ಆಗ ತಾನು ತನ್ನ ಅಮ್ಮನ ಮಾತು ಕೇಳಿ ಹಾಳಾದೆ. ಈಗ ಹಾಗಾಗಬಾರದು. ಈ ಬುದ್ಧಿ ಈ ಮೊದಲೇ ತನಗೇಕೆ ಇರಲಿಲ್ಲ? ದುರಾಸೆಯಿಂದ ಅಮ್ಮನ ಮಾತಿಗೆ ಕುಣಿದಿದ್ದೆನಲ್ಲ!

ಚಿಕ್ಕವಯಸ್ಸಿನ ಆಕರ್ಷಕ ಮೈಕಟ್ಟಿನ, ರೂಪವತಿ ನಂದಿನಿಯನ್ನು ನಟೇಶ ನೋಡಿದ ಕೂಡಲೇ ಮೆಚ್ಚಿದ್ದ. ತನಗೆ ಅನುರೂಪಳಾದವಳು ಸಿಕ್ಕಿದಳೆಂದು ಹೆಮ್ಮೆಯಿಂದ ಬೀಗಿದ್ದ. ಲಗ್ನಪತ್ರಿಕೆಯ ಶಾಸ್ತ್ರದ ನಂತರ, ಅವರಿಬ್ಬರೂ ಒಟ್ಟೊಟ್ಟಿಗೇ ಎಷ್ಟೇ ಕಡೆ ತಿರುಗಾಡಿ ಬಂದಿದ್ದರು. ಅವನು ಕರೆದಾಗಲೆಲ್ಲಾ, ಉಲ್ಲಾಸದಿಂದ, ಯಾವ ಸಂದೇಹವನ್ನು ಪ್ರಕಟಿಸದೇ ಅವನು ಕರೆದಲ್ಲಿಗೆ ಬರುತ್ತಿದ್ದಳು. ಆದರೆ ಆ ದಿನ ಆ ಗಳಿಗೆಯಲ್ಲಿ ಮಹಾಕಾಳಿಯಾಗಿ ಬಿಟ್ಟಳಲ್ಲ.... ನೆನೆಸಿಕೊಂಡರೆ ಈಗಲೂ ಮುಜುಗರವಾಗುತ್ತದೆ.

ಪದೇ ಪದೇ ಅವನ ತಾಯಿ ಒತ್ತಾಯ ಮಾಡಿದ್ದರೂ, ನಟೇಶನಿಗೆ ನಂದಿನಿಯೊಡನೆ ಆ ಮಾತುಗಳನ್ನಾಡಲು ಆಗಿರಲಿಲ್ಲ. ಅವಳನ್ನು ಕಂಡೊಡನೆ ಮಧುರ ಭಾವನೆಗಳು ಮೂಡಿ, ಸರಸ ಸಲ್ಲಾಪದ ಮಾತುಗಳನ್ನಾಡಿ ಖುಷಿಯಿಂದ ಕಾಲ ಕಳೆದು ಹೊರಟು ಹೋಗುತ್ತಿದ್ದ.

ತಾಯಿಯ ಒತ್ತಾಯ ಅತಿಯಾದಾಗ, ನಾಲ್ಕಾರು ದಿನ ಅವಳು ಮನೆಯ ಕಡೆಗೇ ಬರದೇ ಕಾಲ ಕಳೆದಿದ್ದ. ಕಡೆಗೆ ಒಂದು ದಿನ ಒಂದು ನಿರ್ಧಾರ ತೆಗೆದುಕೊಂಡು ಅವಳ ಮನೆಗೆ ಬಂದಿದ್ದ. ಅವನನ್ನು ಕಂಡೊಡನೆ

ಅವಳು ಹುಸಿ ಮುನಿಸನ್ನು ಪ್ರಕಟಗೊಳಿಸಿದಳು. ತಾನು ಇಷ್ಟು ದಿನ ಬರಲಾಗದಕ್ಕೆ ಕ್ಷಮೆಯನ್ನು ಯಾಚಿಸದೇ, ಕಾರಣವನ್ನು ತಿಳಿಸದೇ, ಇದ್ದಕ್ಕಿದ್ದಂತೆ ಪ್ರಶ್ನಿಸಿದ್ದ.

"ನೀವು ಇರುವುದು ನಿಮ್ಮ ಸ್ವಂತ ಮನೆ ತಾನೆ.....?"

"ಹುಂ. ಹೌದು. ಅದ್ಯಾಕೆ ಹಾಗೆ ಕೇಳ್ತಿದೀರಿ?"

"ಈ ಮನೇನ ನಿನ್ನ ಹೆಸರಿಗೆ ಬರೆದುಕೊಡುವಂತೆ ನಿಮ್ಮ ತಂದೆಗೆ ಹೇಳಿಬಿಡು."

"ಜೋಕ್ ಮಾಡ್ತಿದೀರಾ? ಅವಳು ನಗಲು ಯತ್ನಿಸಿದಳು."

"ಇಲ್ಲ. ಸೀರಿಯಸ್ಸಾಗಿ ಹೇಳ್ತಿದಿನಿ. ಆದಷ್ಟು ಬೇಗ.... ನಮ್ಮ ಮದುವಗೆ ಮುಂಚೆ ಈ ಮನೆಯನ್ನು ನಿನ್ನ ಹೆಸರಿಗೆ ಬರೆಸಿಕೋಬೇಕು"

"ನಿಮ್ಮ ಮಾತು ನನಗೆ ಅರ್ಥವಾಗ್ತಿಲ್ಲ ನಟೇಶ್.... ಮುಂದೆ ನಮ್ಮ ತಂದೆ ಅವರಾಗಿಯೇ ನಮಗೆ ಕೊಡುತ್ತಾರೆ. ಆತುರವೇಕೆ? ಅವರಿಗೆ ನಾವು ಇಬ್ಬರೇ ಮಕ್ಕಳು. ಎಲ್ಲಾ ಆಸ್ತಿ ನಮ್ಮಿಬ್ಬರಿಗೇ ತಾನೇ....."

"ಅದೇ.... ಅದೇ ನನಗೆ ಇಷ್ಟವಿಲ್ಲ. ಮುಂದೆ ಯಾವ ಕಾಲಕ್ಕೋ ಅಷ್ಟರಲ್ಲಿ ಏನೇನು ಬದಲಾವಣೆಗಳಾಗಿರುತ್ತೋ ಅಲ್ಲಿವರೆಗೂ ನಾನು ಕಾಯಲು ಸಾಧ್ಯವಿಲ್ಲ."

"ಅಂದರೇ.... ನಿಮಗೆ ನನ್ನ ತಂದೆ ಮೇಲೆ ನಂಬಿಕೆ ಇಲ್ವಾ?"

"ಇಲ್ಲ. ನನಗೆ ಯಾರ ಮೇಲೂ ನಂಬಿಕೆ ಇಲ್ಲ." ಈ ಮಾತು ಅವಳನ್ನು ಸಿಡಿದೇಳುವಂತೆ ಮಾಡಿತು.

"ನಿಮ್ಮನ್ನು ಯೋಗ್ಯ ಅಂತ ತಿಳಿದುಕೊಂಡಿದ್ದೆ. ನೀವು ಸಂಭಾವಿತರಲ್ಲ. ನಿಮ್ಮಲ್ಲಿ ತುಂಬಿರುವುದು ದುರಾಸೆ. ನಿಮಗೆ ಬೇಕಾಗಿರುವುದು ನಾನಲ್ಲ. ನನ್ನ ಮನೆ, ವಿದ್ಯಾವಂತರು, ಉದ್ಯೋಗದಲ್ಲಿರುವವರು. ನಿಮಗೆ ಹೀನಾಯವಾಗುಲ್ಲ ಇಂತಹ ಮಾತನ್ನಾಡುವುದಕ್ಕೆ?"

"ಹೀನಾಯ ಏಕೆ? ಮುಂದೆ ಎಂದೋ ನಮ್ಮದಾಗುವ ಈ ಮನೆ ಈಗಲೇ ಆಗಲಿ ಅಂತ ಅಂದೆ.... ನಾವು ತಾನೇ ಎಷ್ಟು ದಿನಾಂತ ಬಾಡಿಗೆ ಮನೇಲಿ ಇರೋದು. ನಮ್ಮದೇ ಅಂತ ಸ್ವಂತ ಮನೆ ಇದ್ದರೆ ಎಷ್ಟು ಚೆನ್ನ ಅಲ್ವಾ?"

"ನಿಮಗೆ... ಸ್ವಂತ ಮನೇಲಿ ಇರಬೇಕೂಂತ ಆಸೆ ಇದ್ದರೇ... ನೀವೇ ಒಂದು ಕಟ್ಟಿಸಿ.... ಅಯೋಗ್ಯನಂತೆ ಇಂತಹ ಮಾತನ್ನಾಡಬೇಡಿ."

"ಇದರಲ್ಲಿ ತಪ್ಪೇನು? ನಿನ್ನ ತಂಗಿ ಇನ್ನು ತುಂಬಾ ಚಿಕ್ಕವಳು. ನಿನ್ನ ತಂದೆ, ನಿನ್ನ ತಂಗಿ ನಮ್ಮ ಜತೆಯಲ್ಲೇ ಇರಲಿ.... ನಾನು ಬೇಡ ಎನ್ನುವುದಿಲ್ಲ." ಎಂದು ಧಾರಾಳವಂತನಂತೆ ನುಡಿದಾಗ ಅವಳು ಕನಲಿದಳು.

"ಇಲ್ಲ.... ಅವರು ಎಲ್ಲಿಯೂ ಇರುವುದಿಲ್ಲ. ಅವರ ಸ್ವಂತ ಮನೆಯಲ್ಲಿ ಅವರು ಇರ್ತಾರೆ. ಈಗ ಈ ಮನೆಯಿಂದ ಹೊರಗೆ ಹೋಗುವವರು. ನೀವು.... ಗೆಟೌಟ್.... ಗೆಟ್ ಔಟ್," ಬಾಗಿಲ ಕಡೆ ಕೈ ಮಾಡಿ ಕಾಳಿಯಂತೆ ಎತ್ತರದ ಧ್ವನಿಯಲ್ಲಿ ನುಡಿದಾಗ ಅವನು ಏನೋ ತೊದಲಿದ.

"ಇನ್ನು ಯಾಕೆ ಇಲ್ಲಿ ನಿಂತಿದೀಯ? ಹೊರಟು ಹೋಗು... ಹೋಗು ನಿನ್ನ ಮುಖವನ್ನು ನೋಡಲು ನನಗಿಷ್ಟವಿಲ್ಲ." ಎಂದು ಅವಳು ಅಬ್ಬರಿಸಿದಾಗ ಅವಳ ಕೈ ಹಿಡಿದು ಏನೋ ಹೇಳಲು ಹೊರಟವನನ್ನು ಹಿಂದಕ್ಕೆ ತಳ್ಳಿ ತಾನು ಒಳಗೆ ನಡೆದು ಬಿಟ್ಟಳು. ಬೆಪ್ಪನಂತೆ ಒಂದುಗಳಿಗೆ ನಿಂತಿದ್ದ ನಟೇಶ, ಅವಳಿಗಾಗಿ ಕಾದು ಸಾಕಾಗಿ, ಹಾಗೇ ಹೊರಟು ಹೋಗಿದ್ದ.

ಈಗಲೂ ಅದೇ ರೀತಿ, ಇಷ್ಟು ವರ್ಷಗಳ ನಂತರ, ಅವಳ ಮನೆಯಲ್ಲಿ ಅವಳು ಹೊರಗೆ ಬರುವುದನ್ನೇ ಕಾದು ಕೂತಿದ್ದಾನೆ. ಅವಳ ಸುಳಿವೇ ಇಲ್ಲ. ಒಳಗಿನಿಂದ ಬರುತ್ತಾಳೋ ಇಲ್ಲವೋ ಎಜಂದು ಚಡಪಡಿಸುತ್ತಾ ಇದ್ದ. ಕಡೆಗೂ ಹೊರಗೆ ಬಂದಿದ್ದಳು. ಅವಳು ಪ್ರಶ್ನಿಸುವ ಮೊದಲು ತಾನೇ ಮಾತನಾಡಿದ್ದ.

"ಆಗ..... ನಿನ್ನ ಹತ್ತಿರ ಅವಿವೇಕಿಯ ತರಹ ಮಾತನ್ನಾಡಿ ನನ್ನ ಬಾಳನ್ನು ನಾನೇ ಕೈಯಾರ ಹಾಳು ಮಾಡಿಕೊಂಡೆ ನಂದಿನಿ..... ಇದಕ್ಕೆಲ್ಲಾ ಕಾರಣ ನಮ್ಮ ಅಮ್ಮ.... ಅವಳು ಈಗ ನನ್ನ ಜತೆಯಲ್ಲಿ ಇಲ್ಲ.... ಅವಳು ಅವಾಂತರದಲ್ಲಿ ಮಾಡಿಸಿದ ಮದುವೆಯೂ ಸರಿಯಾಗಲಿಲ್ಲ. ನಮ್ಮ ಮದುವೆ ಮುರಿಯಿತು. ನಾನೀಗ ಒಂಟಿ.. ಆದರೆ ಒಂಟಿಯಾಗಿ ನಾನು ಬದುಕಿರಲಾರೆ. ನನಗೆ ನೀನು ಬೇಕು ನಂದಿನಿ.... ನೀನು ಒಪ್ಪಿದರೇ ನಾವು ಮತ್ತೆ ಮದುವೆಯಾಗಿ ಸುಖವಾಗಿರಬಹುದು."

ನಂದಿನಿ ವಿಚಿತ್ರವಾಗಿ ನಕ್ಕಳು. "ಬಹುಶಃ ನೀವು ಇಂಥದೇ ಒಂದು ಆಸೆಯನ್ನು ಇಟ್ಟುಕೊಂಡು ಬಂದಿರಬಹುದು ಅಂತ ನಾನು ಊಹಿಸಿದ್ದೆ. ಅದು ನಿಜವಾಯ್ತು. ನಿಮ್ಮ ತಾಯಿಯ ಆದೇಶದಂತೆಯೇ ನಡೆಯುವವರು ನೀವು.... ನಿಮ್ಮದೇ ಆದ ಒಂದು ಸ್ವತಂತ್ರವಾದ ವ್ಯಕ್ತಿತ್ವ ನಿಮ್ಮಲ್ಲಿಲ್ಲ. ಈಗಲೂ ನನ್ನ ಬಳಿಗೆ, ನಿಮ್ಮ ತಾಯಿಯ ಮಾತನ್ನು ಮೀರಲಾರದೇ

ನನ್ನಲ್ಲಿಗೆ ಬಂದಿರಬಹುದು ಅಲ್ವಾ? ನನಗಾಗಿ ನಿಮ್ಮ ತಾಯಿಯನ್ನು ದೂರ ಮಾಡಿರುವಂತೆ ನಾಟಕವನ್ನು ಆಡ್ತಿದೀರಿ. ನೀವು ನಂಬಿಕೆಗೆ ಅರ್ಹವಾದ ವ್ಯಕ್ತಿ ಅಲ್ಲ."

"ಹಾಗೆನ್ನ ಬೇಡ ನಂದಿನಿ. ನನ್ನನ್ನ ನಂಬು.... ನಿನ್ನ ಅವಶ್ಯಕತೆ ನನಗಿದೆ. ಇಲ್ಲದಿದ್ದರೆ ನಾನು ಬದುಕಿರಲಾರೆ."

"ಸಾಕು ಮಾಡಿ ಈ ನಾಟಕವನ್ನು ನೀವು ಬದುಕಿದರೆಷ್ಟು ಬಿಟ್ಟರೆಷ್ಟು? ನಾನಿಲ್ಲದೇ ನೀವು ಐದಾರು ವರ್ಷಗಳನ್ನು ಕಳೆದಿದ್ದೀರಿ ಅದು ಸುಳ್ಳಲ್ಲವಲ್ಲ."

"ಅದು... ಅದು.... ಹಾಗಲ್ಲ. ನಾನು ಮರು ಮದುವೆಯಾದರೂ ಸುಖವಾಗಿರಲಿಲ್ಲ. ನಾನು ದುಡುಕಿ ಬಿಟ್ಟೆ... ಆದರೆ ಈಗ ನೀನೂ ಒಂಟಿಯಾಗಿಯೇ ಇದೀಯಲ್ಲ.... ನನ್ನನ್ನು ಮದೆಯಾಗಲು ಏನು ಅನುಮಾನ."

ನಂದಿನಿ ನಕ್ಕಳು. "ನಾನು ಒಂಟಿಯಲ್ಲ. ನನ್ನ ಜತೆ ನನ್ನ ತಂದೆ, ನನ್ನ ತಂಗಿ ಇದ್ದಾರೆ. ನನ್ನ ಈ ಮನೆ ನನಗಿದೆ. ನನ್ನ ವಿದ್ಯೆ, ನನ್ನ ಉದ್ಯೋಗ ನನ್ನ ಬಳಿ ಇದೆ. ನೂರಾರು ಜನ ಹುಡುಗಿಯರು ನನ್ನ ವಿದ್ಯಾರ್ಥಿಗಳು... ಅವರ ನಡುವೆ ನಾನು ಒಂಟಿ ಎನ್ನುವ ಭಾವನೆಯೇ ನನಗಿಲ್ಲ. ಎಲ್ಲಕ್ಕಿಂತ ಹೆಚ್ಚಾದ ಆತ್ಮವಿಶ್ವಾಸ ನನ್ನಲ್ಲಿದೆ. ನಾನು ನಿಮ್ಮ ಹಾಗೆ ಹೇಡಿ ಅಲ್ಲ."

"ನಂದಿನಿ..... ಯಾವುದೋ ಹಳೇ ಮಾತನ್ನೇ ಹಂಗಿಸಿ ಆಡಬೇಡ ನೀನು"

"ಸಾಕು ಮಾಡಿ ನಿಮ್ಮೊಂದಿಗೆ ನಿಶ್ಚಯವಾದ ಮದುವೆ ನಿಂತು ಹೋದ ಮಾತ್ರಕ್ಕೆ ನಾನು ಬದುಕಲಾರೆನೇ.....?"

"ನಿನ್ನ ಧೈರ್ಯ ನನ್ನಲ್ಲಿರಲಿಲ್ಲ ನಂದಿನಿ.... ಈಗ ನಾನು ನಿನ್ನ ಕ್ಷಮೆಯಾಚಿಸಿ ನಿನ್ನ ಬಳಿಗೆ ಬಂದಿದ್ದೀನಿ. ನನ್ನನ್ನು ಕ್ಷಮಿಸಿದರೆ ನಿನ್ನ ಅರ್ಹತೆ ಹೆಚ್ಚುತ್ತದೆ."

"ಇಂಥಾ ಮಾತುಗಳಿಗೆ ನಾನು ಮರುಳಾಗಿ ಮತ್ತೆ ನನ್ನ ಬಾಳನ್ನು ಹಾಳು ಮಾಡಿಕೊಳ್ಳುವುದಿಲ್ಲ. ನಿಮಗಿಂತ ಯೋಗ್ಯರಾದ ವ್ಯಕ್ತಿ ನನಗಾಗಿ ಕಾದು ನಿಂತಿದ್ದಾರೆ. ಅದರ ಬೆಂಬಲ ನನ್ನನ್ನು ಮುಂದಕ್ಕೆ ತಂದಿದೆ. ಅಂತಹ ವ್ಯಕ್ತಿಯ ಕಾಲಿನ ಧೂಳಿಗೂ ನೀವು ಸಮಾನರಲ್ಲ."

"ಅಂದರೇ..... ನಿನ್ನ ಮದುವೆ? ಎಲ್ಲಿದ್ದಾರೆ? ಹೇಗಿದ್ದಾರೆ? " ಅನುಮಾನದಿಂದ ಪ್ರಶ್ನಿಸಿದ.

"ಏಕೆ? ಅನುಮಾನವೆ? ನಾನು ನಿಮ್ಮಂತೆ.... ಓತಿಕೇತ ಅಲ್ಲ.

ಮೊದಲಿನಿಂದ ನನ್ನನ್ನು ಬಲ್ಲ. ನನ್ನ ಮನಸ್ಸನ್ನು ಅರಿತ ಸದ್ಭಾವನೆಯನ್ನುಳ್ಳ ವ್ಯಕ್ತಿಯೊಬ್ಬರು, ನನ್ನ ವಿದ್ಯೆಗೆ ಪ್ರೋತ್ಸಾಹವನ್ನು ಸಹಕಾರವನ್ನು ನೀಡಿ ಉತ್ತೇಜನ ಕೊಟ್ಟುದರಿಂದಲೇ ನಾನು ಈ ದಿನ ಈ ಹುದ್ದೆಯಲ್ಲಿರುವುದು. ಅವರ ಉಪಕಾರವನ್ನು ನಾನು ಮರೆಯುವಂತಿಲ್ಲ."

"ಬಹುಶಃ ಅವರಿಗೆ ನಿನ್ನ ಮದುವೆ ನಿಂತು ಹೋದ ವಿಷಯ ತಿಳಿದಿರಲಾರದು."

"ಏಕೆ ತಿಳಿದಿಲ್ಲ? ಅವರು ಬೇರೆಯಾರೂ ಇಲ್ಲ. ನನ್ನ ಸೋದರ ಮಾವನೇ.... ಆ ದಿನವೇ ನನ್ನ ನಿಮ್ಮ ದಾರಿ ಬೇರೆ ಬೇರೆ ಆಯ್ತು. ಅದು ಮತ್ತೆ ಎಂದಿಗೂ ಕೂಡಲು ಸಾಧ್ಯವಿಲ್ಲ. ಸಧ್ಯದಲ್ಲೇ ನಾನು ನನ್ನ ತಂದೆ ಹಾಗೂ ನನ್ನ ತಂಗಿಯೊಡನೆ ಅಮೆರಿಕಾಕ್ಕೆ ಹೋಗುತ್ತಿದ್ದೇನೆ. ಅಲ್ಲಿರುವ ನನ್ನ ಸೋದರ ಮಾವನೊಂದಿಗೆ ನನ್ನ ಮದುವೆ ನಡೆಯಲಿದೆ. ಅವರಿಗೆ ನನ್ನ ಮನೆ ಮೇಲೆ ಆಸೆ ಇಲ್ಲ. ನನ್ನ ಆಸ್ತಿಯ ಮೇಲೆ ಕಣ್ಣು ಇಲ್ಲ. ನನ್ನ ತಂದೆಯ ಮೇಲೆ ಅಪಾರ ಗೌರವ. ನನ್ನ ತಂಗಿಯ ಮೇಲೆ ಅತಿ ಪ್ರೀತಿ. ಅವರು ನನ್ನ ಬಾಳ ಸಂಗಾತಿಯಾಗುತ್ತಿರುವುದು ನನ್ನ ಸೌಭಾಗ್ಯ.... ನಾನು ನಿಮ್ಮ ದುರಾಸೆಯ ಹೊಂಡದಲ್ಲಿ ಎಂದೋ ಹೊತು ಹೋಗಿರುತ್ತಿದ್ದೆ."

"ಪ್ಲೀಸ್, ನಂದಿನಿ ನನ್ನನ್ನು ಕ್ಷಮಿಸಿ ಬಿಡು.... ನನಗೆ ಈಗ ಯಾವ ಆಸೆಯೂ ಇಲ್ಲ. ನೀನು ನನ್ನನ್ನು ಕ್ಷಮಿಸಿ......"

"ಈ ಸ್ಥಿತಿ ನಿಮಗೆ ಬರಬಾರದಾಗಿತ್ತು ನಟೇಶ. ಆದರೆ ನನಗೆ ನಿಮ್ಮ ಬಗ್ಗೆ ಪರಿತಾಪ ಸಹ ಮಾಡುತ್ತಿಲ್ಲ. ದಯವಿಟ್ಟು ಹೊರಟು ಹೋಗಿ."

"ಮತ್ತೆ ಮತ್ತೆ ಅವಮಾನ ಮಾಡ್ತಿದೀಯ ನಂದಿನಿ...."

"ಮಾನವಿದ್ದವರಿಗೆ ಅವಮಾನದ ಚಿಂತೆ. ನಿಮಗೇಕೆ ಚಿಂತೆ. ಎಲ್ಲರನ್ನು ಮರೆತವರಂತೆ ಸೋಗು ಹಾಕಿ ನನ್ನ ಮನೆ ಬಾಗಿಲಿಗೆ ನೀವು ಬರಬೇಕಾದರೆ, ನಿಮ್ಮ ಅಂದಾಜು ಮಾಡಬಲ್ಲೆ ನಾನು. ಈಗ ನಮ್ಮ ತಂದೆ ವಾಕಿಂಗ್ ಮುಗಿಸಿ ಮನೆಗೆ ಬರುವ ಸಮಯವಾಯ್ತು. ಅವರ ಕಣ್ಣಿಗೆ ನೀವು ಬಿದ್ದರೆ ಪರಿಣಾಮ ನೆಟ್ಟಗಾಗುವುದಿಲ್ಲ. ಅವರು ಪೋಲಿಸರಿಗೆ ಫೋನ್ ಮಾಡಿದರೂ ಮಾಡಿದರೇ... ಹಾಂ ಇನ್ನೊಂದು ಮಾತು. ನನ್ನನ್ನು ಮತ್ತೆಂದೂ ಕಾಣುವ ಪ್ರಯತ್ನವನ್ನು ಮಾಡಬೇಡಿ," ಎಂದು ಹೇಳಿ ಒಳಗೆ ಹೋಗಲೆಂದು ತಿರುಗಿದವಳ ಕೈಹಿಡಿದು ನಿಲ್ಲಿಸುವ ಮನಸ್ಸಾಗಿತ್ತು. ನಾನು ಏನು ಬೇಕಾದರೂ ಮಾಡಬಲ್ಲೆ ಎಂದು ಬೆದರಿಸುವ ಕೆಟ್ಟ ಆಲೋಚನೆ ಸಹ ಮೂಡಿತು.

ಅಷ್ಟರಲ್ಲಿ ಹೊರಬಾಗಿಲಲ್ಲಿ ನಾಯ ಬೊಗಳಿದ ಸದ್ದು ಕೇಳಿ ಬೆದರಿ ಹಿಂತಿರುಗಿ ನೋಡಿದ. ನಂದಿನಿ ನಾಯಿ ಮರಿಯನ್ನು ತನ್ನೆಡೆಗೆ ಕರೆದಳು. ನಂದಿನಿಯ ತಂಗಿ, ನಾಯಿ ಮರಿಯೊಂದಿಗೆ ಒಳಗೆ ಬಂದವಳು ಇವಳ ಕಡೆ ನೋಡದೇ ಒಳಗೆ ಅಕ್ಕನ ಜತೆ ಹೊರಟು ಹೋದಳು. ಎಷ್ಟು ಹೊತ್ತಾದರೂ ಯಾರೂ ಹೊರಗೆ ಬರದಿದ್ದಾಗ ಏಕಾಂಗಿಯಾಗಿ ವರಾಂಡದಲ್ಲಿ ನಿಂತ. ಅವನ ಸ್ಥಿತಿ ಅವನಿಗೇ ಅಸಹ್ಯವಾಗಿ ತೋರಿತ್ತು. 'ಕೈ ತೋರಿಸಿ ಅವಲಕ್ಷಣ' ಎಂದು ಅನ್ನಿಸಿಕೊಂಡಂತಾಯಿತು ಎಂದು ಕೊಂಡು ತಲೆ ತಗ್ಗಿಸಿ ಹೊಸ್ತಿಲು ದಾಟ, ಗೇಟನಿಂದ ಆಚೆಗೆ ನಡೆದು ರಸ್ತೆ ಸೇರಿದ.

ಅವನು ಹೋಗುವುದನ್ನೇ ಕಾದಿದ್ದವಳಂತೆ, ನಂದಿನಿ ಮುಂಬಾಗಿಲನ್ನು ದಢಾರನೇ ಹಾಕಿ, ಭದ್ರಪಡಿಸಿ, ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಳು. ಬಳಿಗೆ ಬಂದ ತಂಗಿಯನ್ನು ಅಪ್ಪಿಕೊಂಡು ಮುದ್ದಿಟ್ಟಳು. ನಾಯಿ ಮರಿ ಅವಳ ಮಡಿಲನ್ನೇರಿತು. ಭೂತನನ್ನು ಅಟ್ಟಿಯಾಗಿತ್ತು. ನಿರ್ಭಯದಿಂದ ನಂದಿನಿ ನಕ್ಕಳು ಪೆಡಂಭೂತ ತೊಲಗಿತ್ತು.

* * *

೪. ಕ್ಷಮೆ

ಅಂಬುಜಳಿಗೆ ಬಂದಿದ್ದ ಜ್ವರ ಒಂದು ವಾರವಾದರೂ ಬಿಟ್ಟಿರಲಿಲ್ಲ. ಡಾಕ್ಟರು ಟೈಫಾಯಿಡ್ ಜ್ವರವಿರಬಹುದೆಂದು ಅನುಮಾನಿಸಿದ್ದರು. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದ್ದಳು. ಪರೀಕ್ಷೆ ಹತ್ತಿರವಾಗುತ್ತಿತ್ತು. ಓದಲು ಆಗುತ್ತಿಲ್ಲವೆಂದು ಅವಳು ಅತ್ತು ಅತ್ತು ಜ್ವರವನ್ನು ಹೆಚ್ಚಿಸಿಕೊಳ್ಳುತ್ತಿದ್ದಳು.

ಅವಳ ತಂದೆ ಸರ್ಕಾರಿ ಕೆಲಸದಲ್ಲಿದ್ದವರು. ಪ್ರತಿ ಎರಡು ಮೂರು ವರ್ಷಗಳಿಗೊಮ್ಮೆ ಬೇರೆ ಬೇರೆ ಊರಿಗೆ ವರ್ಗವಾಗುತ್ತಿತ್ತು. ಚಿತ್ರದುರ್ಗದಲ್ಲಿ ಕಳೆದ ಎರಡು ವರ್ಷದಿಂದ ಇದ್ದವರು, ಮಂಡ್ಯಕ್ಕೆ ವರ್ಗವಾಗಿ ಹೊರಟು ಹೋಗಿದ್ದರು. ಮಗಳ ಪರೀಕ್ಷೆ ಮುಗಿದ ಮೇಲೆ, ಮಂಡ್ಯದಲ್ಲಿ ಮನೆ ಮಾಡಿ ಎಲ್ಲರನ್ನೂ ಕರೆಸಿಕೊಳ್ಳುವ ಉದ್ದೇಶವಿತ್ತು.

ಮಗಳಿಗೆ ಜ್ವರ ಬಿಟ್ಟರೆ ಸಾಕು ಎಂದು ದೇವರಲ್ಲಿ ಹರಕೆ ಹೊತ್ತಿದ್ದ ಕಮಲಮ್ಮ ತನ್ನ ಇನ್ನೊಬ್ಬಳು ಮಗಳೊಡನೆ, ಹತ್ತಿರದ ದೇವಸ್ಥಾನಕ್ಕೆ ಹೋಗಿದ್ದಳು. ಮಗ ಸತ್ಯನನ್ನು ಅಂಬುಜಳ ಜತೆಗೆ ಇರುವಂತೆ ಬಿಟ್ಟು ಹೋಗಿದ್ದಳು.

ಒಳಗೆ ಅಕ್ಕನ ಎದುರಿಗೆ ಕುಳಿತಿರಲು ಬೇಸರವಾಗಿ ಸತ್ಯ ಮುಂಬಾಗಿಲ ಜಗುಲಿಯ ಮೇಲೆ ಕೂತ. ಮುಂದೆ ರಸ್ತೆಯಲ್ಲಿ ಆಟ ಆಡುತ್ತಿದ್ದವರನ್ನೇ ಆಸೆಗಣ್ಣುಗಳಿಂದ ನೋಡುತ್ತಾ ಇದ್ದವನನ್ನು, ಸ್ನೇಹಿತರು ಕರೆದಿದ್ದೇ ಸಾಕು ಎಂಬಂತೆ ಓಡಿ ರಸ್ತೆಗಿಳಿದಿದ್ದ.

ಕೋಟೆಯ ರಸ್ತೆಯ ಕಡೇ ಮನೆ. ಅಲ್ಲಿ ಜನ ಸಂಚಾರ ಕಡಿಮೆ. ಕತ್ತಲಾಗುತ್ತಾ ಬಂದಿದ್ದರೂ, ಮುಬ್ಬುಗತ್ತಲೆಯಲ್ಲೇ ಸತ್ಯ ತನ್ನ ಸ್ನೇಹಿತರೊಂದಿಗೆ ಆಟ ಮುಂದುವರೆಸಿದ್ದ ಜ್ವರದ ತಾಪ ಹೆಚ್ಚಿ ಅಂಬುಜ ನರಳ ತೊಡಗಿದಳು. ಕಣ್ಣು ಮುಚ್ಚಿದರೂ ನಿದ್ದೆಯಿಲ್ಲ. ಏನೋ ಮಂಪರು. ಬಾಯಿಯೆಲ್ಲಾ ಒಣಗಿದಂತಾಗಿದೆ. ಬಾಯಾರಿಕೆ ಹೆಚ್ಚಿದಂತಾಗಿ, ನೀರು... ನೀರು..... ಎಂದು ಮೆಲುದನಿಯಲ್ಲಿ ಕೇಳಿದಳು. ಯಾರೂ ಬಂದು ನೀರನ್ನು ಕುಡಿಸಿಲಿಲ್ಲವಾದ್ದರಿಂದ ಮತ್ತೆ ಅಮ್ಮಾ.... ಸತ್ಯಾ..... ಅಂತ ಕ್ಷೀಣಸ್ವರದಲ್ಲಿ ಕರೆದಳು. ಕಣ್ಣು ಬಿಟ್ಟು ನೋಡಿದಳು. ಮನೆಯೊಳಗಿನ ಕತ್ತಲೆ ಹೆಚ್ಚಾಗಿತ್ತು. ಎದುರಿಗೆ ನಿಂತ ಆಕೃತಿಯನ್ನು ಕಂಡು ಹೆದರಿಕೆಯಾದಂತಾಗಿ ಮತ್ತು ಗಂಟಲು ಒಣಗಿ, ಕೂಗಲು ಶಕ್ತಿಯಿಲ್ಲದೇ

ಬೆ..... ಬೆ.... ಎಂದಳು.

ಪಕ್ಕದಲ್ಲಿ ನಿಂತಿದ್ದ ಆ ಆಕೃತಿ, ಪಕ್ಕದ ಸ್ಟೂಲ್ ಮೇಲೆ ಇಟ್ಟಿದ್ದ ತಂಬಿಗೆಯಿಂದ ನೀರನ್ನು ಲೋಟಕ್ಕೆ ಬಗ್ಗಿಸಿ, ಅವಳ ಬಾಯಿಗೆ ಸ್ವಲ್ಪ ಸ್ವಲ್ಪವನ್ನೇ ಬಗ್ಗಿಸಿತು. ಗಂಟಲು ತಣ್ಣಗಾಗಿ ಹಿತವೆನಿಸಿತು. ತನ್ನ ಮೇಲೆ ಬಾಗಿ ತನ್ನ ಮುಖದ ಸಮೀಪವೇ ಕಂಡು ಬಂದ ಆಕೃತಿಯನ್ನು ಕಂಡು ಕಿಟಾರನೆ ಕಿರುಚಲೆಂದು ಬಾಯಿ ತೆರೆದರೂ ಶಬ್ಧ ಹೊರಡಲಿಲ್ಲ. ಆ ವ್ಯಕ್ತಿ "ಶ್" ಎಂದು ನುಡಿದು ಅವಳ ಬಾಯಿ ಮೇಲೆ ಕೈ ಒತ್ತಿದಾಗ, ಹೆದರಿಕೆಯಿಂದ ಅವಳಿಗೆ ಎಚ್ಚರತಪ್ಪಿ ಹೋಯಿತು. ಮುಂದೇನಾಯಿತೆಂದು ಅವಳಿಗೆ ಗೊತ್ತಾಗಲಿಲ್ಲ.

ಗೊಣಗುತ್ತಾ ಒಳ ಬಂದ ಕಮಲಮ್ಮ ಮನೆಯ ದೀಪಗಳನ್ನೆಲ್ಲಾ ಹೊತ್ತಿಸಿ, ಮಗಳಿಗೆ ತೀರ್ಥವನ್ನು ಕುಡಿಸಲೆಂದು ಹತ್ತಿರ ಬಂದಳು. ಬೆದರು ಗಣ್ಣು ಬಿಡುತ್ತಾ ಮಲಗಿದ್ದ ಮಗಳ ಮುಖವನ್ನು ನೋಡಿ ಹೆದರಿದಳು. ಏನಾಯ್ತೇ... ಏನಾಯ್ತೇ.... ಎನ್ನುತ್ತಾ ಕೆಟ್ಟ ಸ್ವರದಲ್ಲಿ ಕೇಳುತ್ತಾ, ಅವಳ ಕತ್ತನ್ನು ಎತ್ತಿದಳು. ಮಗಳ ಮುಖದಲ್ಲಿ ಏನೋ ವ್ಯತ್ಯಾಸ ಕಂಡು ಬರುತ್ತಿದೆಯೆಂದು ಅನುಮಾನದಿಂದ ಪರೀಕ್ಷಿಸುವಂತೆ ನೋಡಿದ ನಂತರ ತಕ್ಷಣವೇ ಗೊತ್ತಾಗಿತ್ತು.

ಕತ್ತು, ಕಿವಿ, ಬೋಳಾಗಿದೆ. ಕತ್ತಿನಲ್ಲಿದ್ದ ಒಂದೆಳೆ ಸರವನ್ನು, ಕಿವಿಯಲ್ಲಿದ್ದ ಮುತ್ತಿನ ಓಲೆಯನ್ನು ಯಾರೋ ತೆಗೆದಿದ್ದಾರೆ. ಓಲೆ, ಸರ ಏನಾಯ್ತೇ..... ಎನ್ನುತ್ತಾ ಮಗಳ ತಲೆಯನ್ನು ಜುಂಗಿಸಿದಳು. ನೋವಿನಿಂದ ಅಂಬುಜ ಕಿರುಚಿದಳು. ಪಕ್ಕದಲ್ಲಿದ್ದ ಕೌಸ್ತುಭ, ಅಮ್ಮನ ಕೈಹಿಡಿದು ತಡೆದಳು. ಸುಮ್ಮನಿರಮ್ಮಾ..... ಮೊದಲೇ ಅವಳು ನರಳ್ತಾ ಇದ್ದಾಳೆ...... ಅವಳಿಗೇನು ಗೊತ್ತು? ಯಾರೋ ಕಳ್ಳ ಬಂದು ತೆಗೆದುಕೊಂಡು ಹೋಗಿರಬಹುದು.

ಹೌದೇನೇ ಎನ್ನುವಂತೆ ಮಗಳ ಕಡೆ ನೋಡಿದಾಗ, ಅವಳು ಹೌದು ಎನ್ನುವಂತೆ ತಲೆಯಾಡಿಸಿದಳು. ಅಯ್ಯೋ.... ಕಳ್ಳ, ಕಳ್ಳ ನುಗ್ಗಿ ಎಲ್ಲಾ ಕದ್ದುಕೊಂಡು ಹೋಗಿದಾನಲ್ಲ. ಯಾರೂ ಇಲ್ಲವೇ... ಎಂದು ಕಮಲಮ್ಮ ಬೊಬ್ಬೆ ಇಟ್ಟಾಗ ಅಕ್ಕಪಕ್ಕದವರೆಲ್ಲಾ ಬಂದು ಸೇರಿದರು.

ಕ್ಷಣ ಮಾತ್ರದಲ್ಲಿ ಎಲ್ಲರಿಗೂ ತಿಳಿದಿತ್ತು. ಒಂಟಿಯಾಗಿ, ಹುಶಾರಿಲ್ಲದೇ ಮಲಗಿದ್ದ ಅಂಬುಜಳ ಮೈಮೇಲಿದ್ದ ಒಡವೆಗಳನ್ನು ಕಳ್ಳ ಅಪಹರಿಸಿಕೊಂಡಿದ್ದಾನೆ ಅಂತ. ಅವರುಗಳು ತಲಾತಟ್ಟೆ ಮಾತನ್ನಾಡಿದರು.

ಜ್ವರಬಂದ ಹುಡುಗಿನ್ನ ಯಾರಾದ್ರೂ ಒಬ್ರೇ ಬಿಟ್ಟು ಹೋಗ್ತಾರಾ ಕಮಲಮ್ಮ. ನಿಮಗೆ ಬುದ್ಧಿ ಇಲ್ಲ.

"ಇಲ್ಲ ಶಾಂತಮ್ಮ.... ಸತ್ಯನ್ನ ಅವಳ ಜತೆಗೆ ಅಂತ ಬಿಟ್ಟು ಹೋಗಿದ್ದೆ. ಎಲ್ಲಿ ಹಾಳಾಗಿ ಹೋಗಿದ್ನೋ ಈ ಮುಂಡೇ ಮಗ.... ಎನ್ನುತ್ತಾ ಅಲ್ಲಿಯೇ ನಿಂತಿದ್ದ ಸತ್ಯನ ಬೆನ್ನ ಮೇಲೆ ದಬ ದಬ ನಾಲ್ಕು ಹೇರಿದಾಗ, ಆಕೆ ತಡೆದಳು."

ಈಗ ಅವನನ್ನು ಹೊಡೆದು ಏನು ಪ್ರಯೋಜನ? ಮೊದಲು ಪೋಲಿಸ್ ಕಂಪ್ಲೆಂಟ್ ಕೊಡಿ. ಇನ್ನೇನು ಕಳುವಾಗಿದೆ ಅಂತ ನೋಡಿ.

ಪಕ್ಕದ ಮನೆಯವರು ಪೋಲಿಸ್ ಸ್ಟೇಷನಿಗೆ ಓಡಿದರು. ಕಮಲಮ್ಮ ಬೀರು ಬಾಗಿಲು ತೆಗೆದು ಒಡವೆಗಳನ್ನು ಪರೀಕ್ಷಿಸಿದಳು. ಎಲ್ಲಾ ಸರಿಯಾಗಿದೆ. ಆದರೆ ಅಲ್ಲಿಟ್ಟಿದ್ದ ಹಣ ಮಾತ್ರ ಮಾಯವಾಗಿದೆ. ಆದರೆ ಕಮಲಮ್ಮ ತಕ್ಷಣವೇ ಉಳಿದ ಒಡವೆಗಳನ್ನು ಸೀರೆಗಳ ಸಂದಿಯಲ್ಲಿ ಮುಚ್ಚಿಟ್ಟು ಹೊರಬಂದು, ಬೀರುವಿನಲ್ಲಿ ಒಂದಿಷ್ಟು ಹಣ ಇಟ್ಟಿದ್ದೆ. ಅದನ್ನು ತಗೊಂಡು ಹೋಗಿದಾನಮ್ಮಾ ಆ ಪಾಪಿ. ಇನ್ನು ನಮ್ಮಂತಹ ಬಡವರ ಮನೆಯಲ್ಲಿ ಒಡವೆಗಳು ಎಲ್ಲಿಂದ ಬರಬೇಕು!

ಅಷ್ಟರಲ್ಲಿ ಪೋಲಿಸ್ ಇನ್ಸ್‌ಪೆಕ್ಟರ್, ತನ್ನ ಸಹಾಯಕರೊಂದಿಗೆ ಬಂದ. ಹೇಳಿದ್ದನ್ನೆಲ್ಲಾ ಬರೆದುಕೊಂಡು, ನಿಮಗೇನಾದ್ರೂ ಬುದ್ಧಿ ಗಿದ್ದಿ ಇದೆಯೇ ನಮ್ಮ..... ಕತ್ತಲೆ ಹೊತ್ತಿನಲ್ಲಿ ಮಕ್ಕಳನ್ನು ಮಾತ್ರ ಬಿಟ್ಟು ಬಾಗಿಲನ್ನು ತೆಗೆದು ಯಾರಾದ್ರೂ ಹೋಗ್ತಾರಾ ಅಂತ ಗದರಿಸಿದ. ಅಂಬುಜಳ ಬಳಿ ಬಂದು ಅವನು ಹೇಗಿದ್ದ? ಎಂತಹ ಉಡುಪನ್ನು ಧರಿಸಿದ್ದ? ಯಾವ ಭಾಷೆ ಮಾತನ್ನಾಡುತಿದ್ದ? ಎಂದೆಲ್ಲಾ ಕೇಳಿದಾಗ, ಅಂಜುಜ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ಸುಮ್ಮನೇ ಅತ್ತಳು.

"ಹುಡುಗಿ ಸಿಕ್ಕಾಬಟ್ಟೆ ಹೆದರಿ ಬಿಟ್ಟಿದೆ......." ಎಂದು ಪಕ್ಕದಲ್ಲಿ ನಿಂತಿದ್ದವರೊಬ್ಬರು ನುಡಿದಾಗ, ಕೇಡಿಗನೊಬ್ಬ

ಮತ್ತೆ ಹೆದರದೇ..... ಹುಡುಗಿ ಒಬ್ಬಳೇ ಇದ್ದಾಳೆ ಅಂತ ನೋಡಿದ.... ಮೈಮೇಲೆಲ್ಲಾ ಕೈಯಾಡಿಸಿದ್ದಾನೆ... ಕಡೆಗೆ ಕತ್ತಿನಲ್ಲಿದ್ದುದನ್ನು ಕಿವಿಯಲ್ಲಿದ್ದುದನ್ನು ಕಿತ್ತುಕೊಂಡು ಹೋಗಿದ್ದಾನೆ. ಅಂತ ನುಡಿದಾಗ ಕೆಲವರು ಮುಸಿ ಮುಸಿ ನಕ್ಕರು.

ಹೌದು. ಮತ್ತೇ, ಒಂಟಿ ಹುಡುಗಿ ಸಿಕ್ಕಾಗ ಸುಮ್ಮನೇ ಬಿಟ್ಟಿರುತ್ತಾನೆ?

ಏನೇನು ನಡೀತೋ? ಯಾರೋ ಲೊಚಗುಟ್ಟಿದರು.

"ಏನಾದರಾಗಲೀ, ಅವಳನ್ನು ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ ಸರಿಯಾಗಿ ಪರೀಕ್ಷೆ ಮಾಡಿಸಿ.... ಕಾಲ ಕೆಟ್ಟದು. ಪಾಪ ಹೆಣ್ಣು ಹುಡುಗಿ ಅವಳ ಬಾಳು ಹಾಳಾಗಬಾರದು.

ಹೀಗೆಲ್ಲಾ ತಲೆಗೊಬ್ಬರಂತೆ ಮಾತನಾಡಿದಾಗ, ಪಕ್ಕದ ಮನೆಯ ಗಂಡಸರು ನುಡಿದರು. "ಮನೆಗೆ ಕಳ್ಳ ನುಗ್ಗಿದ ಮಾತ್ರಕ್ಕೆ ಹೀಗೆಲ್ಲಾ ಮಾತನಾಡಬಾರದು. ಪಾಪ, ಅವರ ಕಷ್ಟ ಅವರಿಗೆ. ನಿಮ್ಮ ಕೈಯಲ್ಲಿ ಏನಾದರೂ ಸಹಾಯ ಮಾಡುಕ್ಕೆ ಆಗೋದಾದ್ರೆ ಮಾಡಿ. ಏನೇನೋ ಮಾತನಾಡಬೇಡಿ" ಆತನನ್ನೇ ದುರು ದುರು ನೋಡುತ್ತಾ ಉಳಿದವರು ಹೊರಟು ಹೋದರು.

ಇದೆಲ್ಲಾ ಆಗಿ ಒಂದೆರಡು ತಿಂಗಳುಗಳು ಕಳೆದು ಹೋದವು. ಪೋಲಿಸ್ನೋರು ಯಾವ ಕಳ್ಳನನ್ನು ಹಿಡಿಯಲಿಲ್ಲ. ಆದರೆ ಅಂಬುಜನ ಮೇಲೆ ನಡೆದ ಅಪಪ್ರಚಾರ ಮಾತ್ರ ಅಪಾರ.

ಖಾಯಿಲೆಯಿಂದ ಹುಶಾರಾಗಿ ಎದ್ದು, ಸ್ಕೂಲಿಗೆ ಪುನಃ ಹೋದ ದಿನವೇ ಒಬ್ಬೊಬ್ಬ ಗೆಳತಿಯರೂ ಒಂದೊಂದು ತರಹ ಪ್ರಶ್ನಿಸಿದ್ದರು. ಟೀಚರ್ ಸಹ ಅವಳನ್ನು ಕರೆಸಿ ತಮಾಷೆ ಮಾಡಿದ್ದರು.

ಏನೇ ಅಂಜುಜ, ನಿಮ್ಮ ಮನೆಗೆ ಬಂದಿದ್ನಂತಲ್ಲ ಕಳ್ಳ.... ಅವನು ಬರೀ ನಿನ್ನ ಮುತ್ತಿನ ಓಲೆ ಕದ್ದನೋ..... ಅಥವಾ ಮುತ್ತು ಗಿತ್ತು ಕೊಟ್ಟನೊ..... ಅಂಬುಜಳ ಮುಖ ನಾಚಿಕೆಯಿಂದ, ಅವಮಾನದಿಂದ, ಕೋಪದಿಂದ ಕೆಂಪಾಗಿತ್ತು. ಅವತ್ತೇ ಕಡೆ ತಾನು ಮತ್ತೆ ಸ್ಕೂಲಿಗೆ ಹೋಗುವುದಿಲ್ಲವೆಂದು ಹೇಳಿಬಿಟ್ಟಳು.

ಅಪವಾದದ ಮೂಟೆಯನ್ನು ಹೊತ್ತ ಅವಳು ಆ ಊರಿನಲ್ಲಿರಲು ಇಷ್ಟ ಪಡಲಿಲ್ಲ. ತಮ್ಮನಿಗೆ ತಂಗಿಗೆ ಪರೀಕ್ಷೆ ಆಗೋವರೆಗೂ ಆ ಊರನ್ನು ಬಿಡುವಂತಿರಲಿಲ್ಲವಾದ್ದರಿಂದ, ತಂದೆ, ತಮ್ಮ ಮಗಳನ್ನು ತಮ್ಮೊಂದಿಗೆ ಕರೆದೊಯ್ದರು. ಅಂಜುಜ ಆ ವರ್ಷ ಪರೀಕ್ಷೆಗೆ ಕೂರಲಿಲ್ಲ.

ನಂತರ ಪ್ರೈವೇಟ್‌ನಲ್ಲಿ ಕಟ್ಟಿ ಎಸ್.ಎಸ್.ಎಲ್.ಸಿಯನ್ನು ಪಾಸುಮಾಡಿಕೊಂಡು ಕಾಲೇಜು ಸೇರಿದಳು. ಆದರೂ ನಡೆದ ಈ ಘಟನೆಯನ್ನು ಮರೆತಿರಲಿಲ್ಲವಾದ್ದರಿಂದ, ಅಂಬುಜಳಲ್ಲಿ ಒಂದು ತರಹ ಮಂಕುತನ ಬೆಳೆಯಿತು. ಯಾರೊಂದಿಗೂ ಬೆರೆಯಲು ಇಷ್ಟ ಪಡುತ್ತಿರಲಿಲ್ಲ. ತಾನಾಯಿತು. ತನ್ನ ಓದಾಯಿತು. ಬಿ.ಎಸ್ಸಿ.ಎಂ.ಎಸ್ಸಿ. ಮುಗಿಸಿ, ಮೈಸೂರಿನ ಕಾಲೇಜೊಂದರಲ್ಲಿ

ಲೆಕ್ಚರರ್ ಆಗಿ ಕೆಲಸಕ್ಕೆ ಸೇರಿದಳು. ಯಾಕೋ ಏನೋ ಮದುವೆಯಾಗುವ ಮನಸ್ಸೇ ಇರಲಿಲ್ಲ. ನೋಡಲು ಬಂದ ಗಂಡುಗಳನ್ನು ತಾನೇ ಒಪ್ಪುತ್ತಿರಲಿಲ್ಲ. ಹೀಗಾಗಿ ವಯಸ್ಸು ಮೀರುತ್ತಾ ಹೋಯಿತು. ತಂದೆಗೆ ರಿಟೈರ್ ಆಗಿದ್ದರಿಂದ ಅವರು ಚಿಂತೆಗೀಡಾಗಿದ್ದರು. ತಂಗಿ ಕೌಸ್ತುಭ ತಾನೇ ಪ್ರೀತಿಸಿದ ಹುಡುಗನನ್ನು ಮದುವೆಯಾಗಿ ಹೊರಟು ಹೋಗಿದ್ದಳು. ಸತ್ಯ ಓದು ಮುಗಿಸಿ ಡೆಲ್ಲಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ತಂದೆ ತಾಯಿಯರನ್ನು ಅಲ್ಲಿಗೆ ಬರುವಂತೆ ಪೀಡಿಸುತ್ತಿದ್ದ. ಆದರೆ ಅವರಿಬ್ಬರಿಗೆ ಅಂಬುಜಳನ್ನು ಒಬ್ಬಳನ್ನೇ ಬಿಟ್ಟು ಹೋಗಲು ಇಷ್ಟವಿಲ್ಲ.

"ಮೊದಲೇ ಒಂಟಿ. ನಾವೂ ಇಲ್ಲಿ ಇರದಿದ್ದರೆ ಒಂಟಿತನ ಹೆಚ್ಚುತ್ತೆ." ಎಂದು ಅವರಿಬ್ಬರೂ ಮಾತನಾಡಿಕೊಳ್ಳುತ್ತಿದ್ದುದನ್ನು ಅಂಬುಜ ಕೇಳಿಸಿಕೊಂಡಿದ್ದಳು. ಅವಳಿಗೂ ಬೇಸರವಾಗಿತ್ತು. ತಾನು ಜೀವಮಾನವೆಲ್ಲಾ ಹೀಗೆ ಒಂಟಿಯಾಗಿಯೇ ಇರಬೇಕೇ? ಅದೂ ಯಾವನೋ ಒಬ್ಬ ಕಳ್ಳ ಮಾಡಿದ ತಪ್ಪಿಗೆ? ಛೇ..... ಎಂದು ಪೇಚಾಡಿಕೊಂಡಳು.

ಹೊಸದಾಗಿ ಕಾಲೇಜಿಗೆ ಪಾರ್ಟ್‌ಟೈಂ ಲೆಕ್ಚರರ್ ಆಗಿ ಕೆಲಸಕ್ಕೆ ಬಂದು ಸೇರಿಕೊಂಡಿದ್ದ ಸುಧೀರ. ಅವನ ಸಹೋದ್ಯೋಗಿಗಳನ್ನೆಲ್ಲಾ ಸಹೋದ್ಯೋಗಿಯೊಬ್ಬರು ಪರಿಚಯ ಮಾಡಿ ಕೊಟ್ಟಾಗ ಅವನು ಅಂಬುಜಳನ್ನೇ ಗಮನಿಸಿದ. ಉದಾಸೀನತೆಯನ್ನೆತ್ತಿ ತೋರುವ ಸರಳವಾದ ಮುಖ ಅವನಲ್ಲಿ ಕುತೂಹಲವನ್ನುಂಟು ಮಾಡಿತ್ತು. ಕೆಲವೇ ದಿನಗಳಲ್ಲಿ ಅವಳ ವಿಷಯಗಳನ್ನು ಅವಳಿಗೆ ತಿಳಿಯದಂತೆ ಸಂಗ್ರಹಸಿದ. ಎಷ್ಟೋ ವರ್ಷಗಳಾದರೂ ಕುಮಾರಿಯಾಗಿಯೇ ಇದ್ದಾಳೆ. ಮದುವೆಯಾಗಿಲ್ಲ ಎಂದು ತಿಳಿದ ದಿನದಿಂದ ಅವಳನ್ನು ತಾನಾಗಿಯೇ ಹೆಚ್ಚು ಹೆಚ್ಚು ಮಾತನಾಡಿಸಿ, ಅವಳ ಸ್ನೇಹವನ್ನು ಗಳಿಸಿದ. ಸ್ನೇಹ ನಿಕಟವಾದಂತೆ ಅವಳನ್ನು ಪ್ರೀತಿಸಲಾರಂಭಿಸದ್ದ. ಒಂದು ದಿನ ತಾನಾಗಿಯೇ ತನ್ನ ಪ್ರೀತಿಯನ್ನು ನಿವೇದಿಸಿಕೊಂಡ.

ನೀವು ನನ್ನನ್ನು ಪ್ರೀತಿಸದೇ ಇರಬಹುದು. ಆದರೆ ನನಗೆ ನಿಮ್ಮನ್ನೇ ಮದುವೆಯಾಗಬೇಕೆಂಬ ಆಸೆ. ನೀವು ಒಪ್ಪಿಕೊಂಡರೆ ನನಗೆ ತುಂಬಾ ಸಂತೋಷ. ಅಂಬುಜ ಅವಕ್ಕಾದಳು. ಅವಳು ಅವನ ಬಗ್ಗೆ ಯಾವ ಭಾವನೆಯನ್ನು ಇಟ್ಟುಕೊಂಡಿರಲಿಲ್ಲ. ಅವನೇ ಅವಳಿಗೆ ಸಮಯವನ್ನು ಕೊಟ್ಟ.

"ನಿಮಗೆ ಎಷ್ಟು ದಿನ ಬೇಕೋ ಅಷ್ಟು ದಿನ ತಗೊಂಡು ಯೋಚಿಸಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ. ನನ್ನ ಅಭ್ಯಂತರವೇನಿಲ್ಲ." ಅಂತಂದ.

ಸಾಕಷ್ಟು ಸಮಯವನ್ನು ತೆಗೆದುಕೊಂಡು ಒಪ್ಪಿಗೆ ನೀಡಲು

ನಿರ್ಧರಿಸಿದಳು. ಆದರೆ, ಮೊದಲು ಅವನೊಡನೆ ಕೆಲವು ವಿಷಯಗಳನ್ನು ತಿಳಿಸಬೇಕೆಂದು ಹೇಳಿದಳು. ಅವನು ಓ.....ಕೆ.... ಅಂದಿದ್ದ.

ಅಂಬುಜ ಚಿತ್ರದುರ್ಗದಲ್ಲಿದ್ದಾಗ ತಮ್ಮ ಮನೆಯಲ್ಲಿ ನಡೆದ ಘಟನೆಯನ್ನು ವಿವರಿಸಿ, ತನಗೆ ತಗುಲಿದ ಅಪವಾದವನ್ನು ತಿಳಿಸಿ, ಏಕೋ ಏನೋ ಮದುವೆ ಎಂದೊಡನೆ ಆ ವಿಷಯ ನೆನಪಿಗೆ ಬರುತ್ತೆ. ಮುಚ್ಚಿಡುವುದು ಬೇಡ ಅಂತನ್ನಿಸುತ್ತೆ. ಆದರೆ ಇಷ್ಟು ವರ್ಷಗಳಲ್ಲಿ ಈ ವಿಷಯವನ್ನು ನಾನಾಗಿಯೇ ತಿಳಿಸಿರುವ ಗಂಡು ಎಂದರೆ ನೀವೊಬ್ಬರೇ.. ನೀವೇ ಮೊದಲು ಬಹುಶಃ, ನೀವೇ ಕೊನೆಯವರು. ಎಂತಂದಳು. ಅವನು ಮುಗುಳ್ನಕ್ಕು "ಥ್ಯಾಂಕ್ಸ್" ಎಂದು ನುಡಿದ. ಅವಳು ಅಭಿಮಾನದಿಂದ ಅವನನ್ನೇ ನೋಡಿದಳು. ನಂತರ ಕೆಲವೇ ದಿನಗಳಲ್ಲಿ ಅವರಿಬ್ಬರೂ ದಂಪತಿಗಳಾದರು.

ಆ ದಿನ ಅವಳು, ಬಲಗಾಲನ್ನಿಟ್ಟು ಅವನ ಮನೆಯನ್ನು ಪ್ರವೇಶಿಸಿದಳು. "ಒಂದು ನಿಮಿಷ, ನೀವು ಇಲ್ಲೇ ಕೂತಿರಿ ಎಂದು ಹೇಳಿ ಅವಳನ್ನು ಕುಳ್ಳಿರಿಸಿ, ಬೀರುವಿನಿಂದ ಒಂದು ಸಣ್ಣ ಪೆಟ್ಟಿಗೆಯನ್ನು ತೆಗೆದು ಅವಳ ಕೈಗಿತ್ತ. ಇದು ನನ್ನ ಉಡುಗೊರೆ ಸ್ವೀಕರಿಸಬೇಕು" ಎಂದ ನಾಟಕೀವಾಗಿ. ಅವಳು ಪ್ರಶ್ನಾರ್ಥಕವಾಗಿ ಅವನನ್ನೇ ನೋಡಿ ಕುತೂಹಲದಿಂದ ಆ ಸಣ್ಣ ಡಬ್ಬಿಯ ಮುಚ್ಚಳವನ್ನು ತೆಗೆದಳು. "ಮುತ್ತಿನ ಓಲೆಗಳು!" ಮತ್ತೆ ಮತ್ತೆ ಅದನ್ನೇ ನೋಡಿದಳು. ಏನೋ ಅನುಮಾನ. ಅವನ ಕಡೆ ನೋಡಿದಾಗ ಅವನ ತಲೆ ತಗ್ಗಿಸಿ ಅವಳ ಕೈ ಹಿಡಿದು ಕ್ಷಮೆ ಕೇಳಿದ.

ನನ್ನನ್ನು ಕ್ಷಮಿಸು ಅಂಬುಜ. ಆ ದಿನ ನಿಮ್ಮ ಮನೆಗೆ ಬಂದ ಕಳ್ಳ ನಾನೇ. ನನ್ನ ಸ್ನೇಹಿತನೊಬ್ಬನಿಗೆ ಹಣದ ಅಗತ್ಯವಿತ್ತು. ಆದ್ದರಿಂದ ನಾವಿಬ್ಬರೂ, ಕೋಟೆಯ ಹತ್ತಿರವಿದ್ದ ನಿಮ್ಮ ಮನೆಗೆ ಸುಲಭವಾಗಿ ನುಗ್ಗಿದೆವು. ನರಳುತ್ತಿದ್ದವಳಿಗೆ ನೀರು ಕುಡಿಸಿದವನು ನಾನೇ.... ಬೀರುವಿನಲ್ಲಿನ ಹಣ ಸಿಕ್ಕಿದ ಮೇಲೆ, ಸರ, ಓಲೆಯನ್ನು ನಿನ್ನ ಬಳಿ ಇಡಲೆಂದು ಬಂದೆ. ಆದರೆ ಯಾರೋ ಮನೆಗೆ ಬಂದ ಸಪ್ಪಳಕ್ಕೆ ಹೆದರಿ, ಹಾಗೇ ಜೇಬಿಗೆ ಇಳಿಬಿಟ್ಟು ಹಿತ್ತಲ ಗೋಡೆ ಹಾರಿ ಓಡಿದೆ. ಹಣಕ್ಕಾಗಿ ನಿನ್ನ ಸರವನ್ನು ಮಾರಬೇಕಾಗಿ ಬಂತು. ಆದರೆ ಈ ಓಲೆಯನ್ನು ನಾನು ನನ್ನ ಬಳಿಯೇ ಇಟ್ಟುಕೊಂಡೆ. ಕೆಲಸಕ್ಕೆ ಸೇರಿಕೊಂಡ ಆ ಸ್ನೇಹಿತ ನನಗೆ ಓದಲು ಸಹಾಯ ಮಾಡಿದ. ಆದರೆ ಈಗ ಅವನು ನಮ್ಮೊಡನೆ ಇಲ್ಲ. ಈಗ ನಾನೂ ಒಂಟಿ. ಒಂಟಿತನದ ಬೇಸರ ಏನೂಂತ ನನಗೆ ಅರ್ಥವಾಗುತ್ತೆ. ನಿಮ್ಮ ಒಂಟಿತನ ನನ್ನನ್ನು

ಆಕರ್ಷಿಸಿತು. ಈಗ ನಾವಿಬ್ಬರೂ ದಂಪತಿಗಳು. ನಮ್ಮಿಬ್ಬರಲ್ಲೂ ಯಾವ ರಹಸ್ಯವಿರಬಾರದು ಅಲ್ವಾ?

ಅಂಬುಜ ದಿಗ್ಮೂಡಳಾಗಿದ್ದಳು. ಸಮ್ಮಿಶ್ರ ಭಾವನೆಗಳಿಂದ ಮೂಕಿಯಂತಾಗಿದ್ದಳು. ಅವನು ಅವಳ ಭುಜವನ್ನು ಒತ್ತಿದ. ನಿನಗೆ ಅಪವಾದ ಬರಲು ಕಾರಣವಾದ ನನ್ನಂತಹವನನ್ನು ಕ್ಷಮಿಸುವುದು ಕಷ್ಟವೇ. ಆದರೆ ಈ ಮುತ್ತಿನ ಓಲೆಯ ಮೇಲೆ ಆಣೆಮಾಡಿ ಹೇಳ್ತೀನಿ. ಈ ಮುತ್ತಿನ ಓಲೆಗಳ ಒಡತಿ ಸಿಗಬಾರದೇ..... ಅವಳ ಕೈಗೆ ಹಿಂತಿರುಗಿಸಿ ಕ್ಷಮೆ ಕೇಳಬೇಕೆಂದು ದಿನಾ ನಾನು ದೇವರಲ್ಲಿ ಬೇಡುತ್ತಿದ್ದೆ. ಅಂತೂ ದೇವರು ನನಗೆ ಸಹಾಯ ಮಾಡಿದ. ಆದರೆ ನಿನ್ನ ಕ್ಷಮೆ ಸಿಗುವವರೆಗೂ, ನಾನು ಸುಖವಾಗಿರಲಾರೆ. ಅಥವಾ ಕ್ಷಮಿಸಲಾಗದಿದ್ದರೆ, ನನಗೆ ಶಿಕ್ಷೆಯನ್ನಾದರೂ ಕೊಡು. ನಾನು ಶಿಕ್ಷೆ ಅನುಭವಿಸಿ ನನ್ನ ಪಾಪವನ್ನು ಕಳೆದುಕೊಳ್ತೀನಿ ಅಂತಂದ.

ದೀರ್ಘವಾಗಿ ಅವನು ಇದಿಷ್ಟು ಮಾತನ್ನಾಡುವವರೆಗೂ ಶಿಲಾಮೂರ್ತಿಯಂತೆ ಕುಳಿತವಳು, ನಿಧಾನವಾಗಿ ಕತ್ತೆತ್ತಿ ಅವನನ್ನೇ ನೋಡಿದಳು.

ಪ್ಲೀಸ್, ನನ್ನನ್ನು ಹಾಗೆ ನೋಡಬೇಡ. ನಾನು ತಪ್ಪು ಮಾಡಿದೀನಿ. ಆದರೆ ಪಶ್ಚಾತ್ತಾಪವನ್ನು ಪಟ್ಟಿದ್ದೇನೆ. ನೀನು ನನಗೆ ಸಿಕ್ಕಿದ್ದು, ಅದರಲ್ಲೂ ನನ್ನ ಪತ್ನಿಯಾಗಿ ಬಂದದ್ದು ನನ್ನ ಭಾಗ್ಯ ಅಂತ ಅಂದುಕೊಳ್ಳುತ್ತೇನೆ. ಎಂದೂ ನಿನ್ನ ಮನಸ್ಸನ್ನ ನೋಯಿಸುವುದಿಲ್ಲ. ನನ್ನ ಕೈಲಾದಷ್ಟು ಸುಖವಾಗಿಟ್ಟು ಕೊಳ್ಳಲು ಪ್ರಯತ್ನಿಸ್ತೀನಿ. ಅಂತ ನುಡಿದ. ಆಗಲೂ ಅವಳು ಏನೂ ನುಡಿಯದಿದ್ದಾಗ ಅವನಿಗೆ ಹಿಂಸೆಯಾಯಿತು.

ಓ....ಕೆ.... ನಿನಗೆ ನನ್ನನ್ನು ಕ್ಷಮಿಸಲು, ಶಿಕ್ಷಿಸಲು ಇಷ್ಟವಿಲ್ಲ ಅಂತಾಯ್ತು. ನಿನ್ನಂತೆ ಮುಂಚೆ ವಿಷಯ ತಿಳಿಸದೇ ನಾನು ಮತ್ತೊಮ್ಮೆ ತಪ್ಪು ಮಾಡಿದೆ. ನಿನಗೆ ನನ್ನ ಜತೆ ಇರಲು ಇಷ್ಟವಿಲ್ಲದಿದ್ದರೆ... ನಾನು ಬಲವಂತ ಮಾಡುವುದಿಲ್ಲ. ನಿನಗೆ ಪೂರ್ಣ ಸ್ವತಂತ್ರ್ಯವಿದೆ, ಎಂದು ಹೇಳಿ ಕಿಟಕಿಯ ಬದಿ ನಿಂತು ಆಚೆ ನೋಡಲಾರಂಭಿಸಿದ.

ಅಂಬುಜಳ ಮನದಲ್ಲಿ ಮಥನ ಪ್ರಾರಂಭವಾಗಿತ್ತು. ನನ್ನ ಜೀವನದ ಖುಷಿಯನ್ನು ಕಿತ್ತುಕೊಂಡವನು ಇವನೇ. ಈಗ ನನಗೆ ಮತ್ತೆ ಖುಷಿಯನ್ನು ಕೊಡುವ ಆಶ್ವಾಸನೆ ನೀಡುತ್ತಿದ್ದಾನೆ. ಇವನ ದೆಸೆಯಿಂದ ನನ್ನ ಬಾಳು ಬರಡಾಗಿತ್ತು. ಈಗ ಇವನಿಂದಲೇ ನನ್ನ ಬಾಳು ಬಂಗಾರವಾಗಬಹುದು.

ಓಲೆ ಕಳುವಾದದಕ್ಕಿಂತ ಹೆಚ್ಚಾಗಿ ಅಪವಾದದಿಂದ ಬಳಲಿ ಹೋಗಿದ್ದೆ. ಪಶ್ಚಾತ್ತಾಪದ ಬೇಗೆಯಲ್ಲಿ ಬೆಂದು ಚೊಕ್ಕ ಚಿನ್ನದಂತೆ ಮಿನುಗುತ್ತಿದ್ದಾನೆ. ಮನುಷ್ಯನಿಗೆ ಇದೇ ಭೂಷಣ. ಅವನು ಅಷ್ಟು ಕೇಳಿಕೊಳ್ಳುತ್ತಿರುವಾಗ ನಾನು ಕ್ಷಮಿಸದಿದ್ದರೆ ಇವನೆದುರಿಗೆ ಸಣ್ಣವಳಾಗಿ ಬಿಡ್ತೀನಿ. ಎಂದುಕೊಂಡು, ತನ್ನ ಕೈಯಲ್ಲಿದ್ದ ಮುತ್ತಿನ ಓಲೆಗಳನ್ನು ತನ್ನ ಕಿವಿಯಲ್ಲಿ ಧರಿಸಿದಳು. ಕಿಟಕಿಯ ಬಳಿ ನಿಂತಿದ್ದ ಅವನ ಬಳಿಗೆ ಹೋಗಿ ಅವನನ್ನು ತನ್ನೆಡೆಗೆ ತಿರುಗಿಸಿಕೊಂಡಳು. ಅವನು ಅವಳನ್ನೇ ನೋಡಿದ. ಮೊದಲಿಗೆ ಗೊತ್ತಾಗದಿದ್ದರೂ, ನಿಧಾನವಾಗಿ ಅವಳು ಮುತಿತನ ಓಲೆಗಳನ್ನು ಧರಿಸಿರುವಳೆಂದು ಗೊತ್ತಾಯಿತು. ಅವಳ ಭುಜಗಳನ್ನು ಹಿಡಿದು, "ಥ್ಯಾಂಕ್‌ಯೂ..... ಅಂಬುಜಾ... ಥ್ಯಾಂಕ್‌ಯೂ ವೆರಿಮಚ್..... ಎಂದ." ಅವನ ಕಣ್ಣಲ್ಲಿ ಅರಳಿದ ಸಂತಸದ ಹೊಳಪಿನ ಮುಂದೆ ಈ ಮುತ್ತಿನ ಓಲೆಗಳ ಹೊಳಪು ಕಡಿಮೆ ಅಂತನ್ನಿಸಿತು. ಅವನ ಎದೆಗೆ ಒರಗಿ ಬಿಕ್ಕಿ ಬಿಕ್ಕಿ ಅತ್ತಳು. ಅವನ ಕೈಗಳು ಅವಳನ್ನು ಬಳಸಿದವು. ಕಳೆದು ಹೋಗಿದ್ದ ಮುತ್ತಿನ ಓಲೆಗಳನ್ನು ಹಿಂತಿರುಗಿಸಿದ್ದ ಆ ದೊಡ್ಡ ವ್ಯಕ್ತಿಯನ್ನು ಧಾರಾಳವಾಗಿ ಕ್ಷಮಿಸಿದ್ದಳು.....

* * *

(ಬಹುಮಾನಿತ ಕಥೆ)

೫. ಅಂತಸ್ತು

ಡಾ॥ ಭುವನಾರವರು, ತಮ್ಮ ಪರಿಚಯಸ್ಥರೊಬ್ಬರ ಮಗಳ ಮದುವೆಯ ಆರತಕ್ಷತೆಗೆ ಹೊರಡಲು ಸಿದ್ಧರಾಗುತ್ತಿದ್ದರು. ಈ ನಡುವೆ ಸ್ವಲ್ಪ ಬೆನ್ನು ನೋವು ಬರುತ್ತಿದ್ದುದರಿಂದ ಕಾರನ್ನು ಡ್ರೈವ್ ಮಾಡುವಾಗ, ತಮ್ಮ ಜತೆಗೆ ಯಾರನ್ನಾದರೂ ಕರೆದುಕೊಂಡು ಹೋಗುತ್ತಿದ್ದರು. ಈಗ ಕೆಳಗಿನ ಮನೆಯವರನ್ನು ಕರೆದುಕೊಂಡು ಹೋಗುವಂತಿಲ್ಲ. ಅವರಿಗೆ ಆಮಂತ್ರಣ ಬಂದಿಲ್ಲ. ಕೆಲಸದವಳನ್ನು ಕರೆದುಕೊಂಡು ಹೋಗಲು ಇಷ್ಟವಿಲ್ಲದಿದ್ದರೂ, ಬೇರೆ ದಾರಿಯಿರಲಿಲ್ಲ.

"ಮಹಾದೇವಿ, ಚೆನ್ನಾಗಿರೋ ಸೀರೇನ ಉಟ್ಟುಕೊಂಡು ಸಿದ್ಧವಾಗು. ನನ್ನ ಜತೆ ಬರೂವಂತೆ."

"ನಾನು ಛತ್ರದೊಳಕ್ಕೆ ಬರೂದಿಲ್ಲ ಅಮ್ಮಾವ್ರೇ...." ಎಂದಾಗ, "ಬೇಡ: ನೀನು ಕಾರಿನಲ್ಲೇ ಕೂತಿರು. ನಾನು ಆದಷ್ಟು ಬೇಗ ಬಂದು ಬಿಡ್ತೀನಿ," ಅಂತ ಹೇಳಿ ಒಪ್ಪಿಸಿದ್ದರು.

ಡಾ॥ ಭುವನಾ ಒಂದು ತರಹ ಪ್ರತಿಷ್ಠೆಯ ಹೆಂಗಸು. ಜತೆಗೆ ಸ್ವಾರ್ಥವೂ ಇತ್ತು. ಆ ಶ್ರೀಮಂತರ ಮದುವೆಗೆ ತಾನು ಕಾರಿನಲ್ಲಿ ಟ್ರಿಮ್ಮಾಗಿ ಹೋಗಬೇಕೆಂಬ ಆಸೆ. ಆದರೆ ಒಬ್ಬಳೇ ಡ್ರೈವ್ ಮಾಡಲು ದಿಗಿಲು.

ಮಿಣ ಮಿಣನೆ ಹೊಳೆಯುವ ಸೀರೆಯನ್ನುಟ್ಟು, ಚೌರಿ ಹಾಕಿ, ಜಡೆ ಹೆಣೆದು, ಮಲ್ಲಿಗೆ ಹೂವನ್ನು ಮುಡಿದು ಸಿದ್ಧಳಾಗಿ ಬಂದುನಿಂತ ಮಹಾದೇವಿಯನ್ನೇ ನೋಡಿದರು. ಅವಳ ಅಲಂಕಾರದ ಮುಂದೆ ತನ್ನ ಬಿಳಿಯ ರೇಶಿಮೆ ಸೀರೆಗೆ ಯಾವ ಮೆರಗೂ ಇಲ್ಲವೇನೋ ಅಂತನ್ನಿಸಿತ್ತು. ಅದನ್ನು ತೋರಗೊಡದೇ ನಡೆದರು.

ಮೊದಲೇ ಶ್ರೀಮಂತರ ಮನೆಯ ವೈಭವದ ಮದುವೆ. ಊರಿನಲ್ಲಿರುವ ಕಾರೆಲ್ಲಾ ಛತ್ರಕ್ಕೆ ಬಂದಿವೆಯೋ ಎಂಬಂತೆ, ರಸ್ತೆಯಲ್ಲಿ ಸಾಲಾಗಿ, ಒಂದರ ಹಿಂದೆ ಒಂದರಂತೆ ಕಾರುಗಳನ್ನು ನಿಲ್ಲಿಸಲಾಗಿತ್ತು. ಇವರ ಸರದಿ, ಪಕ್ಕದ ರಸ್ತೆಗೆ ತಿರುಗುವಲ್ಲಿದ್ದರೂ, ಒಂದು ವೇಳೆ ಬೇಗ ಬಂದರೆ, ಕಾರನ್ನು ರಸ್ತೆಗೆ ತರುವುದು ಕಷ್ಟವಾಗುತ್ತೆ ಎಂಬ ದೂರಾಲೋಚನೆಯಿಂದ ಕಾರನ್ನು ಛತ್ರದಿಂದ ಸ್ವಲ್ಪ ದೂರದಲ್ಲಿದ್ದ ಒಂದು ಮರದ ಕೆಳಗೆ ನಿಲ್ಲಿಸಿದರು. ಅಲ್ಲಿ ರಸ್ತೆ ಬೆಳಕು

ಸಹ ಇರಲಿಲ್ಲ. ಆಕೆ ಮಹಾದೇವಿಯನ್ನು ಕೆಳಗಿಳಿಸಿ, ನೀನು ಇಲ್ಲೇ ಎಲ್ಲಾದರೂ ಕೂತಿರು. ಎಂದು ಹೇಳಿ ಕಾರಿನ ಎಲ್ಲಾ ಬಾಗಿಲುಗಳನ್ನು ಭದ್ರ ಪಡಿಸಿ ಹೊರಟುಹೋದರು.

ಕಾರಿಗೆ ಒರಗಿ ನಿಂತಿದ್ದ ಮಹಾದೇವಿ ತನ್ನ ಸಮೀಪಕ್ಕೆ ಬಂದ ವ್ಯಕ್ತಿಯನ್ನು ಗುರುತಿಸಿದಳು.

"ಓ.... ಈರಣ್ಣ.... ಅದೇನು ನೀನಿಲ್ಲಿ?" ಕೇಳಿದಳು.

"ಅದೇನವ್ವಿ? ಇಷ್ಟು ಚೆಂದಾಗಿ ಡ್ರೆಸ್ ಮಾಡ್ಕೊಂಡು ನೀನೆಲ್ಲಿಗೆ ಹೊಂಟಿದೀ....." ಅಪಸು ಕೇಳಿದ.

"ನಮ್ಮಮ್ಮಾವರ ಜತೆ ಬಂದಿದ್ದೆ. ಅವರು ಮದುವೆ ಮನೆಯ ಒಳಕ್ಕೊಗವ್ರೇ....."

"ಇದೇ ನೋಡು, ದೊಡ್ಡವರ ದುಷ್ಟಬುದ್ದಿ. ನಿನ್ನ ಜತೇಲಿ ಕರೆದೊಯ್ಯಬಾರದಾಗಿತ್ತಾ. ಇಲ್ಲಿ ಬೀದೀಲಿ ಪರದೇಸಿ ಹಂಗ್ಯಾಕೆ ನಿಲ್ಲಿಸವ್ರೇ...."

"ಇರ್ಲಿ ಬಿಡು ಈರಣ್ಣ... ನಮ್ಮ ಹಣೇ ಬರಹವೇ ಇಷ್ಟೆಲ್ವಾ.... ಅದು ಬಿಡು. ನಿನ್ನ ಹೆಂಡತಿ ಮಕ್ಳು ಹೆಂಗವ್ರೇ...."

"ನಮ್ಮ ಹೆಂಡ್ರು ತೀರಿ ಹೋಗಿ ತಿಂಗಳಾತು.... ನಿಂಗೊತ್ತಿಲ್ವಾ!"

"ಇಲ್ಲ. ಮತ್ತೆ ಲಗ್ನ ಆದೀಯೋ ಹ್ಯಾಂಗೆ?"

"ಆದೇನು ನೀನೊಪ್ಪಿದ್ರೆ...." ಎನ್ನುತ್ತಾ ಅವಳ ಕೈ ಹಿಡಿದ. ಅವಳಿಗೆ ಖುಷಿಯಾಯ್ತು. ಆದರೂ ಹೆದರಿ,

"ಏಯ್ ಬಿಡ್ ಕೈನ ಯಾರಾದ್ರೂ ನೋಡಾರು? ನಾನ್ಯಾಕೆ ನಿನ್ನ ಲಗ್ನ ಆಗಲಿ?"

"ಹಂಗನ್ನ ಬೇಡ ಮಾದೇವಿ. ನಿನ್ನ ಗಂಡ ನಿನಗೆ ಕೈ ಕೊಟ್ಟ. ನೀನು ಆ ಶಿವನಂಜನ್ನ ಜತೆ ತಿರುಗ್ತೀಯ ಅಂತ ಜನಾ ಆಡ್ಕೋತಾರೆ.. ನಿಜಾನಾ?"

ಮಾದೇವಿ ಆ ಮಾತಿಗೆ ಉತ್ತರ ಕೊಡಲಿಲ್ಲ. ವೀರಣ್ಣ ಅವಳ ಹಳ್ಳಿಯವನೇ. ಮದುವೆಯಾಗಿ ಅವಳ ಗಂಡ ಹಾಲಪ್ಪ ಇದ್ದಕ್ಕಿದ್ದಂತೆ ಬಿಟ್ಟು ಎಲ್ಲೋ ಹೊರಟು ಹೋಗಿದ್ದ. ಆಗ ಮಾದೇವಿಗೆ ಶಿವನಂಜನ ಸ್ನೇಹವಾಗಿತ್ತು. ಶಿವನಂಜನಿಗೆ ಮದುವೆಯಾಗಿ ಮಕ್ಕಳಿದ್ದರೂ, ಇವಳ ಮನೆಗೆ ಆಗಾಗ್ಗೆ ಬರುತ್ತಿದ್ದ.

"ಆ ಮಾತ್ಯಾಕೆ ಈಗ ಬಿಡು.... ಕಟ್ಕೊಂಡ ಗಂಡ ಕೈ ಕೊಟ್ಟ. ಈ ಮನೆ ಹಾಳ ನನ್ನ ಜೀವ ತೆಗೀತಾನ್ನೆ...."

"ಏನಂತೆ ಇವನ ಗುನುಗು?"

"ನಾನು ದುಡ್ಡಿದ್ದರಲ್ಲಿ ಅರ್ಧ ಎಲ್ಲಾ ಕಿತ್ಕೋತಾನೆ..... ನನ್ನ ಹೆಸರ್ನಲ್ಲಿ ಬ್ಯಾಂಕಿನಿಂದ ಸಾಲ ತೆಗೆಸ್ಕೊಟ್ಟಿವ್ನಿ. ಅಷ್ಟಾದ್ರೂ ಹಿಂಸೆ ಮಾಡ್ತಾನೆ. ಹೊಡೀತಾನೆ, ಬಡೀತಾನೆ."

"ಇದೊಳ್ಳೆ ಚೆನ್ನಾಯ್ತಲ್ಲ. ಅವನೇನು ನಿನ್ನ ಗಂಡ್ನ ನಿನ್ನ ಹೊಡಿಯೋಕೆ. ಪೋಲಿಸ್ನೋರಿಗೆ ಹೇಳಿ ಅವನ ಹಿಕಾಳೆ ಬಿಡಿಸು."

"ಅದೆಲ್ಲ ಆಯ್ತದೆ? ಈ ನಮ್ಮಮ್ಮ ದೇವರಂಗೆ ಶುದ್ಧವಾಗೈತೆ. ಶಿವನಂಜ ಈ ನಮ್ಮಮ್ಮಂಗೆ ಗೊತ್ತಿಲ್ದಂಗೆ ಬತ್ತಾನೆ, ಹೊಯ್ತಾನೆ. ಈ ಡಾಕ್ಟ್ರಮ್ಮಂಗೆ ಗೊತ್ತಾದ್ರೆ ನಂಗೆ ಕೆಲಸವೂ ಇಲ್ಲ ಮನೆಯೂ ಇಲ್ಲ."

"ಅದ್ಕೆ ನಾ ಹೇಳೂದು. ಎಲ್ಲಾ ಬಿಟ್ಟು ಅತ್ಲಾಗೆ ನನ್ನ ಜತೆ ನಡಿ."

ಪಕ್ಕದಿಂದ ಬಂದ ಪೋಲಿಸನೊಬ್ಬ ತಟ್ಟನೆ ವೀರಣ್ಣನ ಕೈ ಹಿಡಿದ.

"ಏಯ್... ಯಾರ್ಲ್ಲಾ ನೀನು? ಇಲ್ಲೇನು ಮಾಡ್ತಿದೀ....?"

"ಓ ಬಿಡಣ್ಣ.... ನಾವು ಹಂಗೇ ನಿಂತು ಮಾತಾಡ್ತೀದ್ವಿ......"

"ಕಾರ್ನ ಹತ್ರ ನಿಂತು ಮಾತಾಡ್ತೀರಾ! ಏಯ್ ಯಾರಮ್ಮಾ ನೀನು...."

"ನಾನು... ನಾನು ಮಾದೇವಿ."

"ನಿನ್ನ ಹೆಸರ್ನ ಯಾರು ಕೇಳಿದ್ರು? ಇಲ್ಲೇನು ಮಾಡ್ತಿದೀ ಅಂದೆ...."

"ಈ ಕಾರಿನ ಓನರ್, ಡಾಕ್ಟ್ರಮ್ಮ ಮದುವೆ ಮನೆಗೆ ಹೋಗವ್ರೆ.... ನಾನು ಅವರ ಜತೆಗೆ ಬಂದೀ."

"ಏಯ್ ಸುಳ್ಳು ಬೊಗಳ್ತಿಯೇನೇ.... ಮಾಡೋದು ಹಲ್ಕಾ ಕೆಲಸ."

"ಏನಪ್ಪಾ..... ಹಿಂಗೆಲ್ಲಾ ಅಂತೀಯ... ಇನ್ನೇನು ಆ ಡಾಕ್ಟ್ರಮ್ಮ ಬರ್ತಾರೆ. ಅವರ್ನೇ ಕೇಳೂವಂತೆ."

"ಏಯ್ ಮಚ್ಚು ಬಾಯಿ....," ನಂಗೆಲ್ಲಾ ಗೊತ್ತು ಎನ್ನುವಂತೆ ಅವಳನ್ನೇ ಮೇಲಿನಿಂದ ಕೆಳಗೆ ನೋಡಿದ. ಅಲಂಕರಿಸಿಕೊಂಡು ಬಂದಿದ್ದ ಮಹಾದೇವಿ ಅವನ ಕಣ್ಣಿಗೆ ಅನುಪಮ ಸುಂದರಿಯಂತೆ ಕಂಡಳು.

"ಏಯ್ ನಡಿಯೇ ಸ್ಟೇಷನ್ನಿಗೆ.... ನೀನೇನು ಅಂತ ನನಗೆ ಚೆನ್ನಾಗಿ ಗೊತ್ತು," ಎಂದು ಅವಳನ್ನು ಮುಂದಕ್ಕೆ ತಳ್ಳಿದ.

"ಏ ವೀರಣ್ಣ ನೀನು ವಸಿ ಹೇಳಪ್ಪಾ..." ಎಂದು ಮಹಾದೇವಿ ಕೇಳಿದಾಗ, ಆ ಪೋಲಿಸ್ನೋನು ಅವನಿಗೆ ಮಾತಾಡಲೇ ಬಿಡಲಿಲ್ಲ.

"ನೀನೆಂಥೋನು ಅಂತ ನಂಗೂ ಗೊತ್ತು ಕಣ್ಲಾ... ಒಂದು ತಿಂಗಳು ವಳೀಕೆ ತಳ್ಳಿದ್ರೆ ಉಸ್ರು ಆಡಗಿ ಅಂಗೇ ಹೋಗ್ತದೆ."

"ನಾನೇನ್ಮಾಡ್ದೆ....ಇಲ್ಲಿ ಈ ವಮ್ಮನ ಹತ್ತಿರ ಮಾತ್ನಾಡೋದೇ ತಪ್ಪಾ."

"ನಂಗೊತ್ತ್ರೋ.... ನೀವಿಬ್ರೂ ಸೇರಿ, ಕಾರಿನ ಕಿಟಕಿ ತೆಗೆದು ಒಳಗಿರೋ ಸಾಮಾನುಗಳನ್ನು ಕಳ್ಳತನ ಮಾಡೋರು....," ನಡೀರಿ ಸ್ಟೇಷನ್‌ಗೆ ಇಬ್ಬರೂ ಎನ್ನುತ್ತಾ ಮತ್ತೆ ಯಾವ ಮಾತಿಗೂ ಅವಕಾಶ ಕೊಡದೇ ಅವರಿಬ್ಬರನ್ನು ಸಮೀಪದ ಪೋಲಿಸ್ ಸ್ಟೇಷನ್‌ಗೆ ಎಳೆದೊಯ್ದು ಲಾಕಪ್‌ಗೆ ಹಾಕಿದ.

ಊಟ ಮುಗಿಸಿ, ಬೀಡಾ ಜಗಿಯುತ್ತಾ ಫಲ ತಾಂಬೂಲಗಳೊಂದಿಗೆ ಬುಡು ಬುಡು ಬಂದ ಡಾ|| ಭುವನಾ ಕಾರಿನ ಸಮೀಪ ಮಹಾದೇವಿಯನ್ನು ಕಾಣದೇ ಗೊಂದಲಕ್ಕೊಳಗಾದಳು. ಅವಳ ಹೆಸರು ಹಿಡದು ಕೂಗಲು ಹೀನಾಯ. ತನ್ನ ಮಾತನ್ನು ಮೀರಿ ಅವಳು ಮದುವೆ ಛತ್ರದೊಳಕ್ಕೆ ಊಟದ ಆಸೆಗೆ ಬಂದಿರಬಹುದೇನೋ ಅಂತನ್ನಿಸಿದಾಗ ಸಿಟ್ಟು ಬಂದಿತ್ತು.

"ತಲೆ ಹರಟೆ....," ಹೇಳಿದಷ್ಟು ಕೇಳೋ ಜನ ಅಲ್ಲ ಅಂತ ಬೈದುಕೊಂಡು, ಕಾರಿನ ಬಾಗಿಲನ್ನು ತೆಗೆದು ಕುಳಿತು, ಮತ್ತೊಮ್ಮೆ ಸುತ್ತಲೂ ನೋಡಿ, ಅವಳು ಕಾಣದಾದಾಗ, ತನ್ನ ಪಾಡಿಗೆ ತಾನು ಮನೆಗೆ ಹೊರಟು ಹೋಗಾಯ್ತು.

ಮಾರನೇ ದಿನ ಸುಮಾರು ಹನ್ನೊಂದು ಗಂಟೆಯ ಸಮಯದಲ್ಲಿ ಪೋಲಿಸ್ ಸ್ಟೇಷನ್‌ನಿಂದ ಫೋನ್ ಬಂದಾಗ, ವಿಧಿ ಇಲ್ಲದೇ ಪೋಲಿಸ್ ಸ್ಟೇಷನ್‌ಗೆ ಹೋಗಬೇಕಾಯ್ತು. ಇನ್‌ಸ್ಪೆಕ್ಟರ್ ಆಕೆಯ ಅತಿ ವಿನಯದ ಮಾತಿಗೆ ಪ್ರಭಾವಿತನಾಗಿದ್ದ.

"ಮೇಡಂ..... ನೋಡಿ ಈ ಹೆಂಗಸು ನಿಮ್ಮ ಮನೆ ಕೆಲಸದವಳು ಅಂತ ಹೇಳ್ತಾಳೆ ನಿಜಾನಾ?" ಭುವನಾ ಮಹಾದೇವಿಯನ್ನೇ ನೋಡಿದಳು ಮುದುರಿನಿಂತಿದ್ದ ಅವಳನ್ನು ನೋಡಿ ಸಿಟ್ಟು ಮತ್ತು ನೆತ್ತಿಗೇರಿತ್ತು.

"ಇವಳು ಏನು ತಪ್ಪು ಮಾಡಿದ್ದಾಳೆ?" ತಾನೇ ಪ್ರಶ್ನಿಸಿದಳು.

"ಯಾವುದೋ ಒಂದು ಕಾರಿನ ಬಳಿ, ಇವಳೂ, ಇವಳ ಗೆಳೆಯ ಇಬ್ಬರೂ ನಿಂತು, ಕಾರಿನ ಬಾಗಿಲನ್ನು ತೆಗೆಯುವ ಪ್ರಯತ್ನ ಮಾಡುತ್ತಿದ್ದರು. ನಾನು ನೋಡಿ ಇಬ್ಬರನ್ನು ಎಳೆದುಕೊಂಡು ಬಂದೆ."

ಮಹಾದೇವಿ ಏನನ್ನು ಆಡದಿದ್ದಾಗ ಭುವನಾ ಸುಮ್ಮನಾದಳು.

"ನಿಮ್ಮ ಮನೆ ಫೋನ್ ನಂಬರನ್ನು ಕೊಟ್ಟವಳು ಇವಳೇ.... ನೀವು ಈಗ ಜಾಮೀನು ಕೊಟ್ಟರೆ ನಾನು ಇಬ್ಬರನ್ನು ಬಿಡುತ್ತೇನೆ. ಇಲ್ಲದಿದ್ದರೆ

ಇಬ್ಬರನ್ನು ಕಳ್ಳತನದ ಆರೋಪದ ಮೇಲೆ ಜೈಲಿಗೆ ಹಾಕಿಸ್ತೇನೆ.”

“ಅವ್ವಾ... ನಾನು ಏನೂ ಕಳ್ಳತನ ಮಾಡಿಲ್ಲ. ವೀರಣ್ಣನ ಜತೆ ನಿಂತಿದ್ದು ತಪ್ಪಾ.... ನೀವೇ ಬೇಗ ಹಾಕ್ಕೊಂಡು ಹೋಗಿದ್ರಲ್ಲಾ ಹಾಗಂತ ಹೇಳಿ ಅಮ್ಮಾವ್ರೇ.....”

“ಆ ವೀರಣ್ಣ ಯಾರು? ಅವನೇಕೆ ನಿನ್ನ ಜತೆಗೆ ಬಂದು ನಿಂತಿದ್ದ? ನೀನು ಅಲ್ಲಿಗೆ ಬಂದ ವಿಷಯ ಅವನಿಗೆ ಹೇಳಿದವರ್ಯಾರು? ನೀನೇ ಇರಬೇಕು.”

“ಇಲ್ಲ ಅಮ್ಮಾವ್ರೇ... ನಾನು ಅಂಥಾ ಕೆಲಸ ಮಾಡ್ತಿನಾ? ಮೊದಲು ನನ್ನನ್ನು ಇಲ್ಲಿಂದ ಹೊರಗೆ ಕರೆದುಕೊಂಡು ಹೋಗಿ ಅಮ್ಮಾವ್ರೆ.... ನಾನಿರಲಾರೆ......”

ಅಷ್ಟರಲ್ಲಿ ಆ ವೀರಣ್ಣನನ್ನು ಹೊರಗೆ ಕರೆತಂದಿದ್ದರು.

“ಇವನೇ ನೋಡಿ ಆ ಲೋಫರ್... ಇವಳ ಜತೆ ನಿಂತಿದ್ದೋನು.”

“ನಾನಲ್ಲ ಲೋಫರ್ ನೀನು. ಸುಮ್ಮನೇ ಮಾತಾಡ್ತಾ ನಿಂತವ್ರನ್ನ ಎಳಕೊಂಡು ಬಂದು, ರಾತ್ರಿನಾಗೆ ನೀನು ಇವಳ್ನ ಕೆಡಿಸ್ದೆ ಎನ್ನೋ ವಿಷಯ ನನಗೇನು ತಿಳೀದಾ..... ಅಮ್ಮಾವ್ರೇ ಮಾದೇವೀದು ಏನೂ ತಪ್ಪಿಲ್ಲ. ಎಲ್ಲಾ ತಪ್ಪು ಇವನ್ದೆ!”

“ಏನಂದೆ ಲೋಫರ್ ನನ್ ಮಗನೇ... ಒಳಗೆಳೆಕ್ಕೊಂಡು ಹೋಗಿ ಚೆನ್ನಾಗಿ ತದಕ್ರೋ....”, ತನ್ನ ಕೆಳಗಿನವರಿಗೆ ಅಜ್ಞೆ ಮಾಡಿದ ಆ ಅಧಿಕಾರಿ.

ಭುವನಾಳಿಗೆ ಎಲ್ಲಾ ಕೇಳಿ ಅಸಹ್ಯವಾಯಿತು. ಈ ಮಹಾದೇವಿ ಇನ್ನು ಪ್ರಾಯದಲ್ಲಿರುವವಳು. ಅಲಂಕರಿಸಿಕೊಂಡು ಹಾಗೆ ನಿಂತಿದ್ದರೆ, ವೀರಣ್ಣನೂ ನೋಡ್ತಾನೆ. ಪೋಲಿಸ್ ಇನ್‌ಸ್ಪೆಕ್ಟರನೂ ನೋಡ್ತಾನೆ. ಬಹುಶಃ ನನ್ನದೇ ತಪ್ಪು. ನಾನು ಅವಳು ಒಳಗೆ ಕೂತಿರುವಂತೆ ಬಿಡಬೇಕಾಗಿತ್ತು. ಆದರೆ ಈ ಇನ್‌ಸ್ಪೆಕ್ಟರ್ ಹೇಳುವ ಹಾಗೆ, ಈ ವೀರಣ್ಣನ ಜತೆ ಸೇರಿ, ಕಾರನ್ನೇ ಕದ್ದು ಓಡಿ ಹೋಗಿದ್ದರೇ.... ಈಗ ಏನು ಹೇಳಬೇಕೆಂದು ತಿಳಿಯದಾಯಿತು.

ಮಹಾದೇವಿ ತನ್ನ ಮನೆ ಕೆಲಸದವಳು ಅಂತ ಒಪ್ಪಿಕೊಂಡರೆ ಅವಳನ್ನು ಬಿಡಿಸಿಕೊಂಡು ತನ್ನ ಮನೆಗೆ ಕರೆದುಕೊಂಡು ಹೋಗಬೇಕಾಗುತ್ತದೆ. ಆ ನಿರ್ಧಾರ ಏಕೋ ಸರಿ ಎನಿಸಲಿಲ್ಲ. ರಾತ್ರಿಯೆಲ್ಲಾ ಈ ಪೋಲಿಸ್ ಕಸ್ಟಡಿಯಲ್ಲಿ ಅವಳು ಹೇಗೆ ಅತ್ಯಾಚಾರಕ್ಕೆ ಒಳಗಾಗಿರಬಹುದು ಎನ್ನುವುದನ್ನು ಊಹಿಸಿಕೊಳ್ಳಲೂ ಅಸಹ್ಯವಾಯಿತು. ಇವಳಿಗೋಸ್ಕರ ತಾನೇಕೆ ಒದ್ದಾಡಬೇಕು

ಎಂಬ ಧೋರಣೆ ತಲೆದೋರಿತು.

"ಇವಳು ನಮ್ಮ ಮನೆಯಲ್ಲಿ ಕೆಲಸದಲ್ಲಿ ಇದ್ದುದು ನಿಜ. ಆದರೆ ಈಗ ತೆಗೆದು ಹಾಕಿದ್ದೇನೆ. ಇವಳು ಇಂಥವಳು ಅಂತ ನನಗೂ ಗೊತ್ತಿರಲಿಲ್ಲ. ಇವರಿಬ್ಬರನ್ನು ನೀವು ಹಿಡಿದಿದ್ದೀರಿ. ಅವರನ್ನು ಬಿಟ್ಟು ಬಿಡ್ತೀರೊ, ಶಿಕ್ಷೆ ಕೊಡ್ತೀರೋ ಅದನ್ನು ನೀವೇ ನಿರ್ಧರಿಸಿ. ನನ್ನಿಂದ ಯಾವ ತಕರಾರೂ ಇಲ್ಲ." ಎಂದು ಹೇಳಿ ತನ್ನ ಪಾಡಿಗೆ ತಾನು ಹೊರಟಳು. ಮಹಾದೇವಿಯ ಕೂಗು ಅವಳಿಗೆ ಕೇಳಸಲಿಲ್ಲ.

"ನನ್ನನ್ನು ಇಲ್ಲಿ ಬಿಟ್ಟು ಹೋಗಬ್ಯಾಡಿ ಅಮ್ಮವ್ರೇ... ವೀರಣ್ಣನ ಮಕ್ಕಳು ಅನಾಥರಾಗಿ ಹೋಗ್ತಾರೆ. ಅವನನ್ನಾದ್ರೂ ಬಿಡಿಸಿ ಅಮ್ಮಾ..." ಮಹಾದೇವಿ ಅತ್ತಳು. ವೀರಣ್ಣ ತಲೆ ತಲೆ ಚೆಚ್ಚಿಕೊಂಡ.

ಒಂದು ವಾರದ ನಂತರ ಮಹಾದೇವಿಗೆ, ವೀರಣ್ಣನಿಗೆ ಬಿಡುಗಡೆ ಯಾಯಿತು. ವೀರಣ್ಣ ಹೊಡೆತ ತಿಂದೂ ತಿಂದು ಬಳಲಿ ಹೋಗಿದ್ದರೆ, ಮಹಾದೇವಿ ಪೋಲಿಸಿನವರ ಅತ್ಯಾಚಾರಕ್ಕೆ ಮತ್ತೆ ಮತ್ತೆ ಒಳಗಾಗಿ ಮೆತ್ತಗಾಗಿದ್ದಳು.

ಇಬ್ಬರೂ ಹೋಗಿ ಸರ್ಕಾರಿ ಆಸ್ಪತ್ರೆಗೆ ಸೇರಿ, ಔಷಧೋಪಚಾರ ಗಳನ್ನು ನಡೆಸಿಕೊಂಡು, ಹುಶಾರಾಗಿ ಹೊರ ಬಂದರು.

ಮಹಾದೇವಿ ತನ್ನ ಮನೆಯ ಗಂಟು ಮೂಟೆಗಳನ್ನು ಆಟೋದಲ್ಲಿ ವೀರಣ್ಣನ ಮನೆಗೆ ಸಾಗಿಸಿದಳು. ಹೊರಡುವ ಮುನ್ನ ಡಾ|| ಭುವನಾಳ ಮುಂದೆ ನಿಂತು ಕೈ ಜೋಡಿಸಿ, "ನಿಮ್ಮಂಥೋರ ಮನೆ ಎಂಜಲು ಪಾತ್ರೆ ತಿಕ್ಕಿದ್ದಕ್ಕೆ ನಂಗೂ ಬುದ್ಧಿ ಬಂತ್ರವಾ... ನೀವು ಓದ್ದೋರು, ಬರೆದೋರು, ವಿದ್ಯೆ ಕಲಿತೋರು.... ಆದರೆ ನೀವು ನಂಗೆ ಹೀಗೆ ಮೋಸ ಮಾಡ್ತೀರಿ ಅಂತ ನಾನು ಅಂದ್ಕೊಂಡಿರ್ಲಿಲ್ಲ. ದೇವ್ರು ದೊಡ್ಡ ಮನುಸ್ರುಗೆ ದೊಡ್ಡ ಬುದ್ಧಿ ಕೊಡಲಿಲ್ಲವಲ್ಲ ಅಂತ."

ಭುವನಾ ಅವಳ ಕೈಗೆ ಸಂಬಳದ ದುಡ್ಡನ್ನು ಕೊಡಲು ಹೋದಳು.

"ನೀವೇ ಮಡಿಕ್ಕಳಿ ನಿಮ್ಮ ದುಡ್ಡನ್ನು. ನಿಮ್ಮ ದುಡ್ನಿಂದ ನನ್ನ ಹೋದ ಮಾನ ಹಿಂದಕ್ಕೆ ಬರತೈತಾ?" ಎನ್ನುತ್ತಾ ಹಿಂತಿರುಗಿ ನೋಡದೇ ಕಣ್ಣೀರನ್ನು ಒರೆಸುತ್ತಾ ಹೊರಟೇ ಹೋದಳು. ಭುವನಾ ಪೆಚ್ಚಾಗಿದ್ದಳು. ತಾನು ಮಾಡಿದ್ದು ತಪ್ಪು ತಪ್ಪು ಎಂದು ವಿವೇಕ ಒತ್ತಿ ಒತ್ತಿ ಹೇಳುತ್ತಿದ್ದರೂ, ಅದನ್ನು ಪ್ರಕಟಗೊಳಿಸುವ ನಿಚ್ಚಳ ಹೃದಯ ಇರಲಿಲ್ಲ.

* * *

೬. "ಉಪಾಯವೋ..... ಅಪಾಯವೋ"

ರಂಜನಿ ಕಂಪೆನಿಯೊಂದರಲ್ಲಿ ಕ್ಲರ್ಕ್ ಆಗಿದ್ದಳು. ಮನೆಯಲ್ಲಿ ನಿರುದ್ಯೋಗಿ ಗಂಡ, ವಯಸ್ಸಾದ ಅತ್ತೆ, ಸ್ಕೂಲಿಗೆ ಪೋಗುವ ಚಿಕ್ಕ ಹುಡುಗ, ಎಲ್ಲರನ್ನೂ ಸಂಭಾಳಿಸಿ ಕೆಲಸಕ್ಕೆ ಹೊರಡುವುದು ತಡವಾಗುತ್ತಿತ್ತು. ಇದು ದಿನ ನಿತ್ಯದ ಪಾಡು. ಹಣ ಉಳಿಸಿ, ಒಂದು ಲೂನಾ ತೆಗೆದುಕೊಳ್ಳುವುದು ಕನಸಾಗಿತ್ತು. ಸಿಡಿ ಸಿಡಿ ಗುಟ್ಟುವ ಗಂಡ, ವಟವಟ ಗುಟ್ಟುವ ಅತ್ತೆ, ಕಿರಿ ಕಿರಿಮಾಡುವ ಮಗನಿಂದ ದೂರ ಎಲ್ಲಾದರೂ ಹೋದರೆ ಸಾಕು ಎಂದೆನಿಸುತ್ತಿತ್ತು.

ಆಫೀಸಿಗೆ ಬಂದರೆ, ದಿನಾ ತಡವಾಗಿ ಬರುತ್ತಾಳೆಂದು, ಮೇಲಧಿಕಾರಿಯ ಬೈಗುಳ, ಸಹೋದ್ಯೋಗಿಗಳ ಕುಹಕ ನುಡಿ, ಅದೂ ಅಸಹನೀಯವಾಗಿತ್ತು. ರಜಾಹಾಕಿ ನಾಲ್ಕು ದಿನ ಎಲ್ಲಿಯಾದರೂ ಹೋಗುವ ಆಸೆಯೂ ಪೂರೈಸುವಂತಿರಲಿಲ್ಲ. ರಜ ಎಲ್ಲಾ ಮುಗಿದು ಹೋಗಿತ್ತು.

ಇಂತಹ ಸಮಯದಲ್ಲಿ ಅವಳಿಗೆ ಖುಷಿ ತಂದ ಸಂಗತಿ. ಅವಳ ವರ್ಗಾವಣೆ. ಹೊಸದಾಗಿ ತೆರೆದ ಕಂಪೆನಿಯ ಶಾಖೆಗೆ ಅವಳನ್ನು ವರ್ಗ ಮಾಡಿದ್ದರು. ಮನೆಗೆ ಸ್ವಲ್ಪ ಸಮೀಪದಲ್ಲಿದ್ದುದು ನೆಮ್ಮದಿಯನ್ನುಂಟು ಮಾಡಿತ್ತು. ಅವಳು ರಿಪೋರ್ಟ್‌ಮಾಡಿಕೊಂಡ ದಿನ ಅವಳಿಗೆ ನೆರವಾದವಳು ಕುಮುದಾ. ತಾನಾಗಿಯೇ ತನ್ನ ಪರಿಚಯ ಮಾಡಿಕೊಂಡು ನಂತರ, ಉಳಿದ ಸಹೋದ್ಯೋಗಿಗಳನ್ನು ಪರಿಚಯ ಮಾಡಿಕೊಟ್ಟಳು.

ಮ್ಯಾನೇಜರ್ ಕೊಟಡಿಗೆ ಹೋದಾಗ, ಅವನು ವಿಚಿತ್ರವಾಗಿ ಅವಳನ್ನೇ ಮೇಲಿಂದ ಕೆಳಗಿನವರೆಗೆ ನೋಡಿದ್ದ. ರಂಜಿನಿಯ ಕೈಕಾಲು ತಣ್ಣಗಾಗಿತ್ತು. ಜತೆಗೆ ಕುಮುದಳೂ ಇದ್ದುದ್ದರಿಂದ ಸಾವರಿಸಿಕೊಂಡಳು.

ಮಧ್ಯಾಹ್ನ ಲಂಚ್ ಸಮಯದಲ್ಲಿ ಕುಮುದ ಮ್ಯಾನೇಜರ್‌ನ ಇತಿಹಾಸವನ್ನು ತಿಳಿಸಿದಳು.

"ಅವನ ಹೆಸರು ರಮೇಶ ಅನ್ನುವ ಬದಲು ಕಪೀಶ ಅಂತ ಇದ್ದಿದ್ದರೆ ಚೆನ್ನಾಗಿತ್ತು. ಹೆಂಗಸರು ಅಂತಂದ್ರೆ ಸಾಕು, ವಿಚಿತ್ರವಾಗಿ ನೋಡಿ ಹಲ್ಲು ಕಿರಿತಾನೆ. ಅವನ ಬಗ್ಗೆ ಹುಶಾರಾಗಿರಬೇಕು. ಆದರೆ ಯಾವುದೇ ಕಾರಣದಿಂದಲೂ ಅವನನ್ನು ಎದುರು ಹಾಕಿಕೊಳ್ಳಬಾರದು." ಅವನು ಹೇಳಿದ

ಹಾಗೆ ಕೇಳಿಬಿಟ್ಟರೆ ಯಾವ ತೊಂದರೆಯೂ ಇಲ್ಲ.

"ಅಂದ್ರೆ........" ರಂಜಿನಿ ಅನುಮಾನದಿಂದ ಕೇಳಿದ್ದಳು.

"ಅಂದ್ರೆ....." ಅವನು ಹೇಳಿದ ಹಾಗೆ ಕೇಳಬೇಕು ಅಷ್ಟೆ. ಏನೂಂತ ನೀವೇ ಅರ್ಥ ಮಾಡಿಕೊಳ್ಳಿ. ಇಲ್ಲದಿದ್ದರೆ ಅವರ ಜೀವನವೇ ಹಾಳಾಗುವಂತೆ ಮಾಡಿ ಬಿಡ್ತಾನಂತೆ.

"ಹಾಗಂತ ನಿಮಗೆ ಯಾರು ಹೇಳಿದರು?"

"ಅವನೇ......" ಅವಳು ತಲೆ ತಗ್ಗಿಸಿ ನು...ಾಗ ಅವಳಿಗೆ ಅರ್ಥವಾಗಿತ್ತು. "ಛೆ" ಈ ಹೆಂಗಸರ ಸ್ಥಿತಿ ಎಷ್ಟು ಕಷ್ಟ. ಮನೆಯಲ್ಲಿ ದುಡಿಮೆ. ಎಷ್ಟು ದುಡಿದರೂ ಹೊಗಳುವವರಿಲ್ಲ ಅಂತ ಅಂದುಕೊಂಡರೂ, ಅದು ಮನೆಯಾದುದರಿಂದ ರಕ್ಷಣೆ ಇದೆ. ಆದರೆ ಆಫೀಸಿನಲ್ಲಿ ಸಂಬಳಕ್ಕಾಗಿ ದುಡಿಮೆ. ದುಡಿಮೆಗಾಗಿ ಎಂತೆಂತಹ ಸ್ಥಿತಿಯನ್ನು ಎದುರಿಸಬೇಕಾಗುತ್ತೆ!

"ಛೆ, ಗಂಡಸಿಗೇಕೆ ಈ ಬುದ್ಧಿ? ಇಲ್ಲ, ಇಲ್ಲ. ಎಲ್ಲಾ ಗಂಡಸರೂ ಹೀಗಲ್ಲ. ಒಬ್ಬೊಬ್ಬ ಒಂದೊಂದು ತರಹ. ಒಬ್ಬ ಹೆಂಡತಿಗೆ ಒಳ್ಳೆಯ ಗಂಡನಾದರೆ, ಆಫೀಸಿನಲ್ಲಿ ಕೆಟ್ಟ ಬಾಸ್, ಅದೇ ಹೆಂಡತಿಗೆ ಕೆಟ್ಟ ಗಂಡನಾದರೆ, ಆಫೀಸಿನಲ್ಲಿ ಅತಿ ಒಳ್ಳೆಯವನಾಗಿರಲೂ ಬಹುದು."

"ಈ ಬಾಸ್ ಒಳ್ಳೆಯವನೋ, ಕೆಟ್ಟವನೋ ನನಗೇನು ಗೊತ್ತು?" ಕುಮುದಾನೇ ಸರಿಯಿಲ್ಲದಿರಬಹುದು. ಹೇಗಾದರಾಗಲೀ, ನನ್ನ ಹುಶಾರಿನಲ್ಲಿ ನಾನು ಇರುವುದು ಒಳ್ಳೆಯದು. ಮನೆಯಲ್ಲಿ ಮಾತ್ರ ಈ ವಿಷಯವನ್ನು ಹೇಳಬಾರದು. ಮೊದಲೇ ನಿರುದ್ಯೋಗಿ ಗಂಡ, ಅನಗತ್ಯ ಸಂಶಯ ಪಟ್ಟು ತಾನೂ ಹಾಳಾಗಿ ನನ್ನನ್ನು ಹಾಳು ಮಾಡುತ್ತಾನೆ," ಎಂದು ಕೊಂಡಳು.

ಹಲವಾರು ತಿಂಗಳು ಕಳೆದವು. ಆದರೆ ಎಂದೂ ಅವನನ್ನು ಅನುಮಾನದಿಂದ ನೋಡುವಂತೆ ಅವನು ವರ್ತಿಸಿರಲಿಲ್ಲ. ಇವಳೂ ಅವನ ಬಗ್ಗೆ ಕುಮುದಾಳೊಡನೆ ಮಾತನಾಡಿರಲಿಲ್ಲ.

ಆ ದಿನ ಕುಮುದಾ ಆಫೀಸಿಗೆ ಬಂದಿರಲಿಲ್ಲ. ಆಮೇಲೆ ತಿಳಿಯಿತು. ತಂದೆಗೆ ಹುಶಾರಿಲ್ಲವೆಂದು ಹತ್ತು ದಿನ ರಜ ಹಾಕಿದ್ದಾಳೆಂದು. ರಂಜಿನಿ ಆತಂಕಗೊಂಡಿದ್ದಳು. ಇವಳ ಪಾಡಿಗೆ ಇವಳು ತನ್ನ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಳು. ಎರಡು ಮೂರು ದಿನಗಳು ಕಳೆದವು.

ಒಂದು ಮದ್ಯಾಹ್ನ ಲಂಚ್ ಸಮಯದಲ್ಲಿ ರಮೇಶ ರಂಜಿನಿಗೆ ಹೇಳಿ ಕಳಿಸಿದ. ಇವಳು ಅಳುಕುತ್ತಾ ಅವನ ಛೇಂಬರ್‌ಗೆ ಹೋಗಿದ್ದಳು.

"ಊಟ ತಂದಿದೀರಾ?" ಪ್ರಶ್ನಿಸಿದ.

"ಹೂಂ. ಎಂದಳು ತಲೆ ಎತ್ತದೆ."

"ಏನು ತಂದಿದೀರೋ ಅದನ್ನು ನನಗೆ ಕೊಡಿ. ನೀವು ಅರ್ಧದಿನದ ರಜ ಹಾಕಿ ಮನೆಗೆ ಹೋಗಿ ಪರವಾಗಿಲ್ಲ."

"ಆಗಲಿ" ಎನ್ನುತ್ತಾ ಅವಳು ಹಾಗೇ ಮಾಡಿದಳು.

"ಮಾರನೇ ದಿನ ಅವಳಿಗೆ ಶಹಬಾಸ್ ಗಿರಿಯನ್ನಿತ್ತಿದ್ದ." ನಿಮ್ಮ ಡಬ್ಬಿ ಊಟ ತುಂಬಾ ಚೆನ್ನಾಗಿತ್ತು. ಅವಳಿಗೆ ಅಲ್ಲಿ ನಿಂತಿರಲು ಕಷ್ಟವೆನಿಸಿತ್ತು. ಹೊರಗೆ ಬಂದಾಗ, ಉಳಿದ ಸಹೋದ್ಯೋಗಿಗಳು ತನ್ನನ್ನೇ ನೋಡುತ್ತಿರಬಹುದು. ಎಂಬ ಅನುಮಾನದಿಂದ ಅವರ ಕಡೆಗೆ ತಿರುಗಲಿಲ್ಲ. ಹೀಗೇ ಅನೇಕ ಬಾರಿ ಜರುಗಿತು. ಕುಮುದಾ ಸಹ ಬಂದಿರಲಿಲ್ಲ. ರಜವನ್ನು ಮುಂದುವರೆಸಿದ್ದಳು.

ಒಂದು ದಿನ ಕರೆದು ಹೇಳಿದ್ದ. "ಈ ದಿನ ನಮ್ಮ ಮನೆಗೆ ನನ್ನ ಹಳೇ ಸ್ನೇಹಿತರು ಬರುತ್ತಿದ್ದಾರೆ. ನಿಮಗೆ ತೊಂದರೆಯಿಲ್ಲದಿದ್ದರೆ, ನಾಲ್ಕೈದು ಜನಕ್ಕಾಗುವಷ್ಟು ಅಡಿಗೆ ಮಾಡಿ ಕಳಿಸಿ. ರುಚಿಯಾಗಿರಬೇಕು. ನಿಮಗೆ ಪ್ರಮೋಷನ್ ಕೊಡಿಸ್ತೀನಿ" ಅವಳು 'ಹೂ' ಎಂದರೂ, ತಮಾಷೆ ಮಾಡುತ್ತಿರಬಹುದು ಎಂದುಕೊಂಡು ಸುಮ್ಮನಾಗಿದ್ದಳು.

ಮದ್ಯಾಹ್ನ ಊಟದ ನಂತರ ಜವಾನ ಹೇಳಿದ್ದ. "ನೀವೀಗ ಬೇಗ ಮನೆಗೆ ಹೋಗಬೇಕಂತೆ. ನಾನು ಕ್ಯಾರಿಯರ್ಸ್ ತಂದು ಕೊಡ್ತೀನಿ." ಅವನು ಸಹಜವೆಂಬಂತೆ ನುಡಿದಾಗ ಅವಳು ಸಮಾಧಾನಗೊಂಡು ಹೋಗಿದ್ದಳು.

ಸಾಯಂಕಾಲ ಸುಮಾರು ಏಳೂವರೆ ಗಂಟೆಯ ಹೊತ್ತಿಗೆ ಜವಾನ ಬಂದ. ಸಿದ್ಧವಾದ ಅಡಿಗೆಯನ್ನು ಕ್ಯಾರಿಯರ್‌ಗೆ ತುಂಬಿಸಿದಳು. ಅವನು ಅನುಮಾನಿಸುತ್ತಾ, "ಮೇಡಂ ನೀವೂ ಬರಬೇಕಂತೆ.... ಕರೆದುಕೊಂಡು ಬಾ ಅಂತ ಹೇಳಿದ್ದಾರೆ" ಎಂದಾಗ ಅವಳು ನಡುಗಿದಳು. ಗಂಡ ಮನೆಯಲ್ಲಿರಲಿಲ್ಲ. ಈಗ ಬರ್ತೀನಿ ಎಂದು ಅತ್ತೆಗೆ ಹೇಳಿ ಅವನ ಜತೆ ನಡೆದಳು. ಹೇಗೂ ಜತೆಗೆ ಜವಾನನಿದ್ದನಲ್ಲ. ಮ್ಯಾನೇಜರ್ ಮನೆ ತುಂಬಾ ದೊಡ್ಡದೂ ಅಲ್ಲ, ಚಿಕ್ಕದೂ ಅಲ್ಲ. ಮನೆಯಲ್ಲಿ ಅವನ ಹೊರತು ಇನ್ನಾರೂ ಇಲ್ಲವೇನೋ ಅಂತನ್ನಿಸಿದಾಗ ದಿಗಿಲಾಗಿತ್ತು. ಧೈರ್ಯತಂದುಕೊಂಡು ನಿಂತಳು. ಜವಾನ ಜತೆಯಲ್ಲಿದ್ದುದು ಸಮಾಧಾನವಾಗಿತ್ತು.

"ಕೂತ್ಕೊಳ್ಳಿ" ಎಂದು ಉಪಚಾರ ಹೇಳಿ, ಜವಾನನನ್ನು ಹೋಗುವಂತೆ ಕಳಿಸಿದ. ಇನ್ನೇನು ಅವರುಗಳು ಬರಬಹುದು ಎನ್ನುತ್ತಾ, ರಂಜನಿಯ

ಸಂಸಾರದ ಬಗ್ಗೆ ವಿಷಯಗಳನ್ನು ಕೇಳಿ ಕೇಳಿ ತಿಳಿದುಕೊಂಡ. ಅವಳು ಹೆದರಿದಳು.

"ನಿಮ್ಮ ಗಂಡನಿಗೆ ನಾನು ಎಲ್ಲಾದರೂ ಶಿಫಾರಸ್ಸು ಮಾಡಿ ಕೆಲಸ ಕೊಡಿಸ್ತೀನಿ. ನಿಮಗೆ ಇನ್‌ಕ್ರಿಮೆಂಟ್ ಕೊಡಿಸ್ತೀನಿ." ನನ್ನ ಹೆಸರು ಹೇಳಿಕೊಂಡು ನೀವುಗಳು ಸುಖವಾಗಿರಬಹುದು. ಸೈಟ್ ಕೊಡಿಸ್ತೀನಿ. ನಿಮ್ಮ ಮಗಳನ್ನು ಓದಿಸ್ತೀನಿ..... ಕೇಳಿದಷ್ಟು ಹಣ ಕೊಡ್ತೀನಿ......

ಅವನ ಮಾತುಗಳು ಅವಳಿಗೆ ಅರ್ಥಹೀನವಾಗಿ ಕಂಡವು. ಅವನೇ ಮುಂದುವರೆದ. "ನನಗೆ ಹೆಂಡತಿಯಿಲ್ಲ. ಮಕ್ಕಳಿಲ್ಲ. ನನಗೆ ದ್ರೋಹ ಮಾಡಿ ಯಾರ ಜತೆಯೋ ಓಡಿ ಹೋದಳು ನಾನು ಒಂಟಿ. ನನಗೆ ಬೇಕೆನಿಸಿದಾಗ ಕುಮುದಾ ಬರುತ್ತಾಳೆ." ಆದರೆ ಅವಳೂ ಊರಿನಲ್ಲಿಲ್ಲ. ನಾನು ಹೇಗಿರಲಿ! ನೀವೇ ಹೇಳಿ ಅದಕ್ಕೇ ನಿಮ್ಮನ್ನು ಕರೆಸಿದೆ.

ಅವಳು ತಂಬಾ ಹೆದರಿದಳು. "ಸಾರ್ ನಾನು ಅಂತಹವಳಲ್ಲ ಸಾರ್.... ನಾನು ಹೋಗ್ತೀನಿ. ಪ್ಲೀಸ್ ನನ್ನನ್ನು ಕಳಿಸಿಬಿಡಿ"

"ನಂಗೊತ್ತಿ ನೀವು ಅಂತಹವರಲ್ಲ. ಆದರೆ ಪ್ರಪಂಚ ಹಾಗಿದೆ. ನಿರುದ್ಯೋಗಿ ಗಂಡ ನಿಮಗೇನು ಸುಖ ಕೊಡುತ್ತಾನೆ? ನಿಮಗೆ ಆಸೆ ಇಲ್ಲವೆ? ಆ ಆಸೆಗಳನ್ನು ನಾನು ಪೂರೈಸ್ತೀನಿ.... ನಾನು ಹೇಳಿದ ಹಾಗೆ ಕೇಳಿ ಸಾಕು."

"ನೀವು ನನ್ನನ್ನು ತಪ್ಪು ತಿಳಿದುಕೊಂಡಿದೀರಿ.... ನನಗೆ ಯಾವ ಆಸೆಗಳಿಲ್ಲ. ನನಗೆ ಏನೂ ಬೇಡ."

"ಹಾಗಾದರೆ ನಾಳೆಯಿಂದ ನೀವು ಕೆಲಸಕ್ಕೆ ಬರಬೇಡಿ. ತಿಳೀತಾ?"

"ಇದು ಅನ್ಯಾಯ. ನಾನು ಮೇಲಾಧಿಕಾರಿಗೆ ಕಂಪ್ಲೆಂಟ್ ಕೊಡ್ತೀನಿ."

"ಕೊಡಿ, ಕೊಡಿ. ನಿಮ್ಮ ಮಾತನ್ನು ಯಾರು ನಂಬ್ತಾರೆ? ಒಂದು ಸಲ ನೀವು ನಮ್ಮ ಮನೆಗೆ ಬಂದು ಹೋದರೆ ಸಾಕು..... ಜನರು ಏನು ಬೇಕಾದರೂ ಊಹಿಸಬಲ್ಲರು..., ನೀವು ಬದುಕಿದ್ದೂ ಸತ್ತ ಹಾಗೆ.... ತಿಳೀತಾ?"

"ನೀವು ನನ್ನನ್ನು ನಿಮ್ಮ ಮನೆಗೆ ಕರೆಸಿ ಮೋಸ ಮಾಡ್ತೀದ್ದೀರಿ. ಇದು ತಪ್ಪು. " ಅವನಿಗೆ ತಿಳುವಳಿಕೆ ಹೇಳಲು ನೋಡಿದಳು.

"ಯಾವುದು ತಪ್ಪಿಲ್ಲ! ಪ್ರಪಂಚದಲ್ಲಿ ಎಲ್ಲವೂ ತಪ್ಪೇ.... ಆದರೆ ಹಾಗಂತ ಸುಮ್ಮನಿದ್ದರೆ ಏನೂ ನಡೆಯುವುದಿಲ್ಲ. ಎಲ್ಲಾ ಅಲ್ಲಲ್ಲಿಗೇ ನಿಂತು ಹೋಗುತ್ತದೆ. ಅಷ್ಟೆ. ಸುಮ್ಮನೇ ಬನ್ನಿ ಇಬ್ಬರೂ ಕೂತು ಊಟ ಮಾಡೋಣ."

ರಂಜನಿ ತನ್ನಲ್ಲೇ ಅವನಿಂದ ತಪ್ಪಿಸಿಕೊಳ್ಳುವ ಉಪಾಯವನ್ನು ಆಲೋಚಿಸುತ್ತಾ ಅವನಿಗೆ ಬಡಿಸಿದಳು. ಅವಳಿಗೆ ಊಟ ಹಿಡಿಸಲಿಲ್ಲ.

"ನಾನಿನ್ನು ಹೊರಡ್ತೀನಿ. ನನ್ನ ಗಂಡ ಮಗಳು ನನಗಾಗಿ ಕಾಯುತ್ತಿರುತ್ತಾರೆ. ನಾನು ಮನೆಗೆ ಹೋಗಿ ಊಟ ಮಾಡ್ತೀನಿ," ಎನ್ನುತ್ತಾ ಹೊರಟಳು."

"ನೋ.... ನೋ..... ನಾನು ಈಗಲೇ ಕಳಿಸುಲ್ಲ. ಅವನಿಗೂ ಇಷ್ಟು ಹೊತ್ತಿಗೆ ಗೊತ್ತಾಗಿರುತ್ತೆ. ಆಮೇಲೆ ಏನು ಮಾಡ್ತೀಯಾ? ನಿನ್ನನ್ನು ನಂಬ್ತಾನಾ?"

"ಇಲ್ಲಾ ಸಾರ್ ಅವರಿಗೆ ನನ್ನ ಮೇಲೆ ನಂಬಿಕೆ ಇದೆ. ನಾನು ನಾಳೆ ಬೆಳಿಗ್ಗೆ ಹೋದರೂ ನನ್ನ ಮೇಲೆ ಅನುಮಾನ ಪಡುವುದಿಲ್ಲ ಒಳ್ಳೆಯವರು."

"ಓ.....ಹೋ.... ಹಾಗಾ? ಕೆಲಸವಿಲ್ಲ. ಸಂಬಳವಿಲ್ಲ. ನಿನ್ನ ಮೇಲೆ ಅನುಮಾನ ಪಟ್ಟರೆ ಬರುವ ಆದಾಯವೂ ನಿಂತು ಹೋಗುತ್ತೆ ಅಂತ ಅಷ್ಟೆ. ನನಗೆಲ್ಲಾ ಗೊತ್ತು.... ಕೆಲಸಕ್ಕೆ ಕಳಿಸಿದ ಮೇಲೆ ಎಲ್ಲಾದಕ್ಕೂ ಸಿದ್ದ."

"ಅದು ಹಾಗಲ್ಲ ಸಾರ್...... ನಾನು ನಾನು.... ಹೇಳಲು ಹಿಂಜರಿದಳು."

"ಏನು ನೀನು?....." ಕೆಟ್ಟದಾಗಿ ನಕ್ಕವನನ್ನೇ ವಿಚಿತ್ರವಾಗಿ ನೋಡಿದಳು.

"ನಾನು ಯಾರ ಸಹವಾಸವನ್ನು ಮಾಡುವಂತೆಯೇ ಇಲ್ಲ. ಹಾಗೆ ಮಾಡಿದರೆ ಅವರೂ ಹಾಳಾಗಿ ಹೋಗ್ತಾರೆ.... ಇದು ನಿಜ....."

"ಸುಳ್ಳು..... ಸುಳ್ಳು...ಹಾಗೇಕೆ ಆಗುತ್ತೆ? ತಪ್ಪಿಸ್ಕೊಳ್ಳೋ ನೆವ.."

"ಖಂಡಿತಾ ಹಾಗೆ ಆಗುತ್ತೆ. ನನ್ನ ಮಗಳು ಹುಟ್ಟಿದಾಗ ನನಗೆ ನಡೆದ ಆಪರೇಷನ್ ಸಮಯದಲ್ಲಿ ನನಗೆ ಬೇರೆ ಯಾರದೋ ರಕ್ತವನ್ನು ಕೊಟ್ಟರಂತೆ. ಏನಾಯ್ತೋ ಏನೋ ನನಗೂ ಈಗ ಆ ರೋಗ ಬರುವ ಸಂಭವ ವಿದೆಯಂತೆ. ಹಾಗಂತ ಡಾಕ್ಟರು ಹೇಳಿದ್ದಾರೆ.... ನಿಜವಾಗಿಯೂ.... ಅದೇ..."

"ಆಂ... ಯಾವ ರೋಗ?......" ನಂಬದವನಂತೆ ತಲೆ ಆಡಿಸಿದ.

"ಏಡ್ಸ್‌ರೋಗ..... ಈಗ ನನ್ನ ದೇಹದ ರಕ್ತದಲ್ಲಿ ಎಚ್.ಐ.ವಿ. ಜೀವಾಣುಗಳಿವೆ. ನನ್ನ ರಕ್ತ ಕಲುಷಿತಗೊಂಡಿದೆ. ನಾನು ಬೇರೆ ಯಾರಿಗೂ ರಕ್ತ ಕೊಡುವಂತಿಲ್ಲ. ನಾನು ಯಾರ ಸಹವಾಸವನ್ನು ಮಾಡುವಂತಿಲ್ಲ."

ಮುಖ ಕಪ್ಪಾದರೂ, "ಬರೀ ಸುಳ್ಳಿನ ಕಂತೆ, ನಾನಿದನ್ನು ನಂಬುವುದಿಲ್ಲ" ಎಂದ.

ಆದರೂ ಹೆದರಿಬಿಟ್ಟಿದ್ದ.

"ನಿಮ್ಮಿಷ್ಟ. ಆದರೆ ನಾನು ನಿಮ್ಮ ಬಾಳು ಹಾಳಾಗುವುದಕ್ಕೆ ಆಸ್ಪದ

ಕೊಡುವುದಿಲ್ಲ. ನನ್ನನ್ನು ಕಳಿಸಿಬಿಡಿ."

ಅವಳು ಅಳತೊಡಗಿದಾಗ ಅವನು ಹೆದರಿದ.

ಅವಳ ಸಮೀಪ ನಿಂತು ಅವಳನ್ನು ಸಮಾಧಾನಗೊಳಿಸುವುದಕ್ಕೆ ಅನುಮಾನಿಸಿದಾಗ, ಅವಳ ತುಟಿಯಂಚಿನಲ್ಲಿ ನಗೆ ಹೊಮ್ಮಿತ್ತು.

"ನೀನಿನ್ನು ಹೋಗಬಹುದು." ಎಂದು ಗಡುಸಾಗಿ ನುಡಿದಾಗ ಅವಳು ಪ್ರಶ್ನಿಸಿದಳು.

"ನಿಮಗೆ ಬೇಸರವಾಯ್ತೆನೋ.. ಆದರೆ ಈ ಕಾರಣದಿಂದ ನನ್ನ ಇನ್‌ಕ್ರಿಮೆಂಟ್, ಪ್ರಮೋಷನ್‌ಗೆ ಏನೂ ತೊಂದರೆಯಿಲ್ಲವಲ್ಲ..."

ಅವನು ಭೀತಿಯಿಂದ ನುಡಿದ. "ಏನಿಲ್ಲ ಏನಿಲ್ಲ. ನಾನು ಅದನ್ನೆಲ್ಲಾ ನಿನಗೆ ಕೊಡಿಸ್ತೀನಿ. ಆದರೆ ನೀನು ಈ ವಿಷಯವನ್ನು ಯಾರಿಗೂ ತಿಳಿಸಕೂಡದು. ನೀನು ಹೊರಡು."

ಅವನು ಆತುರ ಪಡಿಸಿದಾಗ ಅವಳು ಗೆಲುವಿನ ನಗೆಯನ್ನು ನಕ್ಕಳು.

ಆನಂತರ ಕೆಲವೇ ತಿಂಗಳಲ್ಲಿ ಅವಳಿಗೆ ಪ್ರಮೋಷನ್ ಸಿಕ್ಕಿತ್ತು. ಮತ್ತೆ ಬೇರೆ ಶಾಖೆಗೆ ವರ್ಗಮಾಡಿದ್ದರು. ಊರಿಗೆ ವಾಪಸ್ಸಾಗಿದ್ದ ಕುಮುದಾ ಪ್ರಮೋಷನ್ ರಹಸ್ಯವನ್ನು ಕೇಳಿದಾಗ ಅವಳು ನಡೆದುದೆಲ್ಲವನ್ನು ತಿಳಿಸಿ, ಗಂಭೀರವಾಗಿ ನುಡಿದಳು.

"ಏಡ್ಸ್ ಒಂದು ಭಯಂಕರ ಮಾರಕ ರೋಗ ಅಂತ ಎಲ್ಲರಿಗೂ, ಹೆದರಿಕೆ. ಒಂದು ವೇಳೆ ನಿಜವಾಗಿ ಹಾಗೇನಾದರೂ ಇದ್ದಿದ್ದರೆ ನಾನಂತೂ ಇದುವರೆಗೂ ಬದುಕಿರುತ್ತಿದ್ದೆನೋ ಇಲ್ಲವೋ..... ಆದರೆ "ಏಡ್ಸ್" ಎಂಬ ಹೆಸರೇ ರಮೇಶನ್ನ ಅಲುಗಾಡಿಸಿ ಬಿಟ್ಟಿತು." ನಾನು ಬದುಕಿದೆಯಾ ಬಡಜೀವವೇ, ಅಂತ ಹೊರಗೆ ಬಂದೆ. ಆದರೆ ಅದರಿಂದ ನನಗೆ ಎರಡು ಲಾಭವಾಯ್ತು. ಒಂದು ಆ ದಿನ ನನ್ನ ಮಾನ ಉಳಿದಿದ್ದು. ಇನ್ನೊಂದು ನನ್ನಂತಹವಳಿಗೆ ಪ್ರಮೋಷನ್ ಸಿಕ್ಕಿದ್ದು."

ಕುಮುದಾ ಪೆಚ್ಚಾಗಿದ್ದಳು. ಈ ಉಪಾಯ ನನಗೇ ತಿಳಿದಿದ್ದರೇ......

"ಹೋಗಲಿ ಬಿಡು. ಕುಮುದಾ, ರಮೇಶ್ ಇನ್ನು ಮುಂದೆ ಯಾವ ಹೆಂಗಸರ ಸಹವಾಸವನ್ನು ಬಯಸುವುದಿಲ್ಲ. ಅಷ್ಟು ಹೆದರಿಬಿಟ್ಟಿದ್ದ ಆ ದಿನ" ಎನ್ನುತ್ತಾ ಏನನ್ನೋ ಜಯಿಸಿದವಳಂತೆ ತಲೆ ಆಡಿಸಿದಳು.

* * *

೭. ಹಂಬಲ

ಬಾಲ್ಯದಲ್ಲೇ ಮದುವೆಯಾಗಿದ್ದರಿಂದ ಭವಾನಿ ಯಾವಾಗಲೂ ಮನೆಯಲ್ಲೇ ಬಂದಿ. ಸ್ಕೂಲಿಗೆ ಹೋಗುವುದನ್ನೂ ಸಹ ನಿಲ್ಲಿಸಿದ್ದಳು. "ಮನೇಲೇ ಇದ್ದು ಅಡಿಗೆ ಕೆಲಸ ಕಲಿತ್ಕೋ, ಇನ್ನು ನಿನಗೇಕೆ ವಿದ್ಯೆ," ಎಂದು ಹೇಳುವವರೇ.

ಬೆಂಗಳೂರಿನಿಂದ ಆಗಾಗ ಬರುತ್ತಿದ್ದ ಶಂಕರ ಅಲ್ಲಿಯ ವಿಚಾರಗಳನ್ನು ವಿವರವಾಗಿ ಹೇಳುತ್ತಿದ್ದರೇ, ಇವಳಿಗೆ ತಾನೂ ಬೆಂಗಳೂರಿಗೆ ಹೋಗಬೇಕೆಂಬ ಆಸೆ. ವರ್ಣನೆಯೇ ಇಷ್ಟು ಸೊಗಸಾಗಿದ್ದರೆ, ಇನ್ನು ನಾನೇ ಸುತ್ತಾಡುವಂತಿದ್ದರೆ ಹೇಗಿರಬಹುದು ಎಂಬ ಕಲ್ಪನೆಯೇ ಅವಳನ್ನು ಪುಳಕಗೊಳಿಸುತ್ತಿದ್ದವು. ಈ ಕಾರಣದಿಂದ ಅವಳು ಶಂಕರನನ್ನು ಮೆಚ್ಚಿದ್ದಳು.

ಮದುವೆಯಾಗಿ ನಾಲ್ಕು ವರ್ಷ ಕಳೆದಿದ್ದರೂ ಅವಳು ಒಂದು ಸಾರಿಯೂ ಗಂಡನ ಮನೆಗೆ ಹೋಗಿರಲಿಲ್ಲ. ಸಮೀಪದ ಬೇರೆ ಊರಿನಲ್ಲಿದ್ದರೂ, ಅವನೂ ಎಂದೂ ಅವಳನ್ನು ಕಾಣಲೆಂದು ಬಂದಿರಲಿಲ್ಲ. ಅದಕ್ಕೆ ಕಾರಣ "ವರದಕ್ಷಿಣೆ" ಕೊಟ್ಟದ್ದು ಸಾಲದು ಎಂಬ ಅಸಮಾಧಾನ. ಎಲ್ಲಾ ಇತ್ಯರ್ಥವಾಗುವವರೆಗೂ ನಿಮ್ಮ ಮಗಳು ಅಲ್ಲೇ ಇರಲಿ ಎಂದು ತಿಳಿಸಿದ್ದರು. ಈ ವಿಷಯ ಭವಾನಿಗೆ ತಿಳಿಯದು.

ತಿಳಿದ ದಿನ ಅವಳು ಪೆಚ್ಚಾಗಲಿಲ್ಲ. ಮನಸ್ಸನ್ನು ಕೆಡಿಸಿಕೊಳ್ಳಲಿಲ್ಲ. ಬೇರೆ ಬೇರೆ ಏನೇನೋ ಆಲೋಚನೆಗಳು ಅವಳಲ್ಲಿ ಮೂಡ ತೊಡಗಿದವು. ಶಂಕರನೊಡನೆ ಎಲ್ಲಾ ವಿಷಯಗಳನ್ನು ಹಗುರವಾಗಿ ಹೇಳಿಕೊಂಡು ನಕ್ಕಿದ್ದಳು. ಶಂಕರ ಅವಳ ದೂರದ ಸಂಬಂಧಿ. ಬೆಂಗಳೂರಿನಲ್ಲಿ ಓದುತ್ತಿದ್ದ.

"ಅವನು ನನ್ನ ಗಂಡ ಅಂತ ನನಗೆ ಎಂದೂ ಅನ್ನಿಸೇ ಇರಲಿಲ್ಲ. ಅದರಿಂದ್ಲೋ ಏನೋ ನನಗಂತೂ ವ್ಯಥೆಯಾಗಲಿಲ್ಲ. ಹೇಗೂ ನಾನು ಅವನ ಮನೆಗೆ ಹೋಗೇ ಇಲ್ಲ. ನಾನೇಕೆ ಅವನನ್ನು ಬಿಟ್ಟುಬಿಡಬಾರದು ಅಂತ ಯೋಚಿಸ್ತಿದೀನಿ?" ಅಂತ ನುಡಿದಿದ್ದಳು.

"ಏಯ್ ಹಾಗೆ ಮಾಡಬೇಡ ಮಾರಾಯ್ತಿ. ನಿನಗೆ ಹುಚ್ಚು ಅಂತಾರೆ. ಆಮೇಲೆ ಏನು ಮಾಡ್ತೀಯಾ? ಜೀವಮಾನವೆಲ್ಲಾ ಹೀಗೇ ಕಳೀತಿಯಾ....?"

"ಇಲ್ಲ. ಶಂಕರ.... ನಾನು ನಿನ್ನನ್ನು ಮದುವೆಯಾಗ್ತೀನಿ. ಆದರೆ ಒಂದು ಷರತ್ತು..." ಎಂದು ನಗುತ್ತಾ ನುಡಿದಿದ್ದಳು.

"ಸಾಕು ನಿನ್ನ ತಮಾಷೆ" ಅವಳ ಮಾತನ್ನು ತಳ್ಳಿ ಹಾಕಿದ.

"ತಮಾಷೆಯಲ್ಲ. ನಿಜಾನೆ. ನಿನ್ನನ್ನು ಮದುವೆ ಮಾಡಿಕೊಂಡರೆ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಸಿಟಿ ತೋರಿಸ್ತೀಯಲ್ಲಾ?"

"ಛಿ... ಹುಚ್ಚಿ..... ಬೆಂಗಳೂರು ನೋಡೋಕೋಸ್ಕರ ಯಾರಾದ್ರೂ ಗಂಡನ್ನ ಬಿಡ್ತಾರೇನೇ......"

"ಮತ್ತೀನ್ನೇನು? ಅವನೋ ಹಳ್ಳಿ ಮುಕ್ಕ, ಇಷ್ಟು ವರ್ಷದಲ್ಲಿ ಒಂದು ಸಲವಾದ್ರೂ ಬಂದಿದಾನಾ? ನನ್ನನ್ನ ಎಲ್ಲಿಗಾದ್ರೂ ಕರೆದುಕೊಂಡು ಹೋಗಿದಾನಾ? ನನಗಂತೂ ಈ ಊರಿನಲ್ಲಿ ಇದ್ದೂ ಇದ್ದೂ ಬೇಜಾರಾಗಿದೆಯಪ್ಪಾ. ಸ್ಕೂಲಿಗೆ ಹೋಗೋದನ್ನು ತಪ್ಪಿಸಿದರು ಇವರುಗಳು."

"ನಾನು, ಚಂದ್ರಣ್ಣನಿಗೆ ಹೇಳ್ತಿನಿ. ಅವನು ಎಲ್ಲರನ್ನು ಒಪ್ಪಿಸಿದರೆ ನೀನು ಮತ್ತೆ ಸ್ಕೂಲಿಗೆ ಹೋಗಬಹುದು." ಎಂದು ನುಡಿದಿದ್ದ.

ಆದರೆ ಚಂದ್ರಣ್ಣನ ಮಾತನ್ನು ಸುಲಭವಾಗಿ ಯಾರೂ ಒಪ್ಪಲಿಲ್ಲ. ಗಂಡನ ಮನೆಯವರಿಗೆ ತಿಳಿದರೆ ಏನಂದು ಕೊಳ್ತಾರೆ? ಅವಳು ಎಲ್ಲಿಗೂ ಹೋಗುವುದು ಬೇಡ..... ಇದೆಲ್ಲಾ ಆ ಶಂಕರನ ಕಿತಾಪತಿ. ಅವನು ಬಂದು ಅವಳ ತಲೆ ಕೆಡಿಸ್ತಾನೆ.... ಎಲ್ಲರೂ ದೂಷಿಸಿದ್ದರು.

ಆದರೆ, ಒಂದು ದಿನ ಬಂದ ಆ ಕೆಟ್ಟವಾರ್ತೆ ಎಲ್ಲರನ್ನು ಚಿಂತೆಗೀಡು ಮಾಡಿತ್ತು. ಆರು ಜನ ಅಣ್ಣತಮ್ಮಂದಿರ ನಡುವೆ ಬೆಳೆದ ಮುದ್ದಿನ ಭವಾನಿಗೆ ಗಂಡನ ಮನೆಗೆ ಹೋಗುವ ಅವಕಾಶವೇ ಬರಲಿಲ್ಲ. ಅವಳ ಪತಿ ತೋಟದ ಬಾವಿಯಲ್ಲಿ ಬಿದ್ದು ಅಸು ನೀಗಿದ್ದ. ಜನರು ನಾನಾ ತರಹ ಮಾತಾಡಿಕೊಂಡರು. ಭವಾನಿ ಮಾತ್ರ ಬಂಧನ ಕಳೆದವಳಂತೆ ನೆಮ್ಮದಿಗೊಂಡಳು. ಆದರೆ ಅದನ್ನು ಬಹಿರಂಗ ಪಡಿಸುವಂತಿರಲಿಲ್ಲ.

ಶಂಕರನಿಗೆ ವಿಷಯ ತಿಳಿದಾಗ, ವ್ಯಥೆಗೊಂಡಿದ್ದ. "ನಮ್ಮ ಭವಾನಿಗೆ ಇಂತಹ ಸ್ಥಿತಿ ಬರಬಾರದಾಗಿತ್ತು." ಎಂದು ಕಣ್ಣೀರು ಮಿಡಿದಿದ್ದ.

"ಈಗೇನ್ಮಾಡೋದು ಅಂತ. ಮುಂದೆ ಅವಳ ಗತಿ ಏನು?" ಎಂದು ಪ್ರಶ್ನಿಸಿದಾಗ ಅವಳ ಹಿರಿಯಣ್ಣ ನಿರಾತಂಕವಾಗಿ ನುಡಿದಿದ್ದ.

"ಇನ್ನೇನಿದೆ ಮಣ್ಣು? ಹೆಂಗಸರ ಜತೆ ಬೆರೆತು ಮನೆ ಕೆಲಸ ಮಾಡಲಿ? ಅವಳು ಬದುಕಿರುವವರೆಗೂ, ಒಂದು ತುತ್ತು ಅನ್ನಕ್ಕೇನೂ

ಕೊರತೆಯೇನೂ ಇಲ್ಲ ಈ ಮನೇಲಿ."

"ಅಷ್ಟೇನಾ ಅವಳ ಜೀವನ! ಪ್ರಪಂಚ ಅಂದರೆ ಏನು? ಬದುಕು ಹೇಗೆ ಇರುತ್ತೆ ಅಂತ ಅರ್ಥವಾಗುವ ಮೊದಲೇ ಅವಳ ಬಾಳು ಮುಗಿಸಿ ಬಿಡ್ತೀರಾ?"

"ಮತ್ತಿನ್ನೇನು! ಅವಳಿಗೆ ಇನ್ನೇನು ಉಳಿದಿದೆ?" ಸುಲಭವಾಗಿ ಹೇಳಿ ಬಿಟ್ಟರು.

"ಹಾಗಾದರೆ ಅವಳನ್ನು ಅಲ್ಲಿಗೆ ಕಳಿಸಿ, 'ಸಹಗಮನ' ಮಾಡಿಸಿ ಸತಿಯಾದಳು ಅಂತ ಶಾಸನ ಬರೆಸಬೇಕಾಗಿತ್ತು. ಅಲ್ಲಿಗೆ ಎಲ್ಲಾ ಮುಗೀತಿತ್ತು."

"ನೋಡು ಶಂಕರ, ಇದು ತಮಾಷೆಯ ಸಮಯವಲ್ಲ. ಅವಳ ಪಾಡಿಗೆ ಅವಳನ್ನು ಬಿಟ್ಟರೆ, ತಾನಾಗಿಯೇ ಸರಿ ಹೋಗ್ತಾಳೆ. ನೀನು ಇಲ್ಲದ್ದನ್ನು ಅವಳ ತಲೆಗೆ ತುಂಬಬೇಡ." ಶಂಕರ ಪಚ್ಛಾದ.

ಆದರೆ ಭವಾನಿ ಸುಮ್ಮನಿರಲಿಲ್ಲ. ಮನೆಯವರಿಗೆ ತಿಳಿಯದಂತೆ ಶಂಕರನಿಗೆ ಪತ್ರ ಬರೆದು, ಹೇಗಾದರೂ ಸರಿ ತನ್ನನ್ನು ಈ ಕೂಪದಿಂದ ಕರೆದುಕೊಂಡು ಹೋಗು ಎಂದು ಬೇಡಿಕೊಂಡು ಬರೆದಿದ್ದಳು. ಅವಳ ಮಾತಿನಂತೆ, ಶಂಕರ ತಾನಾಗಿಯೇ ತಾನು ಭವಾನಿಯನ್ನು ಮದುವೆಯಾಗುವುದಾಗಿ ತಿಳಿಸಿದಾಗ ಮನೆಯಲ್ಲಿ ಮತ್ತೊಂದು ರಂಪ.

"ಇಂಥ ಒಂದು ಕಾರ್ಯ ಈ ಮನೆಯಲ್ಲಿ ಹಿಂದೆಂದೂ ನಡೆದಿಲ್ಲ. ಭವಾನಿಗೆ ಈ ಜನ್ಮದಲ್ಲಿ ಮತ್ತೆ ಮದುವೆ ಖಂಡಿತಾ ಸಾಧ್ಯವಿಲ್ಲ" ಎಂದು ಖಡಾಖಂಡಿತವಾಗಿ ನುಡಿದಿದ್ದರು. ಆಗ ಎಲ್ಲರೆದುರಿಗೆ ಬಂದು ನಿಂತು, ಧೈರ್ಯವಾಗಿ ಭವಾನಿ ತನ್ನ ಆಸೆಯನ್ನು ವ್ಯಕ್ತ ಪಡಿಸಿದ್ದಳು.

"ನನ್ನ ಆಯಸ್ಸನ್ನೆಲ್ಲಾ ನಾನು ಹೀಗೆ ಕಳೆಯಲಾರೆ. ನನಗೂ ಬೇಕಾದಷ್ಟು, ಆಸೆಗಳಿವೆ. ನನಗೆ ತಿಳಿಯದೇ, ತಿಳುವಳಿಕೆ ಇಲ್ಲದ ವಯಸ್ಸಿನಲ್ಲಿ ನಡೆದ ಆ ಮದುವೆಯನ್ನು ನಾನು ಒಪ್ಪುವುದಿಲ್ಲ. ಅವನು ನನ್ನ ಪತಿಯೆಂಬ ಭಾವನೆ ನನಗೆಂದೂ ಬಂದಿರಲೇ ಇಲ್ಲ. ವರದಕ್ಷಿಣೆಯಲ್ಲಿ ಏರುಪೇರಾಯಿತು ಎಂಬ ಕಾರಣದಿಂದ ನನ್ನನ್ನು ತನ್ನ ಮನೆಗೆ ಕರೆಸಿಕೊಳ್ಳದೇ ಇದ್ದ ಅವನನ್ನು ನಾನು ಗಂಡ ಅಂತ ಖಂಡಿತಾ ಒಪ್ಪಿಕೊಳ್ಳುವುದಿಲ್ಲ."

"ಹೋಗೇ ಸಾಕು, ಒಳಗೆ ಹೋಗು. ನಿನ್ನ ತೀರ್ಮಾನ ಏನೂ ಅಂತ ಯಾರೂ ಕೇಳಲಿಲ್ಲ ಇಲ್ಲಿ." ಎರಡನೇ ಅಣ್ಣ ನುಡಿದಾಗ, ಹೆದರಲಿಲ್ಲ.

"ನೀವ್ಯಾರೂ ಕೇಳಲಿಲ್ಲ ಅಂತಾನೇ, ನಾನು ನಾನಾಗಿಯೇ ಹೇಳ್ತಾ

ಇರುವುದು. ನಾನು ನಿಮ್ಮೆಲ್ಲರಿಗಿಂತ ಚಿಕ್ಕವಳು. ನಾನು ನಿಮ್ಮೆಲ್ಲರಿಗಿಂತ ಸುಖವಾಗಿರಲಿ ಅಂತ ನಿಮಗೆ ಅನ್ನಿಸುವುದಿಲ್ವಾ?"

"ಮನಸ್ನಲ್ಲಿ ಅನ್ನಿಸುವುದೆಲ್ಲಾ ನಡೆಯಬೇಕಲ್ಲಾ....."

"ನೀವೆಲ್ಲ ಒಪ್ಪಿದರೆ ಖಂಡಿತಾ ನಡೆಯುತ್ತೆ. ನಾನು ಶಂಕರನ್ನ ಮದುವೆಯಾಗಿ ಇಲ್ಲಿಂದ ಹೊರಟು ಹೋಗ್ತೀನಿ."

"ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ" ಎಂದು ಮನೆಯ ಹಿರಿಯವರೆಲ್ಲ ನುಡಿದಾಗ, ಭವಾನಿ ಮನಸಾರೆ ಅತ್ತಿದ್ದಳು. ಆದರೆ ಶಂಕರ ಸುಮ್ಮನಾಗಲಿಲ್ಲ. ಭವಾನಿಗೆ ತಾನು ಮತ್ತೆ ಬರುವುದಾಗಿ ಹೇಳಿ ಅಲ್ಲಿಂದ ಹೊರಟಿದ್ದ. ಕೆಲವು ದಿನಗಳ ನಂತರ ಒಂದು ನಾಟಕದ ಕಂಪೆನಿ ಬಂದು ತಾಂಡ ಹೂಡಿತು. ಊರಿನವರಿಗೆ ಸುಗ್ಗಿ, ನಾಟಕದ ತಂಡವನ್ನು ಕಳಿಹಿಸಿದ್ದವನು ಶಂಕರನೇ.

ನಾಟಕ ಮಂಡಳಿಯ ಕಲಾವಿದರು, ಬೆಂಗಳೂರಿನಲ್ಲಿ ನಾಟಕ ಕಂಪನಿಯಲ್ಲಿ ತರಬೇತಿಯನ್ನು ಪಡೆದಿದ್ದವರು. ಹಳ್ಳಿ ಹಳ್ಳಿಗೆ, ಊರು ಊರಿಗೆ ಹೋಗಿ ನಾಟಕವನ್ನಾಡಿ ಜನರಿಗೆ ಮನರಂಜನೆಯ ಜತೆಗೆ ಸಾಮಾನ್ಯ ತಿಳುವಳಿಕೆಯನ್ನು ಮೂಡಿಸುವುದು ಆದರ ಉದ್ದೇಶ. ಸಮಾಜದ ಅನೀತಿ ಅನಿಯಮಗಳನ್ನು ಹಿಡಿದೆತ್ತಿ, ಪ್ರೇಕ್ಷಕರಿಗೆ ಮನವರಿಕೆ ಮಾಡಿಕೊಡುವುದೂ ಅದರ ಉದ್ದೇಶ. ಬಾಲವಿವಾಹ, ವಿಧವಾವಿವಾಹ, ಮದ್ಯಪಾನದಿಂದುಂಟಾಗುವ ಹಾನಿ, ಕಳ್ಳತನ ಕೊಲೆ ಸುಲಿಗೆಗಳಿಂದ ಒದಗುವ ತೊಂದರೆ, ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಕ್ರಮ, ವಯಸ್ಕರ ಶಿಕ್ಷಣ ಪದ್ಧತಿ, ಸ್ತ್ರೀಯರಿಗೆ ವಿದ್ಯಾಭ್ಯಾಸದಿಂದ, ಉದ್ಯೋಗದಿಂದ ದೊರಕುವ ಮನ್ನಣೆ, ಹೀಗೆ ಅನೇಕ ವಿಷಯಗಳನ್ನು ಸಾಮಾಜಿಕ ಜೀವನಕ್ಕೆ ಅಳವಡಿಸಿ, ದೃಶ್ಯಗಳ ಮೂಲಕ ತೋರಿಸಿ, ಪಾತ್ರಗಳ ಮೂಲಕ ಆಡಿಸಿ, ಜನರಲ್ಲಿ ಅರಿವು ಮೂಡಿಸುವುದೇ ಇದರ ಉದ್ದೇಶ. ಶಂಕರನದೇ ಆ ಸಲಹೆಗಳು.

ನಾಟಕಗಳು ಜನಪ್ರಿಯವಾದವು. ಎಲ್ಲರಲ್ಲೂ ಜನ ಜಾಗೃತಿ ಮೂಡಿತೋ, ಇಲ್ಲವೋ, ಭವಾನಿಗೆ ಮಾತ್ರ ಇದು ತನ್ನನ್ನು ಉದ್ದೇಶಿಸಿ ಆಡಿರುವ ನಾಟಕಗಳು ಎಂದೆನಿಸಿತ್ತು. ಬಲವಂತವಾಗಿ ಮನೆಯವರನ್ನು ಒಪ್ಪಿಸಿ ಸ್ಕೂಲಿಗೆ ಸೇರಿದಳು. ನಂತರ ತಾನೇ ಮುಂದುವರೆದು ಹಳ್ಳಿಯ ಅನಕ್ಷರಸ್ಥ ಹೆಂಗಸರಿಗೆ ಅಕ್ಷರವನ್ನು ಕಲಿಸಿಕೊಡುವ ಪ್ರಯತ್ನವನ್ನೂ ಮಾಡಿದ್ದಳು. ಆಸಕ್ತಿಯಿದ್ದವರು ಬಂದು ಕಲಿತರು. ಹೈಸ್ಕೂಲನ್ನು ಮುಗಿಸಿ ನಂತರ ಕಾಲೇಜಿಗೂ ಸೇರಿದಳು.

ಈ ನಡುವೆ ಶಂಕರ ಊರಿಗೆ ಬಂದಿರಲಿಲ್ಲ. ಆದರೆ ಪತ್ರ ವ್ಯವಹಾರ

ನಡದೇ ಇತ್ತು. ಭವಾನಿ ಎಲ್ಲಾ ವಿಷಯಗಳನ್ನು ತಿಳಿಸುತ್ತಿದ್ದಳು. ಅವಳ ಗಂಡನ ಮನೆಯವರು ಅವಳ ಮೇಲೆ ಆರೋಪವನ್ನು ಹೊರಿಸಿದ್ದರೂ ಲೆಖ್ಖಿಸದೇ ವಿದ್ಯಾಭ್ಯಾಸವನ್ನು ಮುಂದುವರಿಸಿದ್ದಳು. ಕಾಲ ಬದಲಾದಂತೆ ಮನೆಯಲ್ಲೂ ಅನೇಕ ಬದಲಾವಣೆಗಳಾಗಿದ್ದವು. ಆದರೂ ಯಾರಿಗೂ ಭವಾನಿಯ ಅಂತರಂಗದ ಅರಿವಿಲ್ಲ. ಅವಳು ಈಗ ಸುಖವಾಗಿದ್ದಾಳೆಂದೇ ಎಲ್ಲರ ಭಾವನೆ. ಶಂಕರನ ಹಾದಿಯನ್ನು ಎದುರು ನೋಡುತ್ತಾ ಅವಳು ದಿನಗಳನ್ನು ಕಳೆಯುತ್ತಿದ್ದಳು.

ಆ ಊರಿನ ಪ್ರಾಥಮಿಕ ಆರೋಗ್ಯಕೇಂದ್ರಕ್ಕೆ ಹೊಸದಾಗಿ ವರ್ಗವಾಗಿ ಬಂದವನು ಡಾ|| ಶಂಕರ. ತಕ್ಷಣಕ್ಕೆ ಆ ಶಂಕರ ಯಾರೆಂದೂ ಯಾರಿಗೂ ಗೊತ್ತಿರಲಿಲ್ಲ. ಭವಾನಿಯನ್ನು ನೋಡಲು ಬಂದವನನ್ನು ಮನೆಯುವರು ಯಾರೂ ಸಂತೋಷದಿಂದ ಮಾತನಾಡಿಸಿರಲಿಲ್ಲ. ನಂತರ ಅವನೇ ಡಾಕ್ಟರಾಗಿ, ಈ ಊರಿಗೆ ಬಂದಿರುವ ವಿಚಾರ ತಿಳಿದಾಗ ಚಿಂತಿತರಾಗಿದ್ದರು.

ಅದೇ ಊರಿನವನಾದರೂ, ಬೆಂಗಳೂರಿಗೆ ಹೋಗಿ ಡಾಕ್ಟರಾಗಿ ಹಿಂತಿರುಗಿ ಬಂದುದು ಎಲ್ಲರಿಗೂ ಹೆಮ್ಮೆಯ ವಿಷಯವೇ. ಆದರೂ ಏನೋ ಆತಂಕ. ಭವಾನಿಯ ತಲೆ ಕೆಡಿಸಿ, ಅವಳು ನಮ್ಮೆದುರಿಗೆ ನಿಂತು ದಿಟ್ಟವಾಗಿ ಮಾತನಾಡಲು ಇವನೇ ಕಾರಣ ಎಂದು ಎಲ್ಲರಿಗೂ ಅನುಮಾನ ಅಸಮಾಧಾನವಿತ್ತು. ಅವರುಗಳ ಆತಂಕ, ಅನುಮಾನ ನಿಜವಾಗುವ ಸಮಯ ಬಂದೇ ಬಿಟ್ಟಿತು. "ಕುಟುಂಬ ಕಲ್ಯಾಣ" ಪ್ರಚಾರ ಭಾಷಣದ ನಂತರ ಶಂಕರ ಸೀದಾ ಭವಾನಿಯ ಮನೆಗೆ ಬಂದು, ತಾನು ಅವಳನ್ನು ಮದುವೆಯಾಗ ಲಿರುವ ವಿಷಯವನ್ನು ತಿಳಿಸಿದ. ಎಲ್ಲರೂ ಕಕ್ಕಾಬಿಕ್ಕಿ. ಕಣ್ಣು ಕಣ್ಣು ಬಿಟ್ಟರು.

"ಈಗ ಭವಾನಿ ಪ್ರಬುದ್ಧಳು. ನೀವ್ಯಾರೂ ಒಪ್ಪದಿದ್ದರೂ ಅವಳು ನನ್ನೊಡನೆ ಬಂದು ನನ್ನನ್ನು ಮದುವೆಯಾಗುವ ಹಕ್ಕು ಅವಳಿಗಿದೆ. ಆದರೆ, ನನ್ನ ಆಸೆ, ನಿಮ್ಮೆಲ್ಲರ ಆಶೀರ್ವಾದದಿಂದ ನಮ್ಮಿಬ್ಬರ ವಿವಾಹ ನೆರವೇರಲೆಂದು, ದಯವಿಟ್ಟು ನೀವುಗಳು ನಿಂತು ಈ ಮದುವೆ ನೆರವೇರಿಸಿಕೊಡಬೇಕು." ಎಂದು ಕೇಳಿಕೊಂಡ.

ಮನೆಯ ಹಿರಿಯರು ಈಗಲೂ ಒಪ್ಪಲಿಲ್ಲ. ನಮಗಿಂತ ಕೆಳಜಾತಿಯೆಂದು ನೆವ ಹೂಡಿದರು.

"ಹಾಗಾದರೆ ಸರಿ. ನಿಮ್ಮ ಜಾತಿಯ ಹುಡುಗನನ್ನೇ ಆರಿಸಿ, ಭವಾನಿಗೆ ಮದುವೆ ಮಾಡಿ. ಅವಳ ಬಾಳು ಅರಳುವಂತೆ ಮಾಡಿ" ಎಂದು ನುಡಿದ.

"ಈಗೇನು ಕಡಿಮೆ ಆಗಿದೆ ಅವಳಿಗೆ?"

"ನಿಮ್ಮ ಮನೆಯಲ್ಲಿ ತಿನ್ನಲು, ಉಡಲು ಯಾವ ಕೊರತೆಯೂ ಅವಳಿಗಿಲ್ಲ ನಿಜ. ಆದರೆ ಅವಳ ವಯಸ್ಸು ಬಯಸುವ ಸಂಗಾತಿಯನ್ನೂ ನೀವು ಒದಗಿಸಬಲ್ಲಿರಾ? ಅವಳ ಆಸೆಗಳು ಏನೆಂದು ಎಂದಾದರೂ ವಿಚಾರಿಸಿದ್ದೀರಾ?"

ಎಲ್ಲರೂ ಮುಖ ಮುಖ ನೋಡಿಕೊಂಡರು.

"ಭವಾನಿ, ಮರ್ಯಾದಸ್ಥರ ಮನೆ ಹುಡುಗಿ ತಿಳುವಳಿಕಸ್ಥೆ. ನಿಮ್ಮಗಳ ಮಾನ ಹೋಗುವಂತಹ ಯಾವ ಕೆಲಸವನ್ನು ಮಾಡಲಿಲ್ಲ. ಮದುವೆಯಾಗಿಯೂ ವಿರಾಗಿನಿಯಂತೆ ಇರುವವರೆಗೂ, ನಿಮಗೇನೂ ಅನ್ನಿಸಿರಲಿಲ್ಲ. ಆದರೆ ಈಗ? ಅವಳ ಬಗ್ಗೆ ನಿಮಗೆ ಒಳಗೊಳಗೆ ಆತಂಕವಿರುವುದಿಲ್ಲವೆ? ಅವಳಿಗೆ ಒಬ್ಬ ರಕ್ಷಕ ಬೇಡವೆ? ನಾನು ಸಂಗಾತಿಯಾಗಿ ಅವಳನ್ನು ಸಂರಕ್ಷಿಸುತ್ತೇನೆ. ನನಗೆ ಅದಕ್ಕೆ ಅವಕಾಶ ಮಾಡಿಕೊಡಿ. ನೀವು ಒಪ್ಪದಿದ್ದರೂ, ನಾವು ಕಾನೂನಿನ ಸಹಾಯವನ್ನು ಪಡೆದು ಮದುವೆಯಾಗುತ್ತೇವೆ. ನನಗೆ ವರದಕ್ಷಿಣೆ ಬೇಡ. ಯಾವ ಆಡಂಬರವೂ ಬೇಡ. ಮನೆ ಮುಂದಿನ ಚಪ್ಪರದ ಕೆಳಗೆ ಮದುವೆ ಮಾಡಿಕೊಟ್ಟರೂ ಸಾಕು."

ಅವನ ಮಾತು ಯಾರಿಗೂ ಹಿತವಾಗಿರಲಿಲ್ಲ. ಆದರೆ ಭವಾನಿ ಎಲ್ಲರನ್ನು ಬಿಟ್ಟು ಹೋಗಲು ಸಿದ್ಧಳಾಗಿದ್ದಾಳೆ ಎನ್ನುವುದನ್ನು ಅರಿತರು. ಈಗ ಮನೆತನದ ಮರ್ಯಾದೆ ಉಳಿಯಬೇಕಾದರೆ, ತಾವು ಜಾಣರಾಗಬೇಕೆಂದು ಹಿರಿಯರು ಆಲೋಚಿಸಿದರು.

ಅಂತೂ ಕಡೆಗೆ ತಮ್ಮ ಸಮ್ಮತಿಯನ್ನಿತ್ತರು.

ಅವರಿಬ್ಬರ ವಿವಾಹ ಸರಳವಾಗಿ ನೆರವೇರಿದ ನಂತರ ಭವಾನಿ ಶಂಕರನೊಡನೆ ಬೆಂಗಳೂರಿಗೆ ಹೊರಡುವ ಆತುರವನ್ನು ವ್ಯಕ್ತ ಪಡಿಸಿದಳು.

"ನನಗೆ ಈ ಊರು ಇಷ್ಟ. ಹನಿಮೂನ್ ಮುಗಿಸಿ ಮತ್ತೆ ಇಲ್ಲಿಗೇ ಬಂದು ಬಿಡೋಣ. ನಾವಿಬ್ಬರೂ ಒಂದಾಗಿ ಸಮಾಜಸೇವೆ ಮಾಡೋಣ. ಆಗ ನಮ್ಮ ಜನ್ಮ ಸಾರ್ಥಕವಾಗುತ್ತದೆ. ನೀನೇನಂತಿಯಾ ಭವಾನಿ?"

"ನನಗೆ ಇದೆಲ್ಲ ಅರ್ಥವಾಗುಲ್ಲ. ನೀನು ಹೇಳಿದಂತೆ ಕೇಳುವವಳು ನಾನು. ನನ್ನ ಬಾಳನ್ನು ಹಸನು ಮಾಡಿದ್ದೀಯೆ. ನನ್ನ ಜನ್ಮ ಸಾರ್ಥಕವಾಯ್ತು." ಎನ್ನುತ್ತಾ ಅವನೊಡನೆ ಹೆಜ್ಜೆ ಹಾಕಿದಳು.

* * *

೮. ಹಾಗೂ ಕೆಟ್ಟ- ಹೀಗೂ ಕೆಟ್ಟ

ಶುಭ ತನ್ನ ಗೆಳತಿ ಗೀತಳಿಗೆ ಪತ್ರ ಬರೆದಳು. ಬೆಂಗಳೂರು ನಗರದ ಪರಿಚಯವಿಲ್ಲದ ಕಾರಣ ನನಗೆ ಸಹಾಯ ಮಾಡಬೇಕೆಂದು ಕೋರಿದ್ದಳು. ಬಸ್‌ಸ್ಟ್ಯಾಂಡ್‌ಗೆ ಬಂದಿದ್ದ ಗೆಳತಿಯ ಜತೆಯಲ್ಲಿ ಮನೆಗೆ ಹೋಗುವ ದಾರಿಯಲ್ಲಿ ತಾನು ಬಂದಿರುವ ಕಾರಣವನ್ನು ತಿಳಿಸಿದಳು.

"ಮದುವೆಯಾದ ಐದು ವರ್ಷಗಳ ನಂತರ ನನ್ನ ಗಂಡ, ಈಚೆಗೆ ತುಂಬಾ ಬದಲಾಯಿಸಿದ್ದಾರೆ. ನನ್ನ ಬಗ್ಗೆ ಏನೋ ಉದಾಸೀನ. ಈ ಊರಿಗೆ ವರ್ಗವಾಗಿ ಆರು ತಿಂಗಳ ಮೇಲಾಯ್ತು. ಮನೆ ಮಾಡಿ ನನ್ನನ್ನು ಕರೆಸಿಕೊಂಡಿಲ್ಲ. ನನ್ನನ್ನು ಮರೆತಿದ್ದಾರೆ ಅಂತನ್ನಿಸುತ್ತೆ." "ಅವರ ವಿಳಾಸ ಕೊಡು, ಹುಡುಕಿಸೋಣ. ಯಾವುದಾವರೂ ತೊಂದರೇಲಿ ಸಿಕ್ಕಿ ಬಿದ್ದಿರಬಹುದೇನೋ" ಎಂದಳು ಗೀತ.

ಎರಡು ದಿನ ಹುಡುಕಿದರೂ ಮಧುಕರನ ಪತ್ತೆಯಾಗದಿದ್ದಾಗ ಶುಭ ಹತಾಶಳಾದಳು. "ಅವರ ಫೋಟೋ ಇದ್ದರೆ ಕೊಡು. ಪೇಪರ್‌ನಲ್ಲಿ ಹಾಕಿಸೋಣ. ಎಲ್ಲಿದ್ದರೂ ಅವರೇ ಬರ್ತಾರೆ."

"ಹೂ ಇದೆ." ಎನ್ನುತ್ತಾ ತನ್ನ ಬಳಿ ಇದ್ದ ಗಂಡನ ಫೋಟೋನ ಗೆಳತಿಯ ಮುಖದ ಮುಂದೆ ಹಿಡಿದಳು. ಗೀತ ಮೂರ್ಛೆ ಬೀಳುವೊಂದು ಬಾಕಿ. "ಇವರು.... ನಿನ್ನ ಗಂಡ ಮಧುಕರನಾ?"

"ಹೌದು" ಎನ್ನುವಂತೆ ಶುಭ ತಲೆಯಾಡಿಸಿದಳು.

ಸ್ವಲ್ಪ ಹೊತ್ತು ಆಲೋಚಿಸಿ ನಂತರ ಕೇಳಿದಳು. "ನಿನ್ನ ಗಂಡನಿಗೂ ನಿನಗೂ ಏನಾದರೂ ಮನಸ್ತಾಪ ಆಗಿತ್ತಾ? ನೀನು ಏನೂ ತಿಳಿದುಕೊಳ್ಳಲ್ಲ ಅಂತಂದ್ರೆ ನಾನು ಒಂದು ವಿಷಯಾನ ತಿಳಿಸಲೇ ಬೇಕು. ಇವರು ನನಗೆ ಗೊತ್ತು. ನನ್ನ ಸಹೋದ್ಯೋಗಿ, ಆದರೆ, ಮದುವೇನೇ ಆಗಿಲ್ಲ ಅಂತ ಹೇಳಿದ್ದಾರಲ್ಲ. ಸುಳ್ಳು ಯಾಕೆ ಹೇಳಿರಬಹುದು?"

"ನನ್ನ ಮೇಲೆ ಅವರಿಗೆ ಪ್ರೀತಿ ಇಲ್ಲ. ಸದಾ ಬಂಜೆ–ಬಂಜೆ ಅಂತ ಬೈಯುತ್ತಿದ್ದರು. ಮಕ್ಕಳಾಗದೇ ಇದ್ದರೆ ಅದು ನನ್ನ ತಪ್ಪಾ?"

"ವಿದ್ಯಾವಂತರಾಗಿದ್ದೂ ಹೀಗೆಲ್ಲಾ ಅನ್ನುತ್ತಿದ್ದರಾ? ತನ್ನಲ್ಲೂ ದೋಷ

ವಿರಬಹುದು ಅಂತ ಅನ್ನಿಸ್ಲಿಲ್ವಾ ಅವರಿಗೆ?"

"ಬರೀ ಅದೊಂದೇ ಕಾರಣ ಅಲ್ಲ. ಬೇರೆ ಯಾರನ್ನೋ ಪ್ರೀತಿಸುತ್ತಿರಬಹುದು. ಅದಕ್ಕೇ ನನ್ನನ್ನು ಕಂಡರಾಗುತ್ತಿರಲಿಲ್ಲ."

"ಹಾಗೇನಾದರೂ ಇದ್ದರೆ ನೀನು ಖಂಡಿತಾ ಸುಮ್ಮನಿರಬೇಡ. ಡೈವೋರ್ಸ್ ತಗೊಂಡು, ಮತ್ತೆ ಮದುವೆಯಾಗಿ ಆರಾಮವಾಗಿರು."

"ಅದೆಲ್ಲಾ ಅಷ್ಟು ಸುಲಭಾನಾ ಗೀತಾ? ನಗೆಪಾಟಲಾಗುತ್ತೆ."

"ಏನಿಲ್ಲ. ಈ ಕಾಲದಲ್ಲಿ ಇಬ್ಬರಿಗೂ ಸಮಾನ ಹಕ್ಕಿದೆ. ನಿನ್ನ ಕಣ್ಣೀರಾಗಲೀ, ವ್ಯಥೆಯಾಗಲೀ ಅವನನ್ನು ಬದಲಾಯಿಸುವುದಿಲ್ಲ."

"ಆದರೂ ನಾನು ಮೊದಲು ಅವರನ್ನು ಕಂಡು ಮಾತನಾಡಬೇಕು ನಿನ್ನ ಜತೆಗೆ ನನ್ನನ್ನು ಆಫೀಸಿಗೆ ಕರೆದುಕೊಂಡು ಹೋಗು."

"ಅವನು ನನಗೂ ಸುಳ್ಳು ಹೇಳಿದ್ದಾನೆ. ನಾನು ಅವನಿಗೆ ಬುದ್ಧಿ ಕಲಿಸಬೇಕು. ಆದ್ದರಿಂದ ನನ್ನ ನಿನ್ನ ಸ್ನೇಹದ ಬಗ್ಗೆ ಅವನಿಗೆ ಖಂಡಿತಾ ತಿಳಿಯ ಕೂಡದು. ನೀನು ಬರದೇ ಇದ್ದಿದ್ದರೆ, ನಾನು ಮೋಸಹೋಗುತ್ತಿದ್ದೆ. ನನ್ನನ್ನು ಮದುವೆಯಾಗ್ತೀನಿ ಅಂತ ಹೇಳಿದ್ದ."

ಶುಭ ಪೆಚ್ಚಾದಳು ಆದರೂ ನುಡಿದಳು. "ನಾನು ಡೈವೋರ್ಸ್‌ಗೆ ಹಾಕ್ತೀನಿ. ನಂತರ ನೀವಿಬ್ಬರೂ ಮದುವೆಯಾಗಿ ಸುಖವಾಗಿರಿ."

"ನಿನ್ನ ಸುಖವನ್ನು ಬದಿಗಿಟ್ಟವನು, ನನ್ನನ್ನು ಖಂಡಿತಾ ಸುಖವಾಗಿಟ್ಟು ಕೊಳ್ಳುವುದಿಲ್ಲ. ಮದುವೆಯ ಮಾತಿರಲಿ, ಇನ್ನು ನನಗೆ ಅವನ ಸ್ನೇಹ ಸಹ ಬೇಡ. ಗಂಡಸರ ಎಲ್ಲಾ ತಪ್ಪುಗಳನ್ನು ಕ್ಷಮಿಸಿ, ಪತಿವ್ರತೆಯರ ಮುಖವಾಡ ಹಾಕಿಕೊಂಡು ಬದುಕಿರಲು ನಾವು ರಾಮಾಯಣದ ಕಾಲದಲ್ಲಿಲ್ಲ. ಇದು ಕಲಿಯುಗ ನಾವು ಸೇರಿಗೆ ಸವಾಸೇರಾಗಿರಬೇಕು."

"ಬೇಡ ಕಣೇ.... ನಿನ್ನ ಧೈರ್ಯ ನನಗಿಲ್ಲ"

"ಅದಕ್ಕೇ ನಿನ್ನ ಗಂಡನಿಗೆ ಅಷ್ಟು ಧೈರ್ಯ! ಇರಲಿ, ಅವನ ಮಾತೇ ನಡೆಯಬೇಕೂಂತ ಏನಿಲ್ಲವಲ್ಲ. ನಮಗೂ ಆಸೆ ಆಕಾಂಕ್ಷೆಗಳಿಲ್ಲವೇ? ಅದು ಎಲ್ಲರಿಗೂ ತಿಳಿಯಲೇ ಬೇಕು. ಗಂಡನಿಗೆ ನನ್ನ ಮೇಲೆ ಪ್ರೀತಿ ಇಲ್ಲ. ಬಂಜೆ ಅಂತ ಬೈದು ಅವಮಾನ ಮಾಡಿದಾನೇಂತ ಕಾರಣ ಕೊಟ್ಟು ಡೈವೊರ್ಸ್‌ಗೆ ಅರ್ಜಿ ಹಾಕು. ನಿಮ್ಮಿಬ್ಬರನ್ನು ಡಾಕ್ಟರರ ಪರೀಕ್ಷೆಗೆ ಒಳಪಡಿಸಿ, ರಿಪೋರ್ಟ್‌ನ್ನು ಕೋರ್ಟಿನಲ್ಲಿ ತೋರಿಸಬೇಕಾಗುತ್ತದೆ. ಆಗ ಬಯಲಾಗುತ್ತದೆ ಗಂಡನ ಬಣ್ಣ."

"ದೋಷ ನನ್ನಲ್ಲೇ ಇದ್ದರೆ ಅದು ತಪ್ಪಾಗುಲ್ವಾ ಗೀತ?"

"ತಪ್ಪೋ, ಸರಿಯೋ, ನಿಮ್ಮಿಬ್ಬರಲ್ಲೂ ಭಿನ್ನಾಭಿಪ್ರಾಯ ಮೂಡಿರುವುದಂತೂ ನಿಜ. ಅವನ ಜತೆ, ಜೀವನ ಪರ್‍ಯಂತ ಹೇಗಿರ್ತಿಯಾ? ದೋಷಯಾರಲ್ಲೇ ಇದ್ದರೂ, ಡೈವೋರ್ಸ್ ಸಿಗುತ್ತೆ. ಅದೇ ನ್ಯಾಯ" ಎನ್ನುತ್ತಾ ಸ್ನೇಹಿತೆಗೆ ಧೈರ್ಯ ಹೇಳಿ, ತನ್ನ ಬೆಂಬಲವನ್ನು ಸೂಚಿಸಿದಳು.

ಶುಭ ದುಗುಡವನ್ನು ಬದಿಗಿಟ್ಟು, ಮಧುಕರನನ್ನು ನೋಡದೇ ತನ್ನ ಊರಿಗೆ ವಾಪಸ್ಸು ಹೊರಟು ಹೋದಳು. ಡೈವೊರ್ಸ್‌ಗೆ ಅರ್ಜಿಸಲ್ಲಿಸಿದಳು. ಹೆಂಡತಿಯೇ ಅರ್ಜಿ ಹಾಕಿದುದು ಮಧುಕರನಿಗೆ ಸಮಾಧಾನ ನೀಡಿತ್ತು. ಜೀವನಾಂಶ ಕೊಡುವುದು ತಪ್ಪಬಹುದೇನೋ ಎಂದು ಲೆಖ್ಖಹಾಕಿದ.

ತಿಂಗಳಾನುಗಟ್ಟಲೆ, ಕೋರ್ಟಿನ ಪದ್ಧತಿಯಂತೆ ನಡೆದವಾದ ವಿವಾದಗಳ ನಂತರ, ಕಡೆಗೂ ಕೋರ್ಟ್ ಅವರಿಬ್ಬರ ವಿವಾಹ ವಿಚ್ಛೇದನಕ್ಕೆ ಅನುಮತಿಯನ್ನು ನೀಡಿತು. ಮಧುಕರನ ಮುಖ ಭಂಗವಾಗಿತ್ತು. 'ಕೈ ತೋರಿಸಿ ಅವಲಕ್ಷಣ' ಅಂತ ಅನ್ನಿಸಿಕೊಂಡ ಸ್ಥಿತಿ ಅವನದಾಗಿತ್ತು. ಶುಭಳ ಕಡೆ ನೋಡುವ ಧೈರ್ಯವಿಲ್ಲದೇ, ಸೀದಾ ಗೀತಳ ಮನೆಗೆ ಬಂದಿದ್ದ. ಕೋರ್ಟಿನ ತೀರ್ಪನ್ನು ಮಾತ್ರ ತಿಳಿಸಿದ. ಯಾವ ವಿವರವನ್ನೂ ತಿಳಿಸಲಿಲ್ಲ. ಗೀತ ಅವನ ಕಡೆ ನೋಡಿ ವ್ಯಂಗ್ಯ ನಗೆಯನ್ನು ನಕ್ಕಳು.

"ಯಾಕೆ ನಗ್ತೀದಿಯಾ? ಮದುವೆಯಾವಾಗ ಆಗೋಣ?" ಅಂತ ಅವನು ಕೇಳಿದಾಗ ತಲೆಯನ್ನು ಅಡ್ಡಡ್ಡ ಆಡಿಸಿದಳು.

"ಎಲ್ಲಾ ವಿಷಯವೂ ನನಗೆ ತಿಳಿದಿದೆ. ನಾನು ನಿಮ್ಮನ್ನ ಮದುವೆಯಾಗಲು ಸಾಧ್ಯವಿಲ್ಲ" ಖಂಡಿತವಾಗಿ ನುಡಿದಳು.

"ಯಾಕೆ ಆಗುಲ್ಲ? ಈ ಮದುವೆಗೋಸ್ಕರಾನೇ ನಾನು ಡೈವೋರ್ಸ್‌ತಗೊಂಡಿದ್ದು. ಈಗ ಏನೇನೋ ಆಡ್ತೀದೀಯಲ್ಲಾ."

"ಸರಿಯಾಗೇ ಮಾತಾಡ್ತಿದೀನಿ. ಶುಭ ನನ್ನ ಆಪ್ತಸ್ನೇಹಿತೆ. ಅವಳಿಂದ ನನಗೆ ಎಲ್ಲಾ ವಿಷಯ ತಿಳಿದಿದೆ. ತಂದೆಯಾಗುವ ಅರ್ಹತೆ ನಿಮಗಿಲ್ಲ. ಆದರೆ ತಾಯಿಯಾಗುವ ಆಸೆ ನನಗೆ ಇದೆ. ತಿಳೀತಾ?"

"ನಾವಿಬ್ಬರೂ ಮದುವೆಯಾಗದಿರಲಿ ಅಂತ ಅವಳು ಸುಳ್ಳು ಹೇಳಿದ್ದಾಳೆ. ಹಾಗೇನಿಲ್ಲ. ನನ್ನಲ್ಲಿ ಯಾವ ದೋಷವಿಲ್ಲ."

"ಸುಳ್ಳು ಹೇಳುತ್ತಿರುವವರು ನೀವು. ನನಗೂ ನನ್ನ ಸ್ವಂತ ಆಸೆಗಳಿವೆ. ಅದಕ್ಕೆ ಬೆಲೆ ಕೊಡುವವನನ್ನು ನಾನು ಮದುವೆಯಾಗ್ತೀನಿ. ಶುಭಳಿಗೆ ಈ ಸಲಹೆಯನ್ನು ಕೊಟ್ಟವಳು ನಾನೇ. ಗಂಡಸು ತನ್ನಲ್ಲಿ ದೋಷವನ್ನಿಟ್ಟುಕೊಂಡು

ಹೆಂಗಸರನ್ನು ದೂಷಿಸುವ ಇಂಥ ಪ್ರವೃತ್ತಿ ನನಗೆ ಇಷ್ಟವಾಗುವುದಿಲ್ಲ. ನಿಮ್ಮಂತಹವರಿಂದ ದೂರ ಇರುವುದೇ ನನಗೆ ಒಳ್ಳೆಯದು."

"ಪ್ರೀತಿಯ ನಾಟಕವನ್ನಾಡಿ, ಕೈ ಕೊಟ್ಟರೆ ನಾನು ಸುಮ್ಮನಿರುವುದಿಲ್ಲ."

ನೀವು ನನ್ನನ್ನು ಏನೂ ಮಾಡಲಾರಿರಿ. ನಾನೇನು ನಿಮ್ಮ ಹೆಂಡತಿಯಲ್ಲ. ನೀವು ಶುಭಳಿಂದ ದೂರವಿದ್ದು, ಅವಳನ್ನು ಉದಾಸೀನಮಾಡದೇ ಇದ್ದಿದ್ದರೆ, ಅವಳು ನಿಮ್ಮನ್ನು ಖಂಡಿತಾ ಕ್ಷಮಿಸಿರುತ್ತಿದ್ದಳು. ನೀವಾಗಿಯೇ ನೀವು ಅವಳನ್ನು ಕಳೆದುಕೊಂಡಿರಿ. ಈಗ, ಪ್ಲೀಸ್ ಇಲ್ಲಿಂದ ಹೊರಟುಹೋಗಿ. ನಿಮ್ಮ ಯಾವ ಮಾತೂ,ನನ್ನ ನಿರ್ಧಾರವನ್ನು ಬದಲಾಯಿಸುವಂತೆ ಮಾಡುವುದಿಲ್ಲ.

ಅಪರಿಚಿತನನ್ನು ಅಟ್ಟುವಂತೆ ಅವಳು ಮಾತನಾಡಿದಾಗ, ಅವನಿಗೆ ಅವಮಾನವಾದಂತಾಗಿತ್ತು. "ಛೇ. ಎಂತಹ ಕೆಲಸವಾಯ್ತು" ಎಂದು ತನ್ನನ್ನು ತಾನೇ ಹಳಿದುಕೊಂಡ. ಕೆಟ್ಟ ಮುಖ ಹೊತ್ತು, ಅಲ್ಲಿಂದ ಸೀದಾ ಶುಭಳನ್ನು ಹುಡುಕಿಕೊಂಡು ಬಂದ.

ಅವಳ ದೃಷ್ಟಿಗೆ ದೃಷ್ಟಿ ಸೇರಿಸಲು ಸಾಧ್ಯವಾಗದಾಗಿತ್ತು. ತಲೆ ಬಗ್ಗಿಸಿ ನುಡಿದ. "ಪ್ಲೀಸ್ ನನ್ನನ್ನು ಕ್ಷಮಿಸಿ ಬಿಡು..ನಾನು ಅವಿವೇಕದಿಂದ ವರ್ತಿಸಿಬಿಟ್ಟೆ."

"ನಿಮ್ಮ ತಪ್ಪು ಏನೂಂತ ನಿಮಗೇ ತಿಳೀತಲ್ಲ. ಅಷ್ಟು ಸಾಕು. ನಿಮ್ಮನ್ನು ಕ್ಷಮಿಸಲು ನಾನ್ಯಾರು?"

"ಹಾಗೆನ್ನ ಬೇಡ. ನನ್ನಲ್ಲಿ ದೋಷವನ್ನಿಟ್ಟುಕೊಂಡು, ನಿನಗೆ ದ್ರೋಹ ಮಾಡಲು ನೋಡಿದೆ. ಆದರೆ, ನೀನಿಲ್ಲದೇ ನಾನು ಬದುಕಿರಲಾರೆ. ಆದ್ದರಿಂದ ನಾವು ಮತ್ತೆ ಮದುವೆಯಾಗೋಣ......"

"ಮದುವೆ? ಮದುವೆ ಎನ್ನುವ ಪದಕ್ಕೆ ಮೊದಲು ಮರ್ಯಾದೆ ಕೊಡುವುದನ್ನು ಕಲಿಯಿರಿ. ಹೆಂಡತಿ ಎಂಬ ಗೌರವವೂ ಇಲ್ಲದೇ ಬಾಯಿಗೆ ಬಂದಂತೆ ನನ್ನನ್ನು ಅಂದು, ದೂರ ಹೋದವರು ನೀವು! ನನ್ನ ಮನಸ್ಸನ್ನು ಒಡೆದವರು ನೀವು! ನಾನು ಕೋರ್ಟಿಗೆ ಹೋಗುವಂತೆ ಮಾಡಿದವರು ನೀವು......! ನಿಮ್ಮೊಂದಿಗೆ ಮತ್ತೆ ಬಾಳುವ ಆಸೆ ನನಗಿಲ್ಲ. ಒಡೆದು ಹೋದ ಮನಸ್ಸನ್ನು ಮತ್ತೆ ಕೂಡಿಸಲು ಖಂಡಿತಾ ಸಾಧ್ಯವಿಲ್ಲ. ದಯವಿಟ್ಟು ಇಲ್ಲಿಂದ ಹೊರಟು ಹೋಗಿ. ಮತ್ತೆಂದೂ ನನ್ನೆದುರಿಗೆ ಬರುವ ಪ್ರಯತ್ನವನ್ನೂ ಮಾಡಬೇಡಿ." ಎಂದು ಹೇಳಿದಾಗ ಅಲ್ಲಿಂದ ಕದಲದೇ ವಿಧಿ ಇರಲಿಲ್ಲ.

* * * * * *

(ಬಹುಮಾನಿತ ಕಥೆ)

೯. ಗೌರಿ ರುದ್ರಿಯಾದಾಗ......

ಸಿದ್ದಪ್ಪಗೌಡರ ಎರಡನೇ ಮಗನ ಹೆಂಡತಿ ಗೌರಮ್ಮ ಅತೀ ರೂಪವಂತೆ. ಮದುವೆಯಾಗಿ ಎಂಟು ವರ್ಷ ಕಳೆದರೂ, ಮಕ್ಕಳಾಗದಿದ್ದಾಗ ಗಂಡ ಶಿವಪ್ಪ ಹೆಂಡತಿಯನ್ನು ತಿರಸ್ಕಾರದಿಂದ ನೋಡುತ್ತಿದ್ದ. ಅವಳ ಮೇಲಿನ ಪ್ರೀತಿ ಕಡಿಮೆ ಆಗಿತ್ತು. ಮನೆಗೆ ಬರದೇ ಎಲ್ಲೆಲ್ಲೋ ತಿರುಗಿ ತನ್ನ ಆರೋಗ್ಯವನ್ನು ಹಾಳು ಮಾಡಿಕೊಂಡಿದ್ದ.

ಈ ದುಃಖವನ್ನು ಮರೆಯಲು ಗೌರಮ್ಮನಿಗಿದ್ದ ಆಸರೆ ಎಂದರೆ ಮನೆ ಕೆಲಸವೊಂದೇ. ಬೆಳಿಗ್ಗೆ ಎದ್ದು ತಲೆಯ ಮೇಲೆ ಸೆರಗನ್ನೆಳೆದು ಮೂಕೆತ್ತಿನಂತೆ ದುಡಿಯಲು ಪ್ರಾರಂಭಿಸಿದರೆ, ರಾತ್ರಿ ಮಲಗುವವರೆಗೆ ಅವಳಿಗೆ ವಿಶ್ರಾಂತಿ ಇಲ್ಲ. ಕೊಟ್ಟಿಗೆ ಶುಚಿ ಗೊಳಿಸಿ, ದನಕರುಗಳಿಗೆ ಮೇವನ್ನು ಹಾಕಿ ಬರುವುದರಿಂದ ಹಿಡಿದು, ಮನೆಯ ಮುಂದೆ ಸಾರಿಸಿ ಗುಡಿಸಿ, ರಂಗವಲ್ಲಿ ಹಾಕಿ, ಸ್ನಾನ ಮಾಡಿ ಶಿವಪೂಜೆ ಮಾಡಿ, ಹತ್ತು ಹದಿನೈದು ಜನರಿಗೆ ತಿಂಡಿ ಕಾಫಿ ಮಾಡಿಕೊಟ್ಟು, ನಂತರ ಮನೆಯವರಿಗೆಲ್ಲಾ ರಾಗಿ ಮದ್ದೆ, ಕಾಳಿನ ಎಸರು, ಸೊಪ್ಪು ತರಕಾರಿಗಳ ಪಲ್ಯ, ಕಡೆದ ಮಜ್ಜಿಗೆಯ ತಯಾರಿ ಎಲ್ಲಾ ಇವಳದೇ.

ಅತ್ತೆ ನಂಜಮ್ಮ ವಯಸ್ಸಾಯಿತು ಕೈಯಲ್ಲಾಗುವುದಿಲ್ಲವೆಂದು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರೆ ಅಕ್ಕ ನಿಂಗಮ್ಮ ಮಕ್ಕಳ ತಾಯಿ ದೇವರು ಆಕೆಗೆ ಮಕ್ಕಳ ಭಾಗ್ಯವನ್ನು ಕರುಣಿಸಿದ್ದ ಬಸಿರಿ, ಬಾಣಂತಿ, ಆರೈಕೆ, ಮಕ್ಕಳ ಪಾಲನೆ, ಲಾಲನೆಯಲ್ಲಿ ಅವಳ ದಿನಚರಿ ಕಳೆದು ಹೋಗುತ್ತಿತ್ತು.

ಇಷ್ಟಾದರೂ ಗೌರಮ್ಮನಿಗೆ ಯಾವ ಬೇಸರವೂ ಇಲ್ಲ. ಹಳ್ಳಿ ಮನೆಯ ಕೆಲಸವನ್ನು ಕೈ ತುಂಬಾ ಹಂಚಿಕೊಂಡು, ಮನೆಯವರೊಡನೆ ನಗುನಗುತ್ತಾ ಕಾಲ ಕಳೆಯುತ್ತಿದ್ದಳು. ಅವರುಗಳಿಗೂ ಅಷ್ಟೆ. ಗೌರಮ್ಮನೆಂದರೆ ಯಾವ ತಾತ್ಸಾರವಿಲ್ಲ. "ಸಾಕು, ಬಾವ್ವಾ, ಅದೇನು ಅಷ್ಟು ದುಡಿತೀಯ–ಆಳುಕಾಳು ಗಳಿಲ್ವಾ!" ಅಂತಂದರೂ, ಗೌರಮ್ಮ ನಗುತ್ತಾ ಸುಮ್ಮನಾಗಿ ಬಿಡುವಳು.

ಶಿವಣ್ಣನಿಗೆ ಸಾಕಷ್ಟು ದುಶ್ಚಟಗಳಿದ್ದವು. ಅವನ ಗೆಳೆಯರ ಸಹವಾಸ ಅವನಿಗೆ ನಾನಾ ಕೆಟ್ಟ ಹವ್ಯಾಸಗಳನ್ನು ಹಚ್ಚಿಸಿದ್ದವು.

ನಮ್ಮ ಶಿವಣ್ಣಂಗೂ ಒಂದೆರಡು ಮಕ್ಕಳಾದ್ರೆ, ಅವನೂ ಎಲ್ಲಾ ಬಿಟ್ಟು ಬಿಡ್ತಾನೆ. ಅವನಿಗೆ ಅದೇ ದುಃಖ, ಮನೇನೇ ಸೇರುಲ್ಲ. "ಈ ಮಾತುಗಳನ್ನು ಕೇಳಿಸಿಕೊಂಡ ಗೌರಮ್ಮ ಬಾಗಿಲ ಮರೆಯಲ್ಲಿ ನಿಂತು ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದಳು."

ಮನೆಯವರ ಬಲವಂತಕ್ಕೆ ಪರಊರಿನ ಜಾತ್ರೆಗೆ ಗೌರಮ್ಮ ಶಿವಣ್ಣನೂ ಹೊರಟಿದ್ದರು. ಮನೆ ಮಂದಿಯೆಲ್ಲಾ ಗಾಡಿ ಕಟ್ಟಿಸಿಕೊಂಡು, ಬುತ್ತಿ ಸಮೇತ ಜಾತ್ರೆಗೆ ಹೊರಟರು. ಅಲ್ಲಿ ಶಿವಣ್ಣ ಗಂಗೆಯನ್ನು ಕಂಡ.

ಗಂಗೆ, ಗೌರಮ್ಮನ ಚಿಕ್ಕ ತಂಗಿ. ಎಳೆ ವಯಸ್ಸಿನ ಅವಳು ಚಿಗರೆಯಂತೆ ಆಕರ್ಷಕವಾಗಿ ಕಂಡಳು ಅವನ ಕಣ್ಣಿಗೆ. ರಸಿಕ ಶಿಖಾಮಣಿಗೆ ಅವಳನ್ನು ಎತ್ತಿ ಮುದ್ದಾಡುವ ಮನಸ್ಸಾಗಿತ್ತು. ಅವಳನ್ನೇ ತನ್ನ ಕೆಟ್ಟ ಆಲೋಚನೆಗಳಿಂದ ನೋಡಿ ನೋಡಿ ಆನಂದಿಸಿದ. ಅಂದಿನಿಂದ ಅವನಿಗೆ ಅವಳದೇ ಧ್ಯಾನ.

"ನಾನು ಗಂಗೇನ ಮದುವೆಯಾಗಬೇಕು....." ಅದೇ ಹಠ ಅವನಿಗೆ. ಹಿರಿಯರೆಲ್ಲ ಬುದ್ಧಿ ಹೇಳಿದರು.

"ಬೇಡ ಕಣ್ಲಾ ಶಿವ, ಆ ಹುಡ್ಗಿ ನಿಂಗೆ ತಕ್ಕೋಳಲ್ಲ. ಇನ್ನು ಚಿಕ್ಕದು. ನಿನಗೆ ಬೇರೆ ಕಡೆ ಲಗ್ನ ಕಟ್ಟಿಸುವಾ."

"ನಾ ಬಲ್ಲೆ. ನಂಗೆ ಗಂಗೆಯೇ ಬೇಕು...."

"ಗೌರಮ್ಮನೂ ಗಂಡನ ಕೈ ಕಾಲು ಕಟ್ಟಿ ಬೇಡಿದಳು."

"ನೀವು ಮತ್ತೆ ಮದುವೆಯಾಗಿ ನಾ ಬೇಡ ಅನ್ನೂದಿಲ್ಲ. ಆದರೆ ನನ್ನ ತಂಗಿನ್ನೇ ನನಗೆ ಸವತಿಯನ್ನಾಗಿ ತರಬೇಡಿ" ಅಂತ.

"ನಿನ್ನನ್ಯಾರೇ ಕೇಳಿದರು? ನೀನು ಈ ಮಾತಿಗೆ ಬಾಯಿ ಹಾಕಿದರೆ ನಿನ್ನನ್ನ ಈ ಮನೆಯಿಂದ ಆಚೆ ತಳ್ಳಿ ಬಿಡ್ತೀನಿ. ಹುಶಾರ್," ಹೆದರಿಸಿದ್ದ.

ಅಳಿಯನ ಈ ಹುಚ್ಚುತನ, ಗೌರಮ್ಮನ ತವರು ಮನೆಯವರ ತಲೆಯನ್ನು ಕೆಡಿಸಿತ್ತು. ಕೂರಿಸಿಕೊಂಡು ಬುದ್ಧಿ ಹೇಳುವ ಸಲುವಾಗಿ ಅವನನ್ನು ಕರೆಸಿದರು. ಶಿವಣ್ಣ ತನ್ನ ಪತ್ನಿಯೊಂದಿಗೆ ಬಂದ.

"ಏನೋ, ಶಿವಣ್ಣ.... ಹಿಂಗಾಡಿದ್ರೆ ಹೇಂಗೆ ಅಂತ. ಏನೋ ಶಿವ ಕಣ್ಣು ಬಿಡಲಿಲ್ಲ. ಗೌರಮ್ಮನಿಗೆ ಮಕ್ಕಳಾಗಲಿಲ್ಲ. ಅದರಲ್ಲಿ ಅವಳ ತಪ್ಪೇನೈತೆ.... ನಿನಗೆ ಆಸೆ ಇದ್ದರೆ ಒಂದು ಮಗೂನ ಸಾಕ್ಕೋ.... ನಿನಗೇನು ಕಮ್ಮಿ ಆಗೈತೆ?"

"ನಂಗೆ ಬುದ್ದಿ ಹೇಳೋ ಹಂಗಾದ್ರಾ ನೀವು.... ನನಗಿಷ್ಟ ಬಂದ

ಹಾಗೆ ನಾನು ಆಡ್ತೀನಿ. ಮಾಡ್ತೀನಿ. ನೀವು ಗಂಗೇನ ನನಗೆ ಮದುವೆ ಮಾಡಿಕೊಟ್ರೋ ಸರಿ. ಇಲ್ಲದಿದ್ದರೆ, ಈ ಗೌರೀನೂ ನಿಮ್ಮ ಮನೇಲೇ ಮಡಿಕ್ಕಳಿ.... ಬಾಳ ಮರ್ಯಾದೆ ಬತ್ತದೆ ನಿಮಗೆ."

"ಹಂಗೆ ಮಾಡಬೇಡ್ರೋ ಶಿವಣ್ಣ. ನಮ್ಮ ಗೌರಮ್ಮಂದು ಏನು ತಪ್ಪು ಇದ್ರಾಗೇ."

"ತಪ್ಪು ನಿಂದಲ್ಲ.... ಇನ್ನು ನಾನು ಏನೇನು ಮಾಡ್ತೀನಿ ನೋಡ್ತೀರಿ." ಎನ್ನುತ್ತಾ ಎದ್ದು ಮನೆಯಿಂದಾಚೆ ಹೊರಟ. ನಾಲ್ಕಾರು ದಿನಗಳು ಕಳೆದವು.

ಕೆರೆಗೆ ಬಟ್ಟೆ ಒಗೆಯಲು ಹೋಗಿದ್ದ ಗಂಗೆ ಎಷ್ಟು ಹೊತ್ತಾದರೂ ಮನೆಗೆ ಬರದಿದ್ದಾಗ, ಗೌರಿ ಬೆದರಿದಳು. ಗಂಗೆ ಏನೋ ಅಪಾಯಕ್ಕೆ ಸಿಕ್ಕಿ ಬಿದ್ದಿರಬಹುದೆಂಬ ಅನುಮಾನ ಕಾಡತೊಡಗಿತು.

ಊರ ಮಂದಿ ಗಂಡ ಬಿಟ್ಟವಳೆಂದು ಆಡಿಕೊಳ್ಳುವರೆಂದು ಅವಳು ಕೆರೆಯ ಬಳಿಗೆ ಹೋಗುತ್ತಿರಲಿಲ್ಲ. ಮನೆ ಮಂದಿಯೆಲ್ಲ ಅಲ್ಲಿ ಇಲ್ಲಿ ಎಲ್ಲೆಲ್ಲಿ ಹುಡುಕಿದರೂ ಗಂಗೆಯ ಪತ್ತೆ ಇಲ್ಲ. ಕಡೆಗೆ ಯಾರೋ ಹೇಳಿದರು.

"ಗಂಗೆ, ಕೆರೆ ತಾವ ಯಾರೋ ಗಂಡಸಿನ ಜತೆ ಮಾತಾಡ್ತಾ ನಿಂತ್ಹಂಗಿತ್ತು" ಅಂತ. ಸಾಯಂಕಾಲದ ಹೊತ್ತಿಗೆ ಶಿವಣ್ಣ ಗಂಗೆಯನ್ನು ಮನೆಗೆ ಕರೆತಂದು ಬಿಟ್ಟ. ಎಲ್ಲರಿಗೂ ಕೇಳುವಂತೆ ಕೂಗಿ ಹೇಳಿದ್ದ.

"ಇಟ್ಕಳಿ. ನಿಮ್ಮ ಹೆಣ್ಣು ಮಕ್ಕಳನ್ನು ನಿಮ್ಮ ಮನೇಲೇ ಇಟ್ಕಳ್ಳಿ. ಭಾಳ ಮರ್ಯಾದೆ ಬರುತ್ತೆ! ಒಬ್ಬಳು ಗಂಡ ಬಿಟ್ಟವಳು, ಇನ್ನೊಬ್ಬಳು ಶೀಲ ಕೆಟ್ಟವಳು." ಎಲ್ಲರ ಮುಖದಲ್ಲೂ ಸತ್ತ ಕಳೆ, ಯಾರಿಗೂ ಮಾತು ಬಾರದಂತಾಗಿತ್ತು. ಗೌರಿ, ಅಳುತಿದ್ದ ತಂಗಿಯನ್ನು ಹೇಗೆ ಸಮಾಧಾನ ಗೊಳಿಸಬೇಕೆಂದು ತಿಳಿಯದೇ ತಾನೂ ಅಳುತ್ತಿದ್ದಳು. ಗಂಗೆಯಂತಹ ಪವಿತ್ರ ಹೆಣ್ಣಿನ ಮೇಲೆ ಅವನು ಅತ್ಯಾಚಾರ ಮಾಡಬಹುದೆಂದು ಅವಳು ಅಂದು ಕೊಂಡಿರಲಿಲ್ಲ.

"ಮರ್ಯಾದೆಯಂತೂ ಹೋಯಿತು. ಇನ್ನೂ ಜೀವಮಾನವೆಲ್ಲಾ ಇಬ್ಬರೂ ಹೆಣ್ಣು ಮಕ್ಕಳನ್ನು ಕಣ್ಣ ಮುಂದೆ ಇಟ್ಟುಕೊಂಡು ಕೊರಗುವುದಕ್ಕಿಂತ, ಮದುವೆಯ ಶಾಸ್ತ್ರ ಮುಗಿಸಿ, ಗಂಡನ ಮನೆಗೆ ಕಳಿಸುವುದೇ ಸರಿ ಎಂದು ತೀರ್ಮಾನ ಮಾಡಿ, ಲಗ್ನ ಕಟ್ಟಿಸಿದರು. ಆದರೆ ಯಾರಿಗೂ ಸಂತೋಷವಿಲ್ಲ. ಗೌರಿಯಂತೂ ಕತ್ತಲ ಕೋಣೆಯನ್ನು ಸೇರಿ ಬಿಟ್ಟಿದ್ದಳು. ಗಂಗೆ ಅನ್ನ ನೀರು ಬಿಟ್ಟು ಕೃಶವಾಗಿದ್ದಳು."

ಮದುವೆಯ ಶಾಸ್ತ್ರವನ್ನು ಮುಗಿಸಿ, ಗಂಗೆಯನ್ನು ಗಂಡನ ಮನೆಗೆ ಕಳುಸಿದರು. "ಗೌರವ್ವ..... ಏನೋ ಆದದ್ದು ಆಗಿ ಹೋಯಿತು. ನಿನ್ನ ತಂಗಿಯನ್ನು ನಿನ್ನ ಮಗಳಂತೆ ನೋಡಿಕೊಳ್ಳಬೇಕವ್ವ." ಎಂದು ತಂದೆ ತಾಯಿ ಕೇಳಿಕೊಂಡಾಗ, ಅವಳು ತಲೆಯಾಡಿಸಿದ್ದಳು.

ಗೌರಮ್ಮ ನಂತಹ ಗರತಿಗೆ ತನ್ನ ಮಗ ದ್ರೋಹ ಮಾಡಿದ ಅಂತ ಶಿವಣ್ಣನ ತಂದೆ ತಾಯಿಗೆ ಬೇಸರವಾಗಿದ್ದರೂ, ಈ ಗಂಗೆಯ ಹೊಟ್ಟೆಯಲ್ಲಾದರೂ, ನಾಲ್ಕಾರು ಮಕ್ಕಳು ಹುಟ್ಟಿಯಾವು. ಅನ್ನೋ ಆಸೆ.

ಆದರೆ ದಿನಗಳು ಕಳೆದವು. ತಿಂಗಳುಗಳು ಉರುಳಿದವು. ವರುಷಗಳು ಜಾರಿದವು. ಆದರೆ ಗಂಗೆಗೆ ಗರ್ಭ ನಿಲ್ಲಲಿಲ್ಲ. ಮದುವೆಗೆ ಮುಂಚೆಯೇ ಅತ್ಯಾಚಾರಕ್ಕೆ ಒಳಗಾಗಿದ್ದ ಅವಳಿಗೆ ಗಂಡನ ಮೇಲೆ ಯಾವ ಪ್ರೀತಿಯೂ ಇರಲಿಲ್ಲ. ಅವನು ಬಳಿಗೆ ಬಂದನೆಂದರೆ ಅಸಹ್ಯದಿಂದ ಅವಳಿಗೆ ವಾಂತಿ ಬರುವಂತಾಗುತ್ತಿತ್ತು. ಊಟದ ಮನೆಯಲ್ಲಿ ಒಬ್ಬಳೇ ಮಲಗಿರುತ್ತಿದ್ದ ಗೌರಮ್ಮ ರಾತ್ರಿಯೆಲ್ಲಾ ಜಾಗರಣೆ ಮಾಡಿ ಗಂಡನ ಮೇಲಿನ ದ್ವೇಷವನ್ನು ಹೆಚ್ಚಿಸಿ ಕೊಳ್ಳುತ್ತಿದ್ದಳು.

ಮೂರು ವರ್ಷ ಕಳೆದರೂ, ಗಂಗೆಗೆ ಮಕ್ಕಳಾಗದಿದ್ದಾಗ ಶಿವಣ್ಣ ಬೇಸತ್ತ. ಅಲ್ಲದೇ ಗಂಗೆಯ ಮೇಲಿನ ಆಕರ್ಷಣೆ ಕಡಿಮೆ ಆಗಿತ್ತು. ಅಲ್ಲದೇ ಈಚೆಗೆ ಅವನ ಆರೋಗ್ಯ ಕೆಟ್ಟಿತ್ತು. ತನ್ನ ಲಂಪಟತನದಿಂದ ಅವನು ಶಕ್ತಿಯನ್ನು ಕಳೆದುಕೊಂಡು, ರೋಗದ ಗೂಡಾಗಿದ್ದ. ಹಳ್ಳಿಯ ವೈದ್ಯರ ಮೇಲೆ ಅವನಿಗೆ ನಂಬಿಕೆ ಇರಲಿಲ್ಲವಾದ್ದರಿಂದ, ಪಟ್ಟಣದ ಡಾಕ್ಟರಿಗೆ ತೋರಿಸಿ ಬಂದಿದ್ದ. ಅವರು ಅವನ ಖಾಯಿಲೆಯನ್ನು ಖಚಿತಗೊಳಿಸಿದ್ದರು.

ಈಗ ಅವನಿಗೆ ಬುದ್ಧಿ ಬಂದಿತ್ತು. ಮನೆ ಬಿಟ್ಟು ಕದಲದೇ ಮನೆಯಲ್ಲೇ ಕೂತವನನ್ನು ಕಂಡು ಎಲ್ಲರಿಗೂ ಭಯ. ಊಟ ಸೇರುತ್ತಿರಲಿಲ್ಲ. ನಿದ್ದೆ ಬರುತ್ತಿರಲಿಲ್ಲ. ಕೂತಲ್ಲಿಂದಲೇ ಅಬ್ಬರಿಸುತ್ತಾ ತನ್ನ ಹೆಂಡತಿಯರನ್ನು ಬಾಯಿಗೆ ಬಂದಂತೆ ಬೈಯುತ್ತಿದ್ದ.

ಅವನಿಗೆ ಏನೋ ಘೋರ ಖಾಯಿಲೆ, ಅವನ ಸಮೀಪಕ್ಕೆ ಹೋದರೆ ತಮಗೆಲ್ಲಿ ಅಂಟಿ ಬಿಡುತ್ತದೋ ಎನ್ನುವಂತೆ, ಎಲ್ಲರೂ ಅವನನ್ನು ದೂರ ವಿಟ್ಟಿದ್ದರು. ಇದು ಅವನ ಆಕ್ರೋಶವನ್ನು ಹೆಚ್ಚಿಸುತ್ತಿತ್ತು. ಗಂಡನ ಈ ಹೀನಸ್ಥಿತಿಗೆ ಗಂಗೆಗಾಗಲೀ, ಗೌರಿಗಾಗಲೀ, ಕನಿಕರ ಬರುತ್ತಿರಲಿಲ್ಲ. "ತಮ್ಮಿಬ್ಬರ ಬಾಳನ್ನು ಹಾಳು ಮಾಡಿದನಲ್ಲವೇ.... ಕೊಳೆತು ಹಾಳಾಗಲೀ, ಎಂದು

ಗೌರಮ್ಮ ಬೈದರೆ, ಗಂಗೆ ಸುಮ್ಮನೇ ಕಣ್ಣೀರನ್ನು ಸುರಿಸುತ್ತಿದ್ದಳು. ತನ್ನನ್ನು ಪತಿವ್ರತೆ ಎಂದು ಯಾರೂ ಹೊಗಳಬೇಕಾಗಿಲ್ಲ ಎಂದು, ಗೌರಮ್ಮ ಗಂಡನ ಸೇವೆ ಮಾಡಲು ನಿರ್ಧರಿಸಿದರೆ, ತನ್ನ ಕೋಮಲ ದೇಹವನ್ನು ಮನಸ್ಸನ್ನು ಹರಿದು ಚೂರು ಮಾಡಿದ ದ್ರೋಹಿ, ಅವನ ಮೈಯಲ್ಲಿ ತೂತುಗಳಾದರೂ ಸರಿ, ತಾನು ಅವನ ಬಳಿಗೆ ಹೋಗುವುದಿಲ್ಲವೆಂದು ಗಂಗೆ ನಿರ್ಧರಿಸಿದ್ದಳು.

ಒಂದು ರಾತ್ರಿ ಎಲ್ಲರೂ ಮಲಗಿದ್ದ ಸಮಯ. ಶಿವಣ್ಣ ತೆವಳುತ್ತಾ ತನ್ನ ಹೆಂಡತಿಯರು ಮಲಗಿದ್ದೆಡೆಗೆ ಬಂದ. ನಿದ್ದೆ ಬಾರದೇ ಹೊರಳಾಡುತ್ತಿದ್ದ ಗೌರಮ್ಮ ತೆವಳಿಕೊಂಡು ಬರುತ್ತಿದ್ದ ಗಂಡನನ್ನು ಕಂಡು ಉಸಿರು ಬಿಗಿ ಹಿಡಿದು ಮಲಗಿದ್ದಳು. ಹೆದರಿದ ಗಂಗೆ, ಮೆಲ್ಲಗೆ ಇನ್ನೊಂದು ಪಕ್ಕಕ್ಕೆ ಉರುಳುತ್ತಾ ಗೋಡೆ ಬದಿಯನ್ನು ತಲುಪಿದಳು.

ಗಂಡ ಹತ್ತಿರ ಹತ್ತಿರಕ್ಕೆ ಬರುತ್ತಿದ್ದಂತೆ, ಆವೇಶಕ್ಕೆ ಒಳಗಾದ ಗೌರಮ್ಮ, ತನ್ನ ತಲೆ ದೆಸೆಯಲ್ಲಿಟ್ಟುಕೊಂಡಿದ್ದ ದೊಣ್ಣೆಯಿಂದ ಶಿವಣ್ಣನ ತಲೆಗೆ ಜೋರಾಗಿ ಬಡಿದಳು. ಕೂಗಿ ಕಿರುಚಲೂ, ತಾಕತ್ತಿಲ್ಲದ ಶಿವಣ್ಣನೋ ಹಾಗೇ ನೆಲಕ್ಕೆ ಒರಗಿದ್ದ. ಅಕ್ಕನ ರೌದ್ರಾವತಾರಕ್ಕೆ ಗಂಗೆ ಹೆದರಿ ಹಾಗೇ ಮೂರ್ಛೆ ಹೋಗಿದ್ದಳು.

ಆವೇಶ ಕಡಿಮೆಯಾದ ಮೇಲೂ, ಗೌರಮ್ಮ ತನ್ನ ಕೃತ್ಯಕ್ಕೆ ಮರುಗಿರಲಿಲ್ಲ. ಬೆಳಗಾಯಿತು. ಎಲ್ಲರಿಗೂ ವಿಷಯ ತಿಳಿಯಿತು. "ಗೌರಿ ಗಂಡನ್ನ ಹೊಡೆದು ಕೊಂದಳಂತೆ." ಎನ್ನುತ್ತಾ ಜನ ಸೇರತೊಡಗಿದರು. ಪೋಲಿಸ್‌ನವರಿಗೂ ವಿಷಯ ತಿಳಿಯಿತು. ಅವರೂ ಬಂದು ಮುಂದಿನ ಕೆಲಸದ ಕಡೆ ಗಮನ ಕೊಟ್ಟದ್ದರು.

ಪೋಲಿಸರೊಡನೆ ಅವಳು ಹೋಗುವ ಮುನ್ನ ಅವಳ ತಂದೆ ಕೇಳಿದ.

"ಗೌರಾ, ಯಾಕವ್ವಾ, ಹಿಂಗೆ ಮಾಡಿದೆ? ಕೈಯಾರೇ ನೀನೇ ನಿಮ್ಮಿಬ್ಬರ ಸೌಭಾಗ್ಯ ಕಳೆದುಕೊಂಡುಬಿಟ್ಟೆಯಲ್ಲಾ.....?"

"ಇವನು ನಮ್ಮ ಸೌಭಾಗ್ಯನಾ? ಇವನು ನಮ್ಮ ದೌರ್ಭಾಗ್ಯ." ಈ ಕೆಲಸಾನ, ನಾನು ಎಷ್ಟೋ ವರ್ಷ ಮುಂಚೇನೆ ಮಾಡಿದ್ದರೆ, ನಮ್ಮ ಗಂಗೆಯ ಪವಿತ್ರತೆ ಉಳೀತಿತ್ತು. ಅದೇ ನನಗೆ ಕೊರಗು. ನನ್ನ ಗಂಡನ್ನ ನಾನು ಕೊಂದೆ ಎನ್ನುವ ಅಳುಕು ನನಗೆ ಎಳ್ಳಷ್ಟು ಇಲ್ಲ ಎನ್ನುತ್ತಾ ಜೀಪನ್ನು ಹತ್ತಿದಳು. ಓಡಿ ಬಂದ ಗಂಗೆಯನ್ನು ಅಪ್ಪಿಕೊಂಡು ತಲೆ ಸವರಿ ಸಮಾಧಾನ

ಹೇಳಿದಳು.

"ನನ್ನ ಮೇಲೆ ನಿನಗೇನೂ ಕೋಪ ಇಲ್ಲ ಅಂತ ಅಂದ್ಕೊಂಡಿದೀನಿ ಗಂಗೆ. ಇವತ್ತಿಗೆ ನಿನ್ನ ಶಾಪ ತೀರಿತು ಅಂತಿಟ್ಕೋ. ಕೈತುಂಬಾ ಕೆಲಸ ಮಾಡು, ಹೊಟ್ಟೆ ತುಂಬಾ ಊಟ ಮಾಡು. ಕಣ್ತುಂಬಾ ನಿದ್ದೆ ಬರುತ್ತೆ. ಬದುಕಿರೋವರೆಗೂ ಅತ್ತೆ ಮಾವನ, ಹಿರಿಯವರ ಸೇವೆ ಮಾಡು. ಇವರೆಲ್ಲಾ ಒಳ್ಳೆಯವರು." ಎನ್ನುತ್ತಾ ಅಲ್ಲಿ ನಿಂತಿದ್ದವರಿಗೆ ಕೈ ಮುಗಿದಳು. ಎಲ್ಲರೂ ನೋಡುತ್ತಿದ್ದಂತೆಯೇ ಪೋಲೀಸ್ ಜೀಪು ಕಣ್ಮರೆಯಾಯಿತು.

* * *

೧೦. ಸನ್ಮಾನ

ರಂಗಸ್ವಾಮಿ ದಂಪತಿಗಳು ಅದೇ ತಾನೇ ಊಟ ಮುಗಿಸಿ, ಟಿ.ವಿ.ಯ ಮುಂದೆ ಕುಳಿತಿದ್ದರು. ಆಗಿನ್ನು ಸುಮಾರು ರಾತ್ರಿ ಎಂಟೂವರೆ ಗಂಟೆಯ ಸಮಯ. ರಾತ್ರಿಯ ಹೊತ್ತು ತಡವಾಗಿ ಊಟ ಮಾಡಿದರೆ, ನಿದ್ದೆ ಬರುವುದಿಲ್ಲವೆಂದು, ಮುಂಚಿತವಾಗಿ ಲಘು ಆಹಾರವನ್ನು ತೆಗೆದುಕೊಳ್ಳುವ ಪರಿಪಾಠವನ್ನಿಟ್ಟುಕೊಂಡಿದ್ದರು ಆ ದಂಪತಿಗಳು. ಗಂಡು ಮಕ್ಕಳಿಬ್ಬರೂ ಬೇರೆ ಬೇರೆ ಊರಿನಲ್ಲಿದ್ದಾರೆ. ರಂಗಸ್ವಾಮಿಗೆ ರಿಟೈರ್ ಆಗಿದೆ. ಆದರೆ ಅವರ ಪತ್ನಿ ಭಾಗ್ಯಮ್ಮನಿಗೆ "ತನ್ನ ಕೆಲಸ ಕಾರ್ಯಗಳಿಂದ, ತಾನು ರಿಟೈರ್ ಆಗುವುದು ಎಂದಿಗೋ" ಎಂಬ ಅಸಹನೆ. ಆದರೆ ಕೆಲಸದ ಒತ್ತಡ ಸ್ವಲ್ಪ ಕಡಿಮೆ ಆಗಿದೆ. ಎರಡೂ ಹೊತ್ತು ತಮ್ಮಿಬ್ಬರಿಗೆ ಸ್ವಲ್ಪ ಬೇಯಿಸಿಕೊಳ್ಳುವುದು, ತಿನ್ನುವುದು, ಮಲಗಿ ವಿಶ್ರಾಂತಿ ತೆಗೆದುಕೊಳ್ಳುವುದು. ಉಳಿದಂತೆ ಈ ಮೂರ್ಖರ ಪೆಟ್ಟಿಗೆಯ ಮುಂದೆ ಕುಳಿತು ತೂಕಡಿಸುವುದು. ಇದು ದಿನಚರಿ. ಟಿ.ವೀ.ಲಿ ಯಾವುದೋ ಸನ್ಮಾನ ಸಮಾರಂಭ ಪ್ರಸಾರವಾಗುತ್ತಿತ್ತು.

ತೂಕಡಿಸುತ್ತಾ ಇದ್ದ ಭಾಗ್ಯಮ್ಮ ಬೆಚ್ಚಿ ಎದ್ದಳು... ಯಾರೋ ದಬದಬನೆ ಬಾಗಿಲನ್ನು ಬಡಿಯುತ್ತಿದ್ದಾರೆ. ಕಾಲಿಂಗ್ ಬೆಲ್ ಸಹ ಅರಚಿಕೊಳ್ಳುತ್ತಿದೆ... 'ರೀ....ರೀ....' ಪಕ್ಕದಲ್ಲಿ ತೂಕಡಿಸುತ್ತಾ ಕೂತಿದ್ದ ಗಂಡನನ್ನು ಕರೆದು ಎಬ್ಬಿಸಿದಳು.

"ಯಾರೋ ಬಾಗಿಲು ಬಡೀತಿದ್ದಾರೆ. ಡಕಾಯಿತರು ಇರಬಹುದೋ ಏನೋ.... ನಂಗಂತೂ ಭಯವಾಗ್ತಿದೆ. ಈಗೇನು ಮಾಡೋಣ...."

"ಇನ್ನು ಒಂಭತ್ತು ಗಂಟೆ ಸಹ ಆಗಿಲ್ಲ. ಇಷ್ಟು ಮುಂಚೆ ಯಾವ ಡಕಾಯಿತ ಬರ್ತಾನೆ. ನಾನು ನೋಡ್ತೀನಿ." ಎನ್ನುತ್ತಾ ಎದ್ದ. ಮತ್ತೆ ಬಾಗಿಲು ದಬ ದಬ ಸದ್ದು. ಹೆಂಡತಿ ಬೇಡ ಬೇಡ ಎಂದರೂ, ಬಾಗಿಲ ಬಳಿಗೆ ಸರಿದು, 'ಯಾರು?....' ಎಂದ.

"ನಾವು...." ಒಟ್ಟಿಗೆ ಹತ್ತಾರು ಹೆಣ್ಣು ಧ್ವನಿಗಳು ಕೇಳಿದಾಗ ಹೆಂಡತಿಯ ಕಡೆ ತಿರುಗಿ, ಯಾರೋ ಹೆಂಗಸ್ರಿದ್ದ ಹಾಗಿದೆ... ನೀನೇ ಬಾಗಿಲು ತೆಗಿ ಎಂದ.

"ಲೇಡಿ ಡಕಾಯಿತಳೇ ಇರಬಹುದು. ನಾನು ತೆಗಿಯುಲ್ಲ...." ಮತ್ತೆ ಮತ್ತೆ ಕಾಲಿಂಗ್ ಬೆಲ್ ಸದ್ದಾದಾಗ, ರಂಗಸ್ವಾಮಿ ವಿಧಿ ಇಲ್ಲದೇ ಬಾಗಿಲನ್ನು ತೆಗೆದ. ಅವನನ್ನು ತಳ್ಳಿಕೊಂಡೇ ಒಳಗೆ ಬಂದ. ನಾಲ್ಕಾರು ಜನ ಹೆಂಗಸರು, "ಎಲ್ಲಿ ಮೇಡಂ.... ಎಲ್ಲಿ ಮೇಡಂ." ಎನ್ನುತ್ತಾ ಒಳಗೆ ನುಗ್ಗಿದರು.

ಇನ್ನು ಮುಗೀತು ತನ್ನ ಗತಿ ಎಂದುಕೊಂಡು ಭಾಗ್ಯಮ್ಮ ಒಳಸರಿದು ಕೋಣೆಯ ಬಾಗಿಲ ಮರೆಯಲ್ಲಿ ನಿಂತಳು.

"ಎಲ್ಲೀ.... ಎಲ್ಲೀ.... ಮೇಡಂ," ಎನ್ನುತ್ತಾ ಅವಳನ್ನು ಹುಡುಕುವಂತೆ, ರೂಮಿನ ಕಡೆಗೆ ಹೋಗುವಷ್ಟರಲ್ಲಿ ಭಾಗ್ಯಮ್ಮಳೇ ನಡುಗುತ್ತಾ ಹೊರಗೆ ಬಂದಳು. ತೊದಲುತ್ತಾ,... "ಯಾರು ನೀವು? ಏನು ಬೇಕು?" ಅಂತ ಕೇಳಿದಳು.

"ಹೆದರಬೇಡಿ ಮೇಡಂ. ನಾವುಗಳು ಇಲ್ಲಿಯ ಮಹಿಳಾ ಸಂಘದ ಸದಸ್ಯೆಯರು."

ಈಗ ಸ್ವಲ್ಪ ನಿರಾಳವಾಗಿತ್ತು. "ಬೆಳಗಿನ ಹೊತನ್ನಲ್ಲಿ ಬನ್ನಿ. ನಾವು ಇಷ್ಟು ಹೊತ್ನಲ್ಲಿ ಮನೆಯಲ್ಲಿ ಹಣವನ್ನು ಇಟ್ಟುಕೊಂಡಿರುವುದಿಲ್ಲ."

"ನಿಮ್ಮ ಹಣ ಯಾರಿಗೆ ಬೇಕಾಗಿದೆ ಮೇಡಂ. ನಾವು ಚಂದಾ ಕೇಳುಕ್ಕೆ ಬಂದಿದೀವಿ ಅಂತ ತಿಳಕ್ಕೊಂಡ್ರಾ.... ನಡೀರಿ ನಮ್ಮ ಜತೇಲಿ.... ಸದಸ್ಯೆ ಒಬ್ಬಳು. ಅವಳ ಕೈ ಹಿಡಿದಳು."

"ನಾನೇಕೆ ಬರಬೇಕು! ನಾನೇನು ತಪ್ಪು ಮಾಡಿದ್ದೇನೆ...." ಸದಸ್ಯೆಯರು ಪಕಪಕನೆ ನಕ್ಕು....

"ನೀವೆಂತಹ ಪುಕ್ಕಲು ಮೇಡಂ... ಸುಮ್ಮನೇ ನಡೀರಿ ನಮ್ಮ ಜತೇಲಿ.... ನಿಮಗೆ ಸನ್ಮಾನ ಮಾಡುತ್ತೇವೆ." ಭಾಗ್ಯಮ್ಮ ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಬೆವರೊರೆಸಿ ಕೊಂಡಳು.

"ಸನ್ಮಾನ? ನನಗ್ಯಾಕೆ?....ಅದೂ ಇಷ್ಟು ಹೊತ್ನಲ್ಲಿ?"

"ಅದನ್ನೆಲ್ಲ ಈಗ ಹೇಳೋಕೆ ಸಮಯವಿಲ್ಲ. ಹೇಳ್ತಾ ಕೂತರೆ ಒಂದು ದೊಡ್ಡ ಕತೆ. ಅಷ್ಟರಲ್ಲೇ ಬೆಳಕು ಹರಿಯುತ್ತೆ. ಎಲ್ಲರೂ ನಿಮಗೋಸ್ಕರನೇ ಕಾಯ್ತಾ ಇದ್ದಾರೆ ಸುಮ್ಮನೇ ಬನ್ನಿ ಮೇಡಂ."

ಅವರು ಬಿಡುವಂತೆ ಕಾಣಲಿಲ್ಲವಾದ್ದರಿಂದ ಭಾಗ್ಯಮ್ಮ ಎದ್ದಳು.

"ಈಗ ಬಂದು ಬಿಡ್ತೀನಿ ಒಂದ್ನಿಮಿಷ. ಸೀರೆ ಬದಲಾಯಿಸಿ ಬಿಟ್ಟು ಬರ್ತೀನಿ."

"ಏನೂ ಬೇಡ ಮೇಡಂ. ನೀವು ಹೀಗೇ ಚೆನ್ನಾಗಿದೀರಿ. ಈ ಸೀರೇನೇ ಸಾಕು. ಹೊರಡಿ ಹೊತ್ತಾಯ್ತು."

"ಏನೂ..... ನೀವು ಸುಮ್ಮನೇ ನೋಡ್ತಾನೇ ನಿಂತಿದ್ದೀರಿ? ಇವರೆಲ್ಲ ಗೂಂಡಾಗಿರಿ ಮಾಡ್ತಾ ಇದ್ದಾರೆ. ಪೋಲಿಸರಿಗೆ ಫೋನ್ ಮಾಡಿ...."

"ಏನ್ ಮೇಡಂ ನೀವು.... ಸನ್ಮಾನ ಮಾಡ್ತೀನಿ ಅಂದರೆ ಗೂಂಡಾಗಿರಿ ಅಂತೀರಲ್ಲ. ಸುಮ್ಮನೇ ಈ ಅವಕಾಶ ಕಳೆದು ಕೊಳ್ತೀರಿ ಅಷ್ಟೆ...."

ರಂಗಸ್ವಾಮಿ ನುಡಿದ. "ನಿನಗೂ ಸಮಾರಂಭ ಅಂದರೆ ಸಂಭ್ರಮ. ಯಾರೋ ಪುಣ್ಯಾತ್ಮರು ಅವರಾಗಿಯೇ ಬಂದು ಸನ್ಮಾನ ಮಾಡ್ತೀನಿ ಅಂತಂದ್ರೆ ಯಾಕೆ ಬೇಡಾಂತೀಯ ಹೋಗಿ ಬಾ...."

ಗಂಡನೂ ಹೀಗೆ ಹೇಳಿದ ಮೇಲೆ ಭಾಗ್ಯಮ್ಮ ವಿಧಿ ಇಲ್ಲದೇ ಅವರ ಜತೆ ಹೊರಟಳು. ಅಪರಾಧಿಯಂತೆ. ಮನೆಯಿಂದ ಹೆಚ್ಚಿಗೆ ದೂರವೇನೂ ಹೋಗಬೇಕಾಗಿರಲಿಲ್ಲ. ಹಿಂದಿನ ರಸ್ತೆಯ ಮೂಲೆಯಲ್ಲಿರುವ ಖಾಲಿ ಸೈಟಿನಲ್ಲಿ ಹಾಕಿರುವ ಶಾಮಿಯಾನ ಹತ್ತಿರವಾಡಗುತ್ತಿದ್ದಂತೆ, ಒಳಗಿನಿಂದ ಹತ್ತಾರು ಜನ ಒಕ್ಕೊರಲಿನಿಂದ ಭಜನೆ ಮಾಡುತ್ತಿದ್ದುದು ಕೇಳಿಬಂತು.

"ಹರೇ ರಾಮ ಹರೇ ರಾಮ.... ರಾಮ ರಾಮ ಹರೇ.. ಹರೇ.." ಇದು ಯಾವ ಭಜನಾಮಂಡಳಿ ಎಂದು ಕೇಳುವ ಧೈರ್ಯವೂ ಇಲ್ಲದೇ ಭಾಗ್ಯಮ್ಮ ಸುಮ್ಮನೇ ನಡೆದಳು. ಚಪ್ಪರದ ಒಳಗೆ ಹೋಗುತ್ತಿದ್ದಂತೆ ಎದುರಿಗೆ ಕಾಣುವ ಒಂದು ದೇವಿಯ ಪಠ, ಅದನ್ನು ಅಲಂಕರಿಸಿದ್ದರು. ಊದುಬತ್ತಿಯ ಪರಿಮಳ ಅಲ್ಲೆಲ್ಲಾ ಪಸರಿಸಿತ್ತು. ಈ ದೇವಿಯೇ ನನ್ನನ್ನು ಈ ಭಕ್ತರಿಂದಿಂದ ಕಾಪಾಡಬೇಕು ಎಂದು ಕೊಳ್ಳುತ್ತಾ ಭಾಗ್ಯಮ್ಮ ಮುನ್ನಡೆದಳು.

"ಬರಬೇಕು ಬರಬೇಕು. ಮುಖ್ಯ ಅತಿಥಿಗಳು ಹೀಗೆ ಬರಬೇಕು.... ಎಂದು ನಾಟಕೀಯವಾಗಿ ನುಡಿಯುತ್ತಾ ಮುಖ್ಯಸ್ಥೆಯೊಬ್ಬಳು ಅವಳ ಕೈ ಹಿಡಿದು, ವೇದಿಕೆಯ ಬಳಿಗೆ ಕರೆದೊಯ್ದಳು. ಕ್ಯಾಮೆರಾದಿಂದ ಫ್ಲಾಷ್ ಬೆಳಕು ಚಿಮ್ಮಿದಾಗ ಭಾಗ್ಯಮ್ಮ ನಾಚಿದಳು. ಹೀಗೆ ಸನ್ಮಾನ ಅಂತ ಗೊತ್ತಿದ್ದಿದ್ರೆ ರೇಶಿಮೆ ಸೀರೆ ಉಟ್ಟು, ಅಲಂಕಾರ ಮಾಡಿಕೊಂಡಿರ ಬಹುದಾಗಿತ್ತು. ಹೀಗೆ ದಿಢೀರನೇ ಬಂದು ನನ್ನ ಇಮೇಜನ್ನೇ ಹಾಳು ಮಾಡುತ್ತಿದ್ದಾರೆ ಎಂದು ಮನಸ್ಸಿನಲ್ಲೇ ಬೈದುಕೊಂಡಳು."

ಸಂಘದ ಅಧ್ಯಕ್ಷೆ ಭಾಷಣವನ್ನು ಪ್ರಾರಂಭಿಸಿದ್ದಳು.

ಮುಖ್ಯ ಅತಿಥಿಗಳೇ, ಸಭಿಕರೇ... ಈ ದಿನ ನಮ್ಮ ಭಜನಾ

ಮಂಡಳಿಯ ಮೊದಲ ವಾರ್ಷಿಕೋತ್ಸವ. ಈ ದಿನ ಅದ್ದೂರಿಯಾಗಿ ಸನ್ಮಾನ ಮಾಡಬೇಕೆಂದು ಸಿನಿಮಾನಟಿ ಭಾಗ್ಯರವರನ್ನು ಆರಿಸಿ, ಆಮಂತ್ರಿಸಿ ಬಂದಿದ್ದೆವು. ಆದರೆ ಏನು ಕಾರಣವೋ ಅವರು ಇದುವರೆಗೆ ಬರಲಿಲ್ಲವಾದ್ದರಿಂದ, ನಾವು ಶ್ರಮವಹಿಸಿ, ಅದೇ ಹೆಸರಿನ ಈ ಸಾಹಿತಿಯನ್ನು ನಮ್ಮ ವೇದಿಕೆಗೆ ಕರೆತಂದಿದ್ದೇನೆ. ನಮ್ಮ ಸುಯೋಗ ಈಕೆ ಮನೆಯಲ್ಲೇ ಇದ್ದರು. ಹಾಗೂ ಕರೆದ ತಕ್ಷಣವೇ ಯಾವ ಬಿಂಕ ಬಿಗುಮಾನಗಳಿಲ್ಲದೇ ನಮ್ಮ ಕಾರ್ಯಕ್ರಮವನ್ನು ನಡೆಸಿಕೊಡಲು ಒಪ್ಪಿಕೊಂಡಿದ್ದಾರೆ. ಇದು ಅವರ ದೊಡ್ಡ ಗುಣ ಎಂದು ಭಾಗ್ಯಮ್ಮಳನ್ನು ಹೊಗಳುತ್ತಾ, ಅವಳನ್ನು ಮತ್ತೊಂದು ಕುರ್ಚಿಯಲ್ಲಿ ಕೂರಿಸಿ, ಹಳದೀ ಹೂವಿನ ಹಾರವನ್ನು ಹಾಕಿ, ಕೈಗೆ ಫಲ ತಂಬೂಲವಿದ್ದ ತಟ್ಟೆಯನ್ನಿತ್ತು, ಮಿಣ ಮಿಣ ಹೊಳೆಯುವ ಶಾಲನ್ನು ಹೊದೆಸಿ, ಚಪ್ಪಾಳೆ ತಟ್ಟಿದ್ದರು. ಭಾಗ್ಯ ಬೀಗಿ ಹೋಗಿದ್ದಳು.

ನಾನ್ಯಾವಾಗ ಸಾಹಿತಿಯಾಗಿದ್ದೆ ಎಂದು ತನ್ನ ಆಲೋಚನಾ ಮಡುವಿನಲ್ಲಿ ಮುಳುಗಿದ್ದ ಭಾಗ್ಯಮ್ಮ ಚಪ್ಪಾಳೆಯ ಧ್ವನಿಗೆ ಎಚ್ಚೆತ್ತು ಸಭಿಕರಿಗೆ ವಂದಿಸಿದಳು. ಮತ್ತೊಮ್ಮೆ ಕ್ಯಾಮೆರಾ ತನ್ನ ಬೆಳಕನ್ನು ಚೆಲ್ಲಿತ್ತು.

"ಇನ್ನು ಮೇಡಂರವರನ್ನು ಮನೆಗೆ ಬಿಟ್ಟು ಬರೋಣ. ಈಗಾಗಲೇ ಸಾಕಷ್ಟು ಹೊತ್ತಾಗಿದೆ," ಎನ್ನುತ್ತಾ ಸಮಾರಂಭಕ್ಕೆ ಮುಕ್ತಾಯ ಹಾಡಿದರು.

"ನಾನು ಭಾಷಣ ಮಾಡುವುದು ಬೇಡವಾ?" ಎನ್ನುತ್ತಾ ಆಸೆಯ ಧ್ವನಿಯಿಂದ ಭಾಗ್ಯಮ್ಮ ಕೇಳಿದಾಗ, "ಅಯ್ಯೋ ಈ ನಡು ರಾತ್ರೀಲಿ ನಿಮ್ಮ ಭಾಷಣವನ್ನು ಕೇಳೋಕೆ ಯಾರು ಕೂತಿದ್ದಾರೆ ನೋಡಿ! ಅವರೆಲ್ಲಾ ಆಗಲೇ ಪ್ರಸಾದದ ದೊನ್ನೆಗಳನ್ನ ಪಡೆಯುವುದರಲ್ಲಿ ಬಿಸಿಯಾಗಿರುತ್ತಾರೆ. ನೀವೂ ಬನ್ನಿ," ಎನ್ನುತ್ತಾ ನಕ್ಕಾಗ ಭಾಗ್ಯಳಿಗೆ ಮುಜುಗರವಾಯಿತು.

"ಇದೆಂತಹ ಸನ್ಮಾನ? ತನ್ನದೊಂದು ಸಣ್ಣ ಭಾಷಣವಿಲ್ಲದಿದ್ದಮೇಲೆ," ಎಂದುಕೊಂಡು ಅತ್ತ ತಿರುಗಿದಳು. ಆಕೆಯೂ ನಾಪತ್ತೆ. ಅಲ್ಲಿಯೇ ಒಂಟಿಯಾಗಿ ನಿಲ್ಲುವ ಮನಸ್ಸಾಗದೇ, ಸರಸರನೆ ನಡೆದು ಬಂದು ಮನೆ ಸೇರಿದಳು.

"ಏನೇ ಇಷ್ಟು ಬೇಗ ಸಮಾರಂಭ ಮುಗಿದು ಹೋಯ್ತಾ? ಏನು ಕೊಟ್ಟರು ಎಲ್ಲಿ ನೋಡೋಣ" ಎನ್ನುತ್ತಾ ಗಂಡ ರಂಗಸ್ವಾಮಿ ಉತ್ಸಾಹದಿಂದ ಕೇಳಿದಾಗ, ತನಗೆ ಕೊಟ್ಟ ಉಡುಗೊರೆಯನ್ನು ಗಂಡನ ಮುಂದೆ ಹಿಡಿದಳು. "ಇಷ್ಟೆ... ನೋಡಿ.... ಇದೊಂದು ಶಾಲು...... ಇಷ್ಟು ಹಣ್ಣು...."

ರಂಗಸ್ವಾಮಿ ನಕ್ಕ. "ಹೋಗಲಿ ಬಿಡು. ಇವತ್ತು ನೀನು ಎದ್ದಗಳಿಗೆ

ಚೆನ್ನಾಗಿರಬೇಕು. ಇಲ್ಲದಿದ್ದರೆ ಈ ಸನ್ಮಾನ ಎಲ್ಲಿರುತ್ತಿತ್ತು."

"ಅದು ಸರಿ ಈ ಸನ್ಮಾನ ಏಕೆ ಅಂತ ಗೊತ್ತಾಗಲಿಲ್ಲ."

"ನನಗೂ ಗೊತ್ತಾಗ್ಲಿಲ್ಲ. ಅವರೆಲ್ಲ ನನ್ನನ್ನು ಸಾಹಿತಿ ಅಂತ ತಿಳಿದುಕೊಂಡು ಬಿಟ್ಟಿದ್ದಾರೆ."

"ಹೌದೇನು? ನೀನೇನು ಬರೆದಿದ್ದೀಯ ಅಂತ ಸಧ್ಯ ಯಾರೂ ಕೇಳಲಿಲ್ಲವಲ್ಲ."

"ನನ್ನನ್ನು ಏನೂ ಕೇಳಲಿಲ್ಲ. ಬಚಾವಾದೆ. ಅಲ್ಲ ಕೇಳಿದ್ರೆ ಎಷ್ಟು ನಾಚಿಕೆಗೇಡು. ನಿಜ ಹೇಳೋದಾದ್ರೆ ನಾನು ಒಂದು ಪ್ರೇಮ ಪತ್ರ ಸಹ ಬರೆದಿಲ್ಲ ನಿಮಗೆ. ನಾನು ಹೇಗೆ ಸಾಹಿತಿಯಾದೆನೋ ಅವರ ಕಣ್ಣಿಗೆ."

"ಹೌದಲ್ವೇನೇ... ನಿನಗೆ ಅಷ್ಟು ಉದಾಸೀನ... ನನ್ನನ್ನು ಕಂಡರೆ."

"ನಿಮಗಾಗಿ ನಾನು ಏನನ್ನು ಬರೀಲಿಲ್ಲ ಸರಿ... ಆದರೆ.... "

ಅಷ್ಟರಲ್ಲಿ ಮತ್ತೆ ಬಾಗಿಲು ದಬದಬನೆ ಬಡಿದ ಸದ್ದಾದಾಗ ರಂಗಸ್ವಾಮಿ ಹೆಂಡತಿಯ ಕಡೆ ತಿರುಗಿ ತಮಾಷೆ ಮಾಡಿದ.

"ಸಾಹಿತಿಗಳಿಗೆ ಇವತ್ತು ಶುಕ್ರದೆಸೆ. ಮತ್ಯಾರೋ ಬಂದ ಹಾಗಿದೆ."

"ನಾನು ಬೇಗ, ಬೇರೆ ಸೀರೆ ಉಟ್ಟುಕೊಂಡು, ಸಲ್ಪ ಡ್ರೆಸ್ ಮಾಡಿಕೊಂಡು ಬೇಗ ಬಂದು ಬಿಡ್ತೀನಿ. ಅವರುಗಳನ್ನು ಒಳಗೆ ಕರೆದು ಕೂರಿಸಿ,....." ಎಂದು ಗಂಡನಿಗೆ ಆಜ್ಞೆ ಮಾಡಿ ಒಳಗೆ ಹೋದಳು. ರಂಗಸ್ವಾಮಿ ಬಾಗಿಲನ್ನು ತೆಗೆದ. ಮತ್ತೆ ಅದೇ ಹೆಂಗಸರು. ಅದೇ ರೀತಿ ಅವನನ್ನು ತಳ್ಳುತ್ತಾ, "ಎಲ್ಲೀ ಮೇಡಂ.... ಮೇಡಂ.. ಎಲ್ಲೀ ಕರೀರಿ ಅವರನ್ನು," ಎನ್ನುತ್ತಾ ಒಳನುಗ್ಗಿದರು.

"ಒಳಗಿದ್ದಾರೆ... ಈಗ ಬರ್ತಾರೆ. ಏನು ವಿಷಯ?"

"ಅಲ್ಲಾಸಾರ್... ಅವರು ಹೀಗೆ ಮಾಡಭೌದಾ?"

"ಏನು ಮಾಡಿದ್ರು? ರಂಗಸ್ವಾಮಿ ಗಾಭರಿಯಿಂದ ಕೇಳದೆ, ನಮಗೆ ಒಂದು ಮಾತು ತಿಳಿಸದೇ, ಹಾಗೇ ಎದ್ದು ಬಂದು ಬಟ್ಟಿದ್ದಾರೆ. ಪ್ರಸಾದ ತಗೊಂಡು ಬರೋವಷ್ಟರಲ್ಲಿ ನಾಪತ್ತೆ."

"ಓ.... ಪ್ರಸಾದ ತಗೊಳ್ದೇನೇ ಬಂದ್ಬಿಟ್ಟಿದಾರಂತ ಕಾಣುತ್ತೆ. ಪರವಾಗಿಲ್ಲ. ಬಿಡಿ."

"ಅದಲ್ಲ ಸಾರ್ ಮಾತು. ಕರೀರಿ ಅವರನ್ನು... ಅಷ್ಟರಲ್ಲಿ ಒಳಗಿನಿಂದ ಹೊಸ ಸೀರೆಯನ್ನುಟ್ಟ ಭಾಗ್ಯಮ್ಮ ನೆರಿಗೆಗಳನ್ನು ಸರಿ ಮಾಡಿಕೊಳ್ಳುತ್ತಾ

ಬಂದಳು.

"ಓ..... ನೀವುಗಳೇನಾ? ನಾನು ಬೇರೆ ಯಾರೋ ಅಂತ ಅಂದ್ಕೊಂಡಿದ್ದೆ."

"ಅಲ್ಲ ಮೇಡಂ ನೀವು ಹೀಗೆ ಮಾಡ್ತೀರಾ ಅಂತ ನಾವು ಅಂದ್ಕೊಂಡಿರಲಿಲ್ಲ. ಹೇಳದೇ ಕೇಳದೇ ಬಂದು ಬಿಡೋದಾ?"

"ನನ್ನ ಊಟ ಆಗಿತ್ತು. ಮತ್ತೆಲ್ಲಿ ಊಟಕ್ಕೆ ಎಬ್ಬಿಸಿ ಬಿಡ್ತೀರೋ ಅಂತ ಭಯ ಆಯ್ತು. ವಯಸ್ಸಾಗಿದೆ ನೋಡಿ." ಬಾಯಿ ಜಾರಿ ಮಾತು ಉದುರಿತ್ತು.

"ಹೋಗಲಿ ಬಿಡಿ. ಫಂಕ್ಷನ್ ಅಂತೂ ಆಯ್ತಲ್ಲ.... ಎಲ್ಲಿ ಆ ಶಾಲು ಇತ್ಲಾಗೆ ಕೊಡಿ. ಅದು ನಂದು" ಎಂದಳು ಅಲ್ಲಿ ಬಂದಿದ್ದ ಒಬ್ಬ ಸದಸ್ಯೆ.

"ಆಂ....! ಶಾಲು ನಂಗೆ ಇದೇ ತಾನೇ ನೀವೇ ಕೊಟ್ರಲ್ಲ."

"ಹೂಂ. ಹೌದು... ನಿಮಗೆ ಅದನ್ನು ಹೊದೆಸಿದ್ರು ಅಷ್ಟೇ. ನಿಮಗೇ ಅಂತ ಕೊಟ್ಟಿದ್ದಲ್ಲ, ಅದು ನಂದು. ತಗೊಂಡೇ ಬಂದು ಬಿಟ್ಟಿದೀರಾ ನಿಮಗೆಷ್ಟು ಧೈರ್ಯ?"

"ಏನ್ರಿ ಇದು... ಇವರು ಏನೇನೋ ಮಾತಾಡ್ತಾರಲ್ಲ. ಈಗ ಸ್ವಲ್ಪ ಹೊತ್ತಿನಲ್ಲಿ ನೀವೇ ಬಂದು ನನ್ನನ್ನು ಕರೆದುಕೊಂಡು ಹೋಗಿ ಸನ್ಮಾನ ಮಾಡಿ ಶಾಲು ಹೊದಿಸಿ, ಹಣ್ಣು ತುಂಬಿದ ತಟ್ಟೆ ಕೊಟ್ರಲ್ಲ." ಎಂದು ಮತ್ತೊಬ್ಬಳ ಕಡೆ ತಿರುಗಿ ಕೇಳಿದಾಗ ಅವಳು ನುಡಿದಿದ್ದು ಇನ್ನು ತಮಾಷೆಯಾಗಿತ್ತು.

"ಹಣ್ಣುಗಳನ್ನು ನೀವೇ ಇಟ್ಕೊಳ್ಳಿ ಮೇಡಂ. ಆ ತಟ್ಟೇನ ಹಾಗೂ ಆ ಶಾಲನ್ನು ವಾಪಸ್ಸು ಕೊಟ್ಟು ಬಿಡಿ."

"ಏನ್ರಿ ಇದು ತಮಾಷೆ, ಶಾಲು ಹೊದಿಸಿ ಈಗ ವಾಪಸ್ಸು ಕೇಳ್ತೀರಲ್ಲ. "

"ಅಯ್ಯೋ ಮೇಡಂ ನಿಮಗೆ ಇನ್ನು ಗೊತ್ತಾಗಲಿಲ್ವಾ! ಈ ಶಾಲು, ಈ ಸನ್ಮಾನ, ಸಮಾರಂಭ, ಎಲ್ಲಾ ಪ್ರಚಾರಕ್ಕೋಸ್ಕರ. ಪೇಪರ್ನಲ್ಲಿ ಫೋಟೋ ಬರುತ್ತೆ. ಸಂಘಕ್ಕೆ ಪ್ರಚಾರ ಸಿಗುತ್ತೆ. ಎಂತೆಂಥೋರೆಲ್ಲ ಮಜಾ ಮಡ್ತಾರೆ. ನಾವೂ ಮಾಡ್ತೀವಿ. ಅಷ್ಟೇ...."

"ಚೆನ್ನಾಗಿದೆ. ನಿಮ್ಮ ಕತೆ! ಯಾರಿಗೆ ಬೇಕಾಗಿದೆ ನಿಮ್ಮ ಈ ಥಳುಕಿನ ಶಾಲು, ಶಾಲಂತೆ ಶಾಲು," ಎನ್ನುತ್ತಾ ಶಾಲನ್ನು ಸದಸ್ಯೆಯ

ಮುಖದ ಮೇಲೆ ಎಸೆದಳು.

"ಏನೇ ಅದು? ಶಾಲು ಶಾಲು ಅಂತ ಈ ಟೇಬಲ್ ಕ್ಲಾತ್‌ನ ನನ್ನ ಮುಖದ ಮೇಲೆ ಎಸೆದೆಯಲ್ಲೆ.... ಎಚ್ಚರ ಮಾಡ್ಕೊಳ್ಳೆ," ರಂಗಸ್ವಾಮಿ ಹೆಂಡತಿಯ ಮೈ ಮುಟ್ಟಿ ಎಚ್ಚರಿಸಿದ, ಕನಸಿನಿಂದ ನನಸಿಗೆ ಬಂದಳು ಭಾಗ್ಯ.

"ಅಬ್ಬಾ! ಎಂತಹ ಕೆಟ್ಟ ಕನಸು? ಸಧ್ಯ ಎಚ್ಚರವಾಯಿತಲ್ಲ....!" ಎಂದುಕೊಂಡು ಮೈ ಕೊಡವಿ ಎದ್ದಳು ಭಾಗ್ಯಮ್ಮ.

* * *

೧೧. ಆಯ್ಕೆ

ಶ್ರೀಪತಿಗೆ ಮದುವೆಯಾದಾಗ ಅವನಿಗೆ ಮೂವತ್ತೈದು ವರ್ಷ ತುಂಬುತ್ತಾ ಬಂದಿತ್ತು. ತಂಗಿಯ ಮದುವೆಯಾದ ನಂತರ ತಾವುಗಳು ಮದುವೆಯಾಗುವುದಾಗಿ ಅಣ್ಣ ತಮ್ಮಂದಿರು ನಿರ್ಧರಿಸಿದ್ದರಿಂದ ಅವರುಗಳ ಮದುವೆಯೂ ತಡವಾಗಿ ಆಯಿತು.

ಶ್ರೀಪತಿ ಸುಂದರ. ತನಗೆ ತಾನೇ ಸಿನಿಮಾ ನಟನಷ್ಟು ಚೆನ್ನಾಗಿದ್ದೇನೆಂದು ಹೆಮ್ಮೆ ಪಡುತ್ತಿದ್ದ. ತನಗೆ ತಕ್ಕಂತೆ ಸುಂದರ ಹುಡುಗಿ ಸಿಗಲಿ ಎಂಬ ಆಸೆ ಇದ್ದರೂ, ಹುಡುಗಿಯರು ಚೆನ್ನಾಗಿದ್ದರೆ, ಅವರಿಗೆ ಅತಿಜಂಭ ಇರುತ್ತೆ. ಅವರನ್ನು ನಂಬುವುದು ಕಷ್ಟ, ಇತ್ಯಾದಿ ಆಲೋಚನೆಗಳ ಜತೆಗೆ, ಹೆಂಡತಿ ರೂಪವತಿಯಾಗಿದ್ದರೆ, ಅವಳನ್ನು ನೋಡಿಕೊಳ್ಳುವುದು ಕಷ್ಟವಾಗುತ್ತದೆ ಎನ್ನೋ ಸಂದೇಹ ಬೇರೆ.

ಆದರೂ ಮನೆಯವರೆಲ್ಲ ಅವನಿಗೆ ತಕ್ಕಂತಹ ಸುರೂಪಿ ಹುಡುಗಿಯನ್ನೇ ಹುಡುಕುತ್ತಿದ್ದರು. ಒಂದೆರಡು ವಧೂ ಪರೀಕ್ಷೆಯ ನಂತರ ಒಬ್ಬಳನು ಒಪ್ಪಿಕೊಂಡ ಅವಳ ಹೆಸರು ಸವಿತಾ.

ಹುಡುಗಿಯನ್ನು ಎರಡೆರಡು ಸಾರಿ ಅವರ ಮನೆಗೆ ಕರೆಸಿದ್ದರು. ಜಾತಕದ ಪ್ರತಿಯನ್ನು ಸವಿತಾಳ ತಂದೆ ಕೊಟ್ಟಿದ್ದರೂ ಅದನ್ನು ಸರಿ ಹೊಂದುವುದೋ ಇಲ್ಲವೋ ಎಂದು ತೋರಿಸುವ ಗೋಜಿಗೇ ಹೋಗಿರಲಿಲ್ಲ. ನಮಗೆ ಜಾತಕದಲ್ಲಿ ನಂಬಿಕೆ ಇಲ್ಲ ಎನ್ನುವ ದೊಡ್ಡ ಮಾತು ಬೇರೆ! ಅಷ್ಟಾದರೂ, ಶ್ರೀಪತಿಯ ತಂದೆ, ಮಗನ ವಯಸ್ಸನ್ನು ಮುಚ್ಚಿ ಸುಳ್ಳು ಹೇಳಿದ್ದರು. ಅವನಿಗೆ ಮೂವತ್ತೇ ವರ್ಷ ಅಂತ. ಹುಡುಗಿಗೆ ವಯಸ್ಸು ಇಪ್ಪತ್ತೆರಡು ಅಂತ ಸವಿತಳ ತಂದೆ ನಿಜವನ್ನೇ ನುಡಿದಾಗ ಅದನ್ನು ತಮ್ಮದೇ ಆದ ರೀತಿಯಲ್ಲಿ ಆಲೋಚಿಸಿಕೊಂಡಿದ್ದರು. ಹೆಣ್ಣು ಹುಡುಗಿಯರ ವಯಸ್ಸನ್ನು ಎರಡು ಮೂರು ವರ್ಷ ಕಡಿಮೆ ಮಾಡಿ ಹೇಳಿರುತ್ತಾರೆ. ಅವಳಿಗೂ ಇಪ್ಪತ್ತಾಲ್ಕು ಇಪ್ಪತ್ತೈದು ವಯಸ್ಸಿರಬಹುದು ಎಂದು ತಮ್ಮಲ್ಲೇ ಗುಣಾಕಾರ ಹಾಕಿಕೊಂಡಿದ್ದರು.

ಸವಿತಾಳ ತಂದೆಗೆ ನಾಲ್ಕು ಜನ ಹೆಣ್ಣು ಮಕ್ಕಳು. ಎಲ್ಲರೂ

ರೂಪವತಿಯರೇ. ಎಲ್ಲರಿಗೂ ಗೌರವರ್ಣ, ಸೊಂಪಾದ ನೀಳವಾದ ತಲೆಗೂದಲು, ಸೌಮ್ಯವಾದ ಕಳೆ. ನೋಡಿದವರು ಮೆಚ್ಚುವಂತೆ ಇದ್ದರು. ಹಿರಿಯವಳು ಸೀತ, ಎರಡನೆಯವಳು ಗೀತ. ಅವರಿಬ್ಬರಿಗೆ ಮದುವೆಯಾಗಿ ಮಕ್ಕಳೂ ಆಗಿದ್ದವು. ಮೂರನೆಯವಳು ಕವಿತಾ. ಈ ಕವಿತಾ ಸವಿತಾ ಅವಳಿ ಜವಳಿ ಮಕ್ಕಳು. ಕವಿತಾಳ ಮದುವೆ ಅದೇ ಊರಿನ ಪರಿಚಯಸ್ಥರ ಮನೆಯೊಬ್ಬರು, ಅವರಾಗಿಯೇ ಕೇಳಿಕೊಂಡು ಬಂದು ಮದುವೆಯಾಗಿದ್ದರು.

ಶ್ರೀಪತಿಯ ಚಿಕ್ಕಪ್ಪ. ಗೋವಿಂದ ಸ್ವಲ್ಪ ಕಿತಾಪತಿಯ ಮನುಷ್ಯ. ಅವನ ಬೆಳೆದ ಮೂವರು ಹೆಣ್ಣು ಮಕ್ಕಳಿಗೆ ಮದುವೆಯಾಗಿರಲಿಲ್ಲ. ಶ್ರೀಪತಿಯ ಮದುವೆ ನಿಶ್ಚಯವಾದ ಕೂಡಲೇ ಹಾಸನದಿಂದ ಅವರ ಮನೆಗೆ ಬಂದ. ಹುಡುಗಿಯ ಕುಲ ಗೋತ್ರ, ವಿದ್ಯಾಭ್ಯಾಸ ಇತ್ಯಾದಿ ವಿಷಯಗಳನ್ನೆಲ್ಲಾ ವಿವರವಾಗಿ ಕೇಳಿ ತಿಳಿದುಕೊಂಡ. ಸವಿತಾ ಅವಳಿ ಮಕ್ಕಳಲ್ಲಿ ಒಬ್ಬಳು, ಅವಳ ಜತೆಯ ಕವಿತಾಳನ್ನು ಅದೇ ಊರಿನವರು ಮದುವೆಯಾಗಿರುವರೆಂದು ತಿಳಿದೊಡನೆ ತನ್ನ ಬುದ್ಧಿಶಕ್ತಿಯನ್ನು ಓಡಿಸಿ, ಶ್ರೀಪತಿಯ ಮನಸ್ಸನ್ನು ಕೆಡಿಸಿದ.

ಶ್ರೀಪತಿ, ನೀನು ಏನೇ ಆಗಲಿ, ಅವಳಿ ಮಕ್ಕಳಲ್ಲಿ ಒಬ್ಬಳನ್ನು ಮದುವೆಯಾಗುತ್ತಿರುವುದು ತಪ್ಪು. ಅದರಲ್ಲೂ ಆರಿಸಿ ಬಿಟ್ಟಿರುವ ಸವಿತಾಳನ್ನು ಮದುವೆಯಾಗುತ್ತಿರುವುದು ಶುದ್ಧ ತಪ್ಪು.

ತಕ್ಷಣಕ್ಕೆ ಚಿಕ್ಕಪ್ಪನ ಮಾತು ಸರಿ ಎನಿಸಲಿಲ್ಲ ಅವನಿಗೆ.

"ಅವನು ಆ ಜಾಣ, ಹೊಡೆದ ಛಾನ್ಸನ್ನು, ಇಬ್ಬರೂ ಒಂದೇ ವಯಸ್ಸಿನವರು, ಅವರಲ್ಲಿ ಒಬ್ಬರನ್ನು ಅವನು ಆರಿಸಿಕೊಂಡಿರುತ್ತಾನೆ. ಉಳಿದವಳು ನಿನಗೆ ಸಿಕ್ಕಿದ್ದಾಳೆ. ನೀನು ಒಪ್ಪಬಾರದಾಗಿತ್ತು."

ಚಿಕ್ಕಪ್ಪ ಹೀಗೆ ಅನಾವಶ್ಯಕ ಚಿಂತೆಯನ್ನು ಹಚ್ಚಿಸಿ, ಶ್ರೀಪತಿಯ ಮನಸ್ಸು ಕೆಡುವಂತೆ ಮಾಡಿದ. ಆದರೂ, ಈಗ ಮದುವೆ ನಿಶ್ಚಯವಾಗಿ ಹೋಗಿದೆ. ಈಗ ಏನೂ ಮಾಡುವಂತಿಲ್ಲ. "ಈಗ ತಾನು ತನಗೆ ಒಪ್ಪಿಗೆಯಿಲ್ಲ ಅಂತ ತಿಳಿಸಿದರೆ, ಚಪ್ಪಲಿ ತಗೊಂಡು ಹೊಡೀತಾರೆ." ಅಂತ ಅಂದು ಕೊಂಡರೂ, ಮದುವೆಯ ದಿನಗಳು ಸಮೀಪಿಸುತ್ತಿದ್ದಂತೆ ಅವನಲ್ಲಿ ಉತ್ಸಾಹ, ಗೆಲವು ಇಲ್ಲವಾಯಿತು.

"ಹುಡುಗಿಗಿಂತ ಹೆಚ್ಚಾಗಿ ನೀನೇ ಹೆದರುತ್ತೀಯಲ್ಲೋ ಮಂಕೇ" ಅಂತ ಸ್ನೇಹಿತರು ಚುಡಾಯಿಸಿದ್ದೂ ಆಯಿತು.

ಮದುವೆಯ ಸಮಯದಲ್ಲಿ, ಶ್ರೀಪತಿಯ ನಿರುತ್ಸಾಹವನ್ನು ಗಮನಿಸಿ

ಸವಿತಾ ಪೆಚ್ಚಾದಳು. ಅವನೋ, ಅವಳಂತೆಯೇ ಇದ್ದ ಕವಿತಾಳನ್ನೂ, ಸವಿತಾಳೆಂದು ಭಾವಿಸಿ, ಬೇಸ್ತು ಹೋಗಿದ್ದ. ಸ್ನೇಹಿತರು ಗೇಲಿ ಮಾಡಿದ್ದರು. ನಿರುತ್ಸಾಹದ ಜತೆಗೆ, ಕೆಲವು ಸಾರಿ ಸಿಡಿ ಸಿಡಿ ಎಂದು ಎಲ್ಲರೂ, ಏನೋ ಅಚಾತುರ್ಯ ನಡೆಯಿತಪ್ಪಾ... ಎಂದು ಹೆದರುವಂತಾಗಿತ್ತು.

ಈ ಅಸಮಾಧಾನಗಳಿಂದ, ಶ್ರೀಪತಿ ಆ ರಾತ್ರಿ, ಏನೇ ಆದರೂ ತಾನು ತನ್ನ ವಧುವಿನೊಡನೆ ಮಲಗುವುದಿಲ್ಲವೆಂದು ಹೇಳಿದ್ದ. ಕಾರಣ ಕೇಳಿದವರಿಗೆ. ಅದೆಲ್ಲ ನನ್ನ ಇಷ್ಟ... ಇವತ್ತೇ ಅವಳ ಜತೆ ಮಲಗ ಬೇಕೆಂಬ ನಿಯಮವೇನೂ ಇಲ್ಲವಲ್ಲ ಎಂದು ಹೇಳಿ ಬಾಯಿ ಮುಚ್ಚಿಸಿದ್ದ. ಅವನ ಒರಟು ತನಕ್ಕೆ ಹೆಣ್ಣಿನವರು ಹೆದರಿ, ಮತ್ತೇನೂ ಆಡಿರಲಿಲ್ಲ.

ಸವಿತಾ ಏನೂ ಚಿಕ್ಕವಳಲ್ಲ. ಮುಗ್ಧೆ ಅಲ್ಲ. ಮೊದಲ ರಾತ್ರಿಯ ಬಗ್ಗೆ ಕಾದಂಬರಿಗಳಲ್ಲಿ ಓದಿದ್ದಳು. ಸಿನಿಮಾಗಳಲ್ಲಿ ನೋಡಿದ್ದಳು. ಆದರೆ ತನ್ನ ಮೊದಲ ರಾತ್ರಿಯನ್ನು ತಾನು ಏಕಾಂಗಿಯಾಗಿ ಕಳೆಯಬೇಕಾಗಿ ಬಂದ ಸ್ಥಿತಿಗೆ ಖೇದವೆನಿಸಿತ್ತು.

"ತನ್ನ ಗಂಡ ಹೀಗೇಕೆ ಮಾಡಿದ? ತನ್ನನು ಒಪ್ಪಿದ್ದ. ತನ್ನೊಡನೆ ಮಾತನಾಡಿದ್ದ. ಯಾರ ಬಲವಂತವೂ ಇರಲಿಲ್ಲ. ಇದ್ದಕ್ಕಿದ್ದಂತೆ ಒಂದು ತಿಂಗಳಿನಲ್ಲಿ ಅವನಿಗೆ ಏನಾಯ್ತು? ಈ ರಹಸ್ಯವನ್ನು ತಾನು ತಿಳಿದು ಕೊಳ್ಳಲೇ ಬೇಕು. ಅವನ ಹೇಳದ ಹೊರತು, ಅವನನ್ನು ಬಿಡುವುದಿಲ್ಲ ," ಎಂದು ತನ್ನಲ್ಲೇ ತಾನು ನಿರ್ಧರಿಸಿಕೊಂಡು ಮಲಗಿದಳು.

ಶ್ರೀಪತಿ, ಒಂದರ ಮೇಲೆ ಇನ್ನೊಂದು ಹತ್ತಾರು ಸಿಗರೇಟುಗಳನ್ನು ಉರಿಸಿ ಬೂದಿ ಮಾಡಿದ. ತನಗೆ ಮದುವೆಯಾದದ್ದೇ ಅತಿ ತಡವಾಗಿ, ತನ್ನ ಮೊದಲ ರಾತ್ರಿಯಂದು ತನ್ನ ಸತಿಯೊಡನೆ ಹೇಗೆ ಮಜವಾಗಿ ಕಾಲ ಕಳೆಯ ಬಹುದೆಂದು ಊಹಿಸಿಕೊಂಡಿದ್ದೆಲ್ಲಾ ವ್ಯರ್ಥವಾಗಿತ್ತು. ಸವಿತಾಳಂತೆಯೇ ಕವಿತಾ ಸಹ ಸ್ಪುರದ್ರೂಪಿಯೇ. ಆದರೆ ಪಕ್ಕದಲ್ಲಿ ಕೂತ ಸವಿತಾಳಿಗಿಂತ, ಎದುರಿಗೆ ಓಡಾಡುತ್ತಿದ್ದ ಕವಿತಾಳನ್ನು ಅವನು ಹೆಚ್ಚಿಗೆ ಗಮನಿಸಿದ್ದ. ಅವಳು ಅವಳ ಗಂಡನೊಡನೆ ಕಿಲಕಿಲ ನಗುತ್ತಾ ಮಾತನಾಡುತ್ತಾ, ಸರಸವಾಡುತ್ತಾ ಇರುವುದನ್ನು ಕಂಡು, ಇವನ ತಳಮಳ ಹೆಚ್ಚುತ್ತಿತ್ತು. ಅನಾವಶ್ಯಕವಾಗಿ ಕವಿತಳ ಗಂಡನ ಮೇಲೆ ಅಸೂಯೆಗೊಂಡಿದ್ದ. ತನಗೆ ಮೋಸವಾಯಿತು ಎಂಬ ಭ್ರಮೆಯಲ್ಲಿ ಬಿದ್ದ. ಆದರೆ ವಿಧಿ ಇಲ್ಲ, ವಿಧಿವತ್ತಾಗಿ ಮದುವೆ ಶಾಸ್ತ್ರಗಳು ನೆರವೇರಿದವು. ಇಬ್ಬರೂ ಗಂಡ ಹೆಂಡಿರಾದರು..... ಆದರೆ

ಈಗ ಮಗ್ಗುಲಲ್ಲಿ ಅವಳು ಇಲ್ಲ, ತನ್ನ ದುಗುಡವನ್ನು ಮರೆಯಲು ತಾನು ಧೂಮಪಾನ ಮಾಡುತ್ತಿದ್ದೇನೆ ಅಂತನ್ನಿಸಿದಾಗ, ಸಿಗರೇಟಿನ ವಾಸನೆ ಅವನಿಗೇ ಅಸಹ್ಯವಾಯಿತು. ಕಿಟಕಿಯ ಬಳಿ ನಿಂತು, ಹೊರಗೆ ಕಾಣುತ್ತಿದ್ದ ನಿಚ್ಚಳವಾದ ಆಕಾಶವನ್ನು ತಾರೆಗಳನ್ನು ನೋಡುತ್ತಾ ನಿಂತ.

"ಏನಯ್ಯಾ ದೋಸ್ತ್! ಸುಹಾಗ್ ರಾತ್ ಬೇಡ ಅಂತ ಅಂದೋನು ನೀನು. ಈಗ ನೋಡಿದರೆ ನಿನ್ನ ತಾಪ ಹೆಚ್ಚಿರುವ ಹಾಗೆ ಕಾಣುತ್ತೆ."

ಸ್ನೇಹಿತ ತಮಾಷೆ ಮಾಡಿದುದು ಅವನಿಗೆ ಹಿಡಿಸಲಿಲ್ಲ. "ವಿಲ್ ಯೂ ಪ್ಲೀಸ್ ಷಟಪ್" ಅಂತಂದ.

"ಓ.....ಕೆ... ಆದರೆ ನಾಳೆ ಮರೆಯದೇ. ನಿನ್ನ ಮಿಸೆಸ್ ಈ ರಾತ್ರಿ ಹೇಗೆ ಕಳೆದರು ಅಂತ ಕೇಳಿ ತಿಳಕೋ. ನಮಗೆ ಹೇಳುವುದನ್ನು ಮರೆಯ ಬೇಡ." ಎನ್ನುತ್ತಾ ಸ್ನೇಹಿತರು ಗೊಳ್ ಅಂತ ನಕ್ಕು ಮಲಗಿದರು. ಆಗ ಅವನ ಮುಂದೆ ತೇಲಿ ಬಂದ ಮುಖ ಸವಿತಾಳದಾಗಿರಲಿಲ್ಲ, ಕವಿತಾಳದಾಗಿತ್ತು.

ಈ ಎಲ್ಲಾ ಮನಃಕ್ಷೋಭೆಗಳ ನಡುವೆಯೂ, ಸವಿತಾ ತನ್ನ ಗಂಡನೊಂದಿಗೆ, ತವರು ಮನೆಯವರನ್ನೆಲ್ಲಾ ಬಿಟ್ಟು ಹೊರಟಳು. ಅತ್ತೆಯ ಮನೆಯಲ್ಲಿ ಬಲಗಾಲನ್ನಿಟ್ಟು ಮನೆ ತುಂಬಿದರೂ; ಗಂಡನ ಮನವನ್ನು ತುಂಬಲಾಗಿರಲಿಲ್ಲ. ನೆಂಟರೆಲ್ಲಾ ಇರುವವರೆಗೆ, ತಾನು ತನ್ನ ಪತ್ನಿಯೊಡನೆ ಮಲಗುವುದಿಲ್ಲವೆಂದು ತಾಯಿಗೆ ಹೇಳಿದಾಗ, ತಾಯಿ ಅಚ್ಚರಿ ಪಟ್ಟಿದ್ದಳು.

"ಇದೇನೋ ಶ್ರೀಪತಿ, ಹೀಗಾಡ್ತಿ? ಆ ಹುಡುಗಿ ಏನಂದುಕೊಳ್ತಾಳೆ? ನಿನಗಿಷ್ಟವಿಲ್ಲದಿದ್ದರೆ ಏಕೆ ಮದುವೆಯಾದೆ? ಯಾವ ಕಾರಣಕ್ಕೂ ನೀನು ನಿನ್ನ ಹೆಂಡತಿಯನ್ನು ಸತಾಯಿಸಬಾರದು. ನನ್ನಾಣೆ."

"ಯಾಕೋ ಮನಸ್ಸಿಗೆ ಬೇಜಾರು..., ನೀನು ಸ್ವಲ್ಪ ಸುಮ್ನಿರ್ತೀಯ," ಎಂದು ತಾಯಿಯನ್ನೇ ಗದರಿದ್ದ. ಆ ರಾತ್ರಿ ಹೊಸ ಜಾಗದಲ್ಲಿ, ಹೊಸಮನೆಯಲ್ಲಿ ತನ್ನವರನ್ನೆಲ್ಲಾ ಬಿಟ್ಟು ಬಂದೆ. ಇಲ್ಲಿ ತನ್ನವರು ಯಾರೂ ಇಲ್ಲಿ ಎಂಬ ಕೊರಗಿನಲ್ಲಿ ಸವಿತಾ ಅತ್ತಳು. "ತವರು ಮನೆಯವರ ನೆನಪಾಗಿರಬಹುದು ಪಾಪ ಹುಡುಗಿ ಅಳ್ತಿದೆ." ಎಂದು ಅವರಿವರು ಆಡಿದ್ದು ಕೇಳಿ ಅವಳ ದುಃಖ ಹೆಚ್ಚಾಯಿತು. ಅವಳು ಬಿಕ್ಕಿ ಬಿಕ್ಕಿ ಅತ್ತು, ತನಗೆ ತಾನೇ ಸಮಾಧಾನ ಮಾಡಿಕೊಂಡಳು.

ಮದುವೆಯಾಗಿ ಒಂದು ವಾರ ಕಳೆದಿತ್ತು. ಬಂದ ನೆಂಟರೆಲ್ಲಾ ಹೊರಟು ಹೋಗಿದ್ದರು. ಅತ್ತೆಯ ಮಾತಿಗೆ ಇಲ್ಲವೆನ್ನಲಾಗದೇ, ಸವಿತಾ

ಗಂಡನ ರೂಮಿಗೆ ಬಂದಳು. ಬಾಗಿಲಲ್ಲಿ ನಿಂತವಳನ್ನು ಕಂಡು, ಅವನೇನು ಬಂದು ಓಡಿ ತಬ್ಬಿ ಕೊಳ್ಳಲಿಲ್ಲ. ಮುದ್ದು ಮಾತುಗಳನ್ನಾಡಲಿಲ್ಲ. ಅವಳು ಪೆಚ್ಚಾಗಿದ್ದಳು. "ತನಗೆಂತಹ ಪತಿ ಸಿಕ್ಕಿದ ದೇವರೇ..... ಇವನನ್ನು ತಾನು ಮೆಚ್ಚಿಸುವುದಾದರೂ ಹೇಗೆ?"

ಅಲ್ಲಿದ್ದ ಕುರ್ಚಿಯ ಮೇಲೆ ಕೂತು, ಮೇಜಿನ ಮೇಲಿದ್ದ ಪುಸ್ತಕವನ್ನು ಕೈಗೆತ್ತಿಕೊಂಡಳು. ಅವನು ದೀಪವನ್ನಾರಿಸಿ ತನ್ನ ಪಾಡಿಗೆ ತಾನು ಮಲಗಿದ. ಇವಳೂ ಎದ್ದಳು. ಅಲ್ಲಿದ್ದುದು ಒಂದೇ ಮಂಚ. ಒಂದೇ ಹಾಸಿಗೆ. ನಿದ್ದೆ ತಡೆಯಲಾರದೇ ತಾನೂ ಸೊಳ್ಳೆ ಪರದೆಯೊಳಗೆ ತೂರಿದಳು. ಅವನು ನಿದ್ದೆಯಿಲ್ಲದೇ ಅತ್ತಿತ್ತ ಹೊರಳಿದಾಗ ಅವಳಿಗೆ ಎಚ್ಚರವಾಯಿತು. ಅವನಿಗೆ ತಾಗದಂತೆ ದೂರ ಸರಿದು ಮಲಗಿದಳು.

ಹೀಗೇ ಒಂದೆರಡು ದಿನಗಳು ಕಳೆಯುವಷ್ಟರಲ್ಲಿ ಅವಳಿಗೆ ಗಂಡನ ಈ ವರ್ತನೆ ಬೇಸರವನ್ನುಂಟು ಮಾಡಿತು. ತನ್ನ ತಪ್ಪಾದರೂ ಏನೂ? ಮದುವೆಯಾಗಿ ಕೈ ಹಿಡಿದು ಕರೆತಂದ ಮೇಲೆ, ಹೆಂಡತಿಯಂತೆ ತನ್ನನ್ನು ಇವನು ಆದರಿಸದಿದ್ದರೆ ಇವನೆಂತಹ ಗಂಡ ಎಂದುಕೊಂಡು, ಅವನೆದುರಿಗೆ ನಿಂತಳು.

"ನನ್ನನ್ನು ನಮ್ಮ ಊರಿಗೆ ಕಳಿಸಿಬಿಡಿ.... ನಾನು ಹೀಗೆ ಇಲ್ಲಿ ಇರಲಾರೆ."

"ಏನಾಗಿದೆ ನಿನಗೆ ಇಲ್ಲಿ?" ಕತ್ತೆತ್ತದೇ ಕೇಳಿದ.

"ನನಗೇನೂ ಆಗಿಲ್ಲ. ನಿಮಗೇನಾಗಿದೆ ಅಂತ ಮೊದಲು ಹೇಳಿ, ನಿಮಗೆ ಬೇಡವಾದ ಮೇಲೆ ನಾನೇಕೆ ಇಲ್ಲಿರಬೇಕು."

"ಹಾಗಂತ ನಾನೆಲ್ಲಿ ಹೇಳಿದೆ.....?"

"ಬಾಯಿಬಿಟ್ಟು ಹೇಳಬೇಕಾಗಿಲ್ಲ, ನಿಮ್ಮ ವರ್ತನೆಯಿಂದ ನನಗೆ ತಿಳಿಯುತ್ತೆ... ನಿಮಗೆ ಬೇಡವಾದ ಮೇಲೆ ಏಕೆ ಮದುವೆಯಾದಿರಿ!"

"ಹೌದು. ನಾನು ಮದುವೆಯಾಗಬಾರದಾಗಿತ್ತು... ಆದರೆ... ಮೋಸವಾಗಿ ಹೋಯ್ತಲ್ಲ."

"ಏನು ಮೋಸ ... ತಪ್ಪು ಯಾರದು? ನಂದಂತೂ ಅಲ್ಲ. ನಾನೇನೂ ಮೋಸಮಾಡಿಲ್ಲ ನಿಮಗೆ. ಏನಾಯ್ತು ಮೋಸ? ನೀವು ಕೇಳಿದ್ದನ್ನೆಲ್ಲಾ ನಮ್ಮ ತಂದೆ ಕೊಟ್ಟಿದ್ದಾರೆ. ಅಚ್ಚು ಕಟ್ಟಾಗಿ ಮದುವೆ ಮಾಡಿದ್ದಾರೆ.... ಇನ್ನೇನಾಗಬೇಕು?"

"ನೀನು ಅವಳಿಯಲ್ಲಿ ಒಬ್ಬಳು ಅಂತ ನನಗೆ ಗೊತ್ತಿರಲಿಲ್ಲ."

"ಯಾಕೆ ಗೊತ್ತಿರಲಿಲ್ಲ! ನಮ್ಮ ತಂದೆ ಯಾವ ಮುಚ್ಚು ಮರೆಯನ್ನು ಮಾಡದೇ ಎಲ್ಲಾ ವಿಷಯವನ್ನು ನಿಮಗೆ ತಿಳಿಸಿದ್ದರು."

ಇಲ್ಲಿ ಎಲ್ಲಾ ವಿಷಯವನ್ನು ತಿಳಿಸಿರಲಿಲ್ಲ.

ಸರಿ. ಈಗ ಏನು ಅನ್ಯಾಯವಾಗಿದೆ... ಹೇಳಿ.

"ಇಲ್ಲ. ಹೇಳಲೇ ಬೇಕು. ಇಲ್ಲದಿದ್ದರೆ ನನಗೆ ತಿಳಿಯುವುದಾದರೂ ಹೇಗೆ?" ಅವಳು ದಬಾಯಿಸಿ ಕೇಳಿದಾಗ ಅವನು ಮೆತ್ತಗಾದ. ಆದರೂ ನುಡಿದ.

"ಪ್ಲೀಸ್. ನನ್ನನ್ನು ಬಲವಂತ ಮಾಡಬೇಡ."

"ನನಗೆ ನಿಮ್ಮ ಮೇಲೇ ಅನುಮಾನ. ನಿಮ್ಮಲ್ಲೇ ಏನೋ ದೋಷವನ್ನಿಟ್ಟುಕೊಂಡು, ಅದನ್ನು ಮುಚ್ಚಲು ನೋಡ್ತೀದ್ದೀರಿ... ಅದೇನು ಅಂತ ನನಗೆ ತಿಳಸಲೇ ಬೇಕು. ತಿಳಿಯುವರೆಗೂ, ನಾನು ನನ್ನ ತವರು ಮನೆಯಿಂದ ವಾಪಸ್ಸು ಬರುವುದಿಲ್ಲ. ನಾನು ನಾಳೇನೇ ಊರಿಗೆ ಹೋಗ್ತಿನಿ."

ಅವಳು ಸರಸರನೆ ತನ್ನ ಸೀರೆ ಬಟ್ಟೆಗಳನ್ನು ಜೋಡಿಸಿಕೊಳ್ಳಲಾರಂಭಿಸಿದ್ದಳು. ಅವನು ಅವಳನ್ನೇ ನೋಡುತ್ತಿದ್ದ. ತಳ್ಳಗೆ ಬೆಳ್ಳಗೆ ಬಳಕುತ್ತಿದ್ದ ದೇಹ ಅವಳ ಚಲನೆಗೆ ತಕ್ಕಂತೆ ತೂಯ್ದಾಡುತ್ತಿದ್ದ ನೀಳ ಜಡೆ... ಅವಳ ಅಂಗಾಂಗ ಮೇಲೆ ಅವನ ಕಣ್ಣು ಹರಿಯುತ್ತಿದ್ದಂತೇ ಅನ ಭಾವನಾ ತರಂಗದಲ್ಲಿ ಏರು ಪೇರುಗಳಾಗುತ್ತಿದ್ದವು. ಒಂದುಗಳಿಗೆ ಅವನ ಮುಂದೆ ಕವಿತಾಳ ಮುಖ ಬಂದು ನಿಲ್ಲುತ್ತಿತ್ತು. ಮರುಗಳಿಗೆಯೇ ಎದುರಿಗಿದ್ದ ಸವಿತಾಳ ಮುಖ ಗೋಚರವಾಗುತ್ತಿತ್ತು. ಅವಳು ಚೆನ್ನವೋ... ಇವಳು ಚೆನ್ನವೊ.... ಅವನು ನಿರ್ಧರಿಸಲಾರದವನಾಗಿದ್ದ.

ಅವಳು ಇನ್ನೇನು ರೂಮಿನಿಂದ ಆಚೆ ಹೊರಟು ಹೋಗುವುದರಲ್ಲಿದ್ದಾಳೆ ಅಂತ ತಿಳಿದಾಗ, 'ನಿಂತ್ಕೋ....' ಎಂದ. ಅವಳು ಹಾಗೇ ನಿಂತಳು...

"ನನ್ನನ್ನ ಒಂದು ಸಂದೇಹ ಕಾಡ್ತಿದೆ. ಅದಕ್ಕೆ ನೀನೇ ಉತ್ತರ ಹೇಳಬೇಕು".

"ಸಂದೇಹ? ಅದೇನದು?" ಎನ್ನುತ್ತಾ ಅವಳು ತಿರುಗಿದಳು.

"ನೀನೂ ಕವಿತಾ ಇಬ್ಬರೂ ಒಂದೇ ತರಹ ಇದೀರಿ ಅಲ್ವಾ?"

"ಇರಬಹುದು ಅದಕ್ಕೇ...."

"ನೀವಿಬ್ಬರೂ ಒಂದೇ ತರಹ ಇರದೇ ಇದ್ದಿದ್ದರೆ ಚೆನ್ನಾಗಿರ್ತಿತ್ತು.

ನನಗೆ ಮೊದಲು ಗೊತ್ತಾಗಲಿಲ್ಲ. ನಾನು ಕವಿತಾಳನ್ನೇ ನೀನು ಅಂತ ತಿಳಿದುಕೊಂಡು ಮೋಸ ಹೋದೆ. ಹಾಗೇ ಕವಿತಾಳ ಗಂಡನಿಗೂ ಮೋಸವಾಗಿರಬಹುದು ಅಲ್ವಾ?"

"ಇಲ್ಲ, ಇದೇನು ವಿಚಿತ್ರ ಪ್ರಶ್ನೆ..."

"ಅವರೆಂದಾದರೂ ನಿನ್ನನ್ನೇ ಕವಿತಾ ಅಂತ ಅಂದ್ಕೊಂಡು, ನಿನ್ನನ್ನು ತಬ್ಬಿ ಹಿಡಿದು..... ಮೈ ಮುಟ್ಟಿ.... ಏನಾದರೂ...."

"ಛಿ.... ಛಿ.... ಎಂಥಾ ಕೆಟ್ಟ ಮನಸ್ಸು ನಿಮ್ಮದು. ಹಾಗೆಲ್ಲಾ ಆಗೋಕೆ ಸಾಧ್ಯಾನಾ?"

"ಯಾಕಾಗಬಾರದು ಅಂತ. ಇಬ್ಬರೂ ಒಂದೇ ತರಹ ಇದೀರಿ."

"ಛಿ... ಛಿ.... ಕವಿತಾಳ ಗಂಡ ದೇವರಂತಹ ಮನುಷ್ಯ. ಅವರ ಮನಸ್ನಲ್ಲಿ ಇಂತಹ ಭಾವನೆಯೇ ಇಲ್ಲ."

"ಅದ್ಹೇಗೆ ಹೇಳ್ತೀಯಾ.... ಅವರ ಬಗ್ಗೆ ನಿನಗೇನು ಗೊತ್ತು?"

"ಗೊತ್ತಿಲ್ಲದೇ ಏನು? ಮೊದಲು ಅವರು ನಮ್ಮ ಪಕ್ಕದ ಮನೆಯಲ್ಲಿಯೇ ಇದ್ದವರು... ಅವರಿಗೆ ಮದುವೆಯಾಗುವ ಆಸೆಯೇ ಇರಲಿಲ್ಲ. ಬ್ರಹ್ಮಚಾರಿಯಾಗಿದ್ದುಕೊಂಡು ದೇಶ - ಸೇವೆ ಮಾಡಿಕೊಂಡಿರಬೇಕೆಂದು ಬಯಸಿದ್ದವರು. ಆದರೆ ತಾಯಿಯ ಬಲವಂತಕ್ಕೆ ಮದುವೆಯಾಗಲು ಒಪ್ಪಿದ್ದರು. ಅವರ ಅಕ್ಕ ನಮ್ಮ ಮನೆಗೆ ಬಂದು ನಮ್ಮಿಬ್ಬರನ್ನು ಮಾತನಾಡಿಸಿ, ನನ್ನನ್ನು ಮೆಚ್ಚಿ ಹೋಗಿದ್ದರು. ನಮ್ಮಿಬ್ಬರಲ್ಲೂ ಬೇಕಾದಷ್ಟು ವ್ಯತ್ಯಾಸಗಳಿವೆ. ಅದನ್ನು ಅವರು ಗುರುತಿಸಿದ್ದರು, ಅವರು ತಮ್ಮ ಆಸೆಯನ್ನು ತಿಳಿಸಿದಾಗ ನಮ್ಮ ತಂದೆ, ನಿರಾಕರಿಸಿದ್ದರು."

"ಹತ್ತು ನಿಮಿಷ ಮುಂಚೆ ಹುಟ್ಟಿದ ಕವಿತಾ ದೊಡ್ಡವಳು. ಮೊದಲು ಅವಳ ಮದುವೆಯಾಗಬೇಕು.... ಅಲ್ಲೀವರೆಗೂ ನೀವು ತಡೆಯುವುದಾದರೆ ನಮ್ಮ ಅಭ್ಯಂತರವೇನಿಲ್ಲ ಅಂತ. ಹಾಗೇ ನನ್ನ ಒಪ್ಪಿಗೆಯನ್ನು ತಿಳಿಸುವಂತೆ ಕೇಳಿದಾಗ ನಾನು ನಿರಾಕರಿಸಿದ್ದೆ. ನನಗೆ ಅದೇ ಊರಿನಲ್ಲಿ ವಾಸಿಸುವ, ಮೊದಲಿನಿಂದ ಪರಿಚಯವಿರುವ ಅವರನ್ನು ಮದುವೆಯಾಗುವ ಆಸೆ ನನಗಿಲ್ಲ ಅಂತ ತಿಳಿಸಿದ್ದೆ".

"ಆ ವಿಷಯ ತಿಳಿದರೂ, ಅವರು ನಮ್ಮ ಮನೆಯ ಸಂಬಂಧವನ್ನು ಮುಂದುವರೆಸಲು ಒಪ್ಪಿದರು. ನನ್ನನ್ನು ಮೆಚ್ಚಿದರೂ, ಅವರು ನಮ್ಮ ತಂದೆಗೆ ಗೌರವವಿತ್ತು. ಕವಿತಾಳನ್ನು ಮದುವೆಯಾಗಲು ಒಪ್ಪಿದರು. ಇದು

ಅವರ ದೊಡ್ಡ ಗುಣವಲ್ಲದೇ ಮತ್ತೇನು? ಇದುವರೆಗೂ ಅವರೆಂದೂ ಕವಿತಾಳೊಡನೆ ತಮಗೆ ದ್ರೋಹವಾಯಿತು ಎಂದು ಆಡಿಲ್ಲ."

"ನಿನಗೆ ಹೇಗೆ ಗೊತ್ತು?"

"ಆಡಿದ್ದರೆ, ಕವಿತಾ ಖಂಡಿತಾ ಹೇಳದೇ ಬಿಡುತ್ತಿರಲಿಲ್ಲ. ಅದು ಸರಿ. ನೀವು ಏಕೆ ಹೀಗೆ ತಲೆ ಕೆಡಿಸಿಕೊಂಡಿರೋ ನನಗೆ ಅರ್ಥವಾಗ್ತಿಲ್ಲ".

"ಮದುವೆ ಮನೆಯಲ್ಲಿ ನೀವಿಬ್ಬರೂ ಒಂದೇ ತರಹ ಇರುವುದನ್ನು ನೋಡಿ ನನ್ನ ಮನಸ್ಸು ಗೊಂದಲದಲ್ಲಿ ಮುಳುಗಿ ಹೋಯ್ತು ಸವಿತಾ..... ಅಲ್ಲದೇ ಇದಕ್ಕೆಲ್ಲಾ ನಮ್ಮ ಗೋವಿಂದ ಚಿಕ್ಕಪ್ಪನೇ ಕಾರಣ. ಮದುವೆಗೆ ಮುಂಚೆಯೇ ನನ್ನ ತಲೆ ಕೆಡಿಸಿದ್ದ," ಎನ್ನುತ್ತಾ, ಗೋವಿಂದ ನಾಡಿದುದನ್ನು ತಿಳಿಸಿದಾಗ, ಅವಳು ಮೌನಿಯಾದಳು. ಸ್ವಲ್ಪ ತಡೆದು ನುಡಿದಳು.

"ಛಿ.... ಇಂಥಾ ಸಣ್ಣ ಬುದ್ಧಿ ನಿಮ್ಮ ಮನೆಯವರಿಗೆ ಅಂತ ನನಗೆ ಮೊದಲೇ ತಿಳಿದಿದ್ರೆ... ನಾನು ಈ ಮದುವೆಗೇ ಒಪ್ಪುತ್ತಿರಲಿಲ್ಲ..... ಹಾಗೆ ನೋಡಿದರೆ ಮೋಸ ಆಗಿರುವುದು ಸವಿತಾಳ ಗಂಡನಿಗೆ. ಅವರು ತಮ್ಮ ಆಯ್ಕೆಯನ್ನು ಬಿಟ್ಟು, ನಮ್ಮ ತಂದೆಯ ಮಾತಿಗೆ ಒಪ್ಪಿ ಅವಳನ್ನು ಮದುವೆಯಾದರು.... ಆದಲೆ ಅವರೆಂದೂ ನಿಮ್ಮ ಹಾಗೆ ಸಣ್ಣ ಮಾತನ್ನು ಆಡಿಲ್ಲ."

ಅವಳ ಮಾತುಗಳನ್ನು ಕೇಳಿ ಶ್ರೀಪತಿ ಪೆಚ್ಚಾದ. ಗೋವಿಂದನ ಮಾತುಗಳನ್ನು ಆಲಿಸಿ, ಮನಸ್ಸನ್ನು ಕೆಡಿಸಿಕೊಂಡಿದ್ದ. ಆ ಮಾತುಗಳನ್ನು ಹೆಂಡತಿಗೆ ಹೇಳಿ, ಅವಳೆದುರಿಗೆ ಸಣ್ಣವನಾಗಿದ್ದ. ಹೀನಾಯದಿಂದ ಅವನ ತಲೆ ತಗ್ಗಿತು. ಅವಳ ಕೈ ಹಿಡಿದು ಕ್ಷಮೆ ಕೇಳಿದ. ಅವಳು ಕೆರಳಿ ನುಡಿದಳು.

"ಈ ವಿಷಯಕ್ಕೆ ನಾನೂ ಎಂದೂ ನಿಮ್ಮನ್ನ ಕ್ಷಮಿಸುವುದಿಲ್ಲ. ಆದರೆ ನನ್ನ ತವರು ಮನೆಗೆ ಅಪಖ್ಯಾತಿ ಬರಬಾರದು ಎಂಬ ಕಾರಣದಿಂದ ನಾನು ಇಲ್ಲಿ ನಿಮ್ಮ ಹೆಂಡತಿಯಾಗಿ ಇರುತ್ತೇನೆ. ಆದರೆ ನಾನೂ ಎಂದೂ ನಿಮ್ಮನ್ನು ಗೌರವಿಸುವುದಿಲ್ಲ," ಎಂದು ಕಟುವಾಗಿ ನುಡಿದಾಗ, ಅವನು ಅವಳ ಕೈಗಳನ್ನು ಬಿಟ್ಟ.

ತಾನು ಮನ ಬಂದಂತೆ ಮಾತನಾಡಿ ಅವಳ ಕ್ಷಮೆಯಾಚಿಸಿಯಾಗಿದೆ. ಒಂದಲ್ಲ ಒಂದು ದಿನ ಅವಳು ನನ್ನನ್ನು ಕ್ಷಮಿಸಲೇ ಬೇಕು. ಅಲ್ಲಿಯವರೆಗೂ ಕಾಯ್ತೀನಿ. ಆ ಸಹನೆ ನನಗಿದೆ ಎಂದುಕೊಂಡು ಮಲಗಿದ. ಅವಳೂ

ದೀಪವಾರಿಸಿ, ಸೊಳ್ಳೇ ಪರದೆಯೊಳಗೆ ತೂರಿಕೊಂಡು ಅವನ ಮಗ್ಗುಲಲ್ಲಿ ಮಲಗಿದಳು.

ತನ್ನಲ್ಲಿರುವ ಸಂಕುಚಿತ ಮನೋಭಾವದಿಂದ ಅವಳ ಮಧುರ ಭಾವನೆಗಳನ್ನು ಅಳಿಸಿ ಹಾಕಿದ್ದ.

ಪ್ರೀತಿಯೆಂಬ ಹೂವು ಮೊಗ್ಗಾಗಿಯೇ ಉಳಿಯಿತು. ಅರಳಿ ಕಂಪನು ಸೂಸಲು ಆಗಲೇ ಇಲ್ಲ.

* * *

೧೨. "ಅನ್ಯಾಯ-ಹೀನಾಯ"

ಪ್ರಸಾದ, ಪ್ರತಾಪ ಇಬ್ಬರೂ ಒಂದೇ ತರಗತಿಯಲ್ಲಿ ಓದುತ್ತಿದ್ದರು. ವಿಶೇಷವೆಂದರೆ, ಒಂದನೇ ಸ್ಟ್ಯಾಂಡರ್ಡ್‌ನಿಂದ, ಹತ್ತನೇ ಸ್ಟ್ಯಾಂಡರ್ಡ್‌ವರೆಗೂ, ಒಂದೇ ಬೆಂಚಿನಲ್ಲಿ ಅಕ್ಕ ಪಕ್ಕದಲ್ಲಿಯೇ ಕುಳಿತಿರುವಷ್ಟರ ಮಟ್ಟಿಗೆ ಅವಳ ಸ್ನೇಹ ಗಾಢ.

ಓದಿನಲ್ಲೂ ಇಬ್ಬರೂ ಚುರುಕು. ಇಬ್ಬರಿಗೂ ಸ್ಪರ್ಧೆ, ಪ್ರತಿ ಸಲದ ಟೆಸ್ಟಿನಲ್ಲಿಯೂ ಇಬ್ಬರೂ ಸಮಾನ ಅಂಕಗಳಿಸಬೇಕು. ಒಂದು ವೇಳೆ ಒಬ್ಬರಿಗೆ ಕಡಿಮೆಯಾದರೂ, ಮುಂದಿನ ಸಲದ ಟೆಸ್ಟಿನಲ್ಲಿ ಅವನನ್ನು ಹಿಂದೆ ಹಾಕಬೇಕು. ಹೀಗೆ ಇಬ್ಬರಲ್ಲೂ ಓದಿನ ವಿಷಯದಲ್ಲಿ ಪೈಪೋಟಿ.

ಉಳಿದಂತೆ, ಇಬ್ಬರಲ್ಲೂ ಆತ್ಮೀಯ ಸ್ನೇಹ. ತಾಬಿಬ್ಬರೂ ಒಂದೇ ಪಂಗಡದವರು. ಹುಡುಕುತ್ತಾ, ಹೋದರೆ ಸಂಬಂಧವೂ ಸಿಗಬಹುದು ಎನ್ನುವ ಖುಷಿಯೂ ಸಹ ಇತ್ತು. ಏಳನೇ ಸ್ಟಾಂಡರ್ಡ್ ಪರೀಕ್ಷೆಯಲ್ಲಿ ಇಬ್ಬರೂ ಸಮಾನ ಅಂಕಗಳಿಸಿ, ರ್‍ಯಾಂಕ್‌ಗಳಿಸಿ, ಇಬ್ಬರೂ ನ್ಯಾಷನಲ್ ಹೈಸ್ಕೂಲಿನಲ್ಲಿ ಮೆರಿಟ್ ಮೇಲೆ ಸೀಟು ಗಿಟ್ಟಿಸಿದರು.

ಆದರೆ ಹೈಸ್ಕೂಲಿಗೆ ಬಂದ ನಂತರ ಇಬ್ಬರ ಚಟುವಟಿಕೆಗಳಲ್ಲಿ ಸ್ವಲ್ಪ ವ್ಯತ್ಯಾಸವಾಯಿತು. ಪ್ರಸಾದನ ಮನೆ ಸ್ಕೂಲಿಗೆ ಅತಿ ಹತ್ತಿರದಲ್ಲಿದ್ದುದರಿಂದ ಅವನು ತರಗತಿಗೆ ಬೇಗ ಬಂದು ಬೇರೆ ಹುಡುಗರ ಜತೆ ಬೆರೆತು, ಮಾತುಕತೆ, ಆಟ ಪಾಠಗಳಲ್ಲಿ ಬೆರೆಯುತ್ತಿದ್ದ. ಪ್ರಸಾದನ ಮನೆ ಸ್ವಲ್ಪ ದೂರದಲ್ಲಿದ್ದುದರಿಂದ ಸ್ಕೂಲಿಗೆ ಹೋಗಿ ಬರಲು ಸಾಕಷ್ಟು ಸಮಯ ವ್ಯಯವಾಗುತ್ತಿತ್ತು. ಪ್ರವಚನಗಳ ದಿನಚರಿ ಸ್ವಲ್ಪ ಮಟ್ಟಿಗೆ ಬದಲಾಯಿತು.

ಮನೆಯಲ್ಲಿ ಇದ್ದ ಸಮಯದಲ್ಲಿ ಪ್ರತಾಪ ಬೇಗ ಬೇಗ ಸ್ಕೂಲಿನ ಹೋಂವರ್ಕ್ ಇತ್ಯಾದಿಗಳನ್ನು ಮುಗಿಸಿ, ಟಿ.ವಿ.ಯ ಕಾರ್ಯಕ್ರಮಗಳನ್ನು ನೋಡಿ, ಉಳಿದ ಸಮಯವನ್ನು ಪಠ್ಯ ಪುಸ್ತಕಗಳ ಓದಿಗಾಗಿ ಮೀಸಲಿಡುತ್ತಿದ್ದನು.

ಪ್ರಸಾದನೋ ಸ್ನೇಹಿತರ ಜತೆ ಅಲ್ಲಿ ಇಲ್ಲಿ ತಿರುಗಿ, ಸುಸ್ತಾಗಿ ಮನೆಗೆ ಬಂದು ಊಟ ಮಾಡಿ ಮಲಗಿ, ಮಾರನೇ ದಿನ ಬೆಳಗಾಗುತ್ತಲೇ ಬೇಗ ಬೇಗ ಸ್ಕೂಲಿಗೆ ಬಂದು ಅವರಿವರು ಹೋಂವರ್ಕ್ ಮಾಡಿದ್ದನ್ನು

ಕಾಪಿ ಮಾಡಿ, ಮುಗಿಸುತ್ತಿದ್ದ. ಈ ಕಾರಣಗಳಿಂದಾಗಿ, ಅವನು ಟೆಸ್ಟ್‌ಗಳಲ್ಲಿ ಕೆಲವು ಸಾರಿ ಕಡಿಮೆ ಅಂಕಗಳನ್ನು ಗಳಿಸುತ್ತಿದ್ದ. ಕೆಲವು ಸಾರಿ ಕಾಪಿ ಹೊಡೆದೋ, ಉರು ಹೊಡೆದೋ ಹೆಚ್ಚಿನ ಅಂಕಗಳನ್ನು ಗಳಿಸುತ್ತಿದ್ದ.

ಈ ಏರುಪೇರಿನಿಂದಾಗಿ, ಪ್ರಸಾದನನ್ನು ಟ್ಯೂಷನ್ನಿಗೆ ಸೇರಿಸುವುದೆಂದು ತಂದೆ ತಾಯಿಗಳು ನಿರ್ಧರಿಸಿದರು. ಹತ್ತನೇ ತರಗತಿಯ ಪಾಠಗಳಿಗೆ ಟ್ಯೂಷನ್ ಕ್ಲಾಸುಗಳನ್ನು ಅವರ ಸ್ಕೂಲಿನ ಟೀಚರ‍್ರುಗಳೇ ಬೇರೆ ಒಂದು ಕಡೆ ನಡೆಸುತ್ತಿದ್ದರು. ಅದಕ್ಕೆ ಒಂದು ವರ್ಷ ಮುಂಚಿತವಾಗಿಯೇ ಹೆಸರನ್ನು ನೋಂದಾಯಿಸುವುದು ಒಂದು ಕ್ರಮವಾಗಿತ್ತು.

ಪ್ರಸಾದ ತಾನು ಟ್ಯೂಷನಿಗೆ ಹೆಸರನ್ನು ಕೊಟ್ಟಿರುವ ವಿಷಯವನ್ನು ಪ್ರತಾಪನಿಗೆ ತಿಳಿಸಲಿಲ್ಲ. ಆದರೆ ಆ ವಿಷಯವನ್ನು ತಿಳಿದ ಕೆಲವು ಸ್ನೇಹಿತರು ಅವನನ್ನೇ ಕೇಳಿದರು.

"ಏನೋ ಪ್ರತಾಪ, ನಿನಗೆ ಗೊತ್ತೇನೋ, ಪ್ರಸಾದ, ವಿ.ಡಿ.ಎನ್ ಹತ್ತಿರ ಸೈನ್ಸ್, ಮ್ಯಾಥ್ಸ್‌ಗೆ ಟ್ಯೂಷನ್‌ಗೆ ಹೋಗ್ತಾನಂತೆ...."

ಪ್ರತಾಪನಿಗೆ ಪೆಚ್ಚಾಯಿತು. ತನಗೆ ಅವನು ತಿಳಸಲಿಲ್ಲವೆಂಬ ರೋಷವೂ ಬಂತು. ವಿ.ಡಿ.ಎನ್. ಅದೇ ಸ್ಕೂಲಿನ ಗಣಿತದ ಮೇಷ್ಟ್ರು. ಚೆನ್ನಾಗಿ ಪಾಠ ಮಾಡುತ್ತಾರೆಂದು ಹೆಸರುವಾಸಿ. ಆದರೆ ಅಷ್ಟೇ ಗರ್ವಿ. ಮುಲಾಜಿಲ್ಲದೆ ವಿದ್ಯಾರ್ಥಿಗಳನ್ನು ಹೀಯಾಳಿಸುತ್ತಿದ್ದರು. ಆದರೆ ಅವರ ಬಳಿ ಟ್ಯೂಷನ್‌ಗೆ ಹೋಗುತ್ತಿದ್ದ. ವಿದ್ಯಾರ್ಥಿಗಳಲ್ಲಿ ಒಂದಿಬ್ಬರಾದರೂ, ಪಬ್ಲಿಕ್ ಪರೀಕ್ಷೆಯಲ್ಲಿ ಹತ್ತರಲ್ಲಿ ಒಂದು ರ‍್ಯಾಂಕ್‌ನ್ನು ಗಿಟ್ಟಿಸುವ ಅವಕಾಶವಾಗುತ್ತಿತ್ತು.

ಈ ವಿಷಯ ತಿಳಿದ ಪ್ರತಾಪ ಚಿಂತೆಗೊಳಗಾದ. ಕಡೆಗೆ ತನ್ನ ತಾಯಿಗೆ ಹೇಳಿದ.

"ಪ್ರಸಾದ ಟ್ಯೂಷನಿಗು ಬುಕ್ ಮಾಡಿದಾನಂತೆ. ನಾನೂ ಹೋಗಬೇಕು. ನನ್ನ ಜತೆಗೆ ಒಂದು ವಿ.ಡಿ.ಎನ್. ಹತ್ತಿರ ಮಾತನಾಡು."

ಮಗನ ಮನಸ್ಸನ್ನು ನೋಯಿಸಲಿಚ್ಛಿಸದೇ ಪದ್ಮಿನೀ ಮಗನೊಡನೆ ವಿ.ಡಿ.ಎನ್‌ರವರ ಮನೆಗೆ ಹೊರಟಳು. ವಿ.ಡಿ.ಎನ್. ಯಾವ ಸೌಜನ್ಯವನ್ನು ತೋರದೇ ಈಗ ತಾನು ಯಾವ ವಿದ್ಯಾರ್ಥಿಯನ್ನು ಸೇರಿಸಿಕೊಳ್ಳುವುದಿಲ್ಲವೆಂದು ಹೇಳಿಬಿಟ್ಟ. ತಾಯಿ ಮಗ ಇಬ್ಬರಿಗೂ ತುಂಬಾ ಬೇಸರವಾಗಿತ್ತು.

ಅದೇ ಕಾರಣವೋ ಏನೋ, ಈಗ ಪ್ರತಾಪ, ಟಿ.ವಿ. ಯ ಕಾರ್ಯಕ್ರಮಗಳನ್ನು ನೋಡುವುದನ್ನು ಬಿಟ್ಟು, ಸಿಕ್ಕ ಸಮಯವನ್ನೆಲ್ಲಾ ತನ್ನ

ಓದಿಗಾಗಿ ಮೀಸಲಿಟ್ಟ. ಕಷ್ಟಪಟ್ಟರೆ ಫಲವುಂಟು ಎನ್ನುವಂತೆ, ಪ್ರತಿ ತಿಂಗಳ ಟೆಸ್ಟ್‌ಗಳಲ್ಲೂ ಹೆಚ್ಚಿನ ಅಂಕಗಳನ್ನು ಗಳಿಸಿ, ಉಳಿದ ಉಪಾಧ್ಯಾಯರ ಶಾಭಾಸ್ ಗಿರಿಯನ್ನು ಗಳಿಸಿದ. ಅವರೆಲ್ಲಾ ಪ್ರೋತ್ಸಾಹ ಕೊಟ್ಟು, ಸ್ಕೂಲಿಗೆ ಖ್ಯಾತಿ ತರಬೇಕೆಂದು ತಿಳಿಸಿ, ಹತ್ತನೇ ಸ್ಟ್ಯಾಂಡರ್ಡ್‌ನ, ಪಬ್ಲಿಕ್ ಪರೀಕ್ಷೆಯಲ್ಲಿ ರ್‍ಯಾಂಕ್‌ಗಳಿಸಬೇಕೆಂದು ಹುರಿದುಂಬಿಸುತ್ತಿದ್ದರು ಸಹಪಾಠಿಗಳೆಲ್ಲ.

"ಈ ಸಾರಿ ನಮ್ಮ ಪ್ರತಾಪಂಗೆ ಒಂದು ರ್‍ಯಾಂಕ್ ಗ್ಯಾರಂಟಿ ಕಣಮ್ಮಾ" ಎಂದು ಅವರವರಲ್ಲೇ ಮಾತನಾಡಿಕೊಳ್ಳುತ್ತಿದ್ದರು.

ಮಗನಿಗೆ, ಟ್ಯೂಷನ್ ಕ್ಲಾಸಿಗೆ ಸೀಟ್ ಸಿಗಲಿಲ್ಲ. ಎಂಬ ದುಗುಡ ಪದ್ಮಿನಿಯಲ್ಲಿ ಇದ್ದೇ ಇದ್ದಿತು. ಪ್ರತಾಪ ರಾತ್ರಿ ಹನ್ನೆರಡು ಗಂಟೆಯವರೆಗೂ ಓದುತ್ತಿದ್ದ. ಅವನ ಜತೆಗೆ ಪದ್ಮಿನಿಯೂ ಎಚ್ಚರವಾಗಿ ಕೂತಿರುತ್ತಿದ್ದಳು. ವಿ.ಡಿ.ಎನ್. ಇವನಿಗೆ ಸೀಟು ಕೊಡದೇ ಅವಮಾನ ಮಾಡಿದರಲ್ಲವೇ.. ಅವರ ಸಹಕಾರವಿಲ್ಲದೆಯೇ ತನ್ನ ಮಗ ರ್‍ಯಾಂಕ್‌ಗಳಿಸಿದರೆ ಎಷ್ಟು ಚೆನ್ನಾ ಎಂದು ಅವಳಿಗೆ ಅನ್ನಿಸುತ್ತಲೇ ಇತ್ತು.

ಈ ಮಧ್ಯೆ ಪ್ರಸಾದ ಕ್ಲಾಸಿಗೆ ಬರುತ್ತಿಲ್ಲ. ಎನ್ನುವ ವಿಚಾರ ತಿಳಿಯಿತು. "ಪ್ರತಾಪನಿಗೂ ಬೇಸರವಾಗಿತ್ತು. ವಿಚಾರಿಸಿದಾಗ, ಅವನಿಗೆ ಜಾಂಡೀಸ್ ಆಗಿದೆ ಎನ್ನುವ ವಿಚಾರ ತಿಳಿಯಿತು. ಹತ್ತು ಹದಿನೈದು ದಿನಗಳು ಒಂದು ನರ್ಸಿಂಗ್ ಹೋಂನಲ್ಲಿದ್ದು ಬರುವಷ್ಟು ಅವನ ಖಾಯಿಲೆ ತೀವ್ರತರವಾಗಿತ್ತು. ಈ ವಿಷಯ ತಿಳಿದ ಪ್ರತಾಪ ತಾಯಿಗೆ ತಿಳಿಸಿದ್ದ."

ಪ್ರಸಾದನ್ನ ನೋಡೋಕೆ ಆಗೋಲ್ಲವಂತೆ. ಹಾಗಾಗಿ ಬಿಟ್ಟಿದಾನಂತೆ. ಜಾಂಡೀಸ್ ಅಂಟುರೋಗ ಅಂತಾರೆ... ಆದರೆ ನನಗೆ ಅವನನ್ನು ಒಂದು ಸಾರಿ ನೋಡಿಕೊಂಡು ಬರಬೇಕು ಅಂತ ಅನ್ನಿಸುತ್ತೆ.... ಆದರೆ ಹೋಗಿ ಬರೋಕೆ ಹೆದರಿಕೆ ಅಂತ ಹೇಳಿದ್ದ.

ಆದರೆ ಪದ್ಮಿನಿ ಹೇಳಿದ್ದಳು. "ಅವನು ಎಷ್ಟಾಗಲೀ ನಿನ್ನ ಆತ್ಮೀಯ ಗೆಳೆಯ. ನೋಡಿಕೊಂಡು ಬರಬೇಕೂಂತ ಅನ್ನಿಸಿದ್ದರೆ ತಪ್ಪೇನಿಲ್ಲ. ನಿನಗೆ ಹೆದರಿಕೆಯಾದರೆ, ನಾನೂ ನಿನ್ನ ಜತೆಗೆ ಬರ್ತೀನಿ" ಅಂತ.

ತಾಯಿ ಮಗ ಇಬ್ಬರೂ ಅವನ ಮನೆಗೆ ಹೋದರು. ಪ್ರಸಾದನ ತಾಯಿ ವನಜ ಮನಸ್ಸಿಗೆ ತುಂಬಾ ಹಚ್ಚಿಕೊಂಡಿರುವಂತೆ ಅನ್ನಿಸಿತ್ತು. ದುಃಖದಿಂದ ನುಡಿದಿದ್ದರು.

ಈ ವರ್ಷವೇ ಇವನು ಖಾಯಿಲೆ ಮಲಗಬೇಕೆ? ಪರೀಕ್ಷೆಗೆ ಇನ್ನು

ಮೂರು ನಾಲ್ಕು ತಿಂಗಳು ಬಾಕಿ ಇವೆ ಅಷ್ಟೇ. ಟ್ಯೂಷನ್‌ಗೂ ಹೋಗುತ್ತಿಲ್ಲ. ತುಂಬಾ ಸುಸ್ತಾಗಿ ಹೋಗಿದ್ದಾನೆ. ಈ ವರ್ಷ ಅವನು ಪಾಸಾಗ್ತಾನೋ ಇಲ್ಲವೋ ಅಂತ ನಮಗೆಲ್ಲ ದಿಗಿಲಾಗಿದೆ.

ಪದ್ಮಿನಿ ಸಮಾಧಾನ ಹೇಳಿದಳು. "ಹಾಗೆಲ್ಲಾ ಏನೂ ಆಗುಲ್ಲ ಬಿಡಿ. ನಿಮ್ಮ ಪ್ರಸಾದ ಬುದ್ಧಿವಂತ. ಖಂಡಿತಾ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗ್ತಾನೆ."

ಅಷ್ಟಾದರೆ ಸಾಕಾಗಿದೆ. ಕೂತ್ಕೊಂಡು ಬರೆಯೋಕಾದರೂ ಶಕ್ತಿ ಬೇಕಲ್ಲಮ್ಮಾ.... ಹತ್ತು ನಿಮಿಷ ನೆಟ್ಟಗೆ ಕೂತಿರೋಕೆ ಆಗ್ತಿಲ್ಲ ಅವನಿಗೆ. ಸದಾ ನಿದ್ದೆ. ಈ ವರ್ಷ ಬರೀ ಪಾಸಾದರೂ ಸಾಕು.

ಅಷ್ಟರಲ್ಲಿ ಪ್ರಸಾದ ಒಳಗಿನಿಂದ ನಿಧಾನವಾಗಿ ನಡೆದು ಬಂದ. ಅವನನ್ನು ತಾಯಿ ಮಗ ಇಬ್ಬರೂ ನೋಡಿ ಮಾತಿಲ್ಲದಾದರು. ಅವನನ್ನೇ ನೋಡಿದರು. ಕಾಮಾಲೆ ರೋಗದವರು, ಹಾಗೆ ಕಾಣಬಹುದು ಎಂದು ಪದ್ಮಿನಿ ಸಹ ಭಾವಿಸಿರಲಿಕ್ಕಿಲ್ಲ.

ಮೈಗೆಲ್ಲಾ ಅರಿಶಿನ ಹಚ್ಚಿ ಸ್ನಾನ, ಮಾಡಿಸಿದಂತೆ, ತಿಳಿ ಹಳದಿಯ ಮೈ ಬಣ್ಣ! ಹಳದಿ ಕಣ್ಣುಗಳು! ತೊಂಡೆ ಹಣ್ಣಿನಂತೆ ಅತಿ ಕೆಂಪಾದ ತುಟಿಗಳು. ಕಡಿತವಾಗಿ ಕೆರೆದ ಜಾಗಗಳಲ್ಲಿ ಕಪ್ಪು ಕಪ್ಪು ಕಲೆ, ಎಲ್ಲಕ್ಕಿಂತ ಹೆಚ್ಚಾಗಿ, ಅವನು ಉಟ್ಟ ಬಿಳಿಯ ಪಾಯಿಜಾಮ. ಜುಬ್ಬಾ ಸಹ ಅರಿಶಿನದ ನೀರಿನಲ್ಲಿ ಅದ್ದಿದಂತೆ ಹಳದಿಯಾಗಿದ್ದುದು. ಒಂದು ರೀತಿಯ ಭೀತಿಯೂ ವ್ಯಥೆಯೂ ಉಂಟಾಯಿತು.

ಒಂದೆರಡು ನಿಮಿಷ ಮಾತನಾಡಿ, ಅವನು ಒಳಗಿನ ರೂಮಿಗೆ ಹೊರಟು ಹೋದ. ಅವನ ತಾಯಿ ವನಜ ಅಳುತ್ತಾ ಹೇಳಿದ್ದರು.

ನೋಡಿ, ಹೀಗಾಗಿ ಹೋಗಿದ್ದಾನೆ. ಅವನನ್ನು ನೊಡಿ ನೋಡಿ ನಮಗೆ ಸುತ್ತ ಮುತ್ತಲಿನ ಎಲ್ಲಾ ವಸ್ತುವೂ ಹಳದಿಯಾಗಿ ಕಾಣುತ್ತೆ. ಎಲ್ಲಾ ಪೂರ್ಣವಾಗಿ ವಾಸಿಯಾಗುಕ್ಕೆ ಒಂದು ವರ್ಷ ಸಮಯಬೇಕಾಗುತ್ತಂತೆ. ಪಥ್ಯಮಾಡು ಅಂತಂದರೆ ರೇಗ್ತಾನೆ. ಹೇಳಿದ ಮಾತು ಕೇಳುಲ್ಲ ಹಠ ಮಾಡ್ತಾನೆ. ಅವನಿಗೆ ಪೂಸಿ ಹೊಡೆದು ಸಾಕಾಗಿ ಹೋಗಿದೆ. ಜತೆಗೆ ಎಲ್ಲರಿಂದ ದೂರವಿಟ್ಟದ್ದೀನಿ ಅಂತ ಕೋಪಬೇರೆ.... ಪಾಪ...... ಪದ್ಮಿನಿ ಲೊಚಗುಟ್ಟಿದಳು.

"ಪ್ರಸಾದು ಅಣ್ಣ, ಪ್ರಕಾಶ ಅವನೂ, ಪಿ.ಯು.ಸಿ. ಪರೀಕ್ಷೆಗೆ ಕಟ್ಟಿದ್ದಾನೆ. ಅವನಿಗೇನಾದರೂ, ಹೀಗೇ ಆದರೆ ನಮ್ಮ ಗತಿ ಏನು? ಅದಕ್ಕೆ ನಾವು

ಇಬ್ಬರನ್ನು ದೂರ ದೂರ ಇಟ್ಟಿದೀವಿ."

ಈ ಮಾತು ಕೇಳಿ ಪದ್ಮಿನಿ ಹೆದರಿದಳು. "ನಾ ಇನ್ನು ಬರ್ತಿನಮ್ಮಾ.... ಪಾಪ, ಪ್ರಸಾದಂಗೆ ಹುಶಾರಿಲ್ಲ ಅಂತ ನಮ್ಮ ಪ್ರತಾಪ ಮನಸ್ಸಿಗೆ ತುಂಬಾ ಹಚ್ಚಿಕೊಂಡಿದ್ದ. ನೋಡಿಕೊಂಡು ಬರೋಣ ಅಂತ ನಾನೇ ಕರೆದುಕೊಂಡು ಬಂದೆ." ಎನ್ನುತ್ತಾ ಹೊರಟಳು.

ನಿಜವಾಗಲೂ ತಾಯಿ ಮಗನಲ್ಲಿ ಒಂದು ರೀತಿಯ ಭೀತಿ ಆವರಿಸಿತ್ತು. ಪ್ರತಾಪಂಗಂತೂ, ಪ್ರಸಾದನಿಗೆ ಪರೀಕ್ಷೆಗೆ ಬರಲಾಗದಿದ್ದರೇ, ಅನ್ಯಾಯವಾಗಿ ಒಂದು ವರ್ಷ ಹೋಗುತ್ತಲ್ಲ ಅವನಿಗೆ ಎನ್ನುವ ವ್ಯಥೆಯೊಂದಿಗೆ, ಪಿ.ಯು.ಸಿ. ತರಗತಿಯಲ್ಲಿ ತನ್ನ ಬೆಂಚಿನಲ್ಲಿ ತನ್ನ ಸ್ನೇಹಿತ ಇರುವುದಿಲ್ಲವಲ್ಲ ಎಂಬ ದುಗುಡ ಸಹ.

ದಿನಗಳು ಕಳೆದವು. ಪರೀಕ್ಷೆಯ ದಿನಗಳು ಬಂದವು. ಎಲ್ಲರೂ ಅವರವರ ಓದು ಬರಹಗಳಲ್ಲಿ ಮುಳುಗಿ ಹೋಗಿದ್ದರು. ಹಗಲು ರಾತ್ರಿ ಕಷ್ಟ ಪಟ್ಟು ಓದಿ ತಯಾರಾಗಿದ್ದ ಪ್ರತಾಪ, ಎಲ್ಲಾ ಪೇಪರ್ರುಗಳಲ್ಲೂ ಚೆನ್ನಾಗಿಯೇ ಮಾಡಿದ್ದ. ಎಲ್ಲಾ ವಿಷಯಗಳಲ್ಲೂ ಹೆಚ್ಚು ಕಡಿಮೆ ತೊಂಭತ್ತರಿಂದ ತೊಂಭತ್ತೆಂಟರಷ್ಟು ಅಂಕಗಳಿಸುವ ಭರವಸೆಯನ್ನಿಟ್ಟುಕೊಂಡಿದ್ದ.

ಪ್ರಸಾದನ ಮೇಷ್ಟು ವಿ.ಡಿ.ಎನ್. ಅವನಿಗೆ ಮನೆಗೇ ಬಂದು ಪಾಠಗಳನ್ನು ಹೇಳಿಕೊಟ್ಟು ಹೋಗುತ್ತಿದ್ದ ವಿಷಯ ರಹಸ್ಯವಾಗಿತ್ತು. ಪ್ರಸಾದ ಯಾರಿಗೂ ತಿಳಿಸುವಂತಿರಲಿಲ್ಲ. ಹಾಗಂತ ವಿ.ಡಿ.ಎನ್ ತಿಳಿಸಿದ್ದರಂತೆ. ಅಷ್ಟಾದರೂ ಗಣಿತದ ಪರೀಕ್ಷೆಯ ದಿನ, ಪ್ರಸಾದ ತಾನು ಕೇವಲ ತೊಂಭತ್ತೈದು ಅಂಕಗಳಿಗೆ ಮಾತ್ರ ಉತ್ತರಿಸಿದ್ದೇನೆ. ಇನ್ನು ಐದು ಅಂಕಗಳ ಪ್ರಶ್ನೆಯೇ ನನಗೆ ಅರ್ಥವಾಗಲಿಲ್ಲ ಎಂದು ಹೇಳಿದ್ದನಂತೆ.

ಆದರೆ ಫಲಿತಾಂಶದ ದಿನ! ಪದ್ಮಿನಿ ತನ್ನ ಮಗನ ಹೆಸರು ರ್‍ಯಾಂಕ್ ಲಿಸ್ಟ್‌ನಲ್ಲಿ ಇರುತ್ತದೆ ಎಂಬ ಭರವಸೆಯನ್ನಿಟ್ಟುಕೊಂಡಿದ್ದವಳು. ಆದರೆ ಅಂದೇ ಮದ್ಯಾಹ್ನ ಪ್ರತಾಪನ ಸ್ನೇಹಿತರು ನಾಲ್ಕಾರು ಜನ ಬಂದು, ಪ್ರಸಾದನ ಹೆಸರು ರ್‍ಯಾಂಕ್ ಲಿಸ್ಟ್‌ನಲ್ಲಿರುವುದನ್ನು ತಿಳಿಸಿ, ಎಲ್ಲರ ಮನಸ್ಸನ್ನು ಕೆಡಿಸಿ ಹೊರಟು ಹೋದರು.

ನಾನು ರಿಸಲ್ಟ್ ನೋಡಲು ಹೋಗುವುಲ್ಲವೆಂದು ಕೆಟ್ಟ ಮುಖ ಹಾಕಿಕೊಂಡು ಪ್ರತಾಪ ಮನೆಯಲ್ಲೆ ಕುಳಿತ. ಆದರೂ ಫಲಿತಾಂಶ ಬೇರೆ ಬೇರೆ ಹುಡುಗರಿಂದ ತಿಳಿಯಿತು. ಪ್ರತಾಪನ ತರಗತಿಯ ಹುಡುಗರು

ಮೂರು ಜನರು ರ್‍ಯಾಂಕ್ ಗಿಟ್ಟಿಸಿದ್ದರು. ಅದರಲ್ಲಿ ಪ್ರಸಾದನೂ ಒಬ್ಬ. ಅದೇ ಸ್ಕೂಲಿಗೆ ಇನ್ನು ಆರು ರ್‍ಯಾಂಕ್‌ಗಳು ಬಂದಿದ್ದವು. ಆ ಉಳಿದ ಆರು ಜನ ಹುಡುಗರೂ ಬೇರೆ ಬೇರೆ ಸೆಕ್ಷನ್‌ನವರು.

ಹೀಗಾಗಿ ಪ್ರತಾಪನಿಗೆ ಫಸ್ಟ್ ಕ್ಲಾಸ್‌ನಲ್ಲಿ ಪಾಸಾದ ಸಂತೋಷವೂ ಇಲ್ಲವಾಯಿತು. ಪದ್ಮಿನಿಯ ಮುಖವಂತೂ ಮಸಿಯಾದ ಪಾತ್ರೆಯಂತಾಗಿತ್ತು. ಎಲ್ಲರೂ ಕೇಳುವವರೇ.... "ನಿಮ್ಮ ಮಗ ಒಂದು ರ್‍ಯಾಂಕ್ ಗಿಟ್ಟಿಸ್ತಾನೆ ಅಂತ ನಾವೆಲ್ಲಾ ಅಂದುಕೊಂಡಿದ್ದೆವು. ಪೇಪರ್ ಟಫ್ ಇತ್ತಾ?" ಅಂತ ಒಬ್ಬರು ಕೇಳಿದರೆ ಇನ್ನೊಬ್ಬರು "ಈ ರ್‍ಯಾಂಕ್ ಗೀಂಕ್ ಎಲ್ಲಾ ಬರೀ ಮೋಸ ಕಣ್ರೀ.... ಒಳಗೊಳಗೆ ಏನೇನು ಚಮತ್ಕಾರ ಬೇಕಾದರೂ ನಡೆಯುತ್ತೆ" ಅಂತ.

ಆಗ ಪದ್ಮಿನಿಗೆ ನೆನಪಾಯಿತು. ಮಗನನ್ನು ಕೇಳಿದಳು. ಅಲ್ಲ ಕಣೋ.... ಪ್ರಸಾದ, ಲೆಖ್ಖದಲ್ಲಿ, ಮಾಡಿದ್ದೇ ತೊಂಭತ್ತೈದು ಅಂಕಗಳಿಗೆ ಅಂತ ಹೇಳಿದ್ದೆ. ಅವನಿಗೆ ಹೇಗೆ ತೊಂಭತ್ತೆಂಟು ಅಂಕಗಳು ಸಿಕ್ಕಿವೆ. ನೀನು, ನೂರು ಅಂಕಗಳಿಗೂ, ಸರಿಯಾಗಿ ಬರೆದಿದ್ದೆ ಅಂತ ಹೇಳಿದ್ದೆ. ಆದರೆ ನಿನಗೆ ತೊಂಭತ್ತೇ ನಂಬರ್ರು ಬಂದಿದೆ.

"ಸುಮ್ಮನೇ ಹೋಗಮ್ಮ... ಇಂಥದ್ದನ್ನೆಲ್ಲ ಕೇಳಿ, ನನಗೇ ಹೊಟ್ಟೆ ಉರಿಸಬೇಡ."

"ನನ್ನ ಹೊಟ್ಟೆಯೂ ಉರಿದು ಹೋಗ್ತಿದೆ ಕಣೋ.... ನಂಗೇನು ಬೇಸರ ಕಡಿಮೆ ಆಗಿದೆ ಅಂತ ಅಂದ್ಕೊಂಡ್ಯಾ? ಆ ಪ್ರಸಾದನ್ನ ನೋಡಿದರೆ ಹಳದಿ ಹತ್ಕೊಂಡು ಹಾಗಿದ್ದ. ಪರೀಕ್ಷೆಗೇ ಹೋಗ್ತಾನೋ ಇಲ್ಲವೋ, ಅಂತ ಅವನಮ್ಮ ಅತ್ತಳು. ಈಗ ನೋಡಿದರೆ ಅವನಿಗೆ ರ್‍ಯಾಂಕು! ನೀನು ನೋಡಿದರೆ ಹಗಲು ರಾತ್ರಿ ಅಷ್ಟು ಕಷ್ಟ ಪಟ್ಟೆ. ನಿನಗೆ ರ್‍ಯಾಂಕು ಇಲ್ಲ. ಇದು ಖಂಡಿತಾ ಮೋಸ. ಅವನಿಗೆ ರ್‍ಯಾಂಕು ಬಂದದ್ದು ನನಗೆ ಅಸೂಯೆ ಖಂಡಿತಾ ಇಲ್ಲ. ಆದರೆ ನಿನಗೂ ರ್‍ಯಾಂಕು ಸಿಗಬೇಕಗಿತ್ತು. ಅಥವಾ ನಿನಗೆ ಸಿಗಲಿಲ್ಲವೋ..... ಅವನಿಗೂ ಸಿಗಬಾರದಾಗಿತ್ತು."

"ಹೋಗಮ್ಮ ಇದೆಂಥಾ ನ್ಯಾಯ.....?"

"ನ್ಯಾಯವಲ್ಲದಿರಬಹುದು. ಆದರೆ ನಿನಗೆ ಅನ್ಯಾಯವಾಗಿ ಹೋಯ್ತು ಕಣೋ.... ಇದಕ್ಕೆಲ್ಲಾ ಆ ನಿಮ್ಮ ವಿ.ಡಿ.ಎನ್ ಕಾರಣ. ನಿನ್ನನ್ನು ಟ್ಯೂಷನ್‌ಗೆ ಸೇರಿಸಿಕೊಂಡಿದ್ದರೆ ಅವನಜ್ಜಿಯ ಗಂಟೇನು ಹೋಗುತ್ತಿತ್ತು? ಅವನಿಗೆ ಪ್ರಸಾದನ

ತಂದೆ ಸಾಕಷ್ಟು ಲಂಚ ಕೊಟ್ಟಿರಬೇಕು.... ಅದಕ್ಕೇ ಏನೇನೋ ಒಳಗೊಳಗೇ ಮಾಡಿದ್ದಾನೆ! ಇಲ್ಲದಿದ್ದರೆ ಇಂತಹ ಜಾದು ನಡೆಯೋದಾದ್ರೂ ಹೇಗೆ?"

"ನನ್ನ ತಲೆ ನೋಯುತ್ತಿದೆ. ಸ್ವಲ್ಪ ಸುಮ್ನಿರ್ತೀಯಾ?"

"ನಾನು ಸುಮ್ಮನಿರುಲ್ಲ. ಇದನ್ನು ತಿಳಿದವರಿಗೆಲ್ಲಾ ಹೇಳ್ತೀನಿ. ಪೇಪರ್ನಲ್ಲಿ ಹಾಕಿಸ್ತೀನಿ. ವಿ.ಡಿ.ಯನ್.ಗೆ ಟ್ಯೂಷನ್‌ಗೇ ಯಾರೂ ಹೋಗಬಾರದು ಹಾಗೆ ಬುದ್ಧಿ ಕಲಿಸ್ತೀನಿ. ಅಷ್ಟೇ ಪದ್ಮಿನಿ ಕೂಗಾಡಿದಳು. ಹಾರಾಡಿದಳು. ನಾಲ್ಕಾರು ದಿನ ಕಳೆದ ಮೇಲೆ ತಣ್ಣಗಾದಳು.

ಪಿ.ಯು.ಸಿ.ಯ ತರಗತಿಗಳು ಪ್ರಾರಂಭವಾದವು. ಈಗ ಎರಡು ಗ್ರೂಪು. ಪ್ರಸಾದನೊಂದು, ಪ್ರತಾಪನದೊಂದು. ಪ್ರಸಾದನ ಗುಂಪಿನಲ್ಲಿ ಎಲ್ಲಾ ಹೊಸಬರೇ. ಎಲ್ಲಾ ಪ್ರಸಾದನನ್ನು ಹಂಗಿಸಿ ಕೇಳುವವರೇ, ವಿ.ಡಿ.ಎನ್.ಗೆ ನೀನು ಎಷ್ಟು ಲಂಚ ಕೊಟ್ಟೆ ರ್‍ಯಾಂಕ್ ಬರೊಕೆ ಅಂತ. ಅವನಿಗೂ ಕೇಳಿ ಕೇಳಿ ಸಾಕಾಗಿತ್ತು. ಅವನು ಒಂದು ದಿನ ಗುಟ್ಟಾಗಿ ಪ್ರತಾಪನೊಡನೆ ಹೇಳಿದ.

"ನನಗೂ ಇದು ಹೇಗೆ ನಡೀತು ಅಂತ ನನಗೆ ಗೊತ್ತಿಲ್ಲ ಕಣೋ... ನೀನು ಏನೂ ಯೋಚನೆ ಮಾಡಬೇಡ. ನಿನಗೆ ತಿಳಿದಷ್ಟನ್ನು, ಆಗುವಷ್ಟನ್ನು ನೀನು ಬರಿ. ಉಳಿದದ್ದನ್ನು ನಾನು ನೋಡ್ಕೊತೀನಿ ಅಂತ ವಿ.ಡಿ.ಎನ್ ಸದಾ ಹೇಳುತ್ತಿದ್ದರು. ತೊಂಭತ್ತೈದು ಅಂಕಕ್ಕೆ ಬರೆದಿದ್ದರೂ, ತೊಂಭತ್ತೆಂಟು ಅಂಕ ಹೇಗೆ ಬಂತು ಅಂತ ನನಗೆ ಅರ್ಥವಾಗ್ತಿಲ್ಲ. ಆದರೆ ನಿನ್ನ ಸ್ನೇಹಿತರೆಲ್ಲ ಹೀಗೆ ಹಂಗಿಸುವಾಗ ನನಗೆ ಹೀನಾಯವಾಗುತ್ತೆ. ದಯವಿಟ್ಟು ಅವರಿಗೆಲ್ಲಾ ಸುಮ್ಮನಿರಿ ಅಂತ ಹೇಳು."

"ಕಳ್ಳನ ಮನಸ್ಸು ಹುಳ್ಳು ಹುಳ್ಳಗೆ ಅಂತ ನಿನಗೇಕೆ ಅನ್ನಿಸಬೇಕು. ತಪ್ಪು ವಿ.ಡಿ.ಎನ್. ದಾದರೆ, ಅವರಿಗೆ ಹೀನಾಯವಾಗಬೇಕು. ಅವರೇನಾದರೂ ಇಂಥ ಹಲ್ಕಾ ಕೆಲಸ ಮಾಡಿದ್ದರೆ, ಅದು ಅವರು ಅವರನ್ನೇ ವಂಚಿಸಿಕೊಂಡಂತೆ. ಒಬ್ಬ ಗುರುವಿಗೆ, ಎಲ್ಲಾ ವಿದ್ಯಾರ್ಥಿಗಳೂ ಒಂದೇ. ಅದೇ ಆ ಶಿಷ್ಯರು, ತಮ್ಮ ಗುರುವಿನ ಮೇಲೆ ಎಂತಹ ಭರವಸೆಯನ್ನು ಇಟ್ಟುಕೊಂಡಿರುತ್ತಾರೆ? ಯಾವುದೋ ಆಮಿಷಕ್ಕೆ ಬಲಿಯಾಗಿ ವಿದ್ಯಾರ್ಥಿಗಳು ಉಜ್ವಲ ಭವಿಷ್ಯವನ್ನು ಹಾಳು ಮಾಡುವ ಇಂತಹ ಮೇಷ್ಟ್ರುಗಳನ್ನು ಹಗಲು ಹೊತಿತನಲ್ಲೇ ನೇಣು ಹಾಕಬೇಕು. ಇಲ್ಲದಿದ್ದರೆ ನನ್ನಂಥೋನಿಗೆ ಅನ್ಯಾಯ! ನಿನ್ನಂಥೋನಿಗೆ ಹೀನಾಯ..."

ಪ್ರತಾಪ ಇಷ್ಟನ್ನು ಆಡಿ, ತನ್ನ ಪಾಡಿಗೆ ತಾನು ಅವನೆದುರಿನಿಂದ

ಹೊರಟು ಹೋದ. ಪ್ರಸಾದನಿಗೆ ತಾನು ರ್‍ಯಾಂಕ್‌ಗಳಿಸಿರುವೆನೆಂಬ ಸಂತಸವೂ ಇಲ್ಲವಾಯಿತು. ವಿ.ಡಿ.ಎನ್. ನನ್ನನ್ನು ಎತ್ತಲು ಹೋಗಿ, ಪಾತಾಳಕ್ಕೆ ಬೀಳಿಸಿದರು ಅಂತನ್ನಿಸಿತ್ತು.

ಈ ಒಂದು ರ್‍ಯಾಂಕ್‌ನ ಕಾರಣದಿಂದಾಗಿ, ಪ್ರಸಾದ, ಪ್ರತಾಪ ದೂರ ದೂರವಾದರು. ಒಬ್ಬನಲ್ಲಿ ರೋಷವಿದ್ದರೆ, ಇನ್ನೊಬ್ಬನಲ್ಲಿ ಅಳುಕು.

ಮೊದಲನೇ ವರ್ಷದ ಪಿ.ಯು.ಸಿಯ ಕ್ಲಾಸ್ ಪರೀಕ್ಷೆಯಲ್ಲಿ ಪ್ರತಾಪ, ಕಾಲೇಜಿಗೆ ಪ್ರಥಮ ರ್‍ಯಾಂಕ್‌ಗಳಿಸಿದ. ಎಲ್ಲರೂ ಅವನನ್ನು ಹೊಗಳುವರೇ. ಅವನಿಗೆ ಮೊದಲ ಬಹುಮಾನ ಬೇರೆ ಸಿಕ್ಕಿತು. ಈ ವಿಷಯವನ್ನು ಪದ್ಮಿನಿಗೆ ಮೊದಲು ಬಂದು ತಿಳಿಸಿದವನು ಪ್ರಸಾದನೇ. ತಾನು ಈ ವಿಷಯವನ್ನು ತಿಳಿಸಿ, ಮನದ ದುಗುಡವನ್ನು ಕಡಿಮೆ ಮಾಡಿಕೊಂಡಿದ್ದ.

ಎರಡನೇ ವರ್ಷದ ಪಿ.ಯು.ಸಿ. ಪರೀಕ್ಷೆಯಲ್ಲಿ ಇಬ್ಬರಿಗೂ ಯಾವ ರ್‍ಯಾಂಕು ಇಲ್ಲ. ಈಗ ಇಬ್ಬರು ಸಮಾನರಾಗಿದ್ದರು. ಆದರೆ ಎಲ್ಲಾ ವಿಷಯಗಳಲ್ಲೂ ಪ್ರತಾಪನಿಗೆ, ಪ್ರಸಾದನಿಗಿಂತ ಅಂಕಗಳು ಹೆಚ್ಚಾಗಿದ್ದವು. ನಂತರದ ಸಿ.ಇ.ಟಿ. ಪರೀಕ್ಷೆಯಲ್ಲಿ ಪ್ರತಾಪನ, ಇಂಜನಿಯರಿಂಗ್ ಹಾಗೂ ಮೆಡಿಕಲ್‌ನ ರ್‍ಯಾಂಕಿಂಗ್ ನೂರರ ಒಳಗೇ ಇದ್ದರೆ, ಪ್ರಸಾದನ ರ್‍ಯಾಂಕಿಂಗ್ ಐನೂರರ ಸಮೀಪದಲ್ಲಿತ್ತು.

ಈಗ ಅವರಿಬ್ಬರ ನಿಜವಾದ ಅಂತರ ಕಂಡು ಬಂದಿತ್ತು. ಒಳಗೊಳಗೇ ನಡೆದ ಗೋಲ್‌ಮಾಲ್‌ನಲ್ಲಿ ವಿ.ಡಿ.ಎನ್. ಗಳಿಸಿದ್ದು ಎಷ್ಟು ಎನ್ನುವ ರಹಸ್ಯ ಮಾತ್ರ ಪತ್ತೆಯಾಗಲಿಲ್ಲ.

* * *

೧೩. ದೇವರಂತಹವನು

ಸೀತಾಪತಿ ಬಹಳ ಕಿಲಾಡಿ ಮನುಷ್ಯ. "ತನ್ನ ಎಲೆಯಲ್ಲಿ ಕತ್ತೆ ಸತ್ತು ಬಿದ್ದಿದ್ದರೂ, ಪಕ್ಕದವನ ಎಲೆಯ ನೊಣವನ್ನು ಓಡಿಸುವ ಬುದ್ಧಿ! ತಾನೇ ಜಾಣನೆಂದು ಅವರಿವರನ್ನು ಜರಿದು ಆಡುವ ಕೊಂಕು ಸ್ವಭಾವದವನು."

ಅವನ ತಮಾಷೆಯ ಮಾತಿಗೆ ಅವನೆದುರಿಗೆ ಬಿದ್ದು ಬಿದ್ದು ನಗುವ ಜನರು, ಅವನ ಹಿಂದೆ ಅವನನ್ನೇ ತಮಾಷೆ ಮಾಡಿಕೊಂಡು ನಗುತ್ತಿದ್ದರು. ಇದು ಅವನಿಗೆ ತಿಳಿದಿದ್ದರೂ "ನೆಲದ ಮೇಲೆ ಬಿದ್ದರೂ, ಮೀಸೆ ಮಣ್ಣಾಗಲಿಲ್ಲ" ಎನ್ನುವ ಧೋರಣೆ ಅವನದು.

ಅವನು ಪಾಸು ಮಾಡಿದ್ದು ಬಿ.ಎಸ್ಸಿ. ಆದರೆ ಯಾವ ಐ.ಎ.ಎಸ್. ಆಫೀಸರ್‌ಗೂ ಇಲ್ಲದಷ್ಟು ಜಂಭ. ಹತ್ತಾರು ಕಡೆ ಕೆಲಸಕ್ಕೆ ಸೇರಿ ಮೇಲಿನಧಿಕಾರಿಗಳೊಡನೆ ಸರಿ ಹೊಂದದೇ ಕೆಲಸ ಬಿಟ್ಟಿದ್ದ. ಕೆಲಸವಿಲ್ಲದೇ ಕಾಲ ಕಳೆಯುವ ಸಮಯದಲ್ಲಿ ಸಾಲ ಮಾಡಿ ಮಜಾ ಮಾಡುವ ಬುದ್ಧಿ ಮಾತ್ರ ಬದಲಾಗಿರಲಿಲ್ಲ. "ಸಾಲ ಮಾಡಿಯಾದರೂ ತುಪ್ಪ ತಿನ್ನು" ಎನ್ನುವ ಚಾರ್ವಾಕ ತತ್ವವನ್ನು ಇವನಿಗಾಗಿಯೇ ಬರೆದಿರಬೇಕು.

ತನ್ನ ಸ್ಥಿತಿಯೇ ಹೀಗಿರುವಾಗ, ಮದುವೆ ಬೇಡ ಎನ್ನಲಿಲ್ಲ. ಅನುಕೂಲಸ್ಥರ ಮನೆಯ ವಯಸ್ಸಾದ ಕನ್ಯೆನ್ನು ಮದುವೆಯಾದ. ಸಧ್ಯ ನಮ್ಮ ಕನ್ಯಾಸೆರೆಯನ್ನು ಬಿಡಿಸಿ, ನಮ್ಮನ್ನು ಕೃತಾರ್ಥರನ್ನಾಗಿ ಮಾಡಿದನಲ್ಲ ಈ ಪುಣ್ಯಾತ್ಮ ಎನ್ನುವ ಕೃತಜ್ಞತೆ ಅವನಲ್ಲಿ ಅವರುಗಳಿಗೆ. ಅದರ ಸದುಪಯೋಗ ಪಡೆಯುವವನಂತೆ, ಸೀತಾಪತಿ ಮಾವನ ಮನೆ ಸೇರಿದ. ಮನೆ ಮಗನಿಗಿಂತ ಹೆಚ್ಚಿನ ದರ್ಬಾರು ನಡೆಸತೊಡಗಿದ.

ಸೀತಾಪತಿಯ ಹೆಂಡತಿಯ ಹೆಸರು ವೈಜಯಂತಿ. ಅವನು ತನ್ನ ಹೆಂಡತಿಯನ್ನು ನೃತ್ಯ ನಟಿ ವೈಜಯಂತಿ ಮಾಲಳಂತೆಯೇ ಇದ್ದಾಳೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ. ಈ ವೈಜಯಂತಿಗೆ ನಾಲ್ಕು ಜನ ತಂಗಿಯರು, ಇಬ್ಬರು ತಮ್ಮಂದಿರು. ಅವರ ಮನೆಯಲ್ಲೂ ಅಷ್ಟೆ ಎಲ್ಲಾ ದರ್ಬಾರು ಹೆಣ್ಣು ಮಕ್ಕಳದೇ. ಊಟ ತಿಂಡಿ ಅಡಿಗೆಯಿಂದ ಹಿಡಿದು, ಉಡಿಗೆ ತೊಡಿಗೆ ನೋಟದವರೆಗೂ ಸರಿ. ಎಲ್ಲಾ ಅವರುಗಳು ಹೇಳಿದಂತೆಯೇ

ನಡೆಯಬೇಕು.

ವೈಜಯಂತಿ ಈ ಸೀತಾಪತಿಗಾಗಿಯೇ ಕಾದು ಕುಳಿತಿದ್ದಳೇನೋ ಎನ್ನುವಂತೆ ಇವನನ್ನು ಮದುವೆಯಾದ ನಂತರ, ತನ್ನ ಇಷ್ಟಾನಿಷ್ಟಗಳೇ ನಡೆಯುವಂತೆ ಅವನನ್ನು ಒಲಿಸಿಕೊಂಡಿದ್ದಳು. ಆದರೆ ಕೆಲವೇ ದಿನಗಳಲ್ಲಿ ಇವನ ಬಂಡವಾಳ ಗೊತ್ತಾದ ನಂತರ, ಇವನನ್ನು ತನ್ನ ಸೇವಕನಂತೆ ಕಾಣ ತೊಡಗಿದ್ದಳು. ಅವಳ ತಂದೆ ಮನೆಯವರು ಮಗಳಿಗೆ ಬೇಸರವಾಗಬಾರದೆಂದು ಮಗಳ ಎಲ್ಲಾ ಇಚ್ಚೆಗಳನ್ನು ಪೂರೈಸುತ್ತಿದ್ದರು. ಇದು ಒಂದು ರೀತಿಯಲ್ಲಿ ಸೀತಾಪತಿಗೆ ಅನುಕೂಲವೇ ಆಗಿದ್ದಿತು.

ಅತ್ತೆಯ ಮನೆಯಲ್ಲಿ ಜೋಕರ್ ತರಹ. ಎಲ್ಲರನ್ನೂ ನಗಿಸಿಕೊಂಡು, ಎಲ್ಲರ ವಿಷಯದಲ್ಲೂ ತಲೆ ಹಾಕಿ, ತನ್ನ ಇರುವಿಕೆಯನ್ನು ಪ್ರಕಟಗೊಳಿಸುತ್ತಿದ್ದ. ಹತ್ತಾರು ವರ್ಷಗಳು ಹೀಗೆ ಕಳೆದವು. ಅವರಿಗೆ ಒಂದು ಹೆಣ್ಣು ಮಗುವೂ ಆಯಿತು. ವೈಜಯಂತಿಯ ಇಬ್ಬರು ತಂಗಿಯರಿಗೆ ಮದುವೆಯೂ ಆಗಿದ್ದಿತು. ಕಡೆಯ ಇಬ್ಬರು ತಂಗಿಯರಿಗೆ ಗಂಡು ಸಿಗುವುದು ಅತಿ ಪ್ರಯಾಸಕರವಾಗಿದ್ದಿತು. ಈ ಸಮಯದಲ್ಲಿ ತಾನು ಇನ್ನು ಆರುತಿಂಗಳಿನೊಳಗೆ, ತನ್ನ ಒಬ್ಬಳು ನಾದಿನಿಗೆ ಗಂಡು ಹುಡುಕಿ ಕೊಡುವುದಾಗಿ ಸೀತಾಪತಿ ಶಪಥಮಾಡಿದ. ಸರಿ ಅಂದಿನಿಂದ ಪ್ರಾರಂಭವಾಗಿದ್ದಿತು ಅವನ ಪಾದಯಾತ್ರೆ.

ಮೊದಲು ಅವನು ತನ್ನ ತಮ್ಮನ ಮನೆಗೆ ಬಂದ. ತಮ್ಮ ಮನೆಯಲ್ಲಿರಲಿಲ್ಲ. ಆಫೀಸಿಗೆ ಹೋಗಿದ್ದ. ತಮ್ಮನ ಹೆಂಡತಿಯ ಹತ್ತಿರ ಅತಿ ವಿನಯವಾಗಿ ಮಾತನಾಡಿ, ತನ್ನ ನಾದಿನಿಗೆ ಯಾವುದಾದರೂ ವರ ಇದ್ದರೆ ಹೇಳಬೇಕೆಂದು ತಿಳಿಸಿ ಅವಳ ವಿವರಗಳನ್ನು ಕೊಟ್ಟ. ನಂತರ ಅವರ ಮನೆಯಲ್ಲೇ ಊಟ ಮಾಡಿ, ಸಾರಿಗೆ ಉಪ್ಪು ಸಾಲದು. ಪಲ್ಯಕ್ಕೆ ಖಾರ ಸಾಲದು ಎಂದು ಉಪ್ಪಿನಕಾಯಿಯನ್ನು ಧಂಡಿಯಾಗಿ ಹಾಕಿಸಿಕೊಂಡು ಊಟ ಮುಗಿಸಿದ. ಹೊರಡುವಾಗ,

"ಮರೀ ಬೇಡ್ರೀ.... ನಮ್ಮ ಚಂದ್ರಿಕಾಗೆ ಒಬ್ಬ ಇಂದ್ರನಂತಹ ಗಂಡನ ಹುಡುಕಿ ಕೊಡಿ... ನಾನು ಅವರಿಂದ, ನಿಮಗೆ ಭಾರಿ ಉಡುಗೊರೆ ಕೊಡಿಸ್ತೀನಿ" ಎಂದು ಆಸೆಯನ್ನು ಹುಟ್ಟಿಸಿದ.

ಉಡುಗೊರೆಯ ಆಸೆ ಇಲ್ಲವಾದರೂ, ತನ್ನ ಭಾವನ ಮಾತಿಗೆ ಇಲ್ಲ ಎನ್ನುವಂತೆ ಸರಳ ಹತ್ತಾರು ಗಂಡುಗಳ ವಿಳಾಸವನ್ನು ಸಂಪಾದಿಸಿ, ಸೀತಾಪತಿಯ ಕೈಗೆ ಕೊಟ್ಟಳು. ಆದರೆ ಸೀತಾಪತಿಯ ತರ್ಕವೇ ಬೇರೆ.

"ಬರೀ. ಅಡ್ರೆಸ್ ಕೊಟ್ಟರೆ ಸಾಲದು. ನೀವು ಗಂಡಿನವರ ಮನೆಯವರ ಜತೆ ಮಾತನಾಡಿ, ಹುಡುಗಿಯ, ಹುಡುಗಿಯ ತಂದೆಯ ಮನೆಯವರ ಅನುಕೂಲಗಳನ್ನು ತಿಳಿಸಿ, ಅವರು ಒಪ್ಪುವಂತೆ ಮಾಡಬೇಕು. ನಿಮ್ಮ ಮನೆಯಲ್ಲಿ ವಧು ಸಂದರ್ಶನಕ್ಕೆ ಏರ್ಪಾಡು ಮಾಡಬೇಕು" ಅಂತ ನುಡಿದ.

ಇದನ್ನು ಸರಳ ಒಪ್ಪಲಿಲ್ಲ "ಇದಕ್ಕೆಲ್ಲಾ ನನಗೆ ಬಿಡುವಾಗವುದಿಲ್ಲ.. ಗಂಡಿನ ಮನೆಯವರ ವಿಳಾಸ ಕೊಡ್ತೀನಿ. ಉಳಿದದ್ದೆಲ್ಲಾ ನಿಮ್ಮದೇ. ನಾನು ಯಾವ ಶಿಫಾರಸ್ಸೂ ಮಾಡುವುದಿಲ್ಲ" ಎಂದು ಬಿಟ್ಟಿದ್ದಳು. ಸೀತಾಪತಿ ಎಷ್ಟೆಷ್ಟೋ ಮಾತನಾಡಿ ಸರಳನನ್ನು ಒಪ್ಪಿಸಲು ನೋಡಿದ. ಆದರೆ ಅವಳು "ಮಧ್ಯೆ ತಾನು ತಲೆ ಹಾಕುವುದಿಲ್ಲ" ಎಂದು ಖಡಾಖಂಡಿತವಾಗಿ ಹೇಳಿಬಿಟ್ಟಳು.

ಸರಳ ಸಂಪಾದಿಸಿ ಕೊಟ್ಟ ಹತ್ತಾರು ವಿಳಾಸಗಳಲ್ಲಿ ಒಬ್ಬ ಹುಡುಗನ ಮನೆಯವರು, ಮದುವೆ ವಿಷಯದಲ್ಲಿ ಸ್ವಲ್ಪ ಆತುರವಾಗಿದ್ದರು. ಅದಕ್ಕೆ ಕಾರಣ, ವರನಿಗೆ ಸ್ವಲ್ಪ ವಯಸ್ಸು ಜಾಸ್ತಿಯಾಗಿದುದಲ್ಲದೇ, ಶ್ರೀರಂಗ ಪಟ್ಟಣದಲ್ಲಿ ವಾಸವಾಗಿದ್ದು, ಪಿ.ಡಬ್ಲ್ಯು.ಡಿಯಲ್ಲಿ ಅಸಿಸ್ಟೆಂಟ್ ಇಂಜನಿಯರ್ ಆಗಿದ್ದ ಸಂಬಳ ಸಾರಿಗೆ ಎಲ್ಲಾ ಚೆನ್ನಾಗಿತ್ತು. ವಾಸಕ್ಕೆ ಕ್ವಾರ್ಟಸ್ ಸಹ ಇತ್ತು. ಸಂಬಳದ ಜತೆಗೆ ಗಿಂಬಳವೂ ಇದ್ದುದರಿಂದ ಅನುಕೂಲಕ್ಕೆ ಕಡಿಮೆ ಇರಲಿಲ್ಲ. ಕಾರನ್ನು ಸಹ ಕೊಂಡಿದ್ದ. ಆದರೆ ರಂಗನಾಥನ ಮೈ ಬಣ್ಣ ಕಪ್ಪು ಎಂದು ಸರಳಂಗೆ ತಿಳಿದಿರಲಿಲ್ಲ.

ಈ ವಿಷಯವನ್ನು ಸರಳ ಸೀತಾಪತಿಗೆ ಹೇಳಿದಾಗ, "ನಮ್ಮ ಚಂದ್ರಿಕಾಗೂ ವಯಸ್ಸು ಕಡಿಮೆ ಏನಿಲ್ಲ. ಚೂಡಿದಾರ್ ಡ್ರೆಸ್ ಹಾಕಿಕೊಂಡ ಮಾತ್ರಕ್ಕೆ ಅವಳು ಚಿಕ್ಕವಳು ತರಹ ಕಾಣುವುದೂ ಇಲ್ಲ. ಆದಷ್ಟು ಬೇಗ ಎಲ್ಲರನ್ನೂ ಒಪ್ಪಿಸ್ತೀನಿ. ನಾನು ಹೇಳಿದ್ದ ಅವಧಿಯಲ್ಲಿ ಇನ್ನು ಒಂದೂವರೆ ತಿಂಗಳು ಮಾತ್ರ ಉಳಿದಿದೆ" ಎಂದಿದ್ದ.

"ಹೆಸರು ಚಂದ್ರಿಕಾ, ಬೆಳದಿಂಗಳ ತರಹ ಬೆಳ್ಳಗೇನೂ ಇಲ್ಲ. ಆದರೆ ಅವಳಿಗಿಂತ ಮನೆಯಲ್ಲಿ ಉಳಿದವರಿಗೆ, ಅವಳ ಗಂಡನಾಗುವವನ ಅರ್ಹತೆಗಳ ಬಗ್ಗ ಅತಿ ನಿಯಮಗಳು" ವರ ಇಂಜನಿಯರ್ ಆಗಿರಬೇಕು. ಸರಕಾರಿ ಕೆಲಸದಲ್ಲಿರಬೇಕು. ಇವರ ತಾಯಿಯ ಮನೆಗೆ ಅತಿ ಹತ್ತಿರದಲ್ಲಿ ವಾಸಿಸುವನಾಗಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಅವನು ತಾಯಿ ತಂದೆಯರ ಜತೆಯಲ್ಲಿರದೇ ಪ್ರತ್ಯೇಕ ಸಂಸಾರ ನಡೆಸುವವನಾಗಿರಬೇಕು. ಇತ್ಯಾದಿ ಇತ್ಯಾದಿ.

ಸೀತಾಪತಿ ತಾನೇ ಹಾಕಿಕೊಂಡಿದ್ದ ಗಡುವು ಮುಗಿದು ಹೋಗಿತ್ತು.

ಚಂದ್ರಿಕಾಳ ಮದುವೆಯ ಆಹ್ವಾನವಂತೂ ಬಂದಿರಲಿಲ್ಲ. ಚಂದ್ರಿಕಾಳ ಗೆಳತಿ ಮಂಜುಳ ವಯಸ್ಸಿನಲ್ಲಿ ಚಂದ್ರಿಕಾಳಿಗಿಂತ ದೊಡ್ಡವಳು. ತಾಯಿಯಿರಲಿಲ್ಲ. ವಯಸ್ಸಾದ ತಂದೆಯ ಜತೆಯಲ್ಲಿದ್ದವಳು ಯಾರಾದರೂ ಸರಿ ತನ್ನನ್ನು ಮದುವೆಯಾಗಿ ಈ ಲೋಕದಿಂದ, ತನ್ನ ಲೋಕಕ್ಕೆ ಕರೆದೊಯ್ಯುವ ಪತಿ ಸಿಕ್ಕಿದರೆ ಸಾಕು ಎಂದು ಒಂಟಿ ಕಾಲಲ್ಲಿ ನಿಂತು ತಪಸ್ಸು ಮಾಡುತ್ತಿದ್ದವಳು.

ಸೀತಾಪತಿಯ ಹೆಂಡತಿಯ ಮನೆಯವರು ದೊಡ್ಡ ಮನಸ್ಸು ಮಾಡಿ ಈ ಹುಡುಗನ ವಿಳಾಸವನ್ನು ಮಂಜುಳನಿಗೆ ತಿಳಿಸಿದ್ದೇ ಅಲ್ಲದೇ, ತಾವೇ ನಿಂತು, ವಧೂವರರ ಸಂದರ್ಶನಕ್ಕೆ ಅನುವು ಮಾಡಿ, ಮಂಜುಳನ್ನ ಒಪ್ಪಿಸಿ, ಅಂತೂ ಅವಳ ಮದುವೆ ಗೊತ್ತುಮಾಡುವುದಕ್ಕೆ ಸಹಾಯಕರಾದರು. ಕೆಲವೇ ದಿನಗಳಲ್ಲಿ ಅವಳ ಮದುವೆ ನೆರವೇರಿ ಅವಳು ಗಂಡನ ಮನೆಗೆ ಶ್ರೀರಂಗ ಪಟ್ಟಣಕ್ಕೆ ಹೋಗಿ ಸುತ್ತ ಮುತ್ತಲಿನ ಜಾಗಗಳನ್ನೆಲ್ಲಾ ತಮ್ಮ ಕಾರಿನಲ್ಲೇ ಸುತ್ತಾಡಿ, ಬಹಳ ಖುಷಿಯಿಂದ, ಹೆಮ್ಮೆಯಿಂದ ತನ್ನ ಗಂಡನ ಬಗ್ಗೆ ಹೇಳಿಕೊಂಡಿದ್ದಳಂತೆ, ಒಡವೆ, ಸೀರೆಗಳ ಪಟ್ಟಿ ತಿಳಿಸಿ. ಆಗ ಇವರಿಗೆಲ್ಲಾ ಸ್ವಲ್ಪ ಪಿಚ್ಚೆನ್ನಿಸಿತಂತೆ.

ಈ ವಿಷಯುವನ್ನೆಲ್ಲಾ ಸೀತಾಪತಿಯೇ ಸವಿಸ್ತಾರವಾಗಿ, ನಿರೂಪಣೆಯೊಂದಿಗೆ ಸರಳಂಗೆ ಹೇಳಿದಾಗ ಅವಳೂ ನುಡಿದಿದ್ದಳು. ಅವಳಿಗೂ ಸಾಕಾಗಿತ್ತು.

"ಸುಲಭದಲ್ಲಿ ಮದುವೆಯಾಗುತ್ತಿತ್ತು. ನಿಮ್ಮಗಳ ಅವಿವೇಕದಿಂದ ಈ ವರ ಕೈತಪ್ಪಿಹೋದ. ನಿಮಗೆ ಕೊಟ್ಟ ವಿಳಾಸವನ್ನು ಆ ಮಂಜುಳನ ಮನೆಯವರಿಗೆ ಏಕೆ ತಿಳಿಸಿದ್ರಿ? ನೀವು ಹಾಕಿಕೊಂಡ, ಅವಧಿ ಸಹ ಮುಗಿದು ಹೋಯ್ತಲ್ಲ. ನಿಮ್ಮ ಹೆಂಡತಿಯ ಮನೆಯವರೆಲ್ಲಾ ತಮಾಷೆ ಮಾಡುಲ್ವೆ?"

"ಮಾಡಲಿ ಬಿಡ್ರೀ. ಇದಕ್ಕೆಲ್ಲಾ ನಾನು ಕೇರ್ ಮಾಡುಲ್ಲ. ಒಂದು ವೇಳೆ ನಾನು ಬಲವಂತ ಮಾಡಿ ಒಪ್ಪಿಸಿದ್ದರೆ, ಜೀವಮಾನವೆಲ್ಲಾ ಅವರು ನನ್ನನ್ನು ಚುಚ್ಚಿ ಚುಚ್ಚಿ ಇಂಥಾ ಗಂಡನ್ನ ಹುಡುಕಿ ಕೊಟ್ರಿ ಅಂತ ಹಂಗಿಸದೇ ಬಿಡುತ್ತಿರಲಿಲ್ಲ.

ಎಂಥಾ ಹುಡುಗ? ನನಗೆ ತಿಳಿದಂತೆ ಒಳ್ಳೆಯ ಹುಡುಗ, ಅನುಕೂಲಸ್ಥ. ಆಸ್ತಿ ಪಾಸ್ತಿ ಎಲ್ಲಾ ಇದೆ ಅಂತ ತಿಳೀತು. ಇದಕ್ಕಿಂತ ಒಳ್ಳೆ ಗಂಡು ನಿಮಗೆ ಬೇರೆ ಎಲ್ಲಿ ಸಿಗ್ತಿದ್ದ?"

"ಹೌದು. ಮಂಜುಳಾ ಸಹ ತುಂಬಾ ಹೊಗಳ್ತಾಳೆ. ಅವನಂತೂ ತುಂಬಾ ಒಳ್ಳೆಯವನಂತೆ. ಆದರೆ ನಮ್ಮ ಚಂದ್ರಿಕಾ ಒಪ್ಪಲಿಲ್ಲ ಅನುಮಾನಿಸಿದಳು ಮಂಜುಳಗಂತೂ ಸಾಕಷ್ಟು ಒಡವೆ ಮಾಡಿಸಿದ್ದಾರೆ. ಒಳ್ಳೊಳ್ಳೇ ಸೀರೆ ತಂದಿದ್ದಾರೆ. ಆದರೆ ಹಾಗಂತ ಇಷ್ಟವಿಲ್ಲದೇ ಅಂಥೋನ್ನ ಮದುವೆಯಾಗೋ ದೇನ್ರೀ.... ನಿಮಗೆ ಬೇರೆ ಯಾವ ಗಂಡೂ ಸಿಗಲಿಲ್ವಾ! ರಂಗನಾಥನಾ ರಂಗನಾಥನೂ... ಶ್ರೀರಂಗ ಪಟ್ಟಣದ ಶ್ರೀರಂಗನಾಥನೋ.... ಹೆಸರಿಗೆ ತಕ್ಕ ಹಾಗಿದ್ದಾನೆ." ಸೀತಾಪತಿ ನಕ್ಕ.

ಈಗ ಸರಳಂಗೆ ಅವನ ಮಾತಿನ ವ್ಯಂಗ್ಯ ಅರ್ಥವಾಗಿತ್ತು. ತಾನೂ ಸೋಲಲಿಲ್ಲ. ದೇವರಂತಹ ಮನುಷ್ಯನ್ನ ಬಿಟ್ರೆಲ್ಲಾ... ಅವನಿಗಿಂತ ಹೊಳೆಯುವ ಒಳ್ಳೆಯ ಗಂಡು ನಿಮ್ಮ ಚಂದ್ರಿಕಂಗೆಲ್ಲಿ ಸಿಗ್ತಾನೆ? ಎನ್ನುತ್ತಾ ರಂಗನಾಥನ ವ್ಯಕ್ತಿತ್ವವನ್ನು ಹೊಳೆಯುವ ಶಿಲಾಮೂರ್ತಿಯನ್ನಾಗಿ ಮಾಡಿದಾಗ, ಸೀತಾಪತಿ ನಿರುತ್ತರನಾದ.

*   *   *   *

೧೪. ಗೆಲವು

ಮದುವೆಯಾದ ಹದಿನೈದು ವರ್ಷಗಳ ನಂತರ, ಹೇಮ ಎಂ.ಎ. ಪರೀಕ್ಷೆಗೆ ಕಟ್ಟಿದ್ದಳು. ಮದುವೆಯ ಸಮಯದಲ್ಲಿ ಅವಳು ಬರೀ ಡಿಗ್ರಿ ಪಾಸು ಮಾಡಿದ್ದಾಳೆಂದು ತಿಳಿದ ಅವಳ ಗಂಡ ಪದೇ ಪದೇ ಬರೀ ಬಿ.ಎ. ಎಂದು ಹೇಳುತ್ತಿದ್ದುದು ಅವಳಿಗೆ ಮುಜುಗರವನ್ನುಂಟುಮಾಡಿತ್ತು. "ಅದೇನು ಮಹಾ ಕಷ್ಟ ನಮ್ಮಪ್ಪ ಓದಿಸಿದ್ದರೆ, ನಾನು ಡಾಕ್ಟರೇಟ್ ಸಹ ಮಾಡಿರುತ್ತಿದ್ದೆ" ಎಂದು ನಂತರ ನುಡಿದಿದ್ದಳು.

"ಹಾಗಾದರೆ ಛಾಲೆಂಜ್.... ನೀನು ಎಂ.ಎ. ಮಾಡಿಬಿಡು ನೋಡೋಣ" ಎಂದು ಗಂಡ ಷರತ್ತನ್ನು ಹಾಕಿದ. ಆದರೆ ಅದೇನು ಕಾರಣವೋ ಎಂಟು ಹತ್ತು ವರ್ಷಗಳು ಕಳೆದರೂ, ಪರೀಕ್ಷೆ ತಗೊಳ್ಳಲು ಆಗಿರಲಿಲ್ಲ.

ಈಗ ಮಕ್ಕಳು ಬೆಳೆದು ದೊಡ್ಡವರಾಗಿದ್ದಾರೆ..... ಸ್ಕೂಲಿಗೆ ಹೋಗುತ್ತಿದ್ದಾರೆ. ಅತ್ತೆ ಮಾವ ಇಬ್ಬರೂ ಬದುಕಿಲ್ಲ. "ಈಗೆಂತಹ ಪರೀಕ್ಷೆ? ಈ ವಯಸ್ಸಲ್ಲಿ ಮನೆ ಕೆಲಸ ಕಾರ್ಯ ಬಿಟ್ಟು" ಎಂದು ಹಂಗಿಸುವವರು ಯಾರೂ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಗಂಡನಿಗೆ ಬೇರೆ ಊರಿಗೆ ವರ್ಗವಾಗಿದೆ. ಅವನ ಬೇಕು ಬೇಡಗಳನ್ನು ಗಮನಿಸುವ ಸಾಕಷ್ಟು ಸಮಯ ಉಳಿತಾಯವಾಗುತ್ತಿದೆ.

ಹೇಮ ಮೊದಲನೇ ವರ್ಷದ ಪರೀಕ್ಷೆಯ ತಯಾರಿ ನಡೆಸಿ, ಗಂಡನಿಗೆ ಪತ್ರ ಬರೆದಳು. ಅವನಿಗೂ ರಜೆಯ ಮೇಲೆ ಊರಿಗೆ ಬರಲು ಒಂದು ನೆಪ ಬೇಕಾಗಿತ್ತು. ಪರೀಕ್ಷೆಯ ಹೊತ್ತಿಗೆ ಬರುವೆನೆಂದು ಬರೆದು ತಿಳಿಸಿದ್ದ.

ಎರಡು ಮಕ್ಕಳ ತಾಯಿಯಾದರೂ, ಸ್ವಲ್ಪ ಸ್ಥೂಲಕಾಯಳಾದರೂ, ಹೇಮ ನೋಡುವವರ ಕಣ್ಣಿಗೆ ಆಕರ್ಷಣೀಯವಾಗಿದ್ದಳು. ಯಾರು ಈ ಲಕ್ಷಣವಾದ ಹೆಂಗಸು? ಎಂದು ನೋಡುವವರು ಒಂದು ಗಳಿಗೆ ನಿಂತು, ಮತ್ತೊಮ್ಮೆ ನೋಡಲಿಚ್ಛಿಸುವಂತಹ ಸೌಮ್ಯವಾದ ಮುಖ, ಅದಕ್ಕೆ ತಕ್ಕನಾದ ಹಿತ ಮಿತವಾದ ಅಲಂಕಾರ, ಅವಳನ್ನು ರೂಪವತಿಯರ ಸಾಲಿನಲ್ಲಿ ನಿಲ್ಲಿಸಬಹುದಾಗಿತ್ತು.

ಆ ದಿನ, ಹಾಲ್‌ಟಿಕೆಟ್ ತರಲೆಂದು, ಜಯನಗರದಿಂದ, ದೂರದ ವಿಜಯನಗರದಲ್ಲಿದ್ದ ಸ್ಕೂಲಿಗೆ ಹೊರಟಳು. ಅಲ್ಲಿ ಅವಳ ಪರೀಕ್ಷಾ ಕೇಂದ್ರ. ಮಕ್ಕಳನ್ನು ಸ್ಕೂಲಿಗೆ ಕಳಿಸಿ ಆಟೋದಲ್ಲಿ ಹೊರಟಿದ್ದಳು. ಬಸ್ಸು ಎಲ್ಲಿಂದ ಎಲ್ಲೀವರೆಗೆ ಹೋಗುತ್ತದೆ ಎಂದು ಸರಿಯಾಗಿ ತಿಳಿಯದ್ದರಿಂದ, ಆಟೋದವನಾದರೆ ಸ್ಕೂಲಿನ ತನಕ ಹೇಗಾದರೂ, ಕರೆದೊಯ್ಯುತ್ತಾನೆ ಎಂದು ಅವಳ ಮತ.

ಸ್ಕೂಲಿನ ಆವರಣದಲ್ಲಿ ಯಾರೂ ಕಾಣಿಸಲಿಲ್ಲ. ಒಳಗೆ ಆಫೀಸಿನಲ್ಲಿ ಒಂದಿಬ್ಬರು ಕೂತಿದ್ದವರು, ತಮಗೆ, ಯುನಿವರ್ಸಿಟಿ ಆಫೀಸಿನಿಂದ ಯಾವ ವರ್ತಮಾನವೂ ಬಂದಿಲ್ಲವೆಂದು ತಿಳಿಸಿದಾಗ, ಅವಳಿಗೆ ಬೇಸರವಾಗಿತ್ತು. ಹೇಗೂ ಇಲ್ಲಿಯ ತನಕ ಬಂದುದಾಗಿದೆ. ಇನ್ನು ನಾಲ್ಕಾರು ಜನ ಅಭ್ಯರ್ಥಿಗಳು ಬರಬಹುದು. ನಾಳೆಯೇ ಪರೀಕ್ಷೆ.... ಇವತ್ತು ಹಾಲ್‌ಟಿಕೆಟ್ ಕೊಡದಿದ್ದರೆ ಹೇಗೆ ಎಂದು ಕೊಂಡು, ಹೊರಗೆ ಬಂದು ಅತ್ತಿತ್ತ ಕಣ್ಣಾಡಿಸಿದಳು. ಅನತಿ ದೂರದಲ್ಲಿ ಒಬ್ಬ ವ್ಯಕ್ತಿ ಒಂದು ಸಣ್ಣ ಮರದ ಕೆಳಗೆ ನಿಂತು ಏನನ್ನೋ ಓದುತ್ತಿದ್ದ. ಹೊರಗೆ ಕಾರಿಡಾರಿನಲ್ಲಿ ನಿಂತಿದ್ದವಳನ್ನು ಕಂಡು ಸಮೀಪಕ್ಕೆ ಬಂದ.

ಹಲೋ! ಮೇಡಂ, ಹಾಲ್‌ಟಿಕೆಟ್‌ಗೋಸ್ಕರ ಬಂದ್ರಾ? ಅವನು ಇಂಗ್ಲಿಷ್‌ನಲ್ಲಿ ಪ್ರಶ್ನಿಸಿದಾಗ ಅವಳು ತಲೆಯಾಡಿಸಿ 'ಎಸ್' ಎಂದಳು. ನಾನೂ ಅದಕ್ಕಾಗಿಯೇ ಬಂದೆ. ಎನ್ನುತ್ತಾ ಅಲ್ಲಿದ್ದ ಬೆಂಚಿನ ಮೇಲೆ ಕೂತು, ಇವಳಿಗೂ ಕೂರುವಂತೆ ಹೇಳಿದ. ಮೊದಲು ಅನುಮಾನಿಸಿದರೂ, ಹೇಗೂ ಇವನೂ ಪರೀಕ್ಷೆಗೆ ಕಟ್ಟಿರುವವನು, ಇವನಿಂದ ಏನಾದರೂ ಸಹಾಯ ಒದಗಬಹುದು ಎಂದುಕೊಂಡು ಕುಳಿತಳು. ಅವನು ಮಾತಿಗೆ ಪ್ರಾರಂಭಿಸಿದ. ತನ್ನ ವಿಷಯಗಳನ್ನೆಲ್ಲ ಇವಳು ಕೇಳದೇನೇ ಹೇಳಿಕೊಂಡ.

ನನ್ನ ಹೆಂಡತಿ ಸತ್ತು ಹೋಗಿದ್ದಾಳೆ. ನನಗೆ ಮೂರು ಜನ ಮಕ್ಕಳು. ಎಲ್ಲಾ ಅವರ ಅಜ್ಜಿಯ ಮನೆಯಲ್ಲಿ ಓದುತ್ತಿದ್ದಾರೆ. ನಾನು ಈ ಪರೀಕ್ಷೆಯಲ್ಲಿ ಪಾಸಾದರೆ ನನಗೆ ನನ್ನ ಹುದ್ದೆಯಲ್ಲಿ ಬಡ್ತಿ ಸಿಕ್ಕುತ್ತದೆ. ಇತ್ಯಾದಿ... ಆಡಿ ನಂತರ ಇವಳ ಬಗ್ಗೆ ಕೇಳಿದ. ಇವಳು ತನ್ನ ವಿಷಯಗಳನ್ನು ಹೇಳಿಕೊಂಡಳು. ಅವನು ಹೇಳಿದ. ನೀವು ಎಷ್ಟು ಲಕ್ಕೀ.... ನಿಮ್ಮ ಆಸೆಗೆ ಸಹಕಾರ ನೀಡುವ ಗಂಡ, ಮಕ್ಕಳು.... ನೀವೂ ಅಷ್ಟೆ..... ಮದುವೆಯಾಗಿ ಓದುತ್ತಿರುವ ಮಕ್ಕಳಿರುವಂತೆ ಅನ್ನಿಸುವುದಿಲ್ಲ. ಒಳ್ಳೇ ಲಕ್ಷ್ಮೀ ಪ್ರತಿರೂಪ ಇದ್ದಂತೆ

ಇದೀರಿ.... ವಿದ್ಯಾಲಕ್ಷ್ಮಿ ನಿಮ್ಮ ಮುಖದ ಮೇಲೆ ಲಾಸ್ಯವಾಡುತ್ತಿದ್ದಾಳೆ.... ಅವನ ಮಾತುಗಳನ್ನು ಕೇಳಿ ಇವಳು ಉಬ್ಬಿ ಹೋದಳು ಎಲ್ಲಾ ಹೆಂಗಸಂತೆ.

ಆ ದಿನ ಅವಳು ಉಟ್ಟಿದ್ದ ಕಡು ನೀಲಿ ಬಣ್ಣದ ಒಡಲಲ್ಲಿ ಹೂಗಳಿರುವ ಸೀರೆ ಅದಕ್ಕೆ ಒಪ್ಪುವ ಕಡು ನೀಲಿ ಬಣ್ಣದ ತುಂಬು ತೋಳಿನ ರವಿಕೆ ಅವಳ ರೂಪವನ್ನು ಹೆಚ್ಚಿಸಿತ್ತು. ಅದು ಅವಳಿಗೂ ತಿಳಿದಿತ್ತು. ಅವನು ಮತ್ತೆ ಮತ್ತೆ ಹೊಗಳಿದಾಗ ಸ್ವಲ್ಪ ಅತಿಯಾಯಿತೆನಿಸಿತ್ತು. ಹೆದರಿಕೆ ಉಂಟಾಗಿತ್ತು. ಸಮಯ ನೋಡಿದಳು.... ಊಟದ ಸಮಯ, ಇನ್ನು ಆಫೀಸಿನಲ್ಲಿರುವವರೂ, ಎದ್ದು ಹೊರಟು ಹೋದರೆ, ತಾನು ಒಂಟಿಯಾಗಿ ಬಿಡುವೆನೆಂದು ಎಣಿಸಿ, ಎದ್ದಳು.

ಆಫೀಸಿನಲ್ಲಿ ಮತ್ತೆ ವಿಚಾರಿಸಿದಾಗ, ಅವರು, ನಾಳೇನೇ ಬೇಗ ಬಂದು ತಗೊಳ್ಳಿ. ಎಂಬ ಸಲಹೆಯನ್ನಿತ್ತರು. ಇದನ್ನು ಮುಂಚೆಯೇ ಹೇಳಬಾರದಾಗಿತ್ತೇ ಎಂದು ಮನಸ್ಸಿನಲ್ಲೇ ಬೈದುಕೊಂಡು ಹೊರಟಳು.

ಅವನು ಇವಳ ಜತೆ ಜತೆ ಹೆಜ್ಜೆ ಹಾಕಿದಾಗ ಅವಳು ತಲ್ಲಣ ಗೊಂಡಳು. ಆದರೂ ಅದನ್ನು ತೋರ್ಪಡಿಸದೇ ಬಸ್‌ಸ್ಟ್ಯಾಂಡ್ ಕಡೆಗೆ ನಡೆದಳು. ಅಲ್ಲಿದ್ದ ಟೀ ಸ್ಟಾಲ್ ಬಳಿ ಕೈ ಮಾಡಿ ಅವನು ನುಡಿದ.

"ಬನ್ನಿ. ಅಲ್ಲಿ ಕುಳಿತು ಟೀ ಕುಡಿಯೋಣ" ಇವಳು ನಿರಾಕರಿಸಿದಳು.

"ಇಲ್ಲ. ನಾನು ಇಷ್ಟು ಹೊತ್ನಲ್ಲಿ ಟೀ ಕುಡಿಯೋಲ್ಲ."

"ಹಾಗಾದರೆ ಜ್ಯೂಸ್ ಕುಡಿಯೋಣ ಬನ್ನಿ......"

"ನಾನು ಜ್ಯೂಸ್ ಕುಡಿಯುಲ್ಲ. ನನಗೆ ಗಂಟಲು ನೋವು ಬರುತ್ತೆ." ಅಷ್ಟರಲ್ಲಿ ಒಂದು ಬಸ್ಸು ಬಂದು ನಿಂತಿತು. ಇವಳು ತಟ್ಟನೆ ಹತ್ತಿ, ಕಿಟಕಿಯ ಬಳಿ ಸೀಟನ್ನು ಆರಿಸಿಕೂತಳು. ಅವನೂ ಬಸ್ಸನ್ನು ಏರಿ, ಅವಳ ಮುಂದಿನ ಸೀಟ್ನಲ್ಲಿ ಕೂತು ಅವಳೆಡೆಗೆ ತಿರುಗಿದ.

ಬಿಸಿಲಿಗೆ ಕೆಂಪಾಗಿ ಹೋಗಿದೀರ.... ನಾನು ನಿಮ್ಮ ಸ್ನೇಹಿತ... ನನಗೆ, ಒಂದು ಜ್ಯೂಸ್ ಕೊಡಿಸುವ ಯೋಗ್ಯತೆ ಇಲ್ಲವಾ? ಕೇಳಿದ.

ಹಾಗಲ್ಲ.....

"ಹಾಗಾದರೆ ಇಳೀರಿ.... ಇಲ್ಲೇ ಯಾವುದಾದರೂ ಒಳ್ಳೆ ಹೋಟೆಲ್ಲಿನಲ್ಲಿ ಕೂತು ಊಟ ಮಾಡೋಣ....." ಅವನ ಉದ್ಧಟತನ ಅವಳನ್ನು ಮತ್ತು ಹೆದರಿಸಿತ್ತು. ಯಾವನೋ ಅಪರಿಚಿತ.... ಪರಿಚಯವಾದ ಮಾತ್ರಕ್ಕೆ ಸ್ನೇಹಿತನೇ? ಊಟಕ್ಕೆ ಕರೆಯುತ್ತಿದ್ದಾನಲ್ಲ. ಆದಷ್ಟು ಬೇಗ ಇವನ ಕಾಟದಿಂದ ತಪ್ಪಿಸಿಕೊಂಡು

ಮನೆಗೆ ಹೋದರೆ ಸಾಕೆನಿಸಿತ್ತು. ಕಿಟಕಿಯಿಂದ ಆಚೆ ನೋಡಿದಳು. ಕಂಡಕ್ಟರ್ ಸಿಗರೇಟು ಸೇದುತ್ತಾ ನಿಂತಿದ್ದ. "ಬಸ್ ಎಷ್ಟು ಹೊತ್ತಿಗೆ ಹೊರಡುತ್ತೆ." ಕಷ್ಟಪಟ್ಟು ಕೇಳಿದಳು.

ಇನ್ನು ಇಪ್ಪತ್ತು ನಿಮಿಷ ಆಗುತ್ತೆ ಮೇಡಂ.... ಅವನು ನುಡಿದಾಗ ತಥ್ ಎನಿಸಿತ್ತು. ದುಡು ದುಡು ಇಳಿದು ಅಲ್ಲೇ ಇದ್ದ ಆಟೋ ಹತ್ತಿ ಕುಳಿತಳು. ಆಟೋದವನು ಎಲ್ಲಿಗೆ ಎಂದು ಕೇಳಿ, ರಸ್ತೆಗೆ ತಿರುಗಿಸಿಕೊಳ್ಳುವಷ್ಟರಲ್ಲಿ, ಬಸ್ಸಿನಿಂದ ಇಳಿದ, ಆ ಮನುಷ್ಯನೂ ಇವಳ ಪಕ್ಕದಲ್ಲಿ ಕುಳಿತ... ಅವಳು ಭಯದಿಂದ ತತ್ತರಿಸಿ ಹೋದಳು. "ಅತ್ಲಾಗೆ ಇಳಿದು ಹೋಗುವಂತೆಯೂ ಇಲ್ಲ, ಅವನು ಅಡ್ಡ ಕೂತಿದ್ದಾನೆ. ಆಟೋದವನು ಸ್ಟಾರ್ಟ್ ಮಾಡಿದ್ದಾನೆ."

"ಬಂದದ್ದು ಬರಲಿ.... ನಾನು ಎದುರಿಸ್ತೀನಿ. ದೇವರು ನನ್ನ ಕೈ ಬಿಡೋಲ್ಲ" ಎಂದುಕೊಂಡು ಸುಮ್ಮನೇ ಕೂತಳು. ಆಟೋ ರಿಕ್ಷಾ ಮೆಜಸ್ಟಿಕ್‌ನ ತಿರುವು ಬಳಿ ಬಂದಾಗ, ಅವನು ತಾನಿಳಿದು ಕೊಂಡಿದ್ದ ಹೋಟೆಲ್ಲಿನ ಕಡೆಗೆ ರಿಕ್ಷಾ ತಿರುಗಿಸುವಂತೆ ಹೇಳಿದ. ಹೇಗೂ ಅಲ್ಲಿ ಅವನು ಇಳೀತಾನೆ..... ತಾನು ಮುಂದೆ ಹೋದರಾಯ್ತು. ಎಂದು ಕೊಡು ಸುಮ್ಮನೇ ಕುಳಿತಳು. ಆಟೋ ಹೋಟೆಲ್ಲಿನ ಮುಂದೆ ನಿಂತಿತು. ಅವನು ಇಳಿದ, ಹೇಮಳಿಗೂ ಇಳಿಯುವಂತೆ ಹೇಳಿದ.

"ನಾನೇಕೆ ಇಳಿಯಬೇಕು.... ಎನ್ನುತ್ತಾ ಆಟೋದವನಿಗೆ, ಮುಂದೆ ಹೋಗಲು ಹೇಳಿದಾಗ, ಅವನು ಆಟೋದವನನ್ನು ತಡೆದ."

ನೋಡಿ ಮೇಡಂ..... ಇಲ್ಲಿ ಈ ಬಿಸಿ ಏರಿಯಾದಲ್ಲಿ ಸುಮ್ಮನೇ ವಾದ ಮಾಡಬೇಡಿ ಇಳಿದು ಬನ್ನಿ. ಹತ್ತು ನಿಮಿಷ ನನ್ನ ಜತೆ ಬನ್ನಿ ಸಾಕು. ನಂತರ ನಾನೇ ನಿಮ್ಮನ್ನು ಮನೆ ತನಕ ಬಿಟ್ಟು ಬರ್ತೀನಿ.

ಹೇಮ ರಿಕ್ಷಾ ಡ್ರೈವರನ ಕಡೆ ನೋಡಿದಳು. ಅವನು ಒಂದು ತರಹ ಅವಳನ್ನೇ ನೋಡಿ ನಕ್ಕಂತೆ ಅನಿಸಿತ್ತು. ಮುಖ ಅರಕ್ತವಾಯಿತು. ತಾನು ಯಾವುದೋ ಜಾಲದಲ್ಲಿ ಸಿಕ್ಕಿ ಬೀಳುತ್ತಿದ್ದೇನೆಂಬ ಅಂಜಿಕೆಯಿಂದ ಮಾತು ಹೊರಡದಾಯಿತು.

"ಪ್ಲೀಸ್ ಇಳಿದು ಬನ್ನಿ ಮೇಂಡ.... ಎಲ್ಲಾ ನಮ್ಮನ್ನೇ ನೋಡುತ್ತಿದ್ದಾರೆ. ಅವರೆಲ್ಲಾ ಬಳಿಗೆ ಬಂದು ಏನಾದರೂ ಕೇಳಿದ್ರೆ ಸುಮ್ಮನೇ ರಂಪವಾಗುತ್ತೆ." ಅಂತ ನುಡಿದಾಗ ಅತ್ತಿತ್ತ ನೋಡಿದರು. ಕೆಲಸವಿಲ್ಲದೇ ಅಲ್ಲಲ್ಲಿ ನಿಂತವರಲ್ಲಿ ಕೆಲವರು ಇವಳನ್ನೇ ನೋಡುತ್ತಿದ್ದರು. "ಭೂಮಿ ಬಾಯಿ ಬಿಟ್ಟು ತನ್ನನ್ನು

ನುಂಗಬಾರದೇ" ಎನ್ನುವಷ್ಟು ಹೀನಾಯವಾಗಿತ್ತು ಅವಳಿಗೆ. ತಾನು ಎದ್ದ ಗಳಿಗೆಯೇ ಸರಿಯಿಲ್ಲ. ಇವತ್ತು.... ಇಲ್ಲಿ ಈ ಮೆಜೆಸ್ಟಿಕ್‌ನಲ್ಲಿ ತಾನು ಅರಚಿದರೂ, ತನಗೆ ಸಹಾಯಕರು ಯಾರೂ ಸಿಗ್ತಾರೋ ಇಲ್ಲವೋ....? ಏನಾದರೂ ಗಲಾಟೆಯಾದರೆ, ಎಲ್ಲರಿಗೂ ತನ್ನ ಮೇಲೇ ಸಂದೇಹ ಬರುವುದು ಖಂಡಿತಾ.... ಎಲ್ಲಿಂದ ಎಲ್ಲಿಗೋ, ಹೋಗಿ, ತಾನು ಗಲಭೆಗೆ ಸಿಕ್ಕಿಬಿದ್ದು ಪೋಲಿಸರ ಕೈಗೆ ಸಿಕ್ಕಿ ಬಿದ್ದರೆ ತನ್ನ ಗತಿ ಏನಾಗುವುದೋ ಎಂದು ಹೆದರಿದಳು. ಆ ಜಾಗ ಸಹ ತನಗೆ ಪರಿಚಿತವಲ್ಲ, ಇಳಿದು ಎಲ್ಲಿಗಾದರೂ ಓಡಿ ಹೋಗೋಣ ಎಂದರೆ,..... ಅಥವಾ ಅವನು ತನ್ನನ್ನು ಹಿಂಬಾಲಿಸಿ ಬರುವುದಿಲ್ಲ ಎನ್ನುವುದು ಏನು ಗ್ಯಾರಂಟಿ?

"ನಾನು ನಂಬಿರುವ ದೈವ ನನ್ನ ಕೈ ಬಿಡುವುದಿಲ್ಲ"ಎಂದುಕೊಂಡು ಇಳಿದಳು. ಅವನು ಥ್ಯಾಂಕ್‌ಯೂ ಮೇಡಂ...ಎಂದು ಹೇಳಿ ಆಟೋದವನಿಗೆ ದುಡ್ಡು ಕೊಟ್ಟು ಹೋಟೆಲ್ಲಿನ ಮೆಟ್ಟಿಲುಗಳನ್ನು ಹತ್ತಿದ. ಆ ಜನ ಜಂಗುಳಿಯಲ್ಲಿ ಅವಳು ತಾನು ಯಾವ ಸ್ಥಳದಲ್ಲಿ ನಿಂತಿದ್ದೇನೆನ್ನುವುದು ಸಹ ತಿಳಿಯುವಂತಿರಲಿಲ್ಲ. ಬಸ್‌ಸ್ಟ್ಯಾಂಡ್ ಯಾವ ದಿಕ್ಕಿಗಿದೆ ಎಂದು ತಿಳಿಯಲಿಲ್ಲ. ಮತ್ತೆ ಯಾವುದಾದರೂ ಆಟೋ ಹಿಡಿದು ಹತ್ತಿದರೆ, ಇವನೂ ಹತ್ತಬಹುದು.... ಇದು ಹೋಟೆಲ್ಲು.... ಇಲ್ಲಿ ಹತ್ತಾರು ಜನರಿರುತ್ತಾರೆ. ಯಾರನ್ನಾದರೂ ಕೇಳಿದರೆ ತನಗೆ ಸಹಾಯ ಮಾಡಬಹುದು. ಇಲ್ಲಿಂದ ತಮ್ಮನಿಗೆ ಪೋನು ಮಾಡಿ ಕರೆಸಬಹುದು... ಅವಶ್ಯಕತೆ ಬಿದ್ದರೆ ಎಂದುಕೊಂಡು ತಾನು ಮೆಟ್ಟಿಲುಗಳನ್ನು ಏರಿದಳು. ಅಲ್ಲಿಂದ ಅವನು ಲಿಫ್ಟ್‌ಕಡೆ ತಿರುಗಿದ. ಇಲ್ಲೆ ಮೂರನೇ ಮಹಡಿಯಲ್ಲಿ ನನ್ನ ರೂಮು. ಮೊದಲು ಅಲ್ಲಿಗೆ ಹೋಗೋಣ. ನಾನು ಅಲ್ಲಿಗೇ ಊಟ ತರಿಸುತ್ತೀನಿ. ಇಬ್ಬರೂ ಅಲ್ಲೇ ಊಟ ಮಾಡೋಣ... ಈಗ ಅವನು ಎಂತಹವನೆಂದು ಅವಳಿಗೆ ಚೆನ್ನಾಗಿ ಅರ್ಥವಾಗಿತ್ತು. ಏನೇ ಆದರೂ ತಾನು ಅವನ ರೂಮಿಗೆ ಮಾತ್ರ ಹೋಗಬಾರದು ಎಂದುಕೊಂಡು...

ಇಲ್ಲ.... ನಾನು ಅಲ್ಲೆಲ್ಲಾ ಬರುವುದಿಲ್ಲ. ನನ್ನನ್ನು ನೀವು ಏನೂಂತ ತಿಳಿದು ಕೊಂಡಿದ್ದೀರಿ... ಮರ್ಯಾದಸ್ಥ ಅಂತ ತಿಳಿದುಕೊಂಡು ಮಾತನಾಡಿಸಿದರೆ... ಬಹಳ ಮುಂದುವರೆಯುತ್ತಿದ್ದೀರಿ. ಇಲ್ಲೇ ಗಾಂಧಿನಗರದಲ್ಲಿ ನನ್ನ ತಮ್ಮನ ಆಫೀಸಿದೆ. ಫೋನ್ ಮಾಡಿಸಿದರೆ ಸಾಕು. ಪೋಲಿಸರ ಜತೆ ಬರುತ್ತಾನೆ. ಆಗ ನಿಮ್ಮ ಗತಿ ಏನಾಗಬಹುದು ಅಂತ ಯೋಚಿಸಿ.... ಆದರೂ ಅವನು ಹೆದರಲಿಲ್ಲ.

ನನ್ನ ಮೇಲೆ ನಿಮಗೆ ಏನೋ ಅನುಮಾನ... ಪರವಾಗಿಲ್ಲ ಬನ್ನಿ. ಇಲ್ಲೇ ಕೂತು ಊಟ ಮಾಡೋಣ.... ಎಂದು ಎರಡು ಊಟಕ್ಕೆ ಆರ್ಡರ್ ಕೊಟ್ಟ. ಅಲ್ಲೇ ಕುಳಿತರು. ನನಗೆ ಊಟ ಗೀಟ ಏನೂ ಬೇಡ. ನನಗೆ ಹೋಗಲು ಬಿಡಿ... ನಾನು ಹೀಗೆ ಒಬ್ಬ ಅಪರಿಚಿತನ ಜತೆ ಹೋಟೆಲ್ಲಿನಲ್ಲಿ ಕೂತು ಮಾತಾಡ್ತಿದೀನಿ ಅನ್ನೋ ವಿಷಯ ನನ್ನ ತಂದೆಗಾಗಲೀ ನನ್ನ ಗಂಡನಿಗಾಗಲೀ, ತಿಳಿದರೆ... ನಾನು ಸತ್ತಂತ್ತೇ,... ನನ್ನ ಮಕ್ಕಳು ಮನೆಗೆ ಬರುವಷ್ಟರಲ್ಲಿ, ನಾನು ಮನೆಯಲ್ಲಿರಬೇಕು... ನನಗೆ ಹೋಗಲು ಬಿಡಿ.

ಓ....ಕೆ... ಹೋಗೋರಂತೆ. ನಿಮಗೆ ಏನೋ ತಪ್ಪು ಅಭಿಪ್ರಾಯ ನನ್ನ ಮೇಲೆ.... ನಾನು ಈ ಹೋಟೆಲ್ಲಿನಲ್ಲಿ ಒಂಟಿಯಾಗಿ ನಾಲ್ಕು ದಿನದಿಂದ ಇದೀನಿ. ಈ ದಿನ ನಿಮ್ಮನ್ನು ನೋಡಿ ಖುಷಿಯಾಯ್ತು... ನನಗೆ ಊಟಕ್ಕೆ ಕಂಪನಿ ಕೊಡಲಿ ಅಂತ ಕರೆದುಕೊಂಡು ಬಂದೆ.... ನೀವು ಅಪ್ಸೆಟ್ ಆಗಿದೀರ....

ಹೌದು ಅಪ್ಸೆಟ್ ಆಗದೇ ಇನ್ನೇನು? ನೀವು ನನಗೆ ಪರಿಚಿತನಲ್ಲ. ನಿಮ್ಮೊಡನೆ ನಾನು ಇಲ್ಲಿ ಕೂತು ಊಟ ಮಾಡುವುದನ್ನು ಕಂಡರೆ, ಹೋಗುವುದು ನನ್ನ ಮರ್ಯಾದೆ....

ಅದಕ್ಕೇ ಮೇಲಿನ ರೂಮಿನಲ್ಲಿ ಕೂತು ಊಟ ಮಾಡೋಣ. ಅಷ್ಟರಲ್ಲಿ ಅಲ್ಲಿಯ ಬೇರರ್ ಊಟದ ತಟ್ಟೆಗಳನ್ನು ತಂದಿತ್ತ. ಹೇಮ, ಅವನು ಎಷ್ಟೇ ಹೇಳಿದರೂ ಊಟ ಮಾಡಲು ಒಪ್ಪಲಿಲ್ಲ. ಅಕ್ಕ ಪಕ್ಕದವರು ಇವರ ಕಡೆಯೇ ನೋಡುತ್ತಿದ್ದರು. ಅವನಿಗೂ ಕಷ್ಟವಾಗಿತ್ತು. "ಎಲ್ಲಾ ನಮ್ಮನ್ನೇ ನೋಡುತ್ತಿದ್ದಾರೆ. ಪ್ಲೀಸ್ ಊಟ ಮಾಡಿ... ಆಮೇಲೆ ನಾನೇ ನಿಮ್ಮನ್ನು ನಿಮ್ಮ ಮನೇಗೆ ತಲುಪಿಸುತ್ತೀನಿ" ಎಂದ. ಎಲ್ಲರೂ ತಮ್ಮನ್ನೇ ನೋಡುತ್ತಿರುವುದರಿಂದ, ಅವನು ಹೆದರಿದ್ದಾನೆಂದು ಅವಳು ತಿಳಿದಳು. "ನಾನು ಹೋಗ್ತೀನಿ... ನೀವು ಊಟ ಮಾಡಿ" ಎಂದು ಏಳುತ್ತಿರುವವಳನ್ನು ತಡೆದ.

ಓ....ಕೇ... ಈ ದಿನ ನಿಮ್ಮಿಂದ ನನಗೂ ಊಟ ಇಲ್ಲವಾಯ್ತು... ಎಂದು ಹೇಳಿ, ಎರಡು ಜ್ಯೂಸ್ ತರಿಸಿದ. "ಪ್ಲೀಸ್ ಇದನ್ನಾದರೂ ಕುಡಿಯಿರಿ. ನನಗೆ ಅವಮಾನ ಮಾಡಬೇಡಿ.."

ಈ ಜ್ಯೂಸ್‌ನಲ್ಲಿ ಏನು ಬೆರೆಸಿದೆಯೋ... ತಾನು ಕುಡಿಯಬಾರದು ಎಂದುಕೊಂಡು, ಅವನು ಎಷ್ಟೇ ಒತ್ತಾಯ ಮಾಡಿದರೂ ಕುಡಿಯಲಿಲ್ಲ. ಆ

ಮೊಂಡುತನದಲ್ಲಿ ಏನೋ ಧೈರ್ಯ ಅಡಗಿತ್ತು. ಅವನೇ ಎರಡೂ ಗ್ಲಾಸ್‌ನ ಜ್ಯೂಸ್ ಕುಡಿದು ಮುಗಿಸಿದ. "ನಿಮ್ಮ ಭಾಗದ ಜ್ಯೂಸ್ ಅತಿ ಸಿಹಿಯಾಗಿತ್ತು." ಎಂದು ಅವನು ನಕ್ಕು ನುಡಿದಾಗ ಇವಳಿಗೆ ಅಸಹ್ಯವೆನಿಸಿತ್ತು.

ಅವನು ಎದ್ದು ಕೌಂಟರ್ ಬಳಿ ನಡೆದಾಗ, ಇವಳು ರಸ್ತೆಗೆ ಇಳಿದಿದ್ದಳು. ಹಿಂತಿರುಗಿ ನೋಡದೇ... ಒಂದು ಆಟೋ ಹತ್ತಿ, ತಾನು ಹೋಗಬೇಕಾಗಿರುವ ಸ್ಥಳ ತಿಳಿಸಿದಳು. ಆಟೋ ಚಲಿಸುವಷ್ಟರಲ್ಲಿ ಆ ವ್ಯಕ್ತಿ ಮತ್ತೆ ಹತ್ತಿ ಅವಳ ಪಕ್ಕ ಕುಳಿತ.

"ಸಾರಿ.... ವೇಡಂ... ಅದ್ಯಾಕೋ ಇವತ್ತು ನಿಮ್ಮನ್ನು ಬಿಟ್ಟು ಇರಲು ಮನಸ್ಸು ಒಪ್ತಿಲ್ಲ. ನಾನು ನಿಮ್ಮ ಮನೇ ತನಕ ಬರ್ತೀನಿ" ಎಂದ. ಆಟೋ ಚಲಿಸುತ್ತಿದ್ದಂತೆ, ಇವಳು ಅವನಿಂದ ತಪ್ಪಿಸಿಕೊಳ್ಳುವ ಉಪಾಯವನ್ನು ಹುಡುಕುತ್ತಿದ್ದಳು. ಅವನು ಮಾತಾಡುತ್ತಿದ್ದ.

ಹೇಮ.... ನಿಮ್ಮ ಹೆಸರು ಎಷ್ಟು ಚೆನ್ನಾಗಿದೆ. ಹೆಸರಿನಷ್ಟೇ ನೀವೂ ಚೆನ್ನಾಗಿದೀರಿ... ನನ್ನ ಹತಿರ ಬೇಕಾದಷ್ಟು ಹಣವಿದೆ. ನೀವು ಕೇಳಿದಷ್ಟು ಒಡವೆಗಳನ್ನು ಮಾಡಿಸಿಕೊಡ್ತೀನಿ... ಬೇಕಾದರೆ ಮನೆ ತೆಗಿಸಿಕೊಡ್ತಿನಿ....

ನನಗೆ ಯಾವುದೂ ಬೇಡ.... ನನಗೆ ದೇವರು ಎಲ್ಲಾ ಕೊಟ್ಟಿದ್ದಾನೆ. ಅವಳು ಸಿಡುಕುತ್ತಾ ನುಡಿದಳು.

ನೀವು ದೇವರನ್ನು ನಂಬ್ತೀರಾ?

ಹುಂ. ತುಂಬಾ ನಂಬ್ತೀನಿ. ನಂಬಿದ ದೇವರು ನನ್ನ ಕೈ ಬಿಡುವುದಿಲ್ಲ. ಎನ್ನುವ ವಿಶ್ವಾಸ ನನಗಿದೆ....

ನಾನೂ ದೇವರನ್ನು ನಂಬ್ತೀನಿ. ಅವನೇ ಸೃಷ್ಟಿ, ಸ್ಥಿತಿ, ಮತ್ತು ಲಯಕ್ಕೆ ಕಾರಣ... ಅದನ್ನೇ ಇಂಗ್ಲಿಷ್‌ನಲ್ಲಿ ಗಾಡ್ ಅಂತಾರೆ... "God who generates" ಅವನೇ ಸೃಷ್ಟಿ. Who organises ಅವನೇ ಸ್ಥಿತಿ... Who destroys ಅವನೇ ಲಯ... ಅವನೇ ನಮ್ಮನ್ನು ಸೃಷ್ಟಿಸಿ ನಮ್ಮನ್ನು ನಡೆಸುವವನೇ ಅವನು... ಅವನು ಹೇಳಿದಂತೆ ಕೇಳಿ ಬಿಡೋಣ ಅಂತ... ನಾನ್ನಾಸೆ. ಏನಂತೀರಿ...?

"ನಿಮ್ಮ ಮನಸ್ಸಿನಲ್ಲಿ ಏನು ಅರ್ಥ ಇದೆಯೋ... ನನಗೆ ತಿಳೀದು... ಆದರೆ ಸತ್ತಾ ದೇವರು ನನ್ನನ್ನು ನಿಮ್ಮಿಂದ ರಕ್ಷಿಸಲಿ ಎಂದು ಕೇಳಿಕೊಂಡಿದ್ದೇನೆ. ಅವನು ನನ್ನ ಕೈ ಬಿಡುವುದಿಲ್ಲ." ಎಂದುಕೊಂಡು, ರಿಕ್ಷಾ ನಿಲ್ಲಿಸುವಂತೆ ಹೇಳಿದಳು. ಆದರೆ ಅವನು ಇಳಿಯಲಿಲ್ಲ. ಅವಳಿಗೆ ಇಳಿಯಲು ಜಾಗ

ಬಿಡಲಿಲ್ಲ. ಹೇಮ ಧೈರ್ಯ ವಹಿಸಿ, ತನ್ನ ಪಾಡಿಗೆ ತಾನು ಇಳಿದಳು. ಥ್ಯಾಂಕ್ ಗಾಡ್... ಅವನು ಮೈ ಮುಟ್ಟುವ ಸಾಹಸ ಮಾಡಿರಲಿಲ್ಲ.

ಇಷ್ಟರ ಮಟ್ಟಿಗೆ ತಾನು ಅವನಿಂದ ಸುರಕ್ಷಿತವಾಗಿ ವಾಪಸ್ಸು ಬಂದುದು, ಒಂದು ದೊಡ್ಡ ಸಾಹಸವನ್ನು ಮಾಡಿದಂತೆ ಅನ್ನಿಸಿತ್ತು. ತಾನು ಇಳಿದಿರುವುದು ಸರ್ಕಲ್ಲಿನಲ್ಲಿ. ಇಲ್ಲಿಂದ ಮೂರು ನಾಲ್ಕು ಕ್ರಾಸ್‌ಗಳನ್ನಾದರೂ ದಾಟಬೇಕು. ಅವನು ಇಲ್ಲೇ ಎಲ್ಲಾದರೂ ನಿಂತು, ತನ್ನನ್ನು ಫಾಲೋ ಮಾಡುತ್ತಿರಬಹುದೆಂಬ ಅನುಮಾನ ಅವಳಲ್ಲಿ ಮೂಡಿತು. ಸೀದಾ ಅಲ್ಲಿದ್ದ ಬೇಕರಿಯನ್ನು ಹೊಕ್ಕಳು. ಅಲ್ಲಿ ನಿಂತು ಸುತ್ತಲು ನೋಡಿದಳು. ಅವನು ಅಲ್ಲಿ ಎಲ್ಲಿಯೂ ನಿಂತಿಲ್ಲವೆನ್ನುವುದನ್ನು ಖಚಿತಪಡಿಸಿಕೊಂಡು, ಮಕ್ಕಳಿಗಾಗಿ ಒಂದಿಷ್ಟು ತಿಂಡಿಗಳನ್ನು ಕೊಂಡು ತನ್ನ ಮನೆ ಸೇರಿದಳು.

ಆ ದಿನ ನಡೆದದ್ದೇ ಮನದ ತುಂಬ ಗೊಂದಲವನ್ನುಂಟು ಮಾಡಿತ್ತು. ಅವನು ಮನಸ್ಸಿನಲ್ಲಿ ಏನಿತ್ತು ಎಂದು ಅರ್ಥವಾಗಿತ್ತು. ಅವನು ಏನಾದರೂ ಗಲಾಟೆ ಎಬ್ಬಿಸಿದ್ದರೆ ತನ್ನ ಗತಿ ಏನಾಗುತ್ತಿತ್ತು ಎಂದು ಊಹಿಸಿಕೊಳ್ಳಲೂ ಆಗುವಂತಿರಲಿಲ್ಲ. ಆದರೆ, ಬಹುಶಃ ಅವನೂ ಇವಳ ಗಾಂಭೀರ್ಯಕ್ಕೆ ಅಂಜಿರಬಹುದು. ಗಾಂಭೀರ್ಯ ಹೆಣ್ಣಿಗೆ ಒಂದು ವಿನೂತನ ಆಭರಣ. ಭೂಷಣ.. ಅದು ಅವಳನ್ನು ರಕ್ಷಿಸುತ್ತದೆ ಎನ್ನುವುದು ದಿಟವಾಯಿತು.

ಅದೇ ರಾತ್ರಿ, ಅವಳ ಗಂಡ ಊರಿನಿಂದ ಬಂದ. ನಡೆದ ವಿಷಯಗಳನ್ನು ಅವನಿಗೆ ಹೇಳಲಾರಳು. ಹೇಳದೇ ಇರಲಾರಳು. ಹೇಳಿದರೆ... ಪರೀಕ್ಷೆಗೆ ಹೊಗುವ ಅವಕಾಶ ತಪ್ಪಿ ಹೋಗುತ್ತದೆ. ಹೇಳದಿದ್ದರೆ... ಅವನು ಮತ್ತೆ ಸಿಕ್ಕಿ ಮಾತನಾಡಿಸಿದರೆ, ಗಂಡನಿಗೆ ತನ್ನ ಮೇಲೆ ಅಪನಂಬಿಕೆ ಬರಬಹುದು ಎಂದುಕೊಂಡು, ಚಾಚೂ ತಪ್ಪದೇ ನಡೆದುದ್ದನ್ನೆಲ್ಲಾ ತಿಳಿಸಿದಳು. ಹುಬ್ಬು ಗಂಟಿಕ್ಕಿ ಕೇಳಿಸಿಕೊಂಡ ಗಂಡ... ನನಗೆ ಗೊತ್ತು ಇಂಥಾ ಲೋಫರ್ಸ್ ಇರ್ತಾರೆ ಅಂತ ಅಂದನೇ ಹೊರತು ಅವಳ ಮೇಲೆ ಅನುಮಾನ ಪಡಲಿಲ್ಲ. ಎರಡನೇ ಬಾರಿ ಇನ್ನೊಂದು ಸಾಹಸಮಾಡಿದ ಅನುಭವ ! ಆ ದಿನ ಎರಡು ಬಾರಿ ಗೆದ್ದಿದ್ದಳು. ಮಾರನೇ ದಿನದ ಪರೀಕ್ಷೆಗೆಂದು ಓದಲು 'ರನ್ನನ ಸಾಹಸ ಭೀಮ ವಿಜಯದ' ನೋಟ್ಸ್‌ಗಳನ್ನು ಕೈಗೆತ್ತಿಕೊಂಡಳು.

* * * *

೧೫. ಕುಟೀರ.

ಕಮಲಮ್ಮನಿಗೆ ಇದ್ದ ಆಸ್ತಿ ಎಂದರೆ ಆ ಮನೆಯೊಂದೇ... ಮನೆಯ ಒಂದು ಭಾಗವನ್ನು ಬಾಡಿಗೆಗೆ ಕೊಟ್ಟಿದ್ದಳು. ಆ ಬಾಡಿಗೆಯೊಂದೇ ಆಕೆಯ ಸಂಪಾದನೆ. ಗಂಡನ ನಂತರ ಬರುತ್ತಿದ್ದ ಆ ಪೆನ್ಷನ್ ಹಣ ಯಾವುದಕ್ಕೂ ಸಾಲುತ್ತಿರಲಿಲ್ಲ. ಮಕ್ಕಳನ್ನು ಬಿಡಿಗಾಸು ಕೇಳದಿದ್ದರೂ ಅವರ ಮಾತುಗಳನ್ನು ಕೇಳಬೇಕಾಗುತ್ತಿತ್ತು.

ಕಮಲಮ್ಮನಿಗೆ ಇಬ್ಬರೇ ಗಂಡು ಮಕ್ಕಳು. ನಾಗರಾಜ ದೊಡ್ಡವನು. ಯಾವುದೋ ಒಂದು ಅಂಗಡಿಯಲ್ಲಿ ಲೆಖ್ಖ ಬರೆಯುವ ಕೆಲಸಕ್ಕೆ ಸೇರಿಕೊಂಡಿದ್ದ. ಅವನ ಸಂಪಾದನೆ ಅವನಿಗೆ ಸಾಕಾಗದಿದ್ದರೂ, ಮದುವೆಯಾಗುವ ಆಸೆ. ಸೋದರಮಾವನ ಮಗಳು ಕೋಕಿಲಾಳನ್ನು ಮದುವೆಯಾಗಿದ್ದ. ಅವಳೋ ಶತ ಸೊಂಭೇರಿ. ಕೂತಲ್ಲೇ ಎಲ್ಲಾ ಆಗಬೇಕೆನ್ನುವ ಧಿಮಾಕು! ಅತ್ತೆ ಹಿರಿಯವಳು ಏಂಬ ಮರ್ಯಾದೆ ಇದ್ದರೂ, ಕೂತ ಜಾಗದಿಂದ ಅಲ್ಲಾಡದಿದ್ದಾಗ, ಕಮಲಮ್ಮ ಮುದ್ದಿನ ಸೊಸೆಗೆ ಕೂತಲ್ಲೇ ಸೇವೆ ನಡೆಸುತ್ತಿದ್ದಳು. ಈ ವಿಷಯವನ್ನು ಮಗನ ಹತ್ತಿರ ಮಾತನಾಡಿದರೆ, ಅವನು ಯುದ್ಧಕ್ಕೆ ಬರುವವನಂತೆ ಮೈಮೇಲೆ ಬೀಳುತ್ತಿದ್ದ.

ಕೂತ್ಕೊಂಡು ನೀನೇನು ಮಾಡ್ತೀಯಾ? ಮೊದಲ್ನಿಂದ ಕೆಲಸ ಮಾಡಿ ನಿನಗೆ ಅಭ್ಯಾಸ. ಅವಳು ಕೆಲಸವನ್ನೇ ಕಲಿತಿಲ್ಲ. ನಮಗೆಲ್ಲಾ ತಿಂಡಿ ಕೊಡುವಾಗ ಅವಳಿಗೂ ತಿಂಡಿ ಕೊಡ್ತೀಯ..., ನಮಗೆ ಬಡಿಸುವಾಗ ಅವಳಿಗೂ ಊಟ ಬಡಿಸ್ತೀಯ.., ಅವಳಿಗೋಸ್ಕರ ಏನು ಸ್ಪೆಷಲ್ ಕೆಲಸ ಮಾಡ್ತೀಯಾ? ಸುಮ್ಮನಿರು ಎಂದು ಅಬ್ಬರಿಸುತ್ತಿದ್ದ.

"ನಿನ್ನ ಹೆಂಡತಿ ಬಂದ ಮೇಲೆ ನನ್ನ ಕೆಲಸ ಕಡಿಮೆ ಆಗುತ್ತೆನೋ ಅಂತ ಅಂದ್ಕೊಂಡಿದ್ದೆ... ಅವಳ ಕೆಲಸವೂ ನನ್ನ ತಲೆ ಮೇಲೆ ಬಿತ್ತು.... ನಿಮ್ಮ ಪಾಡಿಗೆ ನೀವು ಬೇರೆ ಮನೆ ಮಾಡಿಕೊಂಡು ಹೋಗಿ" ಎಂದು ಕಮಲಮ್ಮ ನುಡಿದರೆ ಅವನು ನಿರ್ದಾಕ್ಷಿಣ್ಯವಾಗಿ ನುಡಿಯುತ್ತಿದ್ದ.

"ಈ ಮನೇನ ಮಾರಿ ಬಂದ ಹಣದಲ್ಲಿ ಒಂದು ಭಾಗ ನನಗೆ ಕೊಡು. ನಾನು ಹೊರಟು ಹೋಗ್ತೀನಿ"

ಕಮಲಮ್ಮ ಅಳುತ್ತಿದ್ದಳು. ಇರೋದು ಇದೊಂದು ಮನೆ. ಇದನ್ನು ಮಾರಿ ಬಿಟ್ಟರೆ ತಾನು, ಶಂಕರ ಎಲ್ಲಿಗೆ ಹೋಗಬೇಕು? ಮಕ್ಕಳನ್ನು ಎಷ್ಟು ಮಮತೆಯಿಂದ ಸಾಕಿದ್ದೆ. ಈ ಮಕ್ಕಳಿಗೆ ಮಮಕಾರವೇ ಇಲ್ಲವಲ್ಲ. ಸ್ವಂತ ತಮ್ಮನ ಮಗಳು, ಅವಳಿಗಾದರೂ, ನನ್ನ ಬಗ್ಗೆ ಕನಿಕರ ಬೇಡವೇ?

ಇವನು ಹೀಗಾದರೆ, ಇವನ ತಮ್ಮ ರತ್ನಾಕರ ಇನ್ನೊಂದು ತರಹ. ಯಾವುದೋ ಒಂದು ಆಫೀಸಿನಲ್ಲಿ ಗುಮಾಸ್ತನಾಗಿದ್ದರೂ, ದಿವಾನನಂತೆ ಮೆರೆಯುತ್ತಿದ್ದ. ಅವನ ಷೋಕಿಗಳಿಗೆ ಮಿತಿ ಇರಲಿಲ್ಲ. ತಲೆಗೆ ಹಚ್ಚಿಕೊಳ್ಳಲು ಸುವಾಸನೆಯುಕ್ತ ಕೊಬ್ಬರಿ ಎಣ್ಣೆಯೇ ಆಗಬೇಕು. ಅವನು ಸುಳಿದಾಡಿದರೇ ಘಂ ಎನ್ನುವ ಸುಗಂಧ ಗಾಳಿಯಲ್ಲಿ ಹರಡಬೇಕು. ಅಷ್ಟು ಪೌಡರನ್ನು ಅವನು ಬಳಿದು ಕೊಳ್ಳಲೇ ಬೇಕು. ಇನ್ನು ಸಿಗರೇಟು, ಬೀಡಾ... ಗಳದ್ದು ಲೆಖ್ಖವೇ ಇಲ್ಲ. ತಾಯಿಯ ಹತ್ತಿರ ಜಗಳವಾಡಿ ದುಡ್ಡು ಕಿತ್ಕೊಂಡು ಹೊಸ ಬಟ್ಟೆಗಳನ್ನು ಹೊಲಿಸಿಕೊಳುತ್ತಿದ್ದ. ಷೂಗಳನ್ನು ಕೊಳ್ಳುತ್ತಿದ್ದ. ಚಿಕ್ಕಮಗ ಅಂತ ಮುದ್ದುಮಾಡಿ ಬೆಳೆಸಿದ್ದಕ್ಕೆ ನನ್ನನ್ನು ಹಿಡಿದು ತಿನ್ನುತ್ತಿದಾನಲ್ಲ ಎಂದು ದುಃಖವಾಗುತ್ತಿತ್ತು ಅವಳಿಗೆ.

ಈ ಮಧ್ಯೆ ಅವನಿಗೆ ತನ್ನ ಆಫೀಸಿನಲ್ಲೇ ಕೆಲಸದಲ್ಲಿದ್ದ ಹುಡುಗಿ ಯೊಬ್ಬಳೊಡನೆ ಪ್ರೀತಿ ಪ್ರಾರಂಭವಾಯಿತು. ತಾನು ಅವಳನ್ನೇ ಮದುವೆಯಾಗುವುದಾಗಿ ಹೇಳಿದಾಗ ಕಮಲಮ್ಮನಿಗೆ ಆಘಾತ. ಯಾವ ಉಪದೇಶದ ಮಾತುಗಳೂ ಅವನಿಗೆ ಪಥ್ಯವಾಗಲಿಲ್ಲ. ಕಡೆಗೂ ಒಂದು ದಿನ ಅವಳನ್ನು ರಿಜಿಸ್ಟರ್ಡ್ ಮದುವೆಯಾಗಿ ಮನೆಗೆ ಕರೆತಂದ. ಅನ್ಯ ಜಾತಿಯ ಕನ್ಯೆಯನ್ನು ತನ್ನ ಸೊಸೆಯೆಂದು ಒಪ್ಪಿಕೊಳ್ಳಲು ಕಮಲಮ್ಮ ಖಂಡಿತಾ ಒಪ್ಪಲಿಲ್ಲ. ಮನೆಯಲ್ಲಿ ಹಣಾ ಹಣಿ ಜಗಳ. ಕಡೆಗೆ ಪಕ್ಕದಲ್ಲಿದ್ದ ಬಾಡಿಗೆದಾರರಿಗೆ ಹಣಕೊಟ್ಟು ಬಿಡಿಸಿ, ಅಲ್ಲಿ ರತ್ನಾಕರ ತನ್ನ ಹೊಸ ಸಂಸಾರ ಪ್ರಾರಂಭಿಸಿದ. ಅವಳೂ ಕೆಲಸಕ್ಕೆ ಹೋಗುತ್ತಿದ್ದುದರಿಂದ, ತಿಂಡಿ ಕಾಫಿ, ಕೆಲವೊಮ್ಮೆ ಊಟ ಸಹ ಕಮಲಮ್ಮನ ಮನೆಯಿಂದಲೇ ಸರಬರಾಜಾಗುತ್ತಿತ್ತು. ಆ ಸೊಸೆ ತಿಂದ ತಟ್ಟೆ ಬಟ್ಟಲುಗಳನ್ನು ತೊಳೆಯಲು ಕಮಲಮ್ಮ ಅಸಹ್ಯ ಪಟ್ಟುಕೊಳ್ಳುತ್ತಿದ್ದಳು. ಆಗ ಅವಳಿಗೆ ಸಹಾಯ ಮಾಡುತ್ತಿದ್ದವನು ಶಂಕರ.

ಶಂಕರ ಕಮಲಮ್ಮನ ಪತಿಯ ತಮ್ಮನ ಮಗ, ಚಿಕ್ಕವಯಸ್ಸಿನಲ್ಲೇ ತಂದೆ ತಾಯಿಂದಿರನ್ನು ಕಳೆದುಕೊಂಡು ಅನಾಥನಾಗಿದ್ದವನನ್ನು ಶ್ರೀನಿವಾಸಯ್ಯ

ಕನಿಕರದಿಂದ, ಕರೆತಂದು ಕಮಲಮ್ಮನ ಮಡಿಲಿಗೆ ಹಾಕಿದ್ದರು.

ನಮ್ಮ ಕುಟುಂಬದ ಮಗು, ಬೀದಿ ಪಾಲಾಗುವುದು ನ್ಯಾಯವಲ್ಲ. ನಾವು ತಿನ್ನುವ ಅನ್ನದಲ್ಲಿ ಒಂದು ತುತ್ತನ್ನು ತಿನ್ನಿಸಿ ಬೆಳೆಸೋಣ. ಮುಂದೆ ಅವನ ಹಣೇಲಿ ಬರೆದ ಹಾಗಾಗುತ್ತೆ ಎಂದಿದ್ದರು. ದೊಡ್ಡಮ್ಮ ಬೈದರೂ, ದೊಡ್ಡಮ್ಮನ ಸೆರಗು ಹಿಡಿದು ಓಡಾಡುತ್ತಿದ್ದ ಶಂಕರ ಬೆಳೆದು ದೊಡ್ಡವನಾದ.

ನಾಗರಾಜ, ರತ್ನಾಕರರು ಅವನನ್ನು ತಮ್ಮನಂತೆ ಎಂದೂ ಮುದ್ದಿಸಲಿಲ್ಲ. ಬದಲಿಗೆ ಮನೆಯ ಆಳಿನಂತೆ ಅವನ ಹತ್ತಿರ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಹತ್ತಿರದ ಅಂಗಡಿಗೆ ಓಡಿಹೋಗಿ ಸಿಗರೇಟು ತರುವಂತೆ, ರತ್ನಾಕರ ಕೂಗಿದರೆ, ಹೆಂಡತಿಗೆ ಖಾರದ ಕಡಲೆ ಕಾಯಿಯನ್ನು ತಿನ್ನಲು ತಂದುಕೊಡುವಂತೆ ನಾಗರಾಜ ಓಡಿಸುತ್ತಿದ್ದ. ಮನೆಯಲ್ಲೂ ನೀರು ತಂದುಕೊಡಲು ಅವನು, ಕುಡಿದ ಲೋಟ ತೊಳೆದಿಡಲು ಅವನು.. ಹೀಗೆ ದುಡಿಸಿಕೊಳ್ಳುತ್ತಿದ್ದರು.

ಈಗ ಶಂಕರನಿಗೆ, ರತ್ನಾಕರನ ಮನೆಯ ಕೆಲಸವೂ ಒದಗಿತು. ದೊಡ್ಡಮ್ಮನಿಗೆ ಸಹಾಯ ಮಾಡುವುದು ಅಗತ್ಯವಾಯಿತು.

ಹೋಗೋ.... ನೀನು ಓದಿಕೋ ಹೋಗು.... ಇಲ್ಲದಿದ್ದರೆ ಫೇಲಾಗ್ತೀಯ ಅಂತ ಬೈದರೆ....

"ಇಲ್ಲ ದೊಡ್ಡಮ್ಮ.... ನಾನು ಪಾಸಾಗ್ತೀನಿ... ನೀವು ಹೆದರಬೇಡಿ. ನಾನು ಓದುತ್ತಾ ಕೂತರೆ ಅತ್ತಿಗೆ ಬೈತಾರೆ..."

ಏನಂತೆ ಅವಳಿಗೆ?

ಲೈಟು ಆರಿಸು... ಕಣ್ಣು ಚುಚ್ಚುತ್ತೆ... ವಟವಟ ಅಂತ ಓದಬೇಡ. ಕೇಳುಕ್ಕೆ ಬೇಜಾರಾಗುತ್ತೆ.... ನೀನು ಎದ್ದು ಹೋಗು ನಾನು ಮಲಕ್ಕೋ ಬೇಕು. ಅಂತ ಏನಾದ್ರೂ ಹೇಳ್ತಾರೆ.

"ನಾನು ಅವಳಿಗೆ ಹೇಳ್ತೀನಿ. ಆ ರೂಮಿನಲ್ಲೇ ಅವಳೇಕೆ ಇರಬೇಕು. ಹೊರಗೆ ಬರಲಿ...."

ಅದೇ ಮಾತನ್ನು ಕೋಕಿಲಾಗೆ ಹೇಳಿದಾಗ ಅವಳು ಅತ್ತು ಕರೆದು ರಂಪ ಮಾಡಿದ್ದಳು.

ಏನ್ರತ್ತೇ ನೀವೂ ನನ್ನ ಬೈತೀರಾ? ಈ ಪುಟ್ಟ ಮನೇಲಿ ಇರೋದು ಇದೊಂದೇ ರೂಮು... ನಾನು ಹಾಗೆಲ್ಲ ಹೊರಗೆಲ್ಲೂ ಇರುಲ್ಲ. ಅವನೇನು ನಿಮ್ಮ ಸ್ವಂತ ಮಗನಾ? ಅವನಿಗೇಕೆ ರೂಮು?

ಅದನ್ನೆಲ್ಲ ಕೇಳೋಕೆ ನೀನ್ಯಾರು? ಇದು ನನ್ನ ಮನೆ. ಇವನೂ ನನ್ನ

ಮಗನೇ... ನಿನಗೆ ಸರಿ ಹೋಗದಿದ್ದರೆ, ಈ ಪುಟ್ಟ ಮನೇಲಿರಬೇಡ..... ಬೇರೆ ಹೋಗಿ ಅಂತ ಹೇಳಿ ಹೇಳಿ ಸಾಕಾಯ್ತು.

ಆ ರಾತ್ರಿ ನಾಗರಾಜ ಶಂಕರನಿಗೆ ಚೆನ್ನಾಗಿ ಹೊಡೆದ. "ಏನೋ ತಿರುಪೆಯವನೇ... ಬೀದಿ ಪಾಲಾಗುತ್ತಿದ್ದವನ್ನ ಕರೆತಂದು ಸಾಕಿದವರು ನಮ್ಮಪ್ಪ. ಈ ಮನೇಲಿ ನಿನಗೆ ರೂಮು ಬೇಕೆನೋ.... ಮಹಾ ಓದಿ ಉದ್ಧಾರ ಆಗೋನು. ನನ್ನ ಹೆಂಡ್ತೀ ಮೇಲೆ ಚಾಡಿ ಹೇಳ್ತೀಯಾ?"

ಕಮಲಮ್ಮ ಬಂದು ಶಂಕರನನ್ನು ಬಿಡಿಸಿದಳು.

ನಿನಗೇನು ಬಂತೋ ಹೊತ್ತು....? ನಿನ್ನ ಹೆಂಡ್ತೀ ಮಾತು ಕೇಳಿಕೊಂಡು ಅವನನ್ನು ದನ ಬಡಿದ ಹಾಗೆ ಬಡಿತೀದೀಯಲ್ಲ ನಾಚಿಕೆಯಾಗೋಲ್ವಾ ನಿನಗೆ? ಕೂತ್ಕೊಂಡು ಸೇವೆ ಮಾಡಿಸ್ಕೋತಾಳೆ ಆ ಮಿಟಕಲಾಡಿ... ಅವಳ ಮಾತಿಗೆ ಮರುಳಾದೆಯಾ ನೀನು....

ನಾಚಿಕೆ ನಿನಗೆ ಆಗಬೇಕು. ಆ ಪರದೇಶಿ ಪರವಹಿಸಿಕೊಂಡು ನಮ್ಮನ್ನ ಬೈತಿದೀಯಲ್ಲ.

ಅವನಲ್ಲ ಕಣೋ ಪರದೇಶಿ. ನೀವು.... ನೀವು.... ಹೆತ್ತ ತಾಯಿ ಅಂತ ಎಂದಾದರೂ ಮರ್ಯಾದೆ ಕೊಟ್ಟದೀರಾ? ಅಮ್ಮ ಅಂತ ಕರುಣೆ ತೋರಿಸಿದೀರಾ.....? ನಿಮ್ಮ ಊಟ ವಸತಿಗೋಸ್ಕರ ಈ ಮನೇಲಿ ನೆಂಟರ ತರಹ ಇರೋ ನೀವು ಪರದೇಶಿಗಳು. ಮೂರು ಹೊತ್ತು, ನನ್ನ ಹಿಂದೆ ಹಿಂದೆ ಇದ್ದು, ತನ್ನ ಕೈಲಾದ ಕೆಲಸ ಮಾಡ್ತಿರೋ ಈ ಕಂದಾನೇ... ನನ್ನ ಮಗು.....

ನಿನಗೆ ಹುಚ್ಚು! ಕಂದನಂತೆ ಕಂದ.... ಬೆಳೆದು ದೊಡ್ಡೋನಾದ ಮೇಲೆ ಅವನೇನು ನಿನ್ನನ್ನು ಸಾಕ್ತಾನಾ? ನಾವೇ ಗತಿ ನಿನಗೆ....

ನನ್ನ ಹೊಟ್ಟೇಲಿ ಹುಟ್ಟಿದೋರು ನೀವೇ ನನ್ನ ಹೊಟ್ಟೆ ಉರಿಸುವಾಗ, ಬೇರೆ ತಾಯಿಯ ಹೊಟ್ಟೇಲಿ ಹುಟ್ಟಿದೋನು ಮುಂದೆ ಏನು ಮಾಡ್ತಾನೆ ಎನ್ನೋ ಚಿಂತೆ ನಿನಗೆ ಬೇಡ... ಕಷ್ಟ ಪಟ್ಟು ಸಾಕಿ ಬೆಳೆಸಿದ ನೀವುಗಳು ನಾಲಾಯಕ್ಕುಗಳಾದ್ರಿ. ಇವನು ಲಾಯಖ್ಖಾಗಿ ಎಲ್ಲಾದ್ರೂ ಇದ್ದುಕೊಂಡು ಸುಖವಾಗಿರಲಿ. ನಾನು ಯಾವ ಆಸೆಯನ್ನು ಇಟ್ಟುಕೊಂಡು ಅವನನ್ನು ಬೆಳೆಸಲಿಲ್ಲ.

ಹಾಗಾದ್ರೆ ಅವನನ್ನು ಇವತ್ತೇ ಈ ಮನೆಯಿಂದಾಚೆ ಕಳಿಸು.

ಅದು ಮಾತ್ರ ನಾನು ಬದುಕಿರುವವರೆಗೂ ಸಾಧ್ಯವಿಲ್ಲ. ಬೇಕಾದರೆ

ನೀವು ಹೋಗಿ.

ಅದು ಹೇಗೆ ಅವನನ್ನು ಈ ಮನೇಲಿ ಇಟ್ಟುಕೊತೀಯೋ ನಾನು ನೋಡ್ತೀನಿ. ಲೋ ರತ್ನಾ ಬಾರೋ ಇಲ್ಲಿ. ಈ ಶಂಕರನ್ನ ಮನೆಯಿಂದಾಚೆ ದಬ್ಬೋ... ರತ್ನಾಕರ ಬಂದು ನಿಂತಾಗ ಕಮಲಮ್ಮ ಕಾಳಿಯಾದಳು.

ಈ ಮಗುವಿನ ಮೈ ಮುಟ್ಟಿದರೆ ನನ್ನಾಣೆ... ಈಗ ಅಂದರೆ ಈಗ ಪೋಲಿಸರನ್ನ ಕರೆಸಿ, ನಿಮ್ಮಿಬ್ಬರನ್ನು ಮನೆಯಿಂದಾಚೆ ಕಳಿಸ್ತೀನಿ. ನೆನಪಿರಲಿ. ಇಬ್ಬರೂ ತೆಪ್ಪಗಾದರೂ, ಇಬ್ಬರಿಗೂ ಆ ಮನೆಯಿಂದ ಹೊರಗೆ ಹೋಗುವುದು ಬೇಕಿರಲಿಲ್ಲ. ಶಂಕರನ ಮೇಲೆ ಕಿಡಿಕಾರುತ್ತಾ ಇಬ್ಬರೂ ಆ ಜಾಗದಿಂದ ಕದಲಿದರು.

ಶಂಕರ, ಎಸ್.ಎಸ್.ಎಲ್.ಸಿ. ಪಾಸು ಮಾಡಿ, ಪಿ.ಯು.ಸಿಗೆ ಸೇರಿದಾಗ, ಕಮಲಮ್ಮ ತನ್ನ ಗಂಡನ ಮನೆಯವರ ಹತ್ತಿರ ಮಾತನಾಡಿ, ಶಂಕರನ ಓದಿಗೆ ಅನುಕೂಲಗಳನ್ನು ಒದಗಿಸಿಕೊಡುವಂತೆ ಕೇಳಿಕೊಂಡಳು. ಅವರುಗಳ ಸಹಾಯದಿಂದ ಶಂಕರ ಇಂಜನಿಯರಿಂಗ್ ಕೋರ್ಸ್‌ಗೆ ಸೇರಿಕೊಂಡ ಬೇರೆ ಊರಿನಲ್ಲಿ ಹಾಸ್ಟೆಲ್ಲಿನಲ್ಲಿದ್ದ ಅವನ ಓದಿಗೆ ತಾಯಿ ಖರ್ಚು ಮಾಡುತ್ತಿದ್ದಾಳೆಂಬ ಭ್ರಮೆ ಈ ಮಕ್ಕಳಿಗೆ.

ಶಂಕರ ಇಂಜನಿಯರ್ ಆಗಿ ಕೆಲಸಕ್ಕೆ ಸೇರಿಕೊಂಡ ದಿನ ಕಮಲಮ್ಮನ ಆನಂದಕ್ಕೆ ಪಾರವಿಲ್ಲ. ಕಚ್ಚಾಡಿಕೊಂಡು, ಹಂದಿ ನಾಯಿಗಳಂತೆ ಕೊಳಚೆಯಲ್ಲಿ ಬಿದ್ದು ಒದ್ದಾಡುವ ತನ್ನ ಸ್ವಂತ ಮಕ್ಕಳಿಗಿಂತ ಬೀದಿ ಪಾಲಾಗಲಿದ್ದವನನ್ನು ಎತ್ತಿ ತಂದು ಸಾಕಿ ಬೆಳೆಸಿದ್ದು ಸಾರ್ಥಕವಾಯಿತೆಂದು ಬಗೆದಳು. ಎಲ್ಲರೊಡನೆ ಶಂಕರನನ್ನು ಹೊಗಳಿದ್ದೂ ಹೊಗಳಿದ್ದೆ.

ಅಷ್ಟಾದರೂ, ನಾಗರಾಜ, ರತ್ನಾಕರರಿಗೆ ತಾಯಿಯ ಮೇಲಿನ ಅಸಮಾಧಾನ ಇನ್ನು ಹೆಚ್ಚಾಗಿತ್ತು. ತಾಯಿ ತಮಗೆ ಅನ್ಯಾಯ ಮಾಡಿದಳೆಂದೇ ಅವರ ಭಾವನೆ ಶಂಕರ ಕೆಲಸಕ್ಕೆ ಸೇರಿದನಂತರ ಕೋಕಿಲಳ ತಲೆ ಚುರುಕಾಗಿ ಕೆಲಸ ಮಾಡಿತು. ತನ್ನ ತಂಗಿ ಕೌಸ್ತುಭನನ್ನು ತನ್ನ ಸಹಾಯಕ್ಕೆಂದು ಕರೆಸಿಕೊಂಡಿದ್ದಳು. ಅವಳನ್ನು ಶಂಕರನಿಗೆ ಮದುವೆ ಮಾಡಿಸುವ ಆಲೋಚನೆ. ಇದೇ ವಿಷಯವನ್ನು ನಾಚಿಕೆ ಬಿಟ್ಟು ಶಂಕರನೊಡನೆ ಆಡಿದಾಗ, ಅವನು ದೊಡ್ಡಮ್ಮ ಒಪ್ಪಿದರೆ ತನಗೂ ಒಪ್ಪಿಗೆ ಎಂದಿದ್ದ.

"ಶಂಕರ, ಕೌಸ್ತುಭ ಅಕ್ಕನ ತರಹ ಅಲ್ಲ... ಒಳ್ಳೆಯ ಹುಡುಗಿ.. ಆದರೆ ನಾನು ಬಲವಂತ ಮಾಡುವುದಿಲ್ಲ ಎಂದಿದ್ದಳು ಕಮಲಮ್ಮ. ಈ

ವಿಷಯ ತಿಳಿದು ರತ್ನಾಕರ, ಅವನ ಹೆಂಡತಿ ಕಿಡಿ ಕಿಡಿಯಾದರು. ಅವರೆಲ್ಲಾ ಒಂದಾಗಿ ತಮಗೆ ಏನೂ ಆಸ್ತಿ ಸಿಗದಂತೆ ಮಾಡಿ ಬಿಡುತ್ತಾರೆಂದುಕೊಂಡು, ಪದೇ ಪದೇ ಮನೆ ಮಾರಿಬಿಡುವಂತೆ ಒತ್ತಾಯ ಮಾಡತೊಡಗಿದರು. ತಾನು ಬದುಕಿರುವವರೆಗೂ ಮನೆಯನ್ನು ಮಾರುವುದಿಲ್ಲವೆಂದು ಕಮಲಮ್ಮ ನುಡಿದಾಗ, ರತ್ನಾಕರ ತಾಯಿಯ ಕತ್ತು ಹಿಸುಕಲು ಬಂದಿದ್ದ.

"ಏಯ್..... ಮುದುಕಿ, ನೀನೆಲ್ಲಿ ಸಾಯ್ತೀಯಾ! ನಾನೇ ನಿನ್ನನ್ನು ಸಾಯಿಸ್ತೀನಿ" ಎಂದಿದ್ದ. ಉಳಿದವರು ಹೆದರಿದ್ದರು. ಶಂಕರ ದೊಡ್ಡಮ್ಮನ ಕಾಲು ಹಿಡಿದು ಕೇಳಿಕೊಂಡ. "ದೊಡ್ಡಮ್ಮ ನನ್ನ ಜತೆಗೆ ಬಂದು ಬಿಡಿ... ನಾವು ಬೇರೆ ಹೊರಟು ಹೋಗೋಣ" ಅಂತ. ಕಡೆಗೂ ಕಮಲಮ್ಮ ಶಂಕರನ ಮಾತಿಗೆ ಒಪ್ಪಿದಳು. ಲಾಯರನ್ನು ಕರೆಸಿ, ಆ ಮನೆಯನ್ನು ಎರಡು ಸಮಭಾಗ ಮಾಡಿ, ತನ್ನ ಇಬ್ಬರೂ ಮಕ್ಕಳ ಹೆಸರಿಗೆ ಬರೆಸಿದಳು.

ಈ ಮನೆಯನ್ನು ನಿಮ್ಮಿಬ್ಬರ ಹೆಸರಿಗೆ ಬರೆಸಿದ್ದೀನಿ. ಯೋಗ್ಯತೆ ಇದ್ದರೆ ನಿಮ್ಮ ನಿಮ್ಮ ಆಸ್ತಿಯನ್ನು ಉಳಿಸಿಕೊಳ್ಳಿ. ನಾನು ಶಂಕರನ ಜತೆಯಲ್ಲಿ ಅವನ ಮನೆಯಲ್ಲೇ ಬದುಕಿರುವವರೆಗೂ ಇರುತ್ತೇನೆ. ಇನ್ನೊಂದು ಮಾತು, ನೆನಪಿನಲ್ಲಿರಲಿ... ಹೆತ್ತತಾಯಿಯನ್ನು ವಿಪರೀತ ನೋಯಿಸಿರುವ ನಿಮಗೆ ನನ್ನ ಚಿತೆಗೆ ಬೆಂಕಿ ಇಡುವ ಯೋಗ್ಯತೆ ಸಹ ಇಲ್ಲ. ಆ ಅಧಿಕಾರವನ್ನು ನಾನು ಶಂಕರನಿಗೆ ಮಾತ್ರ ಕೊಡುತ್ತೇನೆ. ನಾನು ಸತ್ತದಿನ ನನ್ನನ್ನು ನೋಡಲು ಬರುವ ಇಷ್ಟವಿಲ್ಲದಿದ್ದರೆ ಆ ಕಷ್ಟವೂ ಬೇಡ... ಎನ್ನುತ್ತಾ ತನ್ನ ಕೆಲವು ಸ್ವಂತ ಸಾಮಾನುಗಳೊಂದಿಗೆ ಆ ಮನೆಯಿಂದ ಹೊರಟಳು.

ಶಂಕರ ಈ ಮೊದಲೇ ಬೇರೆ ಬಾಡಿಗೆ ಮನೆಯೊಂದನ್ನು ಗೊತ್ತು ಮಾಡಿದ್ದ. ಅವರಿನ್ನೇನು ಹೊಸಿಲು ದಾಟುವುದರಲ್ಲಿದ್ದರು. ಎದುರಿನಿಂದ ಕೌಸ್ತುಭ ಬಂದಳು. ಶಂಕರನ ಕಡೆ ಪ್ರಶ್ನಾರ್ಥಕವಾಗಿ ನೋಡಿದಳು. ಕಮಲಮ್ಮ ನುಡಿದಳು.

"ನಾನು ಶಂಕರನ ಮನೆಗೆ ಹೊರಟು ಹೋಗುತ್ತಿದ್ದೇನೆ. ನಿನಗೆ ಆಸೆ ಇದ್ದರೆ ನೀನೂ ಬರಬಹುದು. ನಾನು ನಿಮ್ಮಿಬ್ಬರ ಮದುವೆಯ ತಯಾರಿ ಮಾಡುತ್ತೇನೆ. ಆದರೆ ಇವರುಗಳ ಸಂಬಂಧವನ್ನು ನಾನು ತೊರೆದಿದ್ದೇನೆ. ನೀನೂ ತೊರೆಯಬೇಕು. ಹಾಗಿದ್ದರೆ ನಮ್ಮ ಜತೆಗೆ ಬರಬಹುದು."

"ಆಗಲಿ, ಅತ್ತೆ. ನಾನು ನಿಮ್ಮ ಜತೆಗೇ ಬರುತ್ತೇನೆ." ಎಂದು ಹೊರಟವಳನ್ನು ಕೋಕಿಲಾ ತಡೆದಳು.

"ನಾನು ನಿನ್ನ ಅಕ್ಕ. ಈ ಮದುವೆಯ ಉಪಾಯ ನನ್ನದೇ. ನನ್ನನ್ನೇ ಧಿಕ್ಕರಿಸುತ್ತೀಯ....?"

ಅತ್ತೆಯ ದೊಡ್ಡ ಗುಣ, ಶಂಕರನ ಉದಾರಗುಣ, ಯಾರಿಗೂ ಅರ್ಥವಾಗದ್ದೇನಲ್ಲ. ನೀನು ನನ್ನ ಅಕ್ಕನೆಂಬ ಕಾರಣದಿಂದ, ನಾನು ಇವರುಗಳ ಒಲವನ್ನು ಕಳೆದುಕೊಂಡು ಮೂರ್ಖಳಾಗಲಾರೆ. ಎನ್ನುತ್ತಾ ತನ್ನ ಸೂಟ್‌ಕೇಸ್‌ನ್ನು ಎತ್ತಿಕೊಂಡು ಕಮಲಮ್ಮನ ಜತೆ ಹೊರಟಳು. ಶಂಕರ ನಸುನಕ್ಕು ಅವಳ ಕೈನಿಂದ ಸೂಟ್‌ಕೇಸ್‌ನ್ನು ತನ್ನ ಕೈಗೆ ತೆಗೆದುಕೊಂಡ. ಗೇಟಿನಿಂದ ಆಚೆ ಅವರುಗಳು ಹೋಗುವುದನ್ನೇ ಮೂರ್ಖರಂತೆ ಈ ನಾಲ್ವರೂ ನೋಡುತ್ತಿದ್ದರು. ಇನ್ನು ತಾವು ಏನೇ ಮಾಡಿದರೂ ತಾಯಿ ಹಿಂತಿರುಗಿ ಬರುವುದಿಲ್ಲವೆಂದು ಅವರಿಗೆ ತಿಳಿದಿತ್ತು. ಆದರೆ ತಾಯಿಯ ಹೃದಯ ಅವರಿಗೆ ಅರ್ಥವಾಗಿರಲೇ ಇಲ್ಲ.

ತನ್ನನ್ನು ಸಾಕಿ ಬೆಳೆಸಿದ ದೊಡ್ಡಮ್ಮ ಹೆಮ್ಮರದಂತೆ ತನಗೆ ಆಸರೆಯಾಗಿರುವುದು ಶಂಕರನಿಗೆ ಹೆಮ್ಮೆಯನ್ನು ನೀಡಿತ್ತು. ದೃಢವಾದ ಹೆಜ್ಜೆಗಳನ್ನು ಹಾಕುತ್ತಾ, ಕಮಲಮ್ಮ ಹಾಗೂ ಕೌಸ್ತುಭರೊಂದಿಗೆ ತನ್ನ ಕುಟೀರವನ್ನು ಸೇರಿದ. ತನ್ನ ಅವಿವೇಕಿ ಮಕ್ಕಳ ಮೇಲೆ ಕಮಲಮ್ಮನ ಮನಸ್ಸು ಕಲ್ಲಾಗಿತ್ತು.

* * *

೧೬. ಪಾಡು!

ಸುಬ್ರಹ್ಮಣ್ಯ ಅತಿ ಸಾಧು ಮನುಷ್ಯ. ಅವನ ಒಳ್ಳೆಯತನಕ್ಕೆ ಇತರರು ಅವನಿಗೆ ಪೆದ್ದ, ತಿಳುವಳಿಕೆ ಇಲ್ಲದವ ಎಂಬ ಬಿರುದನ್ನು ಕೊಟ್ಟಿದ್ದರು. ಅವನ ಹೆಂಡತಿ ಕಲಾವತಿ, ತನ್ನ ಗಂಡನ ಸ್ನೇಹಿತನೊಡನೆ ಸಂಬಂಧ ಇಟ್ಟು ಕೊಂಡಿದ್ದವಳು. ಈ ವಿಷಯ ಸುಬ್ರಹ್ಮಣ್ಯನಿಗೆ ತಿಳಿದದ್ದೇ ಅತಿ ತಡವಾಗಿ. ಹೆಂಡತಿಗೆ ತಿಳುವಳಿಕೆ ಹೇಳಿದ. ಅವಳು ಕೇಳಲಿಲ್ಲ. ಇವನು ಸುಮ್ಮನಾದ. ಸ್ನೇಹಿತನಿಗೆ ತನ್ನ ಮನೆಗೆ ಬರಬೇಡವೆಂದು ಹೇಳುವ ಧೈರ್ಯವೇ ಬರಲಿಲ್ಲ ಇವನಿಗೆ.

ಇದಕ್ಕೆ ಮುಂಚೆಯೇ ಅವನು ಸ್ನೇಹಿತನ ಸಲಹೆಯನ್ನು ದಿಕ್ಕರಿಸಲಾಗದೇ, ತನ್ನ ಮನೆಯ ಮುಂಭಾಗದ ಖಾಲಿ ಜಾಗವನ್ನು ಮಾರಿ, ಬಂದ ಹಣದಲ್ಲಿ ತನ್ನ ಮನೆಯ ಮೇಲೆ ಒಂದು ಮನೆಯನ್ನು ಕಟ್ಟಿಸಿ ಬಾಡಿಗೆಗೆ ಕೊಟ್ಟಿದ್ದ. ಆಗ ಈ ಸ್ನೇಹಿತನ ಮಾತು ಅವನಿಗೆ ಬಹಳ ಅಪ್ಯಾಯಮಾನವಾಗಿ ಕಂಡಿತ್ತು. ಮನೆ ಮುಗಿಯುವ ಹೊತ್ತಿಗೆ, ಸ್ನೇಹಿತನ ಸಹವಾಸಮಾಡಿ ಹೆಂಡತಿ ಮಾನ ಮರ್ಯಾದೆ ಬೀದಿಪಾಲು ಮಾಡಿದ್ದಳು. ಅಕ್ಕ ಪಕ್ಕದವರೆಲ್ಲಾ ಅವನಿಗೆ ಸೂಚ್ಯವಾಗಿ ಹೇಳಿದ್ದರು.

"ನಿನ್ನ ಸ್ನೇಹಿತನ ಮಾತನ್ನು ಕೇಳಿ ನೀನು ಹಾಳಾದೆ.... ಮೇಲಿನ ಮನೆಗೆ ಎಂತಹ ಬಾಡಿಗೆದಾರರನ್ನು ಸೇರಿಸಿ ಬಿಡ್ತಾಳೋ ಏನೋ.... ನಾವೆಲ್ಲಾ ಮರ್ಯಾದಸ್ಥರು ನಾವು ಬಾಗಿಲಿಗೂ ಬಂದು ನಿಲ್ಲದ ಹಾಗಾದರೆ... ಏನು ಗತಿ?"

ಸುಬ್ರಹ್ಮಣ್ಯನಿಗೆ ಅವಮಾನವಾದಂತಾಗಿತ್ತು. ಆದರೂ ನುಡಿದ.

"ಸ್ನೇಹಿತನ್ನ ನಂಬಿ ನಾನು ಕೆಟ್ಟೆ ನಿಜ.. ಆದರೆ ನಾನು ಹೇಗೆ ಅಂತ ನಿಮಗೆಲ್ಲಾ ಗೊತ್ತು ತಾನೇ..... ನಿಮಗ್ಯಾರಿಗೂ ತೊಂದರೆ ಬರದ ಹಾಗೆ ನೋಡಿಕೊಳ್ಳೋ ವಿಷಯ ನನಗೆ ಬಿಡಿ.... " ಎಂದು ಒಪ್ಪಿಸಿದ್ದ.

ಮನೆ ನೋಡಲು ಬಂದವರಿಗೆಲ್ಲ ಅವನ ಹೆಂಡತಿ ಕಲಾವತಿ, ಹೊಗಳಿ ಹೊಗಳಿ ತನ್ನ ಸದ್ಗುಣಗಳನ್ನು ಹೇಳಿಕೊಳ್ಳುತ್ತಿದ್ದಳು. ಆರು ಚದರದ ಮನೆಯನ್ನು ಅರಮನೆ ಎಂದು ಹೊಗಳಿಕೊಳ್ಳುತ್ತಿದ್ದಳು. ನವೀನ ರೀತಿಯಲ್ಲಿ

ಕಟ್ಟಿಸಿದ ಮನೆ ಆಕರ್ಷಣೀಯವಾಗಿತ್ತು. ಮೇಲಿನ ಮನೆಯಾದುದರಿಂದ ನೀರಿಗೆ ಅಸೌಕರ್ಯವಾಗಬಿರಲೆಂದು ಬಾವಿಯನ್ನು ತೋಡಿಸಿ, ಪಂಪ್ ಹಾಕಿಸಿ, ಇಪ್ಪತ್ನಾಲ್ಕು ಗಂಟೆಗಳ ಕಾಲವೂ ನೀರು ಬರುವಂತೆ ಮಾಡಿದ್ದೇನೆಂದು ಹೆಮ್ಮೆಯನ್ನು ಹೇಳಿಕೊಂಡಿದ್ದಳು.

ಅಂತೂ ಕಡೆಗೂ ಒಬ್ಬ ಬಾಡಿಗೆದಾರರು ಬಂದು ಸೇರಿಕೊಂಡರು. ಅವರೊಡನೆ ಕಲಾವತಿ ಜಂಭದಿಂದ "ನನ್ನಂಥ ಮನೆ ಓನರ್ ನಿಮಗೆಲ್ಲೂ ಸಿಗುಲ್ಲ ನೋಡ್ತಿರಿ.... " ಎಂದು ಹೇಳಿಕೊಂಡಿದ್ದಳು. ಬಾಡಿಗೆಗೆ ಬಂದವರೂ ಹಿಂದೆ ಬೀಳಲಿಲ್ಲ.

"ನಮ್ಮಂಥ ಬಾಡಿಗೆಯೋರು ಮತ್ತೆ ಯಾರೂ ಸಿಗುಲ್ಲ ನಿಮಗೆ...." ಎಂದು ನುಡಿದ್ದರು ಜಲಜಮ್ಮ.

ಮನೆ ಮಾಲೀಕರು, ಸಾಲ ಸೋಲ ಮಾಡಿ, ಮನೆ ಕಟ್ಟಿಸಿರುತ್ತಿವೆಂಬ ಕಾರಣದಿಂದ ಬಾಡಿಗೆ, ಅಡ್ವಾನ್ಸ್ ಎಲ್ಲವನ್ನು ಬಾಡಿಗೆದಾರರಿಂದ ವಸೂಲು ಮಾಡುವ ಆಲೋಚನೆಯಲ್ಲಿರುತ್ತಾರೆ. ಅಲ್ಲದೇ, ಹತ್ತಿರದಲ್ಲೇ ಮನೆ ಮಾಲೀಕರಿದ್ದರಂತೂ, ಬಾಡಿಗೆಗೆ ಇರುವವರಿಗೆ ಗ್ರಹಚಾರ ವಕ್ರಿಸಿದಂತೆಯೇ.... ಬಂದ ಬಂದ ತಮ್ಮ ತಮ್ಮ ನೆಂಟರಿಷ್ಟನ್ನೆಲ್ಲ ಹೊತ್ತಿಲ್ಲ ಗೊತ್ತಿಲ್ಲದಂತೆ ಕರೆತಂದು ಮನೆ ತೋರಿಸುವುದು, ಅವರುಗಳ ಎದುರಿಗೆ ಮನೆಯನ್ನು ಅವಲೋಕಿಸಿ, ಮನೇನ ಚೊಕ್ಕಟವಾಗಿಟ್ಟುಕೊಂಡಿಲ್ಲ, ಎಂದು ಹೇಳುವುದು... ಇತ್ಯಾದಿ. ಇಂತಹ ಸಮಯದಲ್ಲಿ ಬಾಡಿಗೆಯಲ್ಲಿರುವವರಿಗೆ ಭೂಮಿ ಬಾಯಿ ಬಿಡಬಾರದೇ ಅಂತ ಅನ್ನಿಸುತ್ತಿರುತ್ತದೆ. ಸ್ವಂತ ಮನೆಯಿಲ್ಲದವರಿಗೆ ಮರ್ಯಾದೆ ಇಲ್ಲ ಎನ್ನುವ ಮಾತು ನಿಜ ಅಂತ ಅನ್ನಿಸುತ್ತದೆ.

ಬಾಡಿಗೆಗೆ ಇದ್ದಾಕ್ಷಣ ನಮಗೆ ಸ್ವತಂತ್ರ ಬೇಡವೇ.... ಊಟ, ನಿದ್ದೆ ಏನೇ ಮಾಡುತ್ತಿರಲಿ, ಮಾಲೀಕರು ಹೀಗೆ ಬಂದು ಹಿಂಸೆ ಕೊಡಬಹುದೇ... ಅಂತ ಅನ್ನಿಸದೇ ಇರುವುದಿಲ್ಲ. ಇಬ್ಬರೂ ಅನ್ಯೋನ್ಯವಾಗಿರಬೇಕಾದರೆ, ಇಬ್ಬರಲ್ಲೂ ಕೆಲವು ಹೊಂದಿಕೆಯಾಗುವ ಗುಣಗಳಿರಲೇ ಬೇಕು. ಜನಗಳ ಕದನ, ಮನಸ್ತಾಪವಿರಬಾರದು. ಸ್ನೇಹಿತರಂತೆ ಇರಬೇಕು. ಇದು ಬಾಡಿಗೆಗೆ ಬಂದ ಜಲಜಮ್ಮನ ಉವಾಚ.

ಕಲಾವತಿಗೆ ತಾನೇ ಬಾಡಿಗೆಯನ್ನು ವಸೂಲು ಮಾಡಬೇಕು. ಎಂಬ ಆಸೆ ಇತ್ತು. ಆದರೆ ಸುಬ್ರಹ್ಮಣ್ಯ ಕಟ್ಟು ನಿಟ್ಟು, "ಇದು ನಮ್ಮ ತಾತನ ಸೈಟು... ನಮ್ಮ ತಂದೆ ಕಟ್ಟಿಸಿದ ಮನೆ, ನಿನ್ನ ಮಾತು ಕೇಳಿಕೊಂಡು,

ಮುಂದಿನ ಖಾಲಿ ಜಾಗವನ್ನು ಮಾರಿ ಹಾಳಾದೆ.... ಇದರಲ್ಲಿ ನಿನಗೆ ಯಾವ ಹಕ್ಕೂ ಇಲ್ಲ" ಎಂದು ಹೇಳಿದ್ದನಂತೆ. ಹಾಗಿದ್ದರಿಂದ ಅಡ್ವಾನ್ಸ್ ಬಾಡಿಗೆ ಹಣವೆಲ್ಲಾ ಸುಬ್ರಹ್ಮಣ್ಯನ ಕೈಲೇ. ಬಹುಶಃ ಈ ಅಸಮಾಧಾನ ಕಲಾವತಿಗಿತ್ತು. ಅದನ್ನು ತಿಳಿಸುವುದು ಹೇಗೆ.....? ಅದನ್ನು ಮತ್ತೊಂದು ರೀತಿಯಲ್ಲಿ ಆಡುತ್ತಿದ್ದಳು.

"ನನಗೆ ಹಣ ಕಾಸು ಯಾವುದೂ ಬೇಡಪ್ಪಾ.... ನಾನು ಹುಟ್ಟಿ ಬೆಳೆದದ್ದು ಬಡವರ ಮನೇಲಿ.... ಸೇರಿದ್ದು ಬಡವರ ಮನೆಗೇನೇ.... ಇಲ್ಲದಿದ್ದರೆ ಮುಂದಿನ ಚಿನ್ನದಂತ ಸೈಟನ್ನು ಮಾರಿಕೊಂಡು ತಿಂದು ಹಾಕ್ತಿದ್ರಾ? ಬಡವಾ ನೀ ಮಡಗಿದ ಹಾಗಿರು ಅಂತ... ನನಗೆ ಈ ದುಡ್ಡು ಕಾಸಿನ ವ್ಯವಹಾರನೇ ಬೇಡ... ಎಲ್ಲಾ ನಮ್ಮ ಯಜಮಾನರೇ ನೋಡಿಕೊಳ್ಳಲಿ... ಮರ್ಯಾದೆಯಿಂದ ಈ ಕಾಲದಲ್ಲಿ ಬದುಕಿದರೆ ಸಾಕಾಗಿದೆ." ಎಂದು ಒತ್ತಿ ಒತ್ತಿ ತಾನು ಮರ್ಯಾದಸ್ಥೆ ಎನ್ನುವುದನ್ನು ಆಡುತ್ತಿದ್ದಳು. ಅಕ್ಕ ಪಕ್ಕದವರೆಲ್ಲಾ ಆಡಿಕೊಳ್ಳುವ ವಿಷಯ ಜಲಜಮ್ಮನಿಗೂ ತಿಳಿದದ್ದೇ. ಆದರೆ ಅದನ್ನು ಎಂದೂ ಒತ್ತಿ ಆಡಲಿಚ್ಛಿಸಲಿಲ್ಲ.

ಜಲಜಮ್ಮನ ಗಂಡ ಬೇರೆ ಊರಿಗೆ ವರ್ಗವಾಗಿ ಹೊರಟು ಹೋಗಿದ್ದನಾದ್ದರಿಂದ, ಆಕೆ ತನ್ನ ಮಕ್ಕಳೊಂದಿಗೆ ಇದೇ ಊರಿನಲ್ಲಿ ಉಳಿದಿದ್ದಳು. ಬಂದ ಕೆಲವೇ ದಿನಗಳಲ್ಲೇ ನೀರಿಗೆ ಕಷ್ಟ ಪ್ರಾರಂಭವಾಯಿತು. ನೀರು ಸಾಕಾಗುವಷ್ಟು ಮೇಲಿನ ಟ್ಯಾಂಕಿಗೆ, ಪಂಪ್ ಮಾಡುತ್ತಿರಲಿಲ್ಲ ಕಲಾವತಿ. ಕೇಳಿದರೆ "ಪಂಪ್ ಮೋಟಾರ್‌ನ ತುಂಬಾ ಹೊತ್ತು ಓಡಿಸಬಾರದು ಅಂತ ಹೇಳಿದಾರೆ," ಎಂದು ಎಲೆಕ್ಟ್ರಿಷಿಯ್ ತಲೆ ಮೇಲೆ ಹಾಕಿದಳು.

"ಹಾಗಾದರೆ ಈಗ ನಾವೇನು ಮಾಡೋಣ? ಇಪ್ಪತ್ತನಾಲ್ಕು ಗಂಟೆಗಳಿಗೆ ಆಗುವಷ್ಟು ನೀರಿರಲಿ, ಎರಡು ಗಂಟೆಗೂ ಸಾಲದಲ್ಲ...."

"ಬೆಳಿಗ್ಗೆ ಬೇಗ ಎದ್ದು, ಹಿಡಿದು ತುಂಬಿಟ್ಟುಕೊಳ್ಳಿ... ಕಾರ್ಪೊರೇಷನ್ ನೀರು ಬರುತ್ತಲ್ಲ" ಎಂದು ಬಿಟ್ಟಳು ಕಲಾವತಿ.

ಜಲಜಮ್ಮನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಎಂದೂ ನೀರಿಗೆ ಹೀಗೆ ಫಜೀತಿ ಅನುಭವಿಸಿದ್ದಲ್ಲ. ಬೆಳಿಗ್ಗೆ ಬೇಗ ಎದ್ದರೂ, ಎಷ್ಟು ಬಕೇಟು ನೀರನ್ನು ಕೆಳಗಿನಿಂದ ತಂದು ತುಂಬಿಟ್ಟುಕೊಳ್ಳುವುದು.. ಬಾಡಿಗೆಗೆ ಬರುವ ಮುಂಚೆ ಹೇಳಿದ್ದ ಮಾತುಗಳನ್ನು ನಡೆಸಿಕೊಡದಿದ್ದರೆ, ಇವರೆಂತಹ ಜನ ಅಂತನ್ನಿಸಿತ್ತು. ಸುಬ್ರಹ್ಮಣ್ಯ ಬರುವುದನ್ನೇ ಕಾದಿದ್ದು ಅವನೊಡನೆ ಮಾತನಾಡಿದಳು.

"ಎರಡು ದಿನದಿಂದ ನೀರೇ ಇಲ್ಲ. ಹೀಗಾದ್ರೆ ಹೇಗೆ? ನನಗಂತೂ ಕೆಳಗ್ನಿಂದ ನೀರು ಹೊತ್ತು ಅಭ್ಯಾಸವಿಲ್ಲ. ನಮ್ಮ ಯಜಮಾನರೂ ಊರಲಿಲ್ಲ. ಮಕ್ಕಳು ಚಿಕ್ಕವರು, ಅವರಿಗೆ ಈ ಕೆಲಸವೆಲ್ಲಾ ಬರುಲ್ಲ. ನಾವು ಈಗ ಏನು ಮಾಡೋಣ ನೀವೇ ಹೇಳಿ."

ಶಾಂತವಾಗಿ ಆಕೆಯ ಮಾತುಗಳನ್ನು ಕೇಳಿಸಿಕೊಂಡ ಸುಬ್ರಹ್ಮಣ್ಯ ನುಡಿದ.... "ನಿಮ್ಮ ಕಷ್ಟ ನನಗೆ ಅರ್ಥವಾಗುತ್ತೆ ಮೇಡಂ.... ನನ್ನ ತಮ್ಮ ನಿಮಗೆ ನೀರು ತುಂಬಿಸಿ ಕೊಡ್ತಾನೆ. ನೀನೇನು ಚಿಂತಿಸಬೇಡಿ." ಎಂತಂದ.

"ಯಾಕೆ ಬಾವಿ ನೀರು ಏನಾಯ್ತು? ದಿನಕ್ಕೆ ಎರಡು ಬಾರಿ ಮೋಟಾರ್ ಹಾಕಿದರೆ ನಮಗೆ ನೀರು ಧಂಡಿಯಾಗುತ್ತೆ. ಅಷ್ಟೆ ಸಾಕು."

"ಬಾವಿಯಲ್ಲಿ ನೀರೇ, ಇಲ್ಲ ಮೇಡಂ. " ವಿಷಾದದಿಂದ ಸುಬ್ರಹ್ಮಣ್ಯ ನುಡಿದಾಗ ಜಲಜಮ್ಮನ ಎದೆ ಧಸಕ್ಕೆಂದಿತು.

ಬಾವಿಯಲ್ಲಿ ನೀರಿಲ್ಲ. ಹಾಗಾದರೆ ತಮ್ಮ ಗತಿ? ನಲ್ಲಿಗಳಲ್ಲಿ ನೀರು ಸುರಿಯುವಾಗ ಮಾಡುವ ಕೆಲಸ ಸುಲಭ. ತುಂಬಿಟ್ಟುಕೊಂಡ ನೀರನಲ್ಲಿ ಎಷ್ಟು ದಿನಾಂತ ಸರಿ ಹೋಗಿಸಿಕೊಳ್ಳುಕ್ಕೆ ಸಾಧ್ಯ? ಹಾಗೆಂದು ಕೊಂಡು ನುಡಿದಳು.

"ಹೀಗಾದ್ರೆ ಹೇಗೆ? ನೀವು ಕೇಳಿದಷ್ಟು ಅಡ್ವಾನ್ಸ್ ಕೊಟ್ಟೆವು. ಬಾಡಿಗೆ ಕೊಡ್ತಿದೀವಿ. ಮನೆ ಕೆಲಸಗಳಿಗೆ ಮುಖ್ಯವಾಗಿ ಬೇಕಾದದ್ದು ನೀರು. ನೀರೇ ಇಲ್ಲದೇ ಇದ್ದರೆ ಹೇಗೆ?"

"ಸಾರಿ ಮೇಡಂ. ನನಗೂ ನಿಮ್ಮ ಕಷ್ಟ ಅರ್ಥವಾಗುತ್ತೆ.. ಮನೆ ಕಟ್ಟುವಾಗಲೇ ಹೇಳಿದೆ. ಈ ಬಾವಿ ಸಹವಾಸ ಬೇಡ... ಬೇಸಗೆಯಲ್ಲಿ ನೀರು ಬತ್ತಿ ಹೋಗುತ್ತೆ ಅಂತ... ನನ್ನ ಸ್ನೇಹಿತನ ಮಾತು ಕೇಳಿ ನಾನು ಹಾಳಾದೆ. ಪುಣ್ಯವಂತರ ಮನೇಲಿ ಗಂಗಾ, ಕಾವೇರಿ ಸದಾ ತುಂಬಿ ನಿಲ್ಲುತ್ತಾಳೆ. ನಮ್ಮಂಥ ಪಾಪಿಗಳ ಮನೇಲಿ ಅವಳು ನಿಲ್ಲುತ್ತಾಳೆಯೇ?" ಎನ್ನುತ್ತಾ ಅವನು ಹೆಂಡತಿಯ ಕಡೆ ನೋಡಿ ಹಲ್ಲು ಕಡಿದ.

ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯ್ತು. ಎನ್ನೋ ಹಾಗೆ ಇವರಿಬ್ಬರ ತಿಸರಾಟದಲ್ಲಿ, ನಾವೇನು ಪಾಪ ಮಾಡಿದ್ದೆವು.....? ಗಂಗೆಯೂ ಇಲ್ಲ ಕಾವೇರಿಯೂ ಇಲ್ಲ. ವನವಾಸಕ್ಕೆ ಬಂದ ಹಾಗಾಯ್ತು ಎಂದು ಕೊಂಡಳು ಜಲಜಮ್ಮ....

ಸುಬ್ರಹ್ಮಣ್ಯ ತಾನೇ ಎದ್ದು ಸರ ಸರ ನಾಲ್ಕಾರು ಬಕೆಟುಗಳಲ್ಲಿ

ನೀರು ತುಂಬಿ ತನ್ನ ತಮ್ಮನ ಸಹಾಯದಿಂದ ಜಲಜಮ್ಮನ ಮನೆಯ ದೊಡ್ಡ ದೊಡ್ಡ ಪಾತ್ರೆಗಳಿಗೆ ನೀರನ್ನು ತುಂಬಿಸಿದ. ದಿನಾ ಈ ಮನೆ ಓನರ್ ನೀರು ತುಂಬಿಸಿ ಕೊಡುವುದನ್ನು ಯಾರಾದರೂ ಕಂಡರೆ, ಏನಂದು ಕೊಳ್ಳುವುದಿಲ್ಲ ಅಂತನ್ನಿಸಿ ಹೀನಾಯವೆನಿಸಿತ್ತು. ನಂತರ ಸುಬ್ರಹ್ಮಣ್ಯ ಆಕೆಯ ಮುಂದೆ ವಿನೀತನಾಗಿ ನಿಂತು, "ನೀವು ತಪ್ಪಾಗಿ ಭಾವಿಸಬೇಡಿ ಮೇಡಂ. ನಾನು ನಿಮ್ಮ ತಮ್ಮ ಇದ್ದ ಹಾಗೆ. ಎಷ್ಟೇ ಕಷ್ಟವಾದರೂ ಪರವಾಗಿಲ್ಲ. ನಾನು ನಿಮ್ಮ ಮನೆಗೆ ನೀರು ತುಂಬಿಸಿ ಕೊಡ್ತೀನಿ ಮೇಡಂ. ನೀವು ನೀರಿಗೆ ಪರದಾಡಿದರೆ, ನಮಗೆ ಶ್ರೇಯಸ್ಸಲ್ಲ......"

ಜಲಜಮ್ಮನಿಗೆ ಹೀನಾಯವೆನಿಸಿತ್ತು. "ನಾನು ಹೀಗಂತೀನಿ ಅಂತ ಅಂದುಕೊ ಬೇಡಿ. ಇದು ಒಂದು ದಿನದ ಕತೆಯಲ್ಲ. ಮೊದಲೇ ಈ ಊರಿನಲ್ಲಿ ನೀರಿಗೆ ಕರೆಂಟ್‌ಗೆ ಬರ.. ಒಂದು ಸಂಪು ಕಟ್ಟಿಸಿಬಿಡಿ... ಅದಕ್ಕೆ ನೀರು ತುಂಬ ಕೊಂಡರೆ, ಬೇಕಾದಾಗ, ಮೇಲಿನ ಟ್ಯಾಂಕ್‌ಗೆ ತುಂಬಿಸಿಕೊಳ್ಳಬಹುದು."

"ನಿಮ್ಮ ಐಡಿಯಾ ಚೆನ್ನಾಗಿದೆ ಮೇಡಂ... ಆದರೆ ಅದಕ್ಕೆ ಖರ್ಚು ಮಾಡಲು ಎಂಟು ಹತ್ತು ಸಾವಿರ ರೂಪಾಯಿ ಬೇಕಲ್ಲ. ಎಲ್ಲಿಂದ ತರಲಿ? ನನ್ನ ಸ್ನೇಹಿತನ ಹತ್ತಿರ ಮಾತ್ರ ಇನ್ನು ಒಂದು ಇಂಚು ಗಾರೆ ಕೆಲಸ ಮಾಡಿಸುಲ್ಲ ನಾನು." ಎಲ್ಲರೂ ತಿಳಿದುಕೊಂಡಿರುವಂತೆ ಇವನು ಮುಗ್ಧನಲ್ಲ ಎಂದು ಕೊಂಡಳು.

ಬೆಳಗಿನ ಝಾವ ಸುಮಾರು 4–5 ಗಂಟೆಯ ಸಮಯ ಎಲ್ಲೋ ಅಲಾರಾಂ ಹೊಡೆದು ಜಲಜಮ್ಮನಿಗೆ ಎಚ್ಚರವಾಯಿತು. ಮಕ್ಕಳನ್ನು ಓದಿಕೊಳ್ಳಲು ಎಬ್ಬಿಸಬೇಕು ಎಂದುಕೊಂಡು ಏಳುವುದರಲ್ಲಿದ್ದಳು. ಅಷ್ಟರಲ್ಲಿ, ಏನೋ ಥಸ್ ಎಂದು ಬಿದ್ದ ಭಾರಿ ಸದ್ದು ಕೇಳಿಸಿತು. ಬೆಳಗಿನ ಹೊತ್ತು ರಸ್ತೆಯಲ್ಲಿ ವಾಹನ ಸಂಚಾರಗಳ ಗಲಾಟೆ ಇಲ್ಲ, ಮನೆಯೊಳಗೆ ಟಿ.ವಿ. ರೇಡಿಯೋಗಳ ಸದ್ದು ಇಲ್ಲ. ನೀರವ ಏನೋ ಬಿದ್ದ ಸದ್ದು ಎಲ್ಲರನ್ನು ಎಚ್ಚರಿಸಿತ್ತು. ಆದರೆ ಏನೆಂದು ಹೊರಗೆ ಬಂದು ನೋಡುವ ಧೈರ್ಯವನ್ನಾಗಲೀ, ಆಸಕ್ತಿಯನ್ನಾಗಲೀ ತೋರಲಿಲ್ಲ. ಏನೋ ತೆಂಗಿನಕಾಯಿಯೋ ಎಂಥದೋ ಬಿದ್ದಿರುತ್ತೆ. ಅದನ್ನೇನು ನೋಡುವುದು ಎನ್ನೋ ಧೋರಣೆ. ಮತ್ತೆ ಮತ್ತೆ ಅದೇ ಸದ್ದು ಪುನಾರವರ್ತನೆಗೊಂಡಿತು. ಏನೋ ಮೇಲಿನಿಂದ ಕೆಳಗೆ, ಅದರಲ್ಲೂ ಬಾವಿಗೆ ಬಿದ್ದಂತಹ ಸದ್ದು, ಏನಿರಬಹುದೆಂದು ಯಾರೂ

ಊಹಿಸಲಾಗದಂಥ ಸದ್ದು. ಸುಮಾರು ಒಂದು ಇಪ್ಪತ್ತು ಮೂವತ್ತು ಬಾರಿ ಅದೇ ಸದ್ದಾಗಿರಬಹುದು. ಬೆಳಗಾಗುತ್ತಾ ಬಂದಿತ್ತು. ಜಲಜಮ್ಮ ಕುಡಿಯುವ ನೀರನ್ನು ಹಿಡಿದಿಡಲು, ಬಕೆಟು ಕೊಡಗಳನ್ನು ಹಿಡಿದು, ಮೆಟ್ಟಲಿಳಿದು ಕೆಳಗೆ ಬಂದಳು.

ಮಹಡಿಯ ಮೆಟ್ಟಲಿನ ಕೆಳಗೆ ಒಂದು ನಲ್ಲಿ ಇತ್ತು. ಈಗಾಗಲೇ ಯಾರೋ ನೀರು ಹಿಡಿಯುತ್ತಿದ್ದಾರೆ. ಯಾರಿರಬಹುದು ಎಂದು ಕೊಂಡು ಅನುಮಾನಿಸುತ್ತಾ ಕೆಳಗಿಳಿದು ಬಂದಳು. ಸುಬ್ರಹ್ಮಣ್ಯ ಬಕೆಟನ್ನು ತುಂಬಲು ಇಟ್ಟು ನಿಂತಿದ್ದಾನೆ. ಅವನೇಕೆ ಇಲ್ಲಿಂದ ನೀರನ್ನು ಹಿಡಿದು ಒಳಗೆ ಒಯ್ಯುತ್ತಿದ್ದಾನೆಂದು ಜಲಜಮ್ಮನಿಗೆ ಅರ್ಥವಾಗಲಿಲ್ಲ. ಕೇಳುವ ಗೋಜಿಗೆ ಹೋಗದೇ ಹಾಗೇ ನಿಂತಳು.

ಬಕೆಟು ತುಂಬಿದ ಕೂಡಲೇ, ಇನ್ನೊಂದು ಬಕೆಟನ್ನು ಇಟ್ಟು, ಸುಬ್ರಹ್ಮಣ್ಯ ಆ ನೀರನ್ನು ಎತ್ತಿ ಸಮೀಪದಲ್ಲಿದ್ದ ಬಾವಿಗೆ ಮೇಲಿನಿಂದ ಸುರಿದ. ನೀರು ಬಾವಿಯ ತಳವನ್ನು ಸೇರಿ ದಸ್ ಎಂಬ ಸದ್ದು ಪಸರಿಸಿತು. ಒಂದು ಗಳಿಗೆ ಅವನೇಕೆ ಹೀಗೆ ಮಾಡುತ್ತಿರಬಹುದು ಎಂದು ಅವಳಿಗೆ ಅರ್ಥವಾಗಲಿಲ್ಲ. ಜಲಜಮ್ಮ ಅಲ್ಲಿ ನಿಂತಿರುವುದನ್ನು ಗಮನಿಸದವನಂತೆ, ಸುಬ್ರಹ್ಮಣ್ಯ ತನ್ನ ಕೆಲಸದಲ್ಲಿ ಮಗ್ನನಾಗಿದ್ದ. ನಲ್ಲಿಯಿಂದ ಹಿಡಿದ ನೀರನ್ನು ಬಾವಿಗೆ ಸುರಿಯುವುದು. ಅವನ ಆರೋಗ್ಯ ಕೆಟ್ಟಿದೆ ಎಂದು ಜಲಜಮ್ಮ ಭಾವಿಸಿದ್ದಳು. ಭಯವೂ ಉಂಟಾಯಿತು. ಐದಾರು ಬಕೆಟ್ಟು ನೀರನ್ನು ಬಾವಿಗೆ ಸುರಿದನಂತರ ತನ್ನ ಕೆಲಸ ಮುಗಿಯಿತೆಂಬಂತೆ ಸುಬ್ರಹ್ಮಣ್ಯ ಬರುತ್ತಿದ್ದ ನೀರನ್ನು ನಿಲ್ಲಿಸಿ ಬಕೆಟ್ಟುಗಳೊಡನೆ ಒಳಗೆ ಹೋದ. ಜಲಜಮ್ಮ ನಾಲ್ಕಾರು ಬಕೆಟ್ಟು, ಕೊಡಗಳಷ್ಟು ನೀರನ್ನು ಹಿಡಿದು ತುಂಬಿಸಿಟ್ಟು ಕೊಂಡಳು ಸಾಕಾಯಿತು. ಇನ್ನು ತನ್ನಿಂದ ಸಾಧ್ಯವಿಲ್ಲ ಅಂತಂದುಕೊಂಡಾಗ ಸುಮ್ಮನಾದಳು. ಅಷ್ಟರಲ್ಲಿ ಬಚ್ಚಲು ಮನೆಯ ನಲ್ಲಿಯಿಂದ ನೀರು ಬರಲಾರಂಭಿಸಿತು. ಇದೇನಿದು ಆಶ್ಚರ್ಯ? ಟ್ಯಾಂಕಿನಲ್ಲಿ ನೀರೇ ಇಲ್ಲ. ನಲ್ಲಿಯಿಂದ ನೀರು ಹೇಗೆ ಬರುತ್ತಿದೆ ಎಂದುಕೊಂಡು ಹೊರಗೆ ಬಂದು ನೋಡಿದಳು. ಮಳೆಯೂ ಬರುತ್ತಿಲ್ಲ... ಟ್ಯಾಂಕಿಗೆ ನೀರು ಹತ್ತುವಷ್ಟು ಪ್ರೆಷರ್ ಇಲ್ಲ. ಮೇಲಿನ ಟ್ಯಾಂಕಿಗೆ ನೀರು ತುಂಬಿಕೊಳ್ಳುತ್ತಿರುವ ಹಾಗೂ ಮೋಟಾರ್ ಚಾಲನೆಯ ಸದ್ದು ಕೇಳಿ ಬಂತು.

ಬಾವಿಯಲ್ಲಿ ನೀರೇ ಇಲ್ಲ ಅಂದಿದ್ದರು. ಇಷ್ಟು ಬೇಗ ನೀರು ಎಲ್ಲಿಂದ ತುಂಬಿಕೊಂಡ್ತು. ಮಳೆ ಸಹ ಇಲ್ಲ.... ಅಂದುಕೊಳ್ಳುವಷ್ಟರಲ್ಲಿ

ಸುಬ್ರಹ್ಮಣ್ಯ ನಲ್ಲಿಯಿಂದ ನೀರು ಹಿಡಿದು ಬಾವಿಗೆ ಸೇರಿದ್ದು ಜ್ಞಾಪಕ ಬಂತು. ಈ ಅದ್ಭುತ ಕೆಲಸಕ್ಕೆ ನಗಬೇಕೋ, ಆಶ್ಚರ್ಯ ಪಡಬೇಕೋ ತಿಳಿಯಲಿಲ್ಲ. ಅಷ್ಟರಲ್ಲಿ ಕೆಳಗಿನಿಂದ ಸುಬ್ರಹ್ಮಣ್ಯ ಬಂದ.

"ಮೇಡಂ ಇವತ್ತಿನಿಂದ ನಿಮ್ಮ ನೀರಿನ ಕಷ್ಟ ತೀರಿತು. ಅಂದ್ಕೊಳ್ಳಿ. ಬಾವಿಗೆ, ನಲ್ಲಿ ನೀರನ್ನು ತುಂಬಿ... ಮೋಟಾರ್ ಹಾಕಿದ್ದೇನೆ" ಎಂದ. ಅವನ ಮುಖದ ಸಂತೃಪ್ತಿಯ ಕಳೆ ಕನಿಕರ ಪಡುವಂತಿತ್ತು.

"ಸುಮ್ಮನೇ ನಿಮಗೊಳ್ಳೆ ಶ್ರಮವಾಯ್ತು" ಎಂದಳು ಬಹಳ ಕಷ್ಟಪಟ್ಟು.

"ಶ್ರಮವಾಗುತ್ತೆ ಅಂತ, ನಿಮಗೆ ತೊಂದರೆ ಆಗ್ತಾ ಇರೋದನ್ನ ನೋಡಿ ನಾನು ಹೇಗಿ ಸುಮ್ಮನಿರಲಿ ಮೇಡಂ? ಬಾಡಿಗೆ ತಗೊಂಡ ಮೇಲೆ, ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು. ಅದು ನನ್ನ ಧರ್ಮ... ಕರ್ತವ್ಯ......"

"ಸರಿ ಹಾಗಂತ, ದಿನಾ ಬಾವಿಗೆ ನೀರು ತುಂಬಿ, ಮೇಲಿನ ಟ್ಯಾಂಕ್ ತುಂಬಿಸೋರು ಅಸಾಧ್ಯ. ನಮ್ಮ ಮನೇಲಿ ಹೋಸ್ ಇದೆ. ಅದರಿಂದ ಬಾವಿಗೆ ನೀರು ತುಂಬಬಹುದು... ಆದರೆ ಆದಷ್ಟು ಬೇಗ ಸಂಪು ಕಟ್ಟಿಸುವ ಪ್ರಯತ್ನ ಮಾಡಿ... ನಾನು ನಿಮಗೆ ಸಾಲ ಕೊಟ್ಟಿರುತ್ತೀನಿ... ಇದೋ ತಗೊಳ್ಳಿ ಈ ಹೋಸ್ ಎಂದು ಜಲಜಮ್ಮ ಕೊಡ ಹೋದಾಗ ಅವನು ನಿರಾಕರಿಸಿದ."

"ಬೇಡ ಮೇಡಂ... ನನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಗಬೇಕು.... ನನ್ನ ಹೆಂಡತಿ ನನ್ನ ಒಳ್ಳೆಯ ತನಕ್ಕೆ ಮೋಸ ಮಾಡಿದಳು. ಅಕ್ಕ ಪಕ್ಕದವರು ನನ್ನನ್ನು ಪೆದ್ದನೆಂದು ಆಡಿಕೊಂಡು ನಕ್ಕರು. ನಾನು ದಡ್ಡನೋ, ಜಾಣನೋ ನನಗೇ ತಿಳಿಯದು. ಆದರೆ ಬೆಳಗಿನ ಹೊತ್ತು ಈ ಕಸರತ್ತು ಮಾಡಿ, ನನಗೆ ನಾನೇ ದಂಡನೆ ಮಾಡಿಕೊಂಡರೇ ನನಗೆ ಸಮಾಧಾನ.... ಭಯಪಡಬೇಡಿ. ಆದಷ್ಟು ಬೇಗ ಸಂಪು ಕಟ್ಟಿಸುವ ಪ್ರಯತ್ನ ಮಾಡ್ತೀನಿ. ಆಗ ಈ ಬಾವಿನೂ ಮುಚ್ಚಿಸ್ತೀನಿ. ಎಲ್ಲರ ಬಾಯನ್ನು ಮುಚ್ಚಿಸ್ತೀನಿ" ಎಂದು ತನಗೆ ತಾನೇ ಹೇಳಿಕೊಳ್ಳುತ್ತಾ ಕೆಳಗಿಳಿದ. ಜಲಜಮ್ಮನಿಗೆ ಅವನು ಯಾರನ್ನು ಕುರಿತು ಹೀಗೆ ನುಡಿದ ಎಂದು ಅರ್ಥವಾಗಲಿಲ್ಲ. ತಮಗೋಸ್ಕರ ಅವನು ಹೀಗೆ ಶ್ರಮ ಪಡುವುದೂ ಸರಿ ಎನಿಸಲಿಲ್ಲ. ಈ ಫಜೀತಿ ಎಲ್ಲಾ ಯಾಕೆ? ಆದಷ್ಟು ಬೇಗ ಮನೆ ಬದಲಾಯಿಸುವುದೇ ಸರಿ ಎಂದು ಕೊಂಡಳು. ಆದರೆ ಅದು ಅಷ್ಟು ಸುಲಭವಲ್ಲ ಎಂದೂ ಗೊತ್ತು.

ಹೀಗೆ ನಾಲ್ಕಾರು ದಿನ ನಿರಂತರವಾಗಿ, ಬಾವಿಗೆ ನೀರು ಹಿಡಿದು

ತುಂಬುವ ಕೆಲಸ ಮುಂದುವರೆಯಿತು. ಅಕ್ಕಪಕ್ಕದವರಿಗೂ ಎಲ್ಲಾ ಗೊತ್ತಾಗಿತ್ತು. "ಹೆಂಡತೀನ ಹದ್ದು ಬಸ್ತಿನಲ್ಲಿಟ್ಟುಕೊಳ್ಳಲಾಗಲಿಲ್ಲ. ಈಗ ನೋಡಿದರೆ ಹುಚ್ಚನಂತೆ ಬೆಳಗಾಗೆದ್ದು ಬಾವಿಗೆ ನೀರು ತುಂಬುವ ಕೆಲಸ.... ಇದನ್ನೇನು ಅನ್ನೋಣ? ಪ್ರಾಮಾಣಿಕವೇ? ಅಥವಾ ಮೌಢ್ಯವೇ...? ಕೆಲವರು ನಕ್ಕರು. ಕೆಲವರು ಲೊಚಗುಟ್ಟಿದರು.

ಗಂಡನ ಈ ನಡವಳಿಕೆಯಿಂದ ಕಲಾವತಿ ಅವಮಾನಿತಳಾದಳು. ಆದರೆ ಕೇಳಿದವರಿಗೆಲ್ಲಾ ತನ್ನ ಗಂಡನ ತಲೆ ಸರಿ ಇಲ್ಲವೆಂದು ಸುದ್ಧಿಯನ್ನು ತಾನೇ ಹಬ್ಬಿಸಿದಳು. ಕೆಲವರು ನಂಬಿದರು. ಕೆಲವರು ನಂಬಲಿಲ್ಲ.

ಒಂದೆರಡು ವಾರಗಳಲ್ಲಿ ಸಂಪು ಸಿದ್ಧವಾಯಿತು. ಈಗ ಜಲಜಮ್ಮನಿಗೆ ಯಾವ ಕಷ್ಟವೂ ಇಲ್ಲ. ಸುಬ್ರಹ್ಮಣ್ಯ ನುಡಿದಂತೆ ನಡೆದು, ನೀರಿನ ಸೌಕರ್ಯವನ್ನು ಮಾಡಿಕೊಟ್ಟಿದ್ದ.. ಈಗ ಬೆಳಗಿನ ಝಾವದಲ್ಲಿ ಯಾರೇ ಕಿವಿಕೊಟ್ಟು ಆಲಿಸಿದರೂ, ಯಾವ ಸದ್ದೂ ಕೇಳಿ ಬರುತ್ತಿರಲಿಲ್ಲ.

ನಂತರ ಕೆಲವು ವಾರಗಳಲ್ಲಿ ಸುಬ್ರಹ್ಮಣ್ಯನಿಗೆ ಬೇರೆ ಊರಿಗೆ ವರ್ಗವಾಗಿತ್ತು. ಹೊರಡುವ ಮುಂಚೆ ಜಲಜಮ್ಮನಿಗೆ ಹೇಳಿದ್ದ....

"ಯಾವ ಜನ್ಮದ ಪಾಪವೋ, ಈ ಜನ್ಮದಲ್ಲಿ ಇಂತಹ ಪಾಪಿ ಹೆಂಡತಿ ನನಗೆ ಸಿಕ್ಕಿದಳು. ಈ ಮನೆ, ನಮ್ಮ ಪೂರ್ವಜರ ಆಸ್ತಿ. ಇದು ನನ್ನ ಮಕ್ಕಳಿಗೆ ಸೇರಬೇಕಾದದ್ದು.... ಇಬ್ಬರ ಮಕ್ಕಳ ಹೆಸರಿಗೂ ಈ ಮನೇನ ಬರೆಸುತ್ತೀನಿ. ನಾನು ಬದುಕಿರುವವರೆಗೂ, ನನ್ನ ಹೆಂಡತಿಗೆ ಒಂದು ತುತ್ತು ಅನ್ನ ಹಾಕ್ತೀನಿ... ಇಲ್ಲಿದ್ದುಕೊಂಡು ದಿನಾ ನಗೋರ ಮುಂದೆ ಓಡಾಡುವುದಕ್ಕಿಂತ ಈ ಊರಿನಿಂದ ಬೇರೆ ಊರಿಗೆ ಹೊರಟು ಹೋದರೆ ಅಂತ ಸದಾ ಅನ್ನಿಸುತ್ತಿತ್ತು. ನಾನೇ ವರ್ಗ ಮಾಡಿಸಿಕೊಂಡೆ. ನೀವು ನನ್ನ ಅಕ್ಕನ ಸಮಾನ. ನನ್ನ ಹೊಟ್ಟೆ ಉರಿ ಏನೂಂತ ನಿಮಗೆ ಅರ್ಥವಾಗುತ್ತೆ ಅಂತ ಭಾವಿಸ್ತೀನಿ" ಎಂದು ಕೈ ಮುಗಿದು ನುಡಿದಿದ್ದ.

ಜಲಜಮ್ಮನಿಗೆ ಅವನ ಅಳಲು ಅರ್ಥವಾಗಿತ್ತು. ಅವನಂತೇ ಇವಳು ನಿಸ್ಸಾಹಾಯಕಳು. ಪರ ಊರಿಗೆ ಹೋಗುವವನಿಗೆ ಬಾಯಿತುಂಬ ಶುಭ ಹಾರೈಸಿದಳು.

* * *

೧೭. ಅಂತರ

ತಾರಾ ದಿಟ್ಟ ಸ್ವಭಾವದ ಹುಡುಗಿ. ಆದರೆ ಹಾಗಂತ ಕೆಟ್ಟವಳಲ್ಲ. ಒಳ್ಳೆಯವಳು ಅವಳಿಗೆ ತನಗಿಂತ ಚಿಕ್ಕವರನ್ನು ಕಂಡರೆ ಅಧಿಕ ಪ್ರೇಮ. ಯಾವುದೇ ಸಮಾರಂಭಗಳಿಗೆ ಹೋದರೂ, ಕೆಲವೇ ಸಮಯದಲ್ಲಿ ತನಗಿಂತ ಚಿಕ್ಕವರನ್ನು ತನ್ನ ಮುಂದೆ ಕೂರಿಸಿಕೊಂಡು, ತನಗೆ ಗೊತ್ತಿರುವ, ಗೊತ್ತಿಲ್ಲದ ವಿಷಯಗಳನ್ನು ಅವರುಗಳೊಂದಿಗೆ ಬಣ್ಣ ಬಣ್ಣವಾಗಿ ಹೇಳಿ ಅವರುಗಳನ್ನು ರಂಜಿಸುತ್ತಿದ್ದಳು. ಹೀಗಾಗಿ, ಅವಳು ಯಾವುದೇ ಮದುವೆ ಮುಂಜಿ ಇಂಥ ಕಾರ್ಯಕ್ರಮಗಳಿಗೆ ಬರುತ್ತಾಳೆಂದು ತಿಳಿದರೆ ಅವಳ ಕಸಿನ್ಸ್‌ಗಳು ತಪ್ಪದೇ ತಾವೂ ಹೋಗುತ್ತಿದ್ದರು. ಇಲ್ಲದಿದ್ದರೆ, ಹಿರಿಯರೆಲ್ಲಾ ಒಂದಾಗಿ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿ, ತಮ್ಮದೇ ಆದ ಮಾತುಗಳಲ್ಲಿ ಮುಳುಗಿ ಹೋಗಿರುವಾಗ, ಈ ಪಡ್ಡೆ ಹುಡುಗಿಯರಿಗೆ ಬೇಸರ!

ಒಮ್ಮೆ ಹಾಸನದ ಸಂಬಂಧಿಕರೊಬ್ಬರ ಮನೆಯ ಮದುವೆಯಲ್ಲಿ ಎಲ್ಲಾ ಕಸಿನ್ಸ್‌ಗಳೂ ಒಟ್ಟಾಗಿ ಸೇರುವ ಅವಕಾಶ ಒದಗಿತು. ತಾರಾ ಮದುವೆ ಛತ್ರಕ್ಕೆ ಕಾಲಿಡುತ್ತಿದ್ದಂತೆ. ಅವಳ ಕಸಿನ್ಸ್ ಎಲ್ಲಾ ಹುಡುಗಿಯರೇ, ಅವಳನ್ನು ಸುತ್ತುವರೆದರು. ಸರಿ, ತಾರಾ ತನ್ನ ಪಟ್ಟವನ್ನೇರಿದಳು.

ಅದೇ ವರ್ಷ ಅವಳು ಎಂ.ಎ. ತರಗತಿಗೆ ಸೇರಿದ್ದಳು. ಅಲ್ಲಿಯ ತನ್ನ ಮೊದಲ ದಿನದ ಅನುಭವವನ್ನು ಬಣ್ಣ ಬಣ್ಣವಾಗಿ ವರ್ಣಿಸಿ, ಉಳಿದವರ ಮನಸ್ಸುಗಳನ್ನು ತುಂಬಿದಳು. ತನ್ನ ಪಾಠ ಪ್ರವಚನ, ಸ್ನೇಹಿತರು, ಪ್ರೊಫೆಸರರನ್ನು ಕುರಿತು ಎಷ್ಟೋ ವಿಚಾರಗಳನ್ನು ತಿಳಿಸಿದಳು. ಕೆಲವೇ ಗಂಟೆಗಳಲ್ಲಿ ಮಾತು ಮುಗಿದಂತಾಗಿತ್ತು. ಇದಕ್ಕಿದ್ದಂತೆ ಅವಳ ಮನಸ್ಸಿನಲ್ಲಿ ಒಂದು ಆಲೋಚನೆ ಮೊಳಗಿತು.

"ಇಲ್ಲಿಗೆ ಶ್ರವಣ ಬೆಳಗೊಳ ತುಂಬಾ ಹತ್ತಿರ" ಕೆಲವೇ ಗಂಟೆಗಳಲ್ಲಿ ಹೋಗಿ ವಾಪಸ್ಸು ಬಂದು ಬಿಡಬಹುದು. ಇಷ್ಟು ಹತ್ತಿರ ಬಂದು ನಮ್ಮ ಬಾಹುಬಲಿಯನ್ನು ನೋಡದಿದ್ದರೆ ಏನು ಚೆನ್ನ?

ಎಲ್ಲರೂ ಹೌದು.... ಹೌದು ಎಂದು ಒಟ್ಟಿಗೇ ನುಡಿದರು.

"ಸರಿ. ನಾಳೆ ಬೆಳಿಗ್ಗೆ ತಿಂಡಿ ಕಾಫಿ ಆಗುತ್ತಿದ್ದಂತೇ ಇಲ್ಲಿಂದ

ಹೊರಟು ಬಿಡೋಣ. ಬಸ್ಸುಗಳು ಓಡಾಡುತ್ತಲೇ ಇರುತ್ತವೆ. ಊಟದ ಹೊತ್ತಿಗೆ ಮತ್ತೆ ವಾಪಸ್ಸು ಬಂದು ಬಿಡೋಣ." ಅವಳ ಪ್ಲಾನು ಸಮ್ಮತವಾಯಿತು. ಎಲ್ಲರಿಗೂ ಆ ರಾತ್ರಿ ಎಲ್ಲರಿಗೂ ಶ್ರವಣ ಬೆಳಗೊಳಕ್ಕೆ ಹೋದಂತೆ, ಗೊಮ್ಮಟೇಶ್ವರನನ್ನು ಕಂಡು ಸಂಭ್ರಮ ಪಟ್ಟಂತೆ ಕನಸು!

ತಾರಾ, ತಾನೇ ಹಿರಿಯರನ್ನು ಒಪ್ಪಿಸಿ ಒಪ್ಪಿಗೆ ಪಡೆದಳು.

ನೋಡಮ್ಮಾ... ನೀನು ವಿದ್ಯಾವಂತೆ. ಎಲ್ಲರಿಗಿಂತ ವಯಸ್ನಲ್ಲಿ ದೊಡ್ಡವಳು ಅಂತ ಒಪ್ಪಿಗೆ ಕೊಡ್ತಿದೀವಿ. ಎಲ್ಲರ ಜವಾಬ್ದಾರಿ ನಿನ್ನ ಮೇಲಿದೆ. ಹುಶಾರಾಗಿ ಹೋಗಿ ಬರಬೇಕು. ತೀರಾ ಹೊತ್ತು ಮಾಡಿಕೋ ಬೇಡಿ.... ಆಮೇಲೆ ಕಷ್ಟವಾಗುತ್ತೆ.

ಆಗಲಿ... ಆಗಲಿ.. ಎನ್ನುತ್ತಾ ದಂಡು ಹೊರಟಿತು, ತಾರಾಳ ಮುಂದಾಳತ್ವದಲ್ಲಿ ಬಣ್ಣ ಬಣ್ಣದ ಚಿಟ್ಟೆಗಳಂತೆ, ಅಲಂಕರಿಸಿಕೊಂಡು, ಕಿಲಕಿಲನೆ ನುಗುತ್ತಾ ಕೈ ಕೈ ಹಿಡಿದು ನಡೆದು, ಸಮೀಪದಲ್ಲಿದ್ದ ಬಸ್‌ಸ್ಟ್ಯಾಂಡ್‌ನ್ನು ತಲುಪಿದರು. ಬಸ್ಸು ಹತ್ತಿ ಕುಳಿತರು. ಕಿಟಕಿಯ ಬಳಿ ಕುಳಿತವರಿಗೆಲ್ಲಾ ಶ್ರವಣ ಬೆಳಗೊಳದ ಬೆಟ್ಟ, ಬೆಟ್ಟದ ಮೇಲಿನ ಬಾಯಬಲಿಯ ಮೇಲ್ಭಾಗದ ಆಕೃತಿ ಚಿತ್ರದಂತೆ ಕಾಣುತ್ತಿತ್ತು. ಅದನ್ನೇ ಮತ್ತೆ ಮತ್ತೆ ನೋಡಿ ಆನಂದಿಸಿದ್ದರು.

ಆದರೆ, ಶ್ರವಣ ಬೆಳಗೊಳದಲ್ಲಿ ಇಳಿದು, ಅತ್ತಿತ್ತ ಕಣ್ಣು ಹಾಯಿಸಿದರೂ ಬಾಹುಬಲಿ ನಾಪತ್ತೆ. ಬೆಟ್ಟದ ಬುಡದಲ್ಲಿ ನಿಂತಿದ್ದವರು, ಬೆಟ್ಟವನ್ನು ಹತ್ತಿಯೇ ಆ ಮಹಾವ್ಯಕ್ತಿಯ ದರ್ಶನವನ್ನು ಪಡೆಯಬೇಕು. ಎಲ್ಲರೂ ಉತ್ಸಾಹದಿಂದ ಬೆಟ್ಟವನ್ನು ಹತ್ತಲಾರಂಭಿಸಿದರು. ಮೆಟ್ಟಿಲುಗಳನ್ನು ಹತ್ತುತ್ತಿದ್ದಂತೇ ಎಣಿಸಲು ಪ್ರಾರಂಭಿಸಿದ್ದರು ಕೆಲವರು. ಸ್ವಲ್ಪ ಸ್ವಲ್ಪ ಬಿಸಿಲು ಏರಿದ್ದರಿಂದ, ಅಭ್ಯಾಸವಿಲ್ಲದ್ದರಿಂದ ಪ್ರಯಾಸದಿಂದ ಮೆಟ್ಟಿಲುಗಳನ್ನು ಕ್ರಮಿಸಿದರು. ಆ ಆಯಾಸದಲ್ಲೂ ಎದುರಿಗೆ ಪ್ರತ್ಯಕ್ಷನಾದ ಕಮಂಡಲಧಾರಿ. ದಿಗಂಬರನೊಬ್ಬನನ್ನು ಕಂಡು ಕಿಸಿ ಕಿಸಿ ನಕ್ಕಿದ್ದರು ಕೆಲವರು. "ಷ್" ಎಂದು ಬಾಯಿ ಮುಚ್ಚಿಸಿದ್ದರು ಉಳಿದವರು.

ಮೇಲಿನ ಸುತ್ತಲ ಪ್ರಾಕಾರದ ಬಳಿಗೆ ಬಂದಾಗ ಹಾಯೆನಿಸಿತ್ತು. ಕತ್ತೆತ್ತಿ ನೋಡಿದರೆ, ಅತಿ ಹತ್ತಿರದಲ್ಲಿ ಕಾಣುವ ನೀಲಾಕಾಶ, ಬೀಸುವ ತಂಗಾಳಿ... ಎತ್ತರದಿಂದ ನುಗ್ಗಿ ನೋಡಿದಾಗ, ತಮ್ಮ ಕೆಳಗೆ ಕಾಣುವ ಬೆಂಕಿ ಪೊಟ್ಟಣದಂತಹ ಊರುಗಳು, ಲಿಲಿಪುಟ್‌ಗಳಂತೆ ನಡೆದಾಡುವ ಜನರು... ತಾವು ಏನನ್ನೋ ಸಾಧಿಸಿದ್ದೇವೆ ಎನ್ನುವ ಆನಂದ ಅನುಭವ. ಕೈ ಕೈ

ಹಿಡಿದು ಪ್ರಾಕಾರದೊಳಗೆ ನುಸುಳಿದರು. ಒಂದೇ ರೀತಿಯ ಜೈನ ತೀರ್ಥಂಕರರ ವಿಗ್ರಹಗಳನ್ನು ನೋಡುತ್ತಾ ನೋಡುತ್ತಾ ಮುಂದುವರೆದರು.

ಅಬ್ಬಾ... ಸಾಕಾಯ್ತಮ್ಮ.... ಏನೇ ತಾರಾ... ನಿನ್ನ ಆ ಮಹಾ ಪುರುಷ ದೂರದಿಂದ ಎಲ್ಲರಿಗೂ ಕಾಣಿಸ್ತಾನೆ. ಹತ್ತಿರ ಬಂದು ಇಷ್ಟು ಹೊತ್ತಾದ್ರೂ ಇನ್ನೂ ಪತ್ತೆಯಿಲ್ಲ.

ಹಾಗೇ ಕಣೇ ಪುಷ್ಪಾ....ಮಹಾ ಪುರುಷರನ್ನು ಕಾಣಬೇಕಾದರೆ ಪ್ರಯಾಸಪಡಲೇ ಬೇಕು. ಸುಲಭದಲ್ಲಿ ಸಿಕ್ತಿ ಬಿಡ್ತಾರಾ?

ನೀನು ಏನೇ ಅನ್ನು... ಬಾಹುಬಲಿ ಈ ಬೆಟ್ಟವನ್ನು ಹತ್ತಿ ನಿಂತಿದ್ದು ಸರಿ ಅಂತನ್ನಿಸುತ್ತಿಲ್ಲ. ಕೆಳಗೇ ನಿಂತಿದ್ದರೆ ನಮ್ಮಂಥೋರಿಗೆ ಸುಲಭ ಆಗುತ್ತಿತ್ತು.

ಹುಂ...ಸುಲಭ ಆಗುತ್ತಿತ್ತು. ಮಹಾ ಮುದುಕಿ ನೀನು... ಕಾಲು ನೋಯುತ್ತಿದೆ ಅಲ್ವಾ! ಎಂತೆಂಥಾ ಮದುಕೀರೆಲ್ಲ ಆಸೆಯಿಂದ ಬಂದು ದರ್ಶನ ಪಡೆದು ಹೋಗ್ತಾರಂತೆ ಗೊತ್ತಾ?

ಅವರನ್ನೆಲ್ಲ ಎತ್ತಿಕೊಂಡು ಬರೋಕೆ ಡೋಲಿಗಳಿರುತ್ತವೆ. ನಮಗೂ ಡೋಲಿ ಸಿಕ್ಕಿದ್ದರೇ.... ಜಾಲಿಯಾಗಿ ಬರಬಹುದಾಗಿತ್ತು ಅಲ್ವಾ?

ಸಾಕು ಸುಮ್ಮನಿರೇ.... ಮೆಟ್ಟಿಲನ್ನು ಹತ್ತಿ ಕುಪ್ಪಳಿಸುತ್ತಾ ಬರುವ ಮಜಾ... ಡೋಲಿಯಲ್ಲಿ ಏನು ಸಿಗುತ್ತೆ? ಸುಮತಿ ನುಡಿದಳು.

ಹೌದು ಕಣೇ... ಕೈ ಕಾಲು ಗಟ್ಟಿಯಾಗಿ ಇರುವಾಗ, ದೇವರು ಶಕ್ತಿ ಕೊಟ್ಟಿರುವಾಗ, ಈ ಆನಂದವನ್ನು ಪಡೆಯಬೇಕು ಇಲ್ಲದಿದ್ದರೆ ಏನು ಸುಖ? ಎಂದು ಕೊಳ್ಳುತ್ತಾ ಪ್ರಕಾರವನ್ನು ದಾಟಿ, ಹೆಬ್ಬಾಗಿಲನ್ನು ದಾಗಿ ಒಳಗೆ ಅಡಿ ಇಟ್ಟರು... ಹಾಗೇ ಕಲ್ಲಿನಂತೆ ನಿಂತು ಬಿಟ್ಟರು!

ಎದುರಿಗೆ ಗೊಮ್ಮಟನ ಸಾಕ್ಷಾತ್ಕಾರ ! ಕಲ್ಲಿನಲ್ಲಿ ಕೆತ್ತಿರುವ ವಿಗ್ರಹ ಅಂತ ಅನ್ನಿಸುವುದಿಲ್ಲ. ನೋಡಲು ಬಂದವರಿಗೆ ಪ್ರತ್ಯಕ್ಷವಾದಂತೆ ನಿಂತಿರುವ ಮಂದಹಾಸದಿಂದ ಮುಗುಳ್ನಗುತ್ತಿರುವ ಭವ್ಯ ಶಿಲಾ ಮೂರ್ತಿ! ಎಲ್ಲರಿಗೂ ಚಪ್ಪಾಳೆ ತಟ್ಟಬೇಕೆನ್ನಿಸಿತ್ತು. ಕತ್ತೆತ್ತಿ ನೋಡಿ ಕಣ್ತುಂಬಾ ತುಂಬಿಕೊಳ್ಳಬಹುದಾದ ಬೃಹತ್ ಆಕಾರ, ನಿಂತಲ್ಲಿಂದಲೇ, ಆಕಾಶವನ್ನು ಮುಟ್ಟುತ್ತಿರುವ ಶಿರ, ಆ ಪ್ರಶಾಂತವಾದ ಪರಿಸರವನ್ನೆಲ್ಲ ತನ್ನ ಉದ್ದ ಅಗಲಗಳಿಂದ ತುಂಬಿ ವೈಭವದಿಂದ ನಿಂತು ಮುಗುಳ್ನಗುತ್ತಿರುವ ಮಹಾವ್ಯಕ್ತಿ...

ಕಣ್ಣು ತುಂಬಾ ನೋಡಿ, ಬಾಯಿ ತುಂಬಾ ಹೊಗಳಿದರು. "ಅಬ್ಬಾ, ಎಂಥಾ ಭಾರೀ ವಿಗ್ರಹಾನೇ...." ಚಾವುಂಡರಾಯನ ತಲೆಗೆ ಕೊಡಬೇಕು

ಮೆಡಲ್‌ನ

"ಹತ್ತಿ ಬಂದ ಆಯಾಸವೆಲ್ಲಾ ಮರೆತೇ ಹೋಯ್ತು ಕಣೇ... ಈ ಮಹಾತ್ಮನ್ನ ನೋಡಿ" ನಸುನಗುತ್ತಾ ನುಡಿದಳು ಅಪರ್ಣ.

"ಅದಕ್ಕೇ ಹೇಳೋದು ಕಣೇ... ಕಷ್ಟ ಪಟ್ಟರೆ ಫಲವುಂಟು ಅಂತ... ನೋಡಿದ್ದಾಯ್ತಾ... ಹೊರಡೋಣ್ವಾ?"

ಯಾಕೋ ಇಲ್ಲಿಂದ ಕದಲುಕ್ಕೆ ಮನಸ್ಸೇ ಬರುತ್ತಿಲ್ಲ ಕಣೇ....

ಯಾಕಮ್ಮಾ... ಈ ಜಿನ ಮುನಿಗಳನ್ನು ನೋಡಿ, ನಿನಗೂ ವೈರಾಗ್ಯ ಬಂದು ಬಿಡ್ತಾ ಹೇಗೆ? ನಿಮ್ಮಪ್ಪ ನಿಮ್ಮಮ್ಮ ಕೇಳಿದರೆ ಏನು ಹೇಳಲಿ? ನಿಮ್ಮ ಮಗಳು ಅತ್ತಿಮಬ್ಬೆಯಾಗಿ ಬಿಟ್ಟಳು ಅಂತ ಹೇಳೋಣ್ವಾ? ಉಳಿದವರು ಘೊಳ್ ಅಂತ ನಕ್ಕಾಗ ವಸುಧಾ ಎದ್ದಳು.

ನಡೀರಿ ಹೊತ್ತಾಗುತ್ತೆ. ಊಟದ ಹೊತ್ತಿಗೆ ಬಂದು ಬಿಡಿ ಅಂತ ಹೇಳಿದ್ದಾರೆ. ನಮಗೋಸ್ಕರ ಕಾಯ್ತಾರೆ. ಆತಂಕ ಪಟ್ಟುಕೊಳ್ಳುತ್ತಾರೆ. ಎನ್ನುತ್ತಾ ತಾರಾ ಎಲ್ಲರನ್ನು ಹೊರಡಿಸಿದಳು. ಹಿಂತಿರುಗುವಾಗ ಯಾರಲ್ಲೂ ಹೆಚ್ಚಿನ ಮಾತಿಲ್ಲ. ಕೆಲವರಿಗೆ ಹಸಿವು, ಆಯಾಸ, ದಣಿವುಗಳಿಂದ ಮಾತು ಬೇಕಿಲ್ಲವಾದರೆ, ಕೆಲವರು, ಗೊಮ್ಮಟನನ್ನೇ ಚಿಂತಿಸುತ್ತಾ, ಅವನ ಕಾಲಕ್ಕೆ ಹೊರಟು ಹೋಗಿದ್ದರು. ತಾರಾ ಮತ್ತೊಮ್ಮೆ ತಾನು ಒಬ್ಬಳೇ ಬಂದು, ಇಲ್ಲಿರುವ ಶಾಸನಗಳನ್ನು, ಬಸದಿಗಳನ್ನು ಸರಿಯಾಗಿ ನೋಡಿ ಅಭ್ಯಾಸ ಮಾಡಬೇಕು ಎಂದು ತನ್ನಲ್ಲೇ ಆಲೋಚಿಸುತ್ತಿದ್ದಳು.

ಹಾಸನವನ್ನು ಸಮೀಪಿಸುತ್ತಿದ್ದಂತೆ ಬಸ್ಸು ಕೆಟ್ಟು ನಿಂತಿತು. ಕೆಲವರು ಇಳಿದು ನಡೆದುಕೊಂಡು ಹೊರಟು ಹೋದರು. ಇವರುಗಳಿಗೆ ಊರು ಪರಿಚಯವಿಲ್ಲದ್ದರಿಂದ ಇಳಿಯಲು ಹೆದರಿದರು. ದಾರಿ ತಪ್ಪಿದರೆ ಪ್ರಮಾದ ವಾದೀತೆಂದು ಭಯ. ಬರೀ ಹುಡುಗಿಯರೇ... ಆಟೋದವರು ಮೋಸ ಮಾಡಿದರೇ... ಎಂದು ಕೊಂಡು ಬಸ್ಸು ರಿಪೇರಿಯಾಗುವ ತನಕ ಅಲ್ಲೇ ಇರುವುದೆಂದು ತೀರ್ಮಾನಿಸಿದರು.

ಅಂತೂ ಕಡೆಗೂ ಬಸ್ಸು ರಿಪೇರಿಯಾಗಿ ಮುಂದೆ ಚಲಿಸಿತು. ಛತ್ರಕ್ಕೆ ಬಂದರೆ, ಅಲ್ಲಿ ಯಾರೂ ಜನರೇ ಇಲ್ಲವೇನೋ ಎಂಬಂತೆ ನಿಶ್ಯಬ್ಧ. ತಾವು ಬೇರೆ ಯಾವುದೋ ಛತ್ರಕ್ಕೆ ಬಂದು ಬಿಟ್ಟಿದೇನೇನೋ ಎನ್ನುವಂತೆ ಗಾಭರಿಯಿಂದ ಮತ್ತೊಮ್ಮೆ ನೋಡಿದರು. ಛತ್ರ ಅದೇ. ಹೆದುರುತ್ತಾ.. ಒಳಗೆ ಅಡಿ ಇಟ್ಟರು. ಎಲ್ಲೂ ಯಾರೂ ಇಲ್ಲ. ಎಲ್ಲರೂ ಊಟ ಮಾಡಿ

ಆಯಾಸ ಪರಿಹಾರ ಮಾಡಿಕೊಳ್ಳಲು ಮಲಗಿರಬಹುದು. ಯಾರಿಗೂ ತಿಳಿಯದಂತೆ, ತಾವುಗಳೂ ಊಟ ಮುಗಿಸಿ, ಬಿಡಬೇಕು ಎಂದುಕೊಂಡು ಊಟದ ಮನೆಗೆ ಬಂದರು.

ಊಟದ ಮನೆಯಲ್ಲಿ ಕೆಲವರು ಹೆಂಗಸರು, ಗಂಡಸರು ಕುಳಿತು ಕೊಂಡು ಹರಟೆ ಹೊಡೆಯುತ್ತಾ ತರಕಾರಿ ಬಿಡಿಸುತ್ತಿದ್ದರು. ಅಲ್ಲಿದ್ದ ಒಂದು ಸ್ಟೂಲ್ ಮೇಲೆ ಒಬ್ಬ ಬಾಲಕ ಕುಳಿತುಕೊಂಡು ಏನೋ ಪುಸ್ತಕ ಓದುತ್ತಿದ್ದ. ಅವನ ಮುಖ ಕಾಣುತ್ತಿರಲಿಲ್ಲ. ಎಲ್ಲರಿಗೂ ಆಯಾಸವಾಗಿತ್ತು ಅಲ್ಲಿ ಹಾಕಿದ್ದ ಕುರ್ಚಿಗಳ ಮೇಲೆ ಕುಳಿತರು.

ತಾರಾ, ಓದುತ್ತಿದ್ದ ಹುಡುಗನ ಹಿಂದೆ ಹೋಗಿ.... "ಲೋ ಮರಿ ಎಲ್ಲರಿಗೂ ಸ್ವಲ್ಪ ನೀರು ತಂದು ಕೊಡ್ತೀಯಾ" ಎನ್ನುತ್ತಾ ಅವನ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡಳು. ಥೂ ಎನ್ನುತ್ತಾ ಕಿರುಚಿ, ಹಾಗೇ, ಹಿಂದಕ್ಕೆ ಸರಿದು, ಊಟದ ಮನೆಯಿಂದ ಹೊರಕ್ಕೆ ಓಡಿ ಬಟ್ಟಳು. ಏನಾಯ್ತೋ... ಅಂತ ಕೆಲವರು ಅವಳ ಹಿಂದೆ ಓಡಿದರು. ಕೆಲವರು ಪ್ರಶ್ನಾರ್ಥಕವಾಗಿ ಆ ಹುಡುಗನ ಕಡೆ ನೋಡಿದರು. ಆ ಹುಡುಗ ನಾಚುತ್ತಾ ಎದ್ದು ನಿಂತಿದ್ದ. ಕುರ್ಚಿಯಮೇಲೆ ಕತ್ತು ಬಗ್ಗಿಸಿ ನಿಂತಿದ್ದವನನ್ನು ನೋಡಿ, ಏನಾಗಿರಬಹುದೆಂದು ಎಲ್ಲರಿಗೂ ಹೊಳೆದಿತ್ತು. ಕಿಸಿಕಿಸಿ ನಕ್ಕರು.

ಪುಸ್ತಕ ಓದುತ್ತಾ ಕೂತಿದ್ದವನು ಲೋ ಮರಿ ಯಾಗಿರಲಿಲ್ಲ. ಬೆಳೆದ ಹೋತನಾಗಿದ್ದ. ಇತ್ತ ತಿರುಗಿದ ಕೂಡಲೇ ಅವನ ಗಡ್ಡ ಮೀಸೆಗಳನ್ನು ಕಂಡು ತಾರಾ "ಥೂ" ಎಂದು ಸಣ್ಣಗೆ ಕಿರುಚಿ ಹೊರಗೋಡಿದ್ದಳು.

ಹುಡುಗಿಯರು ನಕ್ಕಾಗ ಅವನಿಗೂ ಹೀನಾಯವಾಗಿತ್ತು. ಅಲ್ಲಿಂದ ಮರೆಯಾದ. ಪುಟ್ಟ ಆಕಾರದ ಅವನನ್ನು ಮರಿ ಬಾಲಕನೆಂದು ತಾರಾ ಮೋಸ ಹೋಗಿದ್ದಳು.

"ಥೂ ಯಾರಿಗೂ ಹೇಳಬೇಡ್ರೇ.... ಪ್ಲೀಸ್" ಎಂದು ತಾರಾ ದೈನ್ಯದಿಂದ ತನ್ನ ಕಸಿನ್ಸ್‌ಗಳನ್ನು ಕೇಳಿಕೊಂಡಳು.

ಹೂಂ. ಹೇಳುಲ್ಲ... ಆದರೆ ನೀನು ನಮಗೆಲ್ಲಾ ಐಸ್‌ಕ್ರೀಂ ಕೊಡಿಸಬೇಕು. ಕಿಲಾಡಿ ರೇವತಿ ನುಡಿದಳು.

ನಾಚಿಕೆಯಿಂದ ನನ್ನ ಮೈಯೆಲ್ಲಾ ನಡುಗ್ತಿದೆ. ಐಸ್‌ಕ್ರೀಂ ಅಂತೆ ಐಸ್‌ಕ್ರೀಂ ಅಂತ ಬೈದರೂ ಒಪ್ಪಿಕೊಂಡಳು. ಆನಂತರ ಮತ್ತೆ ಎಲ್ಲರೂ ಸಮೀಪದಲ್ಲಿದ್ದ ಪಾರ್ಲರ್‌ಗ ಹೋಗಿ ಐಸ್‌ಕ್ರೀಂ ತಿಂದು ಬಂದರು.

ಒಬ್ಬೊಬ್ಬರಾಗಿ ಹಿರಿಯರು ಬಂದು ಸೇರಿದರು. ಯಾರಿಗೋ ಅನಾರೋಗ್ಯದ ಕಾರಣ ಇದ್ದಕ್ಕಿದ್ದಂತೆ ಅವರೆಲ್ಲಾ ನರ್ಸಿಂಗ್ ಹೋಂಗೆ ಹೋಗಿದ್ದರು.

"ಊಟ ಮಾಡಿದರೇನ್ರೇ...." ಯಾರೋ ಕೇಳಿದರು.

"ಇಲ್ಲ.... ಒಕ್ಕೊರಲಿನಿಂದ ನುಡಿದರು."

"ಈಗಿನ್ನೆಂಥಾ ಊಟ? ಬೀಗರು ಬರೋ ಹೊತ್ತಾಯ್ತು. ಬೇಗ ಬೇಗ ಸಿದ್ಧರಾಗಿ. ತಿಂಡಿ ತಿನ್ನೋರಂತೆ." ಎಂದರು. ಕೈ ಕಾಲು ಮುಖ ತೊಳೆದು ಬಂದ ಹುಡುಗಿಯರು ಊಟದ ಮನೆಗೆ ಬಂದರು. ತಲೆ ತಗ್ಗಿಸಿದ್ದ ತಾರಾ ತಲೆ ಎತ್ತಿರಲಿಲ್ಲ.

ಆ ನಿನ್ನ ಹೀರೋ ಇಲ್ಲಿಲ್ಲ. ನಾಚಿಕೆ ಬೇಡ ತಲೆ ಎತ್ತಿ ತಿಂಡಿ ತಿನ್ನು. ಪಕ್ಕದಲ್ಲಿದ್ದ ಸವಿತಾ ಚಟಾಕಿ ಹಾರಿಸಿದಳು. ಆ ಹೋತದ ಮರಿ ಈ ಹುಡುಗಿಯರ ಎದುರು ಬರಲು ಅಂಜಿ ಒಳಗೆ ಅಡಗಿದ್ದ. ತಾನು ಅದು ಹೇಗೆ ಮೋಸ ಹೋದೆ ಎಂದು ತಾರಾಳಿಗೆ ಅರ್ಥವಾಗಿರಲಿಲ್ಲ. ಇದಕ್ಕೆಲ್ಲಾ ಆ ಬಾಹು ಬಲಿಯೇ ಕಾರಣ. ಅವನಿಗೂ ಗಡ್ಡ ಮೀಸೆಗಳಿರಲಿಲ್ಲ. ಆದ್ದರಿಂದ ಈ ಹುಡುಗನ ಗಡ್ಡ ಮೀಸೆ ತನ್ನ ಗಮನಕ್ಕೆ ಬರಲಿಲ್ಲ ಎಂದು ತನಗೇ ತಾನೇ ಹತ್ತಾರು ಸಲ ಹೇಳಿಕೊಂಡರೂ, ಆದ ಅಭಾಸ ಮುಜುಗರವನ್ನುಂಟು ಮಾಡುತ್ತಿದ್ದ.

"ಪಾಪ, ನಿನ್ನ ಸ್ಪರ್ಶಕ್ಕೆ ಅವನು ಹೆದರಿ ಬಿಟ್ಟಿದ್ದಾನೆ. ಆಚೇನೇ ಬಂದಿಲ್ಲ. ಕರೆದು ಸಾರಿ ಕೇಳು...." ಸೀಮ ಚುಡಾಯಿಸಿದಳು.

"ಇಂಪಾಸಿಬಲ್! ನಾನೇಕೆ ಸಾರಿ ಕೇಳಬೇಕು? ಅವನು ದೊಡ್ಡೋನು ಅಂತ ನನಗೇನು ಗೊತ್ತಿತ್ತು!"

ಹಾಗಾದ್ರೆ ನಾವು ಅವನನ್ನೇ ಕರೆಸ್ತೀವಿ. ಅವನು ಹೇಗಿದ್ದಾನೆ ಅಂತ ಸರಿಯಾಗಿ ನೋಡಿ ಬಿಡು... ಅವನು ನಾವು ಬೆಳಿಗ್ಗೆ ನೋಡಿದ ಬಾಹುಬಲಿಯಂತಂತೂ ಖಂಡಿತಾ ಇಲ್ಲ.

ಅವನು ಹೇಗಿದ್ರೆ ನನಗೇನು?

ಇಲ್ಲ, ನೀನು ಅವನನ್ನು ನೋಡಲೇ ಬೇಕು. ಕಮಲ ಹಾಸನ್ ಇದ್ದಹಾಗೆ ಇದ್ದಾನೆ.......

ಹುಂ. ಕಮಲ ಹಾಸನ್‌ನ ತರಹ ಇರ್ತಾನೆ... ಇರ್ತಾನೆ.

ಇಲ್ಲ. ನೀನು ಸರಿಯಾಗಿ ಅವನನ್ನು ನೋಡಿಲ್ಲ. ನಾವು ಅವನನ್ನು ಕರೆಸ್ತೀನಿ.

ಸರಿಯಾಗಿ ನೋಡೋವಂತೆ..... ಹಾಗೇ ನಿನ್ನ ತಪ್ಪು ಭಾವನೆಗೆ ಅವನನ್ನು ಸಾರಿ ಕೇಳಿಬಿಡು.

ಓ...ಕೇ... ಎನ್ನುತ್ತಾ ತಾರಾ ಒಪ್ಪಿಕೊಂಡಳು. ಆದರೆ ಅವನು ಏನೇ ಆದರೂ ಹುಡುಗಿಯರ ಎದುರಿಗೆ ಮತ್ತೆ ಬರಲು ಒಪ್ಪಲೇ ಇಲ್ಲ. ಅಸಾಮಿಗೆ ಎಷ್ಟು ಜಂಭ ನಾನೇ ಹೋಗಿ ನೋಡಿ ಬಿಡ್ತೀನಿ ಎನ್ನುತ್ತಾ ತಾರಾ ತಾನೇ ಅಡಿಗೆ ಮನೆಯ ಕಡೆ ನಡೆದಳು. ಇದ್ದಕ್ಕಿದ್ದಂತೆ ತನ್ನೆದುರಿಗೆ ಬಂದು ನಿಂತ ಪುಟ್ಟ ಆಕೃತಿಯನ್ನು ನೋಡಿದಳು.

"ಮೇಡಂ..... ನಿಮ್ಮಂಥ ಓದ್ದೋರು ನನ್ನಂಥ ಬಡಪಾಯಿಯನ್ನು ಲೇವಡಿ ಮಾಡೋದು ಸರಿಯಾ? ನಾನು ಕುಳ್ಳಾಗಿದ್ದರೆ ಅದು ನನ್ನ ತಪ್ಪಾ? ನಾನೂ ಮನುಷ್ಯನೇ ಅಲ್ವಾ." ಅವನು ನೇರವಾಗಿ ಕೇಳಿದಾಗ ಬೆಚ್ಚಿಬಿದ್ದಳು. ಮುಖ ಪೆಚ್ಚಾಗಿತ್ತು.

ಸುಮಾರು ಅರವತ್ತು ಅಡಿಯ ಆ ಬಾಹುಬಲಿ ಎಲ್ಲಿ? ಮೂರು ಅಡಿಯ ಈ ಕುಳ್ಳ ಎಲ್ಲಿ? ಅಜಗಜಾಂತರ.... ಬಾಹುಬಲಿಯನ್ನು ಕಂಡು ಧನ್ಯರಾದೆವು ಅಂತ ಅಂದು ಕೊಂಡಿದ್ದೆವು. ಈ ಕುಳ್ಳನನ್ನು ಹಾಸ್ಯ ಮಾಡಿದ್ದೆವು... ಹುಡುಗಿಯರ ಮುಖ ಕಪ್ಪಿಟ್ಟು ಹೋಯಿತು.

"ಸಾರಿ..... ಸಾರಿ....." ಎಲ್ಲರೂ ಒಟ್ಟಿಗೇ ಕೇಳಿದರು. ಅವನು ಮಾತನಾಡದೇ ತನ್ನ ಪುಟ್ಟ ಪುಟ್ಟ ಕಾಲನ್ನೆತ್ತಿ ನಡೆಯುತ್ತಾ ಅಲ್ಲಿಂದ ಮರೆಯಾದ. ಹುಡುಗಿಯರು ಪೆಚ್ಚು ಮುಖ ಹಾಕಿಕೊಂಡು ಹೊರಗೆ ಬಂದರು. ಅಭಿಮಾನಕ್ಕೆ ಬರೆ ಬಿದ್ದಿತ್ತು!

* * * *

ಗುರುದಕ್ಷಿಣೆ



ಶ್ರೀಮತಿ ಪದ್ಮಾಶ್ರೀಧರ್ ಅವರ ಚೊಚ್ಚಲ ಕಥಾಸಂಕಲನ 'ಗುರುದಕ್ಷಿಣೆ'. ಇದರಲ್ಲಿ ಹದಿನೇಳು ಮನೋಹರ ಕಥೆಗಳಿವೆ.
ಬಹುಮಾನ ಪಡೆದ ಕಥೆಗಳಿವೆ.

ಶ್ರೀಮತಿ ಪದ್ಮಾಶ್ರೀಧರ್ ಅವರ ಚೊಚ್ಚಲ ಕಾದಂಬರಿ **'ಮಧುರ ಮೋಹನ'** 'ಮಂಗಳ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ಕರ್ನಾಟಕದಾದ್ಯಂತ ಓದುಗರ ಮೆಚ್ಚುಗೆಯನ್ನೂ, ಪ್ರಶಂಸೆಯನ್ನೂ ಗಳಿಸಿತು. ಸರಳ ಸುಂದರ ಸನ್ನಿವೇಶಗಳನ್ನೊಳಗೊಂಡ, ಸುಂದರ ಸಾಂಸಾರಿಕ ಚಿತ್ರಣವೆಂದು ಅಭಿಮಾನದಿಂದ ಜನಪ್ರಿಯವಾಯಿತು. ಅದು ಈಗ ಪುಸ್ತಕ ರೂಪದಲ್ಲಿಯೂ ಹೊರ ಬಂದಿದೆ.

ಅವರ ಇನ್ನೊಂದು ಕಾದಂಬರಿ **'ಸತ್ಯವಾನನಿಲ್ಲದ ಸಾವಿತ್ರಿ'**ಯು **'ಕನ್ನಡ ಪ್ರಭೆ'** ದಲ್ಲಿ ಧಾರಾವಾಹಿಯಾಗಿ ಬಂದು, ಪುಸ್ತಕ ರೂಪದಲ್ಲಿಯೂ ಹೊರಬಂದಿದೆ. ಶ್ರೀಮತಿ ಪದ್ಮಾಶ್ರೀಧರ್ ಅವರ ಮತ್ತೊಂದು ಕಾದಂಬರಿ **'ಮುಖವಾಡ'**

ಅವರ ಇತರ ಕಾದಂಬರಿಗಳು **'ಅನಿರೀಕ್ಷಿತ'**, **'ಚಿತ್ರಾಂಗದೆ'**, **'ಪಥ'**, **'ಆಸರೆ'** ಪ್ರಕಟಣೆಗೆ ಸಿದ್ಧವಾಗುತ್ತಿವೆ.

ಅವರ ಕೆಲವು ಕಥೆಗಳು ಪ್ರಕಟವಾಗಿದ್ದು–ಬಹುಮಾನ ಪಡೆದಿವೆ. ಲೇಖಕಿಯರ ಪರಿಷತ್‌ನವರ ಬಹುಮಾನ ಪಡೆದಿದ್ದಾರೆ.

ಮಂಜುಶ್ರೀ ಪ್ರಕಾಶನ,
ಮೈಸೂರು-೯, ರೂ. ೪೮/-